ಸಂವಾದ

ಜುಲೈ ೨೦೦೪ ರೂ. ೨೦/-

ಚಳವಳಿಗೆ ಆಧ್ಯಾತ್ಮ ಅಗತ್ಯವೇ?

ಹೊಸ ಬಗೆಯ ಜನಾಂಗ ದ್ವೇಷ

ಭಾರತದ ಪುನರ್ನಿರ್ಮಾಣ

೪೦++ ಆಗಿರುವ ಅಪ್ಪ ಅಮ್ಮಂದಿರೇ...

ಟಿಪ್ಪುವಿನ

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೯

ಜುಲೈ ೨೦೦೪

ಸಂಪಾದಕ:

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ:

ಡಾ|| ನಟರಾಜ್ ಹುಳಿಯಾರ್

ಪ್ರೊ|| ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮ

ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

✆ ೨೩೨೮೭೯೪೩ / ೯೪೪೮೦ ೪೮೩೦೬

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

EDITOR :

INDUDHARA HONNAPURA

ಒಳಪುಟಗಳಲ್ಲಿ...

- ❑ ಪತ್ರಗಳು ೩
- ❑ ಮೇರಾ ಭಾರತ್ ಮಹಾನ್ ೪
- ❑ ಅಂತರಂಗ ೫
- ❑ ಕನಸುಗಳಿಲ್ಲದೆ, ದಾರಿಯೂ ಕಾಣದೆ ೬
  - ○ ಮೇರಿ ಮರ್ಸೆಲ್ ಥೆಕೆಕರ್
- ❑ ಟಿಪ್ಪುವಿನ ಸುತ್ತ... ೮
  - ○ ನಾ. ದಿವಾಕರ
- ❑ ಕಾಯಕ ಸಿದ್ಧಾಂತ ವಾದ: ಒಂದು ಸಾಮಾಜಿಕ ವಿಶ್ಲೇಷಣೆ ೧೨
  - ○ ಅಂಬಾರಾವ ಉಪಳಾಂವಕರ
- ❑ ಅಣ್ಣ ಬಸವಣ್ಣನವರಿಗೊಂದು ಬಹಿರಂಗ ಪತ್ರ ೧೫
  - ○ ಶ್ರೀ ಮುರುಘರಾಜೇಂದ್ರ ಶರಣರು



- ❑ ಸಾಮಾನ್ಯ ಕನಿಷ್ಠ ಕಾರ್ಯಕ್ರಮ: ಬದಲಾಗಬೇಕಾದ ದೃಷ್ಟಿಕೋನ ೧೬
  - ○ ಸುಜಾತ ಕುಮಟಾ
- ❑ ಪ್ರತಿಭಟನೆಯ ಸಂಕೇತ - ಪಾಲ್ ಸ್ವೀಜಿ ೧೯
  - ○ ಮ. ಶ್ರೀ. ಮುರಳಿ ಕೃಷ್ಣ
- ❑ ಚಳವಳಿಗಳಿಗೆ ಆಧ್ಯಾತ್ಮ ಅಗತ್ಯವೇ? ೨೦
  - ○ ಪದ್ಮಾಲಯ ನಾಗರಾಜ್
- ❑ ಝುನ್ ಝುಲಕ್ ೨೩
  - ○ ಕೆ.ವಿ. ಸುಬ್ಬಣ್ಣ
- ❑ ವಂಚನೆಯ ಮಾಯಾಜಾಲ ೨೪
  - ○ ಅನು: ಡಿ. ಡೊಮಿನಿಕ್
- ❑ ೪೦ ++ ಆಗಿರುವ ಅಪ್ಪ ಅಮ್ಮಂದಿರೇ... ೨೮
  - ○ ಡಾ|| ಗಂಗಾ ಸ್ವಾಮಿ
- ❑ ಮೂರನೇ ಜಗತ್ತಿನ ಹಲ್ಲು ಹಿಡಿದು ನೋಡುತ್ತಿರುವ ಹೊಸ ಬಗೆಯ ಜನಾಂಗ ದ್ವೇಷ ೩೦
  - ○ ಅರುಂಧತಿ ರಾಯ್
- ❑ ನಿಜ ಬದುಕಿನ ಕಲಾವಿದ ೩೫
  - ○ ಕೆ. ಪುಟ್ಟಸ್ವಾಮಿ
- ❑ ಭಾರತದ ಪುನರ್ನಿರ್ಮಾಣ ೩೬
  - ○ ರಾಜೀವ್ ಧವನ್
- ❑ ಬಂಡವಾಳ ಮಾರುಕಟ್ಟೆಯ ಬಾಗಿಲು ದಲಿತರಿಗೆ ತೆರೆಯುವುದೇ? ೩೮
  - ○ ಚಂದ್ರಭಾನ್ ಪ್ರಸಾದ್
- ❑ ಹೊಸ ಪುಸ್ತಕ ೪೨
- ❑ ವಿವೇಕಾನಂದರ ವಿಚಾರಗಳು ೪೩

ಕವನಗಳು: ❑ ಬಾಂಬುಗಳೇ ಸಿಡಿಯದಿರಿ - ೭ ❑ ಜಿ.ಪಿ. ಬಸವರಾಜು-ಎರಡು ಕವನಗಳು - ೧೧

❑ ಥಂಡಿ ಪದರಗಳು ಉದ್ದಂಡ ಕವಿದಾಗ - ೪೧



ಮುಖಪುಟ ಕಲೆ: ಬಂದಗದ್ದೆ ರಾಧಾಕೃಷ್ಣ ಕಳುಹಿಸಿದ ಮಣ್ಣಿನ ಬಣ್ಣದ ಶುಭಾಷಯ ಪತ್ರ. ವಿನ್ಯಾಸ: ರಾಥೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಚಳವಳಿಗಾರರ ಆತ್ಮಾವಲೋಕನ

ಪ್ರೀತಿಯ ಸಂಪಾದಕರೇ,

ಜೂನ್ ಸಂಚಿಕೆಯಲ್ಲಿ ಎನ್.ಕೆ. ಹನುಮಂತಯ್ಯ ಅವರು ಬರೆದಿರುವ 'ಚಳವಳಿ ಮತ್ತು ಮಾರುಕಟ್ಟೆ ರಾಜಕಾರಣ' ಲೇಖನ ತುಂಬಾ ಗಂಭೀರವೂ ಸಮಂಜಸವೂ ಆದ ಲೇಖನವಾಗಿದೆ.

ನಮ್ಮ ಚಳವಳಿಗಾರರ ಸಮತೋಲನ ಹಾಗೂ ಮುಂದಾಲೋಚನೆ ಇಲ್ಲದ ಚಟುವಟಿಕೆಗಳಿಂದಾಗಿ ಜನಸಮುದಾಯ ದಿಕ್ಕುಗೆಡುತ್ತಿರುವುದು ನಮ್ಮ ಮುಂದಿನ ದೊಡ್ಡ ಸವಾಲಾಗಿದೆ. ಆದರೆ ಚಳವಳಿ ನಾಯಕತ್ವ ವಹಿಸಿರುವ ಯಾವ ಗುಂಪಿಗೂ ಇದನ್ನು ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ.

ನಾನು ಗಮನಿಸುತ್ತಿರುವಂತೆ ದಲಿತ ಚಳವಳಿಯಾಗಲಿ, ರೈತ ಚಳವಳಿಯಾಗಲಿ ಈಗ ಜನರನ್ನು ಸಂಘಟಿಸುವ ಅವರನ್ನು ಜಾಗೃತಗೊಳಿಸುವ ಕೆಲಸವನ್ನು ಮಾಡುತ್ತಿಲ್ಲ, ಬದಲಾಗಿ ಸಾರ್ವಜನಿಕವಾಗಿ ತಮ್ಮ ಇರುವಿಕೆಯನ್ನು ಪ್ರದರ್ಶಿಸಲಷ್ಟೇ ಹೋಗುತ್ತಿವೆ. ಚಳವಳಿಗಳಿಗೆ ಬೆನ್ನೆಲುಬಾಗಿದ್ದ ಸಾಹಿತಿ ಕಲಾವಿದರು ಚಿಂತಕರೂ ಇಂಥ ಮೇಲ್ಪದರದ ಪ್ರದರ್ಶನಗಳಲ್ಲೇ ತೃಪ್ತಿಪಟ್ಟುಕೊಳ್ಳುತ್ತಿದ್ದಾರೆ.

ತತ್ವ ಸಿದ್ಧಾಂತಗಳಿಗೆ ಕೇವಲ ಹತ್ತಿಪ್ಪತ್ತು ವರ್ಷಗಳ ಹಿಂದೆ ಎಂಥ ತ್ಯಾಗಕ್ಕೂ ಸಿದ್ಧರಾಗಿದ್ದ ಬಹುತೇಕ ಜನ ಈಗ ವಶೀಲಿ ಬಾಜಿಗೆ ಇಳಿದಿದ್ದಾರೆ. ಚಳವಳಿಯನ್ನು ಹೊಟ್ಟೆಪಾಡಿಗಾಗಿ ದುರುಪಯೋಗ ಪಡಿಸಿಕೊಳ್ಳುವವರೇ ಹೆಚ್ಚಾಗಿದ್ದಾರೆ. ನನ್ನ ಈ ಮಾತುಗಳು ಆಕ್ರೋಶದಂತೆ ಕಂಡರೂ ಅದರ ಹಿಂದಿನ ನೋವನ್ನು ತಾವು ಅರ್ಥ ಮಾಡಿಕೊಳ್ಳುವಿರೆಂದು ಭಾವಿಸುವೆ.

ಇಂಥ ದಿಕ್ಕು ತಪ್ಪಿದ ಸಂದರ್ಭದಲ್ಲಿ ಚಳವಳಿಗೆ ಹೊಸ ಆಲೋಚನೆ ಹೊಸ ಸಂವೇದನೆಗಳನ್ನು ತುಂಬದಿದ್ದರೆ ನಾಡಿಗೆ ನಿಜವಾಗಿಯೂ ಉಳಿಗಾಲವಿಲ್ಲ. ಇಂಥ ವೈಚಾರಿಕ ಶೂನ್ಯವನ್ನು ತುಂಬುತ್ತಿರುವ 'ಸಂವಾದ'ಕ್ಕೆ ನನ್ನ ಶುಭಾಶಯಗಳು.

ಎನ್.ಎಸ್. ಅರವಿಂದ ಕುಮಾರ್
ಮಡಿವಾಳ, ಬೆಂಗಳೂರು

ಪ್ರಗತಿಪರ ಆಶಯಗಳೊಂದಿಗೆ ಬೆಳೆಯಲಿ

ಶ್ರೀ ಇಂದೂಧರ ಹೊನ್ನಾಪುರ,

'ಸಂವಾದ' ತಲುಪುತ್ತಿದೆ. 'ಸೋನಿಯಾ ಎರಡನೆ ದರ್ಜೆಯ ಪ್ರಜೆಯೇ' ಲೇಖನ ಕರ್ಮಠರು ಮುಟ್ಟಿ ನೋಡಿಕೊಳ್ಳುವಂತಿದೆ.

ಪತ್ರಿಕೆ ಉಪಯುಕ್ತವಾಗಿ, ಪ್ರಗತಿಪರ ಆಶಯಗಳೊಂದಿಗೆ ಬೆಳೆಯಲಿ ಎಂದೇ ನನ್ನ ಆಶಯ. ನಾನು ನಿಮ್ಮೊಂದಿಗಿದ್ದೇನೆ. ಚಂದಾ ಕಳುಹಿಸುತ್ತಿದ್ದೇನೆ, ಸ್ವೀಕರಿಸಿ. ಸಂವಾದ ಬಳಗಕ್ಕೆ ನೆನಕೆಗಳು.

ಪ್ರೀತಿಯಿಂದ,

ನಾಗತಿಹಳ್ಳಿ ಚಂದ್ರಶೇಖರ
ಬೆಂಗಳೂರು



ಪತ್ರಗಳು

ಸಮಾಜಕ್ಕೆ ಪ್ರಸ್ತುತ ಲೇಖನ ಹೊತ್ತು ತಂದ 'ಸಂವಾದ'

ಮಾನ್ಯರೇ,

'ನಂಬಿಕೆಗಳು ಬಿಕರಿಗಿವೆ' ಎಂದು ಪ್ರೊ|| ಕೆ.ಎಸ್. ಭಗವಾನರವರು ಬರೆದಿರುವ ಲೇಖನವು ಸಮಾಜಕ್ಕೆ ಪ್ರಸ್ತುತವಾಗಿದೆ.

ಭಾರತೀಯರು ಗೊಡ್ಡು ಸಂಪ್ರದಾಯಗಳ ಸಂತೆಯನ್ನು ಆಚರಿಸಿಕೊಂಡು ದಲಿತರಿಗೆ, ಹಿಂದುಳಿದವರಿಗೆ ದೇವರ ಹಾಗೂ ಗುಡಿಗುಂಡಾರಗಳ ಬಗ್ಗೆ ನಂಬಿಕೆಯನ್ನು ಮೂಡಿಸಿ ಕಾಲಹರಣ ಮಾಡಿ ವೈಜ್ಞಾನಿಕ ಸತ್ಯವನ್ನು ಮರೆಮಾಚಿ ಅವರನ್ನು ಗುಲಾಮರನ್ನಾಗಿ ಮಾಡಿಕೊಳ್ಳುತ್ತಿದ್ದಾರೆ.

ಮನುಷ್ಯನಿಗೆ ನಂಬಿಕೆಯು ಬೇಕು, ಆ ನಂಬಿಕೆಯು ವೈಚಾರಿಕತೆಯನ್ನು ಆಧರಿಸಿರಬೇಕು. ನಂಬಿಕೆ ಎಂದು ತಂದೆ ನೆಟ್ಟ ಆಲದ ಮರಕ್ಕೆ ಮಗ ನೇಣು ಹಾಕಿಕೊಳ್ಳಬಾರದು'

ಗಾಂಧೀಜಿ ಮೊಳಕೆರೆ, ಗುಲಬರ್ಗಾ.

ಮಾಂಸಾಹಾರ ಬಿಡುವುದೇ ಒಳ್ಳೆಯದು

ಮಾನ್ಯ ಇಂದೂಧರರೇ,

'ಧರ್ಮಕ್ಕೆ ಆಹಾರ ಅಪಥ್ಯವೇ' (ಜೂನ್೨೦೦೪) ಎಂಬ ಲೇಖನದ ವಾದವನ್ನು ಒಪ್ಪುವುದು ಕಷ್ಟ ಅನಿಸುತ್ತಿದೆ. ಯಾವುದೇ ಆಹಾರ ಆಯಾ ವ್ಯಕ್ತಿಗಳಿಗೆ ಸೇರಿದ್ದುದಾದರೂ, ಪ್ರಾಣಿಹತ್ಯೆ ಇಲ್ಲದೆ ಮಾಂಸಾಹಾರ ಸಾಧ್ಯವಾಗುವುದಿಲ್ಲವಾದ ಕಾರಣ ಅದನ್ನು ಪ್ರೋತ್ಸಾಹಿಸದಿರುವುದು ಒಳ್ಳೆಯದೆಂದು ನನ್ನ ಭಾವನೆ. ಯಾವುದೇ ರೀತಿಯ ಆಹಾರ ಸೇವಿಸಿದರೂ 'ಹತ್ಯೆ' ಅನಿವಾರ್ಯ. ಆದರೆ ಪ್ರಾಣಿ ಹತ್ಯೆ ಮಾಡುವುದು ನಮ್ಮ ಗ್ರಹಿಕೆಗೆ ಸಿಗುವ ಹಿಂಸೆಯಾಗಿರುತ್ತದೆ. ಸಸ್ಯಗಳದ್ದು ನಮ್ಮ ಗ್ರಹಿಕೆಗೆ ಬಾರದೆ ನಡೆಯುವಂಥಾದ್ದು.

ಈ ಹಿನ್ನೆಲೆಯಲ್ಲಿ ಪ್ರಜ್ಞಾವಂತರು ಪ್ರತಿಕ್ರಿಯಿಸುವುದು ಒಳ್ಳೆಯದೆಂದು ವಿನಂತಿ.

ಆರ್.ವಿ. ಗಣೇಶ್ ನಾಯಕ,
ಮೂಡಬಿದಿರೆ

ನಾವಿದ್ದೇವೆ ಶರಣರೊಂದಿಗೆ

ಪ್ರೀತಿಯ ಸಂಪಾದಕರೇ,

ಚಿತ್ರದುರ್ಗ ಮುರುಘಾಮಠದ ಶಿವಮೂರ್ತಿ ಶರಣರು ಬಸವಣ್ಣನ ಅಪೂರ್ಣ ಕೆಲಸವನ್ನು ಪೂರ್ಣಗೊಳಿಸಲು ಮುಂದಾಗಿರುವುದು ಸಂತೋಷದ ವಿಷಯ. ಲಿಂಗಾಯಿತರಲ್ಲಿರುವ ಪುರೋಹಿತ ಏಜೆಂಟರು ಸ್ವಾಮೀಜಿ ಅವರ ವಿರುದ್ಧ ಎತ್ತಿರುವ ಅಪಸ್ವರ ಹೊಸದೇನೂ ಅಲ್ಲ. ಬಸವಣ್ಣನ ವಿರುದ್ಧ ಕೂಡ ಇಂಥ ಅಪಸ್ವರಗಳು ಎದ್ದಿದ್ದವು. ಸ್ವಾಮೀಜಿ ಅವರ ಜತೆ ನಾಡಿನ ಎಲ್ಲ ದಲಿತರು, ಹಿಂದುಳಿದವರು ಇದ್ದೇವೆ. ಅವರ ಹೋರಾಟಕ್ಕೆ ನಮ್ಮ ಪೂರ್ಣ ಬೆಂಬಲ ಇದೆ.

ರವಿಕಾಂತ ಹಾದಿಮನಿ
ಶಿವರುದ್ರಪ್ಪ ಸಾಲಿ ಮತ್ತು ಗೆಳೆಯರು, ಗುಲ್ಬರ್ಗ.

ಪ್ರಬುದ್ಧ ಮತದಾರ

ಮಾನ್ಯ ಇಂದೂಧರ ಅವರಿಗೆ ವಂದನೆಗಳು,

ನನ್ನ ಅಚ್ಚುಮೆಚ್ಚಿನ 'ಸಂವಾದ' ದಲ್ಲಿ 'ಎನ್.ಡಿ.ಎ ನೆರಳಿನಲ್ಲಿ ನಲುಗಿದ ಭಾರತ' ಲೇಖನ ಓದಿ ನನಗೆ ತುಂಬಾ ದುಃಖವಾಯಿತು. ದೇಶದಲ್ಲಿ ಇಷ್ಟೆಲ್ಲ ಹೋರಾಟಗಳು ನಡೆಯುತ್ತಿದ್ದರೂ ಕೋಮುವಾದಿ ಶಕ್ತಿಗಳಿಗೆ ಅಧಿಕಾರ ಕೊಡುವಂತಾಗಿದ್ದು ದೊಡ್ಡ ದುರಂತ. ಆದರೆ ಮತದಾರ ಎಚ್ಚೆತ್ತುಕೊಂಡು ತನ್ನ ಪ್ರಬುದ್ಧತೆಯನ್ನು ಈಗ ತೋರಿಸಿದ್ದಾನೆ. ಒಮ್ಮೆ ಮೈಮರೆತಿದ್ದಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸಿದ್ದಾನೆ. ಲೇಖಕ ದಿವಾಕರ್ ಅವರಿಗೆ ವಂದನೆಗಳು.

ಡಾ|| ಕೆ.ಆರ್. ನಾಗಮಣಿ,
ಬೆಂಗಳೂರು.

ತಿಳುವಳಿಕೆಗಾಗಿ ಕೃತಜ್ಞತೆಗಳು

ಗೌರವಾನ್ವಿತ ಸಂಪಾದಕರೇ,

ಜಾಗತೀಕರಣದ ಬಗೆಗಿನ ದಲಿತ ಸಾಹಿತಿಯೊಬ್ಬರ ಪುಸ್ತಕ ಓದಿ ಅದರ ಬಗೆಗೆ ಮೃದು ಧೋರಣೆ ಹೊಂದಿದ್ದ ನನಗೆ 'ಪ್ರಗತಿಯ ಹುಸಿ ಬಸಿರು' ಲೇಖನದಿಂದಾಗಿ ಕತ್ತಲೆ ಕವಿದಂತಾಯಿತು. ಯಾವುದು ಸರಿ ಯಾವುದು ತಪ್ಪು ಅನ್ನುವುದನ್ನು ಪತ್ರಿಕೆ-ಪುಸ್ತಕಗಳ ಮೂಲಕ ತಿಳಿದುಕೊಳ್ಳುವ ನಮ್ಮಂಥವರಿಗೆ ನಿಜವಾಗಿಯೂ ದಾರಿ ಕಾಣುತ್ತಿಲ್ಲ.

ಆದರೂ ಪ್ರಶ್ನಿಸಿ ನೋಡಿದಾಗ ಸಂವಾದದ ಲೇಖನ ಸತ್ಯ ಹಾಗೂ ಅಧಿಕೃತ ಅಂಶಗಳೊಂದಿಗೆ ಮೂಡಿಬಂದಿದೆ ಅನ್ನಿಸುತ್ತದೆ. ನನಗೆ ತಿಳಿವಳಿಕೆ ಮೂಡಿಸಿದ್ದಕ್ಕೆ ಕೃತಜ್ಞತೆಗಳು. 'ಜಾಗತೀಕರಣದ ಉರುಳಿನಲ್ಲಿ' ಮಾಲೆಯ ಎಲ್ಲ ಲೇಖನಗಳನ್ನು ಓದಿದ ನಂತರ ಮತ್ತೆ ಬರೆಯುತ್ತೇನೆ.

ಶಿವಶಂಕರಸ್ವಾಮಿ,
ಮಾನಸ ಗಂಗೋತ್ರಿ, ಮೈಸೂರು.

ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ. ೨೫೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ		
ರೂ. ೫೦೦/-	ರೂ. ೧೫೦೦/-	ರೂ. ೨೫೦೦/-

ಆಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. /ಡಿ.ಡಿ. ಮಾತ್ರ ಕಳುಹಿಸಬೇಕು.

ಕೆರೆ ನೀರಿಗೆ ಮೇಲ್ಜಾತಿ ನಾಯಕರ ಅಪ್ಪಣೆ

ಗದಗ, ಮೇ ೨- ನೀರಿಗಾಗಿ ಭಿಕ್ಷೆ ಬೇಡುವುದನ್ನು ನೀವು ಎಲ್ಲಿಯಾದರೂ ಕಂಡಿದ್ದೀರಾ? ಇಂಥ ದೃಶ್ಯಗಳನ್ನು ಮುಂಡರಗಿ ತಾಲೂಕು ಹೈತಾಪುರ ಗ್ರಾಮದಲ್ಲಿ ಮಾತ್ರ ನೋಡಲು ಸಾಧ್ಯ!

ಗ್ರಾಮದ ಕೆರೆಯ ಮುಂದೆ ಹತ್ತಾರು ಖಾಲಿ ಕೊಡಗಳೊಂದಿಗೆ ಮಹಿಳೆಯರು ಮತ್ತು ಮಕ್ಕಳು ನಿಂತಿರುವ ದೃಶ್ಯ ಇಲ್ಲಿ ಸಾಮಾನ್ಯ. ಇವರು ಕಾಯುತ್ತಿದ್ದುದು ನೀರಿಗಾಗಿ ಅಲ್ಲ, ಕೆರೆಯಲ್ಲಿ ಇಳಿದು ಯಾರಾದರೂ ನೀರನ್ನು ತುಂಬಿ ತಮ್ಮ ಕೊಡಗಳಿಗೆ ಹಾಕಿಯಾರು ಎಂದು.

ದಲಿತ ಮಹಿಳೆಯರು ಕೆರೆಯತ್ತ ಬರುತ್ತಿರುವುದನ್ನು ಕಂಡ ಕೆರೆಯ ಕಾವಲುಗಾರ ಸುಭಾಷ ಬಾರಕೇರ ತನ್ನ ಕೊಡದಿಂದ ಕೆರೆಯ ನೀರನ್ನು ತಂದು ದಲಿತರ ಕೊಡಗಳಿಗೆ ತುಂಬುತ್ತಾನೆ. 'ಅವ್ರಿಗೆ ಇಲ್ಲಿ ಬರಾಕ ಊರಾನವ್ರು ಒಪ್ಪೂದಿಲ್ಲ, ಅದಕ್ಕಂತ ಕೆರಿಕಾಯೂ ನೆಪದಾಗ ನನ್ನ ಇಲ್ಲಿ ಇಟ್ಟಾರ. ನನ್ನಿಂದ ತಪ್ಪಾದರ ಊರ ಹಿರಿಯಾರು ನನ್ನ ಬಿಡೂದಿಲ್ಲ' ಎನ್ನುತ್ತಾನೆ ಆತ.

ಗದಗ ಜಿಲ್ಲೆಯ ಮುಂಡರಗಿ ಪಟ್ಟಣದಿಂದ ೯ಕಿ.ಮೀ ಅಂತರದಲ್ಲಿರುವ ಪುಟ್ಟ ಗ್ರಾಮ ಹೈತಾಪುರ. ಗ್ರಾಮದ ಜನಸಂಖ್ಯೆ ನಾಲ್ಕು ಅಂಕಿ ದಾಟದಿದ್ದರೂ ಇಲ್ಲಿಯ ಜನರಲ್ಲಿ ಜಾತಿಯ ವಿಷಬೀಜ ಮಾತ್ರ ಹೆಮ್ಮರವಾಗಿ ಬೆಳೆದಿದೆ.

ಕೆರೆಯಲ್ಲಿ ದನಕರುಗಳು ನೀರು ಕುಡಿದರೂ ಪರವಾಗಿಲ್ಲ, ದಲಿತರು ಮಾತ್ರ ಕೆರೆಯ ಸಮೀಪ ಸುಳಿಯುವಂತಿಲ್ಲ. ಕೆರೆ ಹಾಗೂ ಬಾವಿಗಳಲ್ಲಿಯ ನೀರನ್ನು ಪಡೆಯುವುದು ಗ್ರಾಮದ ದಲಿತರಿಗೆ ನಿಷಿದ್ಧ.

ಇಂತಹ ಅಲಿಖಿತ ಒಪ್ಪಂದ ರಾಜಾರೋಷವಾಗಿ ಜಾರಿಯಲ್ಲಿದ್ದರೂ ಇದುವರೆಗೆ ಯಾವುದೇ ಅಧಿಕಾರಿಗಳಾಗಲಿ, ದಲಿತ ಸಂಘಟನೆಗಳಾಗಲಿ ಇದನ್ನು ಪ್ರಶ್ನಿಸಿಲ್ಲ, ಗ್ರಾಮಕ್ಕೆ ಭೇಟಿ ನೀಡಿಲ್ಲ.

ಗ್ರಾಮದ ಹಿರಿಯರು ದಿನವೊಂದಕ್ಕೆ ಎರಡು ಸೇರು ಜೋಳ ನೀಡುವ ಭರವಸೆ ಮೇಲೆ ಸುಭಾಷ ಬಾರಕೇರ ಹಾಗೂ ಲಕ್ಷ್ಮವ್ವ ಬಾರಕೇರ ಅವರನ್ನು ದಲಿತರಿಗೆ ನೀರು ಕೊಡಲೆಂದೇ ನೇಮಕ ಮಾಡಿದ್ದಾರೆ. ಇಲ್ಲಿನ ನಿವಾಸಿಗಳು ಕೆರೆಗೆ ನೀರನ್ನು ತುಂಬಲು ಬಂದರೆ ಕೆರೆಯ ಮೊದಲ ಪಾವಟಿಗೆಯಲ್ಲಿ ಅವರು ಸಾಲಾಗಿ ಕೊಡಗಳನ್ನು ಇರಿಸಬೇಕು. ಆಗ ಕೆರೆಯ ಕಾವಲಿಗಿದ್ದವ ತನ್ನ ಕೊಡದಿಂದ ಕೆರೆಯ ನೀರನ್ನು ತಂದು ದಲಿತರ ಕೊಡಗಳಿಗೆ ಸುರಿಯುತ್ತಾನೆ.

ಗ್ರಾಮದಲ್ಲಿ ದಲಿತರ ಮೂರೇ ಮನೆಗಳಿದ್ದವು. ಈಗ ೨೦ ಆಗಿವೆ. ಅವುಗಳಲ್ಲಿ ಇಬ್ಬರು ಸರಕಾರಿ ಶಾಲಾ ಶಿಕ್ಷಕರು, ಒಬ್ಬರು ಅಂಚೆ ಪೇದೆ, ಒಬ್ಬರು ಕೆಎಸ್‌ಆರ್‌ಟಿಸಿ ಬಸ್ ಚಾಲಕ, ನಾಲ್ಕು ಜನರು ಪದವೀಧರರು, ನಾಲ್ವರು ಪಿಯುಸಿ ಹಂತದವರೆಗೆ ಶಿಕ್ಷಣ ಪಡೆದವರು. ಸುಶಿಕ್ಷಿತರ ಕುಟುಂಬವೂ ಅಸ್ಪೃಶ್ಯತೆಯಿಂದ ಹೊರತಾಗಿಲ್ಲ.

ಗ್ರಾಮದಲ್ಲಿ ಇರುವುದು ಮೂರು ಚಹದಂಗಡಿಗಳು. ಅಲ್ಲಿಗೆ ದಲಿತ ಜನಾಂಗದವರು ಹೋದಾಗ ಅವರಿಗಾಗಿಯೇ ಮೀಸಲಿಟ್ಟ ಒಡಕು ಕಪ್‌ಗಳಲ್ಲಿ ಚಹಾ ನೀಡಲಾಗುತ್ತದೆ. ಗ್ರಾಮದ ಯುವಕರು ಹಾಗೂ ಪುರುಷರು ಕ್ಷೌರ ಮಾಡಿಸಿಕೊಳ್ಳುವುದನ್ನೂ ಅಲ್ಲಿ ನಿಷೇಧಿಸಲಾಗಿದೆ. ಅದಕ್ಕಾಗಿ ಅವರು ಮುಂಡರಗಿಯನ್ನೇ ಅವಲಂಬಿಸಿದ್ದಾರೆ.

(ವಿಜಯ ಕರ್ನಾಟಕ)



ಶಹಾಪುರದಲ್ಲೊಂದು ಬಾಲ್ಯವಿವಾಹ

ಶಹಾಪುರ, ಜೂನ್ ೯- ಸಾಮಾಜಿಕ ಪಿಡುಗಾಗಿರುವ ಬಾಲ್ಯ ವಿವಾಹ ಪದ್ಧತಿ ಇನ್ನೂ ಜೀವಂತವಾಗಿ ಉಳಿದಿದೆ ಎನ್ನುವುದಕ್ಕೆ ಇನ್ನೂ ನಡೆಯುತ್ತಿರುವ ಬಾಲ್ಯ ವಿವಾಹಗಳೇ ಸಾಕ್ಷಿಯಾಗಿವೆ.

ಪಟ್ಟಣದಿಂದ ಕೂಗಳತೆಯ ದೂರದಲ್ಲಿರುವ ಹಳ್ಳಿಸಗರದಲ್ಲಿ ಏಪ್ರಿಲ್ ತಿಂಗಳ ಕೊನೆಯಲ್ಲಿ ನಾಲ್ಕು ವರ್ಷದ ಬಾಲೆ ಕಮಲ ಎಂಬಾಕೆಯ ಜೊತೆ ಹದಿಹರೆಯದ ಪರಶುರಾಮ ಎಂಬ ಬಾಲಕನ ಮದುವೆ ಜನರ ಕಣ್ಣೆದುರೇ ನಡೆಯಿತು.

ಕುರುಗೋಡು, ಮೇ ೩೦- ಕುರುಗೋಡಿನಲ್ಲಿ ಪಟ್ಟದ ದೇವರ ಉತ್ಸವದ ಕೊನೆಯ ದಿನವಾದ ಇಂದು ಸುಮಾರು ೨೦೦ ಉಚಿತ ಸಾಮೂಹಿಕ ವಿವಾಹ ನಡೆದರೆ, ಅದರಲ್ಲಿ ೨೦ಕ್ಕೂ ಅಧಿಕ ವಧೂವರರು ಅಪ್ರಾಪ್ತ ವಯಸ್ಕರು. ಬಾಲ್ಯ ವಿವಾಹಗಳು ಕಣ್ಮುಂದೆ ನಡೆದರೂ ಪೊಲೀಸರು ಅಸಹಾಯಕರಾಗಿದ್ದರು. ಏಕೆಂದರೆ, ನೂತನ ಸಂಸದ ಜಿ. ಕರುಣಾಕರ ರೆಡ್ಡಿ, ಶಾಸಕರಾದ ಎನ್. ಸೂರ್ಯನಾರಾಯಣರೆಡ್ಡಿ ಎಂ.ಎಸ್. ಸೋಮಲಿಂಗಪ್ಪ ಉಪಸ್ಥಿತರಿದ್ದರು.

(ಪ್ರಜಾವಾಣಿ)

೩೫ ದಶಲಕ್ಷ ಮಕ್ಕಳು ಶಿಕ್ಷಣ ವಂಚಿತರು

ಬೆಂಗಳೂರು, ಮೇ ೧೬- ಇದೊಂದು ತೀರಾ ವಿಷಾದದ ಸಂಗತಿ. ಇತ್ತೀಚಿನ ಅಂಕಿಅಂಶದ ಪ್ರಕಾರ ದೇಶದಲ್ಲಿ ಸುಮಾರು ೩೫ ದಶಲಕ್ಷ ಮಕ್ಕಳು ಪ್ರಾಥಮಿಕ ಶಾಲಾ ಶಿಕ್ಷಣದಿಂದ ವಂಚಿತರು. ಇದರಲ್ಲಿ ಮೂರನೇ ಎರಡರಷ್ಟು ಹೆಣ್ಣು ಮಕ್ಕಳಿಗೆ ಶಿಕ್ಷಣದ ಓ ನಾಮವೇ ಲಭ್ಯವಾಗಿಲ್ಲ.

ದೇಶದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತುಕೊಡುವ ದಿಸೆಯಲ್ಲಿ ಸರಕಾರ ಹಾಗೂ ನಾನಾ ಸ್ವಯಂ ಸೇವಾ ಸಂಸ್ಥೆಗಳು ಕಳೆದ ೫ ದಶಕಗಳಿಂದ ಕೈಕೊಂಡ ಪ್ರಯತ್ನಗಳೆಲ್ಲಾ ನೀರಲ್ಲಿ ಹೋಮ ಮಾಡಿದಂತಾಗಿದೆ.

ಕಳೆದ ಎರಡು ವರ್ಷಗಳ ಹಿಂದೆ ಕೇಂದ್ರ ಸರಕಾರ ಪ್ರಾಥಮಿಕ ಶಿಕ್ಷಣ ಉಚಿತ ಮತ್ತು ಕಡ್ಡಾಯ ಎಂದು ಮಸೂದೆ ತಂದಿತಾದರೂ ಅದೂ ಇನ್ನೂ ಜಾರಿಯಾಗಿಲ್ಲ ಎನ್ನುತ್ತಾರೆ ಗ್ಲೋಬಲ್ ಎಜುಕೇಷನ್ ಅಧ್ಯಕ್ಷ ಕೈಲಾಸ್ ಸತ್ಯಾರ್ಥಿ ಅವರು.

ಪ್ರಾಥಮಿಕ ಶಿಕ್ಷಣಕ್ಕೆ ಸರಕಾರ ಮೀಸಲಿಟ್ಟ ಹಣ ಏನಕ್ಕೂ ಸಾಲದು. ಅನನುಭವಿ ಶಿಕ್ಷಕರು, ಪ್ರಕೃತಿ ವಿಕೋಪ, ಕೋಮುದಳ್ಳುರಿ, ಅಂಗವೈಕಲ್ಯತೆ ಇತ್ಯಾದಿ ಕಾರಣಗಳಿಂದ ಮಕ್ಕಳು ಮೂಲ ಶಿಕ್ಷಣದಿಂದ ವಂಚಿತರು ಎನ್ನುತ್ತದೆ ಸಮೀಕ್ಷೆ. (ಕನ್ನಡ ಪ್ರಭ)

ಕಾಳಿ ಕೃಪೆಗಾಗಿ ಮಗನ ಬಲಿ

ಭುವನೇಶ್ವರ, ಜೂನ್ ೧೦- ಪತಿಯ ಆರೋಗ್ಯ ಸುಧಾರಣೆಗೆ ಕಾಳಿಕಾ ದೇವಿಯ ಕೃಪೆಯನ್ನು ಪಡೆಯಲು ಮಹಿಳೆಯೊಬ್ಬಳು ತನ್ನ ಎಂಟು ವರ್ಷದ ಮಗನನ್ನು ಬರ್ಬರವಾಗಿ ಹತ್ಯೆಗೈದು ಬಲಿ ನೀಡಿದ ಘಟನೆ ಉತ್ತರ ಒರಿಸ್ಸಾ ಗ್ರಾಮವೊಂದರಲ್ಲಿ ಜರುಗಿದೆ.

ಬಾಲಸೋರ್ ಜಿಲ್ಲೆಯ ಜರಕ ಪಾಡಾ ಗ್ರಾಮದ ವಿದ್ಯುಲ್‌ಲತ ಎಂಬಾಕೆ ತನ್ನ ಮಗ ಸತ್ಯನಾರಾಯಣನನ್ನು ತ್ರಿಶೂಲದಿಂದ ಇರಿದು ಹತ್ಯೆಗೈದಳೆಂದು ಹೇಳಲಾಗಿದೆ.

ಹದಗೆಡುತ್ತಿರುವ ಪತಿಯ ಆರೋಗ್ಯ ರಕ್ಷಣೆಗಾಗಿ ಮನೆಯಲ್ಲಿಯೇ ಕಾಳಿಕಾ ದೇವಿಯನ್ನು ಆರಾಧಿಸಿದ ಆರೋಪಿ ಈ ಕೃತ್ಯ ಎಸಗಿದ್ದಾಳೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

(ಪ್ರಜಾವಾಣಿ)

ಬೆತ್ತಲೆ ಮೆರವಣಿಗೆ

ನವದೆಹಲಿ, ಜೂನ್ ೩- ಮಾಟಗಾತಿ ಎಂಬ ಶಂಕೆಯಿಂದ ಬುಡಕಟ್ಟು ಮಹಿಳೆಯೊಬ್ಬಳನ್ನು ಒರಿಸ್ಸಾದ ಗ್ರಾಮವೊಂದರಲ್ಲಿ ಬೆತ್ತಲೆ ಮೆರವಣಿಗೆ ಮಾಡಿರುವ ಘಟನೆಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ಈ ಬಗ್ಗೆ ತನಿಖಾ ವರದಿಯನ್ನು ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ತಿಳಿಸಿದೆ.

ಸುಂದರಗಡ ಜಿಲ್ಲೆಯ ತೈನ್‌ಸೆರಾ ಗ್ರಾಮದಲ್ಲಿ ಬುಡಕಟ್ಟು ಮಹಿಳೆಯೊಬ್ಬಳನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿದ್ದಾರೆ ಎಂಬ ಪತ್ರಿಕಾ ವರದಿಗಳನ್ನು ಗಮನಿಸಿದ ಮಾನವ ಹಕ್ಕುಗಳ ಆಯೋಗವು ಘಟನೆಯ ಬಗ್ಗೆ ಸ್ವಯಂ ಅರ್ಜಿ ದಾಖಲಿಸಿಕೊಂಡಿದೆ.

ಮೇ ೩೦ರಂದು ರಾಷ್ಟ್ರೀಯ ದಿನಪತ್ರಿಕೆಯೊಂದರಲ್ಲಿ ವರದಿಯಾದ ಪ್ರಕಾರ, ಈ ಗ್ರಾಮದಲ್ಲಿ ಮಹಿಳೆಯೊಬ್ಬಳನ್ನು ಬೆತ್ತಲೆ ಮಾಡಿ ಎಳೆದೊಯ್ಯಲಾಗಿತ್ತು. ಆಕೆ ಮಲವನ್ನು ತಿನ್ನಬೇಕೆಂದು ಬಲವಂತ ಮಾಡಲಾಗಿತ್ತು. ಇದೆಲ್ಲದರ ಜತೆಗೆ ಆಕೆಯನ್ನು ಮರಕ್ಕೆ ನೇಣು ಹಾಕುವ ಪ್ರಯತ್ನವನ್ನೂ ಆ ಗ್ರಾಮದ ಜನತೆ ಮಾಡಿತ್ತು. (ಪ್ರಜಾವಾಣಿ)

ಅಂತರಂಗ

'ಮೇಲ್ಮನೆ'ಗಳೆಂಬ ಹಿಂಬಾಗಿಲುಗಳು

ರಾಜ್ಯ ವಿಧಾನ ಪರಿಷತ್ ಮತ್ತು ದೇಶದ ರಾಜ್ಯಸಭೆಗೆ ಮತ್ತೊಮ್ಮೆ ಚುನಾವಣೆ, ನಾಮಕರಣ ಇತ್ಯಾದಿಗಳು ಆರಂಭವಾಗಿವೆ. ಎಲ್ಲೆಲ್ಲೋ ಇದ್ದವರು, ಮುಖ ಇಲ್ಲದವರು, ಸೋತು ಸುಣ್ಣವಾದವರು, ದಲ್ಲಾಳಿಗಳು, ಕುದುರೆ ಜೂಜಿನ ಮಾಲೀಕರು, ಹೆಂಡದ ದೊರೆಗಳು, ಕೈಗಾರಿಕೋದ್ಯಮಿಗಳು ಹೀಗೆ ಸಾಲು ಸಾಲೇ ಜನ ಹಿಂಬಾಗಿಲ ಪ್ರವೇಶಕ್ಕಾಗಿ ಪೈಪೋಟಿ ನಡೆಸುತ್ತಿದ್ದಾರೆ. ಇವರ ನಡುವೆ ಅಲ್ಲೊಬ್ಬರು ಇಲ್ಲೊಬ್ಬರು ಸಾಹಿತಿ, ಕಲಾವಿದರು, ಪತ್ರಕರ್ತರು, ಪ್ರತಿಭಾವಂತರು ತೂರಿಕೊಳ್ಳುತ್ತಿದ್ದಾರೆ.

'ಮೇಲ್ಮನೆ'ಗಳೆಂದು ಕರೆಯಲ್ಪಡುವ ಈ ಎರಡೂ ಸದನಗಳ ಪ್ರವೇಶಕ್ಕೆ ನಡೆಯುತ್ತಿರುವ ಪೈಪೋಟಿ – ವ್ಯವಹಾರಗಳನ್ನು ನೋಡಿದರೆ ಅದರ ಮೂಲ ಕಲ್ಪನೆಯೇ ಬುಡಮೇಲಾಗುವಂತಿದೆ. ಬಿಳಿಯರ ಪಳೆಯುಳಿಕೆಯಂತೆ ಬಂದ ಈ ಮೇಲ್ಮನೆಯ ಕಲ್ಪನೆಗೆ ಸಂವಿಧಾನದಲ್ಲಿ ಅವಕಾಶ ಒದಗಿಸಿಕೊಟ್ಟಿದ್ದು, ನೇರ ಚುನಾವಣೆಯಲ್ಲಿ ಗೆದ್ದು ಬರಲಾರದ ಜನವರ್ಗಗಳು ಹಾಗೂ ವಿವಿಧ ಕ್ಷೇತ್ರಗಳ ಪ್ರತಿಭಾವಂತರಿಗೆ ಅವಕಾಶ ಮಾಡಿಕೊಟ್ಟು, ಅವರ ಸಲಹೆ ಸಹಕಾರಗಳ ಮೂಲಕ ಶಾಸಕಾಂಗದ ಚೈತನ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿ ಹಾಗೂ ಸಮರ್ಥ ನಿರ್ವಹಣೆಗಾಗಿ.

ಇಂಗ್ಲೆಂಡ್‌ನಲ್ಲಿ ಈ ಪದ್ಧತಿ ಅಳವಡಿಸಿಕೊಂಡಿದ್ದು, ಅಲ್ಲಿನ ರಾಜ ಸತ್ತೆಯ ವಾರಸುದಾರರಿಗೆ ಪ್ರಜಾಸತ್ತೆಯ ಪ್ರಕ್ರಿಯೆಯಲ್ಲಿ ತೊಡಗಿಸಿ ಕೊಳ್ಳಲು ಅವಕಾಶ ಮಾಡಿಕೊಡುವುದಕ್ಕಾಗಿ. ಈ ಊಳಿಗಮಾನ್ಯ ವಾರಸುದಾರರ್‍ಯಾರೂ ನೇರ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗದ್ದರಿಂದ, ರಾಜಸತ್ತೆಯ ಪ್ರಭಾವ ಅಲ್ಲಿನ ಪ್ರಜಾಸತ್ತೆಯ ಮೇಲೆ ಹಿಡಿತ ಹೊಂದಿದ್ದರಿಂದ ಅಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು. ಆಗಲೂ ಇಂಥ ವ್ಯವಸ್ಥೆಗಾಗಿ ಅವರು ನೀಡಿದ್ದ ಕಾರಣ: ಪ್ರತಿಭಾವಂತ ಹಿರಿಯರು ಅನುಭವಿಗಳು ಪ್ರಾಜ್ಞರು ಸಾಹಿತಿ ಕಲಾವಿದರು ವಿಜ್ಞಾನಿಗಳು ಇಂಥವರ ಸಲಹೆ ಸಹಕಾರಗಳ ಮೂಲಕ ಪ್ರಜಾಸತ್ತಾತ್ಮಕ ಕ್ರಿಯೆಗಳನ್ನು ಸಮರ್ಥವಾಗಿ ನಿರ್ವಹಿಸಬಹುದೆಂಬ ಆಶಯ.

ಇಂಥದೇ ಉದ್ದೇಶ ಭಾರತದಲ್ಲೂ ಜಾರಿಗೆ ಬಂದಿತು. ವಿಶೇಷವಾಗಿ ಚುನಾವಣೆಯಲ್ಲಿ ನೇರವಾಗಿ ಗೆಲ್ಲಲಾರದ ಮೇಲ್ವರ್ಗದ ಜನ ಮೇಲ್ಮನೆಗಳಲ್ಲಿ ಸ್ಥಾನ ಪಡೆಯತೊಡಗಿದರು. ವಿಚಿತ್ರವೆಂದರೆ 'ನೇರ ಚುನಾವಣೆಯಲ್ಲಿ ಗೆಲ್ಲಲಾರದವರಿಗೆ ಸ್ಥಾನ' ನೀಡುವ ಈ ಮಹದುದ್ದೇಶ ದೀನ ದುರ್ಬಲರಿಗೆ ಒದಗಿ ಬರಲಿಲ್ಲ. ಅಧಿಕಾರ ಹಣ ಜಾತಿ ತೋಳ್ಬಲ ಇತ್ಯಾದಿಗಳೇ ಮಾನದಂಡಗಳಾಗಿರುವ ನೇರ ಚುನಾವಣೆಗಳಲ್ಲಿ ಭಾಗವಹಿಸಲಾರದ ಅಲ್ಪಸಂಖ್ಯಾತ ಜಾತಿ ವರ್ಗಗಳ ಜನರಿಗೆ ಇಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಇನ್ನೂ ವಿಚಿತ್ರವೆಂದರೆ ಮೇಲ್ಮನೆಗಳಲ್ಲಿ ಯಾವುದೇ ಜಾತಿ ವರ್ಗಗಳಿಗೆ ಮೀಸಲಾತಿಯೇ ಇಲ್ಲ. ಹಾಗಾಗಿ ಇಲ್ಲಿ ಆಯ್ಕೆಯಾಗುವ ಬಹುತೇಕ ಜನ ಮೇಲ್ವರ್ಗದವರೇ ಆಗಿರುತ್ತಾರೆ.

'ಒಬ್ಬ ಮನುಷ್ಯನಿಗೆ ಒಂದು ಓಟು' ಅನ್ನುವ ಸಂವಿಧಾನದ ನೀತಿಯಂತೆ ಮೇಲ್ಮನೆ ಅಸ್ತಿತ್ವವೇ ಪ್ರಶ್ನಾರ್ಹವಾಗುತ್ತದೆ. ಅಲ್ಲದೆ ಈಗಾಗಲೇ ಅಗತ್ಯಕ್ಕಿಂತ ಹೆಚ್ಚು ಪ್ರಾತಿನಿಧ್ಯ ಹೊಂದಿರುವ ಕ್ಷೇತ್ರಗಳ ಪ್ರತಿನಿಧಿಗಳೇ ಮತ್ತೆ ಮತ್ತೆ ಮೇಲ್ಮನೆಗೆ ಆಯ್ಕೆಯಾಗುತ್ತಾರೆ. ಪದವೀಧರ ಕ್ಷೇತ್ರವಾಗಲೀ, ಶಿಕ್ಷಕ ಕ್ಷೇತ್ರವಾಗಲಿ, ಸ್ಥಳೀಯ ಸಂಸ್ಥೆಗಳ ಕ್ಷೇತ್ರವಾಗಲಿ, ಕೆಳಮನೆಯಲ್ಲಿ ಪ್ರತಿನಿಧಿಸಲ್ಪಡದ ಕ್ಷೇತ್ರಗಳಲ್ಲ. ಆದರೂ ಇಂಥ ಕ್ಷೇತ್ರಗಳಿಗೆ ಮೇಲ್ಮನೆಯಲ್ಲಿ ಅವಕಾಶ ಮಾಡಿಕೊಟ್ಟಿರುವುದು ಆಶ್ಚರ್ಯ. ಆಶ್ಚರ್ಯ ಅನ್ನುವುದಕ್ಕಿಂತ ಮೇಲ್ವರ್ಗದ ಜನ ಕಂಡುಕೊಂಡಿರುವ ಹಿಂಬಾಗಿಲ ಮಾರ್ಗ ಎಂದರೆ ಸರಿಯಾಗುತ್ತದೆ.

ನಿಜವಾಗಿ ಮೇಲ್ಮನೆಗೆ ಕ್ಷೇತ್ರಗಳನ್ನು ನಿಗದಿಪಡಿಸಬೇಕಾದ್ದು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಅಸಂಘಟಿತ ಕ್ಷೇತ್ರಗಳಿಂದ. ಯಾಕೆಂದರೆ ಈ ಕ್ಷೇತ್ರಗಳ ಪ್ರತಿನಿಧಿಗಳು ನೇರ ಚುನಾವಣೆ ಎದುರಿಸಲಾರದವರು. ಕೃಷಿ ಕೂಲಿಕಾರರು, ಕುಶಲ ಕರ್ಮಿಗಳು, ಅಲ್ಪಸಂಖ್ಯಾತ ಜಾತಿಗಳವರು, ಪೌರ ಕಾರ್ಮಿಕರು, ಅಪಮಾನಿತ ವೃತ್ತಿಯಲ್ಲಿ ತೊಡಗಿರುವವರು ಇವೇ ಮುಂತಾದ ಕ್ಷೇತ್ರಗಳಿಗೆ ಮೇಲ್ಮನೆಯಲ್ಲಿ ಪ್ರಾತಿನಿಧ್ಯ ಇರಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವದ ಪ್ರಕ್ರಿಯೆಯೇ ಹಾಸ್ಯಾಸ್ಪದವಾಗುತ್ತದೆ.

ಈಚಿನ ಆಯ್ಕೆಗಳನ್ನು ನೋಡಿ. ಮಣ್ಣಿನ ಮಗ ಎಂದು ದೇಶದ ತುಂಬ ಬೊಬ್ಬೆ ಹೊಡೆಯುವ ದೇವೇಗೌಡರು ತಮಿಳುನಾಡಿನ ರೇಸು ಕುದುರೆಗಳ ಮಾಲೀಕ ರಾಮಸ್ವಾಮಿ ಅವರನ್ನು ಕರ್ನಾಟಕದ ಪ್ರತಿನಿಧಿಯಾಗಿ ರಾಜ್ಯಸಭೆಗೆ ಕಳುಹಿಸಲು ತೀರ್ಮಾನಿಸಿದ್ದಾರೆ. ರೈತರು, ಹಿಂದುಳಿದವರು, ದಲಿತರು ಹಾಗೂ ಅಲ್ಪಸಂಖ್ಯಾತರ ಹೆಸರಿನಲ್ಲಿ ರಾಜಕೀಯ ಮಾಡುವ ಜಾತ್ಯಾತೀತ ಜನತಾದಳದಂಥ ಪಕ್ಷದಲ್ಲೇ ಇಂಥ ಜೂಜುಕೋರನೊಬ್ಬನನ್ನು ರಾಜ್ಯ ಸಭೆಗೆ ಕಳುಹಿಸುವುದಾದರೆ ಇದಕ್ಕಿಂತ ದೊಡ್ಡ ಅಣಕ ಇನ್ನೊಂದಿದ್ದೀತೆ? ಲೋಹಿಯಾ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವ ಸಮಾಜವಾದಿ ಪಕ್ಷದ ಮುಲಾಯಂ ಸಿಂಗ್ ಯಾದವ್ ನಿನ್ನೆ ಮೊನ್ನೆವರೆಗೂ ಸಂಘ ಪರಿವಾರದ ಏಜೆಂಟನಾಗಿದ್ದ ಕೈಗಾರಿಕೋದ್ಯಮಿ ಅನಿಲ್ ಅಂಬಾನಿಯನ್ನು ರಾಜ್ಯಸಭೆಗೆ ಕಳುಹಿಸುತ್ತಿದ್ದಾರೆ! ವಿಜಯ್ ಮಲ್ಯನಂಥ ಹೆಂಡದ ದೊರೆ, ಕುದುರೆ ರೇಸಿನ ರಾಮಸ್ವಾಮಿ, ಸಂಪರ್ಕ ಕ್ರಾಂತಿಯ ಹೆಸರಲ್ಲಿ ದೇಶವನ್ನೇ ಲೂಟಿ ಮಾಡಿದ ಅನಿಲ್ ಅಂಬಾನಿ ಇಂಥವರ ಕೈಯಲ್ಲಿ ಪ್ರಜಾಪ್ರಭುತ್ವ ಎಷ್ಟು ಬಲಿಷ್ಠವಾಗಬಹುದು?

೧೯೬೦ರಲ್ಲಿ ತಮಿಳುನಾಡಿನಲ್ಲಿ ನಡೆದ ಚುನಾವಣೆಯಲ್ಲಿ ಪುರೋಹಿತಶಾಹಿ ಪೂರ್ಣ ತಿರಸ್ಕರಿಸಲ್ಪಟ್ಟಾಗ, ಹೀಗೆ ತಿರಸ್ಕರಿಸಲ್ಪಟ್ಟ ಬಹುತೇಕ ಜನ ಮೇಲ್ಮನೆಗೆ ಬೇರೆ ಬೇರೆ ಮಾರ್ಗಗಳ ಮೂಲಕ ಆರಿಸಿ ಬಂದರು. ಇಡೀ ತಮಿಳುನಾಡಿನಲ್ಲಿ ಬಲಿಷ್ಠವಾಗಿದ್ದ ದ್ರಾವಿಡ ಕಳಗಂ ಈ ಪಿತೂರಿಯನ್ನು ಮನಗಂಡು ಇಡೀ ಮೇಲ್ಮನೆಯನ್ನೇ ರದ್ದುಪಡಿಸಿತು. ಇಂದಿಗೂ ಆಂಧ್ರ, ಪಂಜಾಬ್ ಮೊದಲಾದ ಹಲವು ರಾಜ್ಯಗಳಲ್ಲಿ ಮೇಲ್ಮನೆಯ ಅಸ್ತಿತ್ವವೇ ಇಲ್ಲ. ಆ ರಾಜ್ಯಗಳು 'ಹಿರಿಯರ' ಸಹಾಯವಿಲ್ಲದೆ ತೊಂದರೆಗೊಳಗಾದ ಪ್ರಸಂಗಗಳೇನೂ ಉಂಟಾಗಿಲ್ಲ.

ಮೇಲ್ಮನೆಗಳು ನಿಜವಾಗಿಯೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಗತ್ಯವೇ ಅನ್ನುವುದಕ್ಕಿಂತ ಪ್ರಜಾಪ್ರಭುತ್ವ ಹೆಚ್ಚು ಅರ್ಥಪೂರ್ಣವಾಗಿ ಜಾರಿಗೆ ಬರಲು ಮೇಲ್ಮನೆಗಳನ್ನು ಹೇಗೆ ಬಳಸಿಕೊಳ್ಳಬಹುದೆಂಬುದು ಮುಖ್ಯವಾಗುತ್ತದೆ. ಪ್ರತಿಭಾವಂತರನ್ನು ಗುರುತಿಸಿ ಅಂಥವರನ್ನು ಮೇಲ್ಮನೆಗೆ ಆಯ್ಕೆ – ನೇಮಕಾತಿ – ನಾಮಕರಣ ಮಾಡುವ ಮೂಲಕ ಮಾತ್ರ ಅದು ಸಾಧ್ಯವಾಗುತ್ತದೆ. ನೇರ ಚುನಾವಣೆಯಲ್ಲಿ ಭಾಗವಹಿಸಲಾಗದ – ಭಾಗವಹಿಸಿದರೂ ಗೆಲ್ಲಲಾಗದ ಹತ್ತು ಹಲವು ಜನವರ್ಗಗಳು ನಮ್ಮಲಿವೆ. ಅಂಥ ಸಮಾಜವನ್ನು ಪ್ರತಿನಿಧಿಸುವಂಥವರು ಮೇಲ್ಮನೆಗೆ ಬರಬೇಕು. ಅಂಥ ಇಚ್ಛಾಶಕ್ತಿ ಸರ್ಕಾರಕ್ಕೂ ಬರಬೇಕು. ಅಂಥ ಅರಿವು ಆ ಸ್ಥಾನಗಳಿಗೆ ಪ್ರಯತ್ನಿಸುವ ಜನರಿಗೂ ಇರಬೇಕು. ಆಗ ಮಾತ್ರ 'ಮೇಲ್ಮನೆಗಳು' ನಿಜವಾಗಿಯೂ 'ಮೇಲ್ಮನೆ'ಗಳಾಗುತ್ತವೆ.

❍ ಇಂದೂಧರ ಹೊನ್ನಾಪುರ

ವಾಸ್ತವ

ಪೂಜಾಳ ಬಟ್ಟೆ ಮಾಸಿತ್ತು. ಬಹುಶಃ ಆಕೆ ಈ ಮೊದಲು ಒಳ್ಳೆಯ ದಿನಗಳನ್ನು ಕಂಡಿರಬೇಕು. ಅವಳ ಕೂದಲನ್ನು ನೀಟಾಗಿ ಬಾಚಿ ಜಡೆ ಹಾಕಿದ್ದರು. ಆದರೆ ಅದು ಅಲ್ಲಲ್ಲಿ ಕಂದು ಬಣ್ಣಕ್ಕೆ ತಿರುಗಿ ಒಣಗಿದ ಹುಲ್ಲಿನಂತೆ ಕಾಣುತ್ತಿತ್ತು. ಪೌಷ್ಠಿಕಾಂಶ ಮತ್ತು ಸತ್ವಯುತ ಆಹಾರದ ಕೊರತೆಯ ಕಥೆಯನ್ನು ಯಾರೂ ಬಾಯಿಬಿಟ್ಟು ಹೇಳಬೇಕಾಗಿರಲಿಲ್ಲ. ಇಂಥ 'ಬಾಲ್ಮೀಕಿ'ಗಳಿಗೆ ನೆರವಾಗುವುದಕ್ಕೆಂದು ಮಾನವಾಧಿಕಾರ ಸಂಪರ್ಕ ಕೇಂದ್ರದವರು ನಡೆಸುತ್ತಿದ್ದ ಶಾಲೆಗೆ ಪೂಜಾ ಹೋಗುತ್ತಿದ್ದಳು. ಬಹುಶಃ ಕಕ್ಕಸ್ಸುಗಳನ್ನು ತೊಳೆಯುವ ಕೆಲಸ ತಪ್ಪಿದ್ದಕ್ಕೆ ಅವಳಿಗೆ ಖುಷಿಯಾಗಿರಬೇಕು. ಅವಳು ತನ್ನ ಹೆಸರನ್ನು ಕಷ್ಟಪಟ್ಟು ಏಕಾಗ್ರತೆಯಿಂದ ಹೆಮ್ಮೆಯಿಂದ ಬರೆಯುತ್ತಿದ್ದಳು.

○ ಮೇರಿ ಮರ್ಸೆಲ್ ಥೆಕೆಕರ್

ಅನು : ಬಿ.ಯು. ಸುಮಾ

ಉತ್ತರ ಪ್ರದೇಶ, ಮಧ್ಯಪ್ರದೇಶ ಬಿಹಾರ್ ಮತ್ತು ರಾಜಾಸ್ಥಾನ ದುದ್ದಕ್ಕೂ ನಾನು ಅವರ ಹಿಂದೆ ಕಾಲೆಳೆದುಕೊಂಡು ಅಲೆದಾಡಿದೆ. ಅವರು, ಅತ್ಯಂತ ಕರುಣಾಜನಕ ಸ್ಥಿತಿಯಲ್ಲಿರುವ ನಮ್ಮೆಲ್ಲರ ಮಕ್ಕಳು – ಭಾರತದ ಭಂಗಿಗಳು, ದಾಮ್‌ಗಳು ಅಥವಾ ಮೆಹ್ತಾರ್‌ಗಳು – ಯಾರಾದರೂ ಆಗಬಹುದು. ಎಲ್ಲಾ ಕಡೆ, ಅಥವಾ ಯಾವುದೇ ಕಡೆ ಅವರ ಸ್ಥಿತಿ ಮಾತ್ರ ಒಂದೇ ರೀತಿಯಾಗಿದೆ. ಇವರು, ಕುರೂಪಿ ಭಾರತದ ನತದೃಷ್ಟ ಮಕ್ಕಳು.... ತಮ್ಮ ಬಾಲ್ಯ ಕಸಿಯಲ್ಪಟ್ಟ ಮುಗ್ಧರು. ನಾವು ಅವರನ್ನು ಎಲ್ಲೆಲ್ಲೂ ನೋಡುತ್ತೇವೆ. ಆದರೂ ನಾವು ಬೆಚ್ಚಿ ಬೀಳುವುದೇ ಇಲ್ಲ. ಅವರ ದರಿದ್ರ ಬದುಕಿನ ದೃಶ್ಯಗಳೆಲ್ಲಾ ಅದೆಷ್ಟು ಸಾಮಾನ್ಯ ಎಂದರೆ, ರೂಢಿಗತವಾದ ನಮ್ಮ ಕಣ್ಣುಗಳಿಗೆ ಅದು ಕಾಣುವುದೇ ಇಲ್ಲ. ಹೌದು, ಅವರು ನಮ್ಮೆಲ್ಲರ ಅದೃಶ್ಯ ಮಕ್ಕಳು.

೧೯೯೭ರಿಂದ ನಾನು ಈ 'ಬಾಲ್ಮೀಕಿ'ಗಳ ಬೆನ್ನು ಹತ್ತಿರುವೆ. ವಾಸ್ತವಿಕತೆಯ ಸಂಪೂರ್ಣ ಚಿತ್ರಣ ಕೊಡುವುದಿರಲಿ, ಈ ಕಾರ್ಯದಲ್ಲಿ ತಾನು ಅನುಭವಿಸಬೇಕಾದ ದುರವಸ್ಥೆಯನ್ನು ಮಾತ್ರ ದಾಖಲು ಮಾಡುತ್ತಿರುವ ಬರಹಗಾರನ ಸ್ಥಿತಿ ಕೂಡ ವಾಕರಿಕೆ ಬರುವಷ್ಟು ವಿಷಾದಕರವಾಗಿ ಹೊರಗಿನವರಿಗೆ ಕಾಣಬಹುದು. ಇರಲಿ. ನಾನು ರಾಜಾಸ್ಥಾನದ ಸಿಕಾರ್‌ಗೆ ಬಂದೆ. ಎಲ್ಲೇ ಆಗಲಿ, ಜಾಡಮಾಲಿಗಳು ಆ ಕೊಳೆತ ಹೊಲಸು ವಾಸನೆಯ ತ್ಯಾಜ್ಯಗಳನ್ನು ತಮ್ಮ ಕೈಯಿಂದಲೇ ಹೆಕ್ಕಿ ತೆಗೆದು ಸ್ವಚ್ಛ ಮಾಡುವ ಕೆಲಸವೇ ನಮ್ಮನ್ನು ತೀವ್ರವಾಗಿ ಬೆಚ್ಚಿಸುತ್ತದೆ. ಇದು ಒಂದು ಜನಾಂಗದ ಅವನತಿಯ ಅತ್ಯಂತ ಹೀನಾಯ ಸ್ಥಿತಿ ಎನಿಸಿಬಿಡುತ್ತದೆ. ಆದರೆ, ನಾನು ಹೇಳಲು ಹೊರಟಿರುವ ಈ ಸಂಗತಿ ಇದೆಯಲ್ಲಾ, ಇದಕ್ಕಿಂತ ಗತಿಗೆಟ್ಟದ್ದು. ಸಿಕಾರ್‌ನಲ್ಲಿ ಸಣ್ಣ ಹುಡುಗಿಯರು – ಎಂಟು, ಒಂಭತ್ತು, ಹತ್ತು ವರ್ಷದವರು, ತಮ್ಮ ತಾಯಂದಿರ ಜೊತೆ ಕೆಲಸ ಮಾಡುತ್ತಿದ್ದರು.



ಎಲ್ಲಿ ಹೋದವು ಕನಸುಗಳು....

ಕನಸುಗಳಿಲ್ಲದೆ, ದಾರಿಯೂ ಕಾಣದೆ

ನಾನು ಪೂಜಾಳನ್ನು ಭೇಟಿ ಮಾಡಿದೆ. ಅವಳಿಗೆ ೧೨ ವರ್ಷ ಎಂದು ಅವಳು ತಿಳಿದುಕೊಂಡಿದ್ದಳು. ನಾನು ನೋಡಿದ ಹುಡುಗಿಯರಲ್ಲೇ ಅತ್ಯಂತ ವಿಷಾದದ ಕಣ್ಣುಗಳ ಹುಡುಗಿ ಅವಳು. ತಡೆದು, ತಡೆದು, ನಿಧಾನಕ್ಕೆ ನಾಚಿಕೆಯಿಂದ ಮಾತನಾಡುವ ಅವಳ ಮಾತುಗಳ ಸಾರಾಂಶ ನನಗೆ ಅರ್ಥವಾಗುವ ಹೊತ್ತಿಗೆ ಸಾಕು ಬೇಕಾಯಿತು. ಪ್ರತಿದಿನ ಬೆಳಗ್ಗೆ ಮನುಷ್ಯರು ಹೇತ ಜಾಗವನ್ನು ತನ್ನ ಪುಟ್ಟ ಕೈಗಳಿಂದ ಸ್ವಚ್ಛ ಮಾಡುವ ಕೆಲಸವನ್ನು ಅವಳು ನಿರಂತರವಾಗಿ ನಾಲ್ಕು ವರ್ಷಗಳಿಂದ (ಎಂದರೆ, ಅವಳಿಗೆ ೮ ವರ್ಷದವಳಾಗಿದ್ದಾಗಿನಿಂದ) ಮಾಡುತ್ತಿದ್ದುದಷ್ಟೇ ಅಲ್ಲ, ಅದರ ಜೊತೆಗೆ ಇಂಥ ಹಲವಾರು ಕೆಲಸಗಳು ಅವಳ ದೈನಂದಿನ ಕ್ರಿಯೆಗಳಾಗಿದ್ದವು. ಪೂಜಾಗೆ ಬಾಲ್ಯ ಎನ್ನುವುದು ಎಂದೂ ಇರಲೇ ಇಲ್ಲ.

ಪೂಜಾಳ ಬಟ್ಟೆ ಮಾಸಿತ್ತು. ಬಹುಶಃ ಆಕೆ ಈ ಮೊದಲು ಒಳ್ಳೆಯ ದಿನಗಳನ್ನು ಕಂಡಿರಬೇಕು. ಅವಳ ಕೂದಲನ್ನು ನೀಟಾಗಿ ಬಾಚಿ ಜಡೆ ಹಾಕಿದ್ದರು. ಆದರೆ ಅದು ಅಲ್ಲಲ್ಲಿ ಕಂದು ಬಣ್ಣಕ್ಕೆ ತಿರುಗಿ ಒಣಗಿದ ಹುಲ್ಲಿನಂತೆ ಕಾಣುತ್ತಿತ್ತು. ಪೌಷ್ಠಿಕಾಂಶ ಮತ್ತು ಸತ್ವಯುತ ಆಹಾರದ ಕೊರತೆಯ ಕಥೆಯನ್ನು ಯಾರೂ ಬಾಯಿಬಿಟ್ಟು ಹೇಳಬೇಕಾಗಿರಲಿಲ್ಲ. ಇಂಥ 'ಬಾಲ್ಮೀಕಿ'ಗಳಿಗೆ ನೆರವಾಗುವುದಕ್ಕೆಂದು ಮಾನವಾಧಿಕಾರ ಸಂಪರ್ಕ ಕೇಂದ್ರದವರು ನಡೆಸುತ್ತಿದ್ದ ಶಾಲೆಗೆ ಪೂಜಾ ಹೋಗುತ್ತಿದ್ದಳು. ಬಹುಶಃ ಕಕ್ಕಸ್ಸುಗಳನ್ನು ತೊಳೆಯುವ ಕೆಲಸ ತಪ್ಪಿದ್ದಕ್ಕೆ ಅವಳಿಗೆ ಖುಷಿಯಾಗಿರಬೇಕು. ಅವಳು ತನ್ನ ಹೆಸರನ್ನು ಕಷ್ಟಪಟ್ಟು ಏಕಾಗ್ರತೆಯಿಂದ ಹೆಮ್ಮೆಯಿಂದ ಬರೆಯುತ್ತಿದ್ದಳು.

'ನೀನು ದೊಡ್ಡವಳಾದ ಮೇಲೆ ಏನಾಗಬೇಕು ಅಂತಿದ್ದೀಯಾ?'– ನಾನು ಅವಳನ್ನು ಕೇಳಿದೆ. ಆ ಪ್ರಶ್ನೆ ಇನ್ನೂ ಮುಗಿದೇ ಇರಲಿಲ್ಲ, ಅಷ್ಟರಲ್ಲೇ ನಾನು ತಪ್ಪಿತಸ್ಥಳಂತೆ ತುಟಿ ಕಚ್ಚಿ ಹಿಡಿದೆ. ಅವಳು ಮತ್ತಷ್ಟು ಗೊಂದಲದಿಂದ ನನ್ನನ್ನು ನೋಡಿದಳು. ಪೂಜಾಗೆ ೧೨ ವರ್ಷ. ಮೈ ನೆರೆದ ಕೂಡಲೇ ಅವಳಂಥ ಹುಡುಗಿಯರ ಮದುವೆ ಮಾಡಿಬಿಡುತ್ತಾರೆ. ೧೨ ವರ್ಷದ ಅವಳಿಗೆ ಸರಿಯಾಗಿ ತನ್ನ ಹೆಸರು ಬರೆಯಲೂ ಬರುತ್ತಿರಲಿಲ್ಲ. ಒಂದು ಕ್ರಾಂತಿಕಾರಕ ಮಧ್ಯಸ್ಥಿಕೆ ಇಲ್ಲದಿದ್ದರೆ, ಅವಳ ಬದುಕಿನಲ್ಲಿ ಬೇರೇನನ್ನೂ ತಾನೇ ಆಶಿಸಲು ಸಾಧ್ಯ? ನಾನು ಅದೆಂಥ ಹುರುಳಿಲ್ಲದ ಮೂರ್ಖ ಪ್ರಶ್ನೆ ಕೇಳಿದೆ ಎನಿಸಿತು.

ಸಿಕಾರ್‌ನ ಸುತ್ತ ಮುತ್ತ ಪೂಜಾಳಂತೆ ಶೌಚಾಲಯಗಳನ್ನು ತೊಳೆಯುವ ಸುಮಾರು ೨೦ ಸಣ್ಣ ಹುಡುಗಿಯರಿದ್ದರು. ಬಿಹಾರ್ ಮತ್ತು ಉತ್ತರ ಪ್ರದೇಶದಲ್ಲಿ ಕೂಡ ಇದೇ ಸ್ಥಿತಿ. ಭಾರತದಲ್ಲಿ ಈಗಲೂ ಸರಿಸುಮಾರು ಒಂದು ಮಿಲಿಯನ್‌ನಷ್ಟು ಜನರು ಕೈಯಲ್ಲೇ ಹೇಲು ಬಾಚುವ ಕೆಲಸ ಮಾಡುತ್ತಾರೆ. ನಮ್ಮ ಹಿಂದಿನ ಪ್ರಧಾನಿ ವಾಜಪೇಯಿ, ಕೆಂಪು ಕೋಟೆಯ ವೇದಿಕೆಯ ಮೇಲೆ ನಿಂತುಕೊಂಡು, ೨೦೦೨ರ ಹೊತ್ತಿಗೆ ಜಲಗಾರಿಕೆಯನ್ನು ನಿಷೇಧಿಸುವುದಾಗಿ ಘೋಷಿಸಿದರು. ಆ ಅವಧಿ ಮುಗಿದು ಎರಡು ವರ್ಷವಾಯಿತು. ಭಾರತದ ಈ ಒಂದು ಮಿಲಿಯನ್ ಜನರ ಪಾಲಿಗಂತೂ ಯಾವುದೇ ಬದಲಾವಣೆ ಬಂದಿಲ್ಲ.

ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ್ ಮತ್ತು ರಾಜಾಸ್ಥಾನಗಳಲ್ಲಿ ಆ್ಯಕ್ಷನ್ ಏಡ್ (Action Aid) ನವರ ಪ್ರಚಾರವು ಈ ಸಮಸ್ಯೆಯನ್ನು ಅತ್ಯಂತ ಸಫಲವಾಗಿ ಬೆಳಕಿಗೆ ತಂದಿದೆ. ಆ್ಯಕ್ಷನ್ ಏಡ್‌ನ ಚಳವಳಿಗಾರರು ನೀರಿಲ್ಲದ ಶೌಚಾಲಯಗಳನ್ನು ಸೀಲ್ ಮಾಡಿಸಿದ್ದರೂ, ಈ ಜನಗಳ ಹಣೆಯ ಬರಹ ಏನೂ ಬದಲಾಗಿಲ್ಲ. ಅದರಲ್ಲೂ ಮಕ್ಕಳ ಪಾಡಂತೂ ಕೇಳಲೇಬಾರದು.

ಕೇವಲ ಸರ್ಕಾರಿ ಶಾಲೆಗಳಲ್ಲಿ ಅವರಿಗೆ ದಾಖಲಾತಿಯನ್ನು ನೀಡುವುದರಿಂದ ಏನನ್ನೂ ಸಾಧಿಸಿದಂತೆ ಆಗುವುದಿಲ್ಲ. ಇಲ್ಲಿಯೂ ಅವರು ಲೇವಡಿಯ, ಅವಹೇಳನದ ವಸ್ತುಗಳಾಗಿಯೇ ಉಳಿದಿದ್ದಾರೆ. ಸಣ್ಣಪುಟ್ಟ ಕಾರಣಗಳಿಗೂ ಇವರನ್ನು ಬಡಿದುಹಾಕುತ್ತಾರೆ. ಪೂಜಾಳ ವಯಸ್ಸಿನವಳೇ ಆದ ರೀನಾಳನ್ನು ಕೂಡ ನಾನು ಭೇಟಿ ಮಾಡಿದೆ. ಆಕೆಯ ಗೆಳತಿಯಷ್ಟು ಈಕೆ ಎದೆಗುಂದಿರಲಿಲ್ಲ. ಎದ್ದು ಕಾಣುವಂತೆ ತೊಟ್ಟಿದ್ದ ಅವಳ ಬಟ್ಟೆ ಕೂಡ ಇದಕ್ಕೆ ಕಾರಣವಿರಬಹುದು. ಆಕೆ ಒಂದು ತಿಂಗಳು ಶಾಲೆಗೆ ಹೋಗಿದ್ದಳು. 'ನೀನೇಕೆ ಸ್ಕೂಲನ್ನು ಬಿಟ್ಟೆ?' ಎಂದು ಕೇಳಿದೆ. 'ಟೀಚರ್ ನನ್ನನ್ನು ಹೊಡೆಯುತ್ತಿದ್ದರು'. 'ಅವರು ಯಾಕೆ ಹೊಡೆಯುತ್ತಿದ್ದರು?' 'ನನಗೆ ಸರಿಯಾಗಿ ಪಾಠ ಬರುತ್ತಿರಲಿಲ್ಲ' – ೧೨ ವರ್ಷದ ಹುಡುಗಿ, ಇಡೀ ಬದುಕಿನಲ್ಲಿ ಕೇವಲ ಒಂದು ತಿಂಗಳಿನ ವ್ಯಾಸಾಂಗ ಮಾತ್ರ ಅವಳ ಪಾಲಿಗೆ ಲಭಿಸಿತು. ಅವಳು ಕಂಡ ಮೊದಲನೇ ಅಧ್ಯಾಪಕನೇ ಅವಳನ್ನು ದಡ್ಡಿ ಸೋಮಾರಿ ಎಂದುಕೊಂಡು ಚೆನ್ನಾಗಿ ಹೊಡೆಯುತ್ತಿದ್ದ.

ಪೂಜಾಳಂಥ ಹುಡುಗಿಯರಿಗೆ ಚಿನ್ನದ ಪದಕ ಅಥವಾ ಹೈ ಫಸ್ಟ್‌ಕ್ಲಾಸ್ ಎಂದರೇನು ಎಂಬುದೇ ತಿಳಿದಿಲ್ಲ. ಆಕೆ ತನ್ನ ಹೆಸರನ್ನು ಬಹಳ ಕಷ್ಟಪಟ್ಟು ತುಂಬಾ ಹೆಮ್ಮೆಯಿಂದ ಬರೆದಳು. ನಿಜ, ಅವಳ ಮಟ್ಟಿಗೆ ಅದೊಂದು ದೊಡ್ಡ ಸಾಧನೆ. ಇದಕ್ಕಿಂತ ಹೆಚ್ಚಿನ ಕನಸನ್ನು ಆಕೆ ಕಾಣುವುದೂ ಸಾಧ್ಯವಿಲ್ಲ. ಪೂಜಾಳಿಗೆ ಒಂದು ಒಳ್ಳೆಯ ಬದುಕು ಎಂದರೆ, ಹೊಟ್ಟೆ ತುಂಬಾ ಊಟ ಸಿಗುವ, ಅನಾರೋಗ್ಯಕ್ಕೆ ತುತ್ತಾಗದಿರುವ, ಅವಳ ಕುಡುಕ ಅಪ್ಪನ ಪಶುತ್ವದ ಹಿಂಸೆಗೊಳಗಾಗದ ಅಥವಾ ಯಾರ ಕೈಯಲ್ಲೂ ಹೊಡೆತ ತಿನ್ನದೆ ನೆಮ್ಮದಿಯಿಂದ ನಿದ್ದೆ ಮಾಡುವಂಥ ಸ್ಥಿತಿ ಮಾತ್ರ.

ಸಾಮಾನ್ಯ ಬಾಲ್ಮೀಕಿಗಳಿಗೆ ಶಿಕ್ಷಣ ಎಂದರೆ ಇಷ್ಟೇ. ಇದರ ಜೊತೆಗೆ ಅವರು ಪ್ರತ್ಯೇಕವಾಗಿ ಕುಳಿತುಕೊಳ್ಳಬೇಕು, ಪ್ರತ್ಯೇಕವಾಗಿ ತಿಂಡಿ ತಿನ್ನಬೇಕು. ವಿದ್ಯಾರ್ಥಿಗಳಿಗೆಂದು ಇಟ್ಟಿರುವ ಮಡಕೆಯ ನೀರನ್ನು ಇವರು ಮುಟ್ಟುವ ಹಾಗಿಲ್ಲ. ಏಕೆಂದರೆ, ಅದು ಮೈಲಿಗೆಯಾಗಿಬಿಡುತ್ತದೆ. ಇವರಿಗೆ ಕಲಿಸುವ ಪಾಠವೂ ಅಷ್ಟರಲ್ಲೇ ಇದೆ.

ಲಕ್ನೋ ಬಳಿ, ಸಂತೋಷದಿಂದ ನಕ್ಕು ನಲಿದಾಡುತ್ತಿದ್ದ ಮಕ್ಕಳ ಗುಂಪನ್ನು ನೋಡಿದೆ. ಸದುದ್ದೇಶದ ಒಬ್ಬ ಸಮಾಜ ಸೇವಕ ಅಲ್ಲಿನ ಶಾಲೆಯ ಹೆಡ್‌ಮಾಸ್ತರನ್ನು ಬೆದರಿಸಿ, ತಿಳಿಯ ಹೇಳಿ, ಈ ಮಕ್ಕಳನ್ನು ಶಾಲೆಗೆ ಸೇರಿಸಿದ್ದ. ಅವನು ಸದಾ ಆ ಹೆಡ್‌ಮಾಸ್ತರಿಗೆ 'ಪ್ರಿವೆನ್ಷನ್ ಆಫ್ ಅಟ್ರೋಸಿಟೀಸ್ ಆ್ಯಕ್ಟ್' (Prevention of Atrocities Act)ಬಗ್ಗೆ ಜ್ಞಾಪಿಸುತ್ತಾ, ಅಸ್ಪೃಶ್ಯತೆಯ ಆಚರಣೆ, ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ ಎಂದು ವಿವರಿಸಿಯೂ ಹೇಳುತ್ತಿದ್ದ. ಶೌಚಾಲಯಗಳನ್ನು ತೊಳೆಯುವ ಕೆಲಸ ತಪ್ಪಿದ ಯಾವುದೇ ಮಗುವಿಗೆ ಆಗುವಷ್ಟು ಸಂತೋಷ ಇವರಿಗಾಗಿತ್ತು.

ಕೆಲವು ತಿಂಗಳ ನಂತರ, ಎಲ್ಲರೂ ಶಾಲೆಯನ್ನು ಬಿಟ್ಟಿದ್ದರು. ಏಕೆಂದರೆ, ಟೀಚರ್ ಅವರನ್ನು ಹೊಡೆದು ದಡ್ಡರು ಎಂದು ಹಣೆಪಟ್ಟಿ ಹಚ್ಚಿದ್ದರು. ವಾಸ್ತವವಾಗಿ ಅವರಿಗೆ ಏನನ್ನು ಕಲಿಸಿಯೂ ಇರಲಿಲ್ಲ. ಆರು ತಿಂಗಳು ಶಾಲೆಯಲ್ಲಿ ಕಳೆದರೂ ಯಾರಿಗೂ ಏನೂ ಓದು ಬರಹ ಬರುತ್ತಿರಲಿಲ್ಲ. ಈಗ, ದಿನ ಬೆಳಗಾದರೆ, ಕಸದ ತೊಟ್ಟಿಯಲ್ಲಿ ಪ್ಲಾಸ್ಟಿಕ್ ಪೇಪರ್‌ಗಳನ್ನು ಆಯುವ ಕೆಲಸದಲ್ಲಿ ಅವರು ತೊಡಗಿರುವುದನ್ನು ಕಾಣಬಹುದು. ಇದರಿಂದ ಅವರಿಗೆ ದಿನಕ್ಕೆ ೨೦ ರಿಂದ ೩೦ ರೂಪಾಯಿ ಸಿಗುತ್ತಿತ್ತು. ಈ ಮಕ್ಕಳ ಪಾಲಿಗೆ, ಶಾಲೆ ಎನ್ನುವುದು ಯಾವುದೇ ಮಧುರ ನೆನಪುಗಳಿಲ್ಲದ ಒಂದು ದೂರದ ಕನಸಾಗಿಯೇ ಉಳಿದಿತ್ತು.

ಇದನ್ನೆಲ್ಲಾ ನೋಡುತ್ತಿದ್ದ ನನಗೆ, ತಕ್ಷಣ ನೆನಪಿಗೆ ಬಂದದ್ದು ಪಟ್ಟಣದ 'ಒಳ್ಳೆಯ ಶಾಲೆಗಳ' ಮೇಲುವರ್ಗದ ಬುದ್ಧಿವಂತ ಮತ್ತು ಅತ್ಯುನ್ನತ ಶ್ರೇಣಿಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ, ನಮ್ಮ ರಾಷ್ಟ್ರಾಧ್ಯಕ್ಷರು ಮಾಡುವ ಸ್ಫೂರ್ತಿದಾಯಕ ಭಾಷಣಗಳು. ಪೂಜಾಳಂಥ ಹುಡುಗಿಯರಿಗೆ ಚಿನ್ನದ ಪದಕ ಅಥವಾ ಹೈ ಫಸ್ಟ್‌ಕ್ಲಾಸ್ ಎಂದರೇನು ಎಂಬುದೇ ತಿಳಿದಿಲ್ಲ. ಆಕೆ ತನ್ನ ಹೆಸರನ್ನು ಬಹಳ ಕಷ್ಟಪಟ್ಟು ತುಂಬಾ ಹೆಮ್ಮೆಯಿಂದ ಬರೆದಳು. ನಿಜ. ಅವಳ ಮಟ್ಟಿಗೆ ಅದೊಂದು ದೊಡ್ಡ ಸಾಧನೆ. ಇದಕ್ಕಿಂತ ಹೆಚ್ಚಿನ ಕನಸನ್ನು ಆಕೆ ಕಾಣುವುದೂ ಸಾಧ್ಯವಿಲ್ಲ. ಪೂಜಾಳಿಗೆ ಒಂದು ಒಳ್ಳೆಯ ಬದುಕು ಎಂದರೆ, ಹೊಟ್ಟೆ ತುಂಬಾ ಊಟ ಸಿಗುವ, ಅನಾರೋಗ್ಯಕ್ಕೆ ತುತ್ತಾಗದಿರುವ, ಅವಳ ಕುಡುಕ ಅಪ್ಪನ ಪಶುತ್ವದ ಹಿಂಸೆಗೊಳಗಾಗದ ಅಥವಾ ಯಾರ ಕೈಯಲ್ಲೂ ಹೊಡೆತ ತಿನ್ನದೆ ನೆಮ್ಮದಿಯಿಂದ ನಿದ್ದೆ ಮಾಡುವಂಥ ಸ್ಥಿತಿ ಮಾತ್ರ. ನಮ್ಮ ರಾಷ್ಟ್ರಾಧ್ಯಕ್ಷರ ಉದ್ದೇಶ, ಗುರಿ ಹೈದರಾಬಾದ್, ಬೆಂಗಳೂರು ಮತ್ತು ಐಐಟಿಗಳಲ್ಲಿ ಖಂಡಿತಾ ಈಡೇರುತ್ತಿದೆ.

ಈ ಭಂಗಿ ಮಕ್ಕಳಿಗೆ ಕೇವಲ ಒಂದು ಅತ್ಯುತ್ತಮ ವಿದ್ಯಾ ಕೇಂದ್ರ ಇದ್ದರೆ, ಅವರೂ ಎಲ್ಲಿಂದ ಎಲ್ಲಿಗೆ ಬೇಕಾದರೂ ಹೋಗುತ್ತಿದ್ದರು. ಅವರಿಗೆ ಅತ್ಯವಶ್ಯವಾಗಿ ಬೇಕಾಗಿರುವುದು ಒಂದು ವಿಶಿಷ್ಟ ರೀತಿಯ ಶಾಲೆ. ಎಂದರೆ, ಹಿಂದೆಂದೂ ಶಾಲೆಯ ಮುಖ ನೋಡದ, ಸ್ವಲ್ಪ ಹಿರಿಯ ವಯಸ್ಸಿನ ವಿದ್ಯಾರ್ಥಿಗಳಿಗೆಂದೇ ಪ್ರತ್ಯೇಕವಾಗಿ ರೂಪಿಸಿದ ಶಾಲೆ. ಅಧ್ಯಯನಕ್ಕಿಂತ ಹೆಚ್ಚಾಗಿ, ತಾಳ್ಮೆ, ಪ್ರೀತಿ, ಕಾಳಜಿಯಿಂದ ಅವರಿಗೆ ಪಾಠ ಮಾಡಬಲ್ಲ ಅಧ್ಯಾಪಕರ ಅಗತ್ಯವಿದೆ. ಈ ಎಲ್ಲಾ ಮಕ್ಕಳ ಮನಸ್ಸಿನಲ್ಲಿ, 'ನನ್ನನ್ನು ಮುಟ್ಟಬೇಡ, ವಾಪಸ್ಸು ಕೊಳೆಗೇರಿಗೇ ಹೋಗು' -ಎಂಬ ಗಾಯದ ಕಲೆಯಂಥ ಮಾತುಗಳು ಅಚ್ಚೊತ್ತಿಬಿಟ್ಟಿವೆ. ಅದೆಂಥ ಆಳವಾದ ಗಾಯ ಎಂದರೆ, ಇಂಥ ಹಿಂಸೆಯ, ನೋವಿನ ಬದುಕನ್ನು ಬಿಟ್ಟು ಬೇರೊಂದು ರೀತಿಯ ಜೀವನ ಇದೆ ಎಂದರೆ ಅವರು ನಂಬುವುದೂ ಇಲ್ಲ.

ಪೂಜಾ ಮತ್ತು ರೀನಾಳಂಥ ಸಾವಿರಾರು ಮಕ್ಕಳಿವೆ. ಸಾಮಾನ್ಯ ಶಾಲೆಗೆ ಅವರನ್ನು ಸೇರಿಸುವುದರಿಂದ ಏನೂ ಪ್ರಯೋಜನವಿಲ್ಲ. ಅವರ ಮನಸ್ಸಿನಾಳದಲ್ಲಿ ಬೇರು ಬಿಟ್ಟಿರುವ ಶತಮಾನದಷ್ಟು ಹಿಂದಿನ ಅವಮಾನ, ಭಯ, ಹಿಂಜರಿಕೆಗಳ ಗಾಯವನ್ನು ಅಪಾರವಾದ ಬದ್ಧತೆ ಮತ್ತು ತಾಳ್ಮೆ ಇರುವ ಸ್ವಯಂ ಸೇವಕರ ಗುಂಪು ಮಾತ್ರ ಗುಣಪಡಿಸಬಲ್ಲದು. ಗೂಡು ಕಟ್ಟಿಕೊಂಡಿರುವ ಅವರ ಮನಸ್ಸುಗಳನ್ನು ಮಾತನಾಡಿಸುವುದಕ್ಕೆ ಪ್ರೀತಿ ಮತ್ತು ಕರುಣೆ ಇದ್ದರೆ ಸಾಕು. ಆದರೆ, ಬೆಟ್ಟವನ್ನು ಕಡಿಯುವ ಇಂಥ ಕೆಲಸಕ್ಕೆ ಒಂದು ದೀರ್ಘಾವಧಿಯ ಬದ್ಧತೆಯ ಅಗತ್ಯವೂ ಇದೆ. ಹೌದು, ಇದೊಂದು ದೀರ್ಘವಾದ, ಏಕಾಂಗಿಯಾಗಿ ಪಯಣಿಸಬೇಕಾದ ಅತ್ಯಂತ ಶ್ರಮದ ಹಾದಿ. ಹೇಳಿ, ನಿಮ್ಮಲ್ಲಿ ಯಾರಾದರೂ ಈ ಪಯಣವನ್ನು ಕೈಗೊಳ್ಳಬಲ್ಲಿರಾ...? □



ಬಾಂಬುಗಳೇ ಸಿಡಿಯದಿರಿ

ನನ್ನ ಜನಾಂಗಗಳು ಕಂಡಿವೆ
ಲೋಕದ ಸುಂದರ ಬದುಕನ್ನು
ಸಾವಿನ ಭೀಕರ ಕ್ಷಣಗಳನ್ನು
ಎರಡು ಮಹಾ ಯುದ್ಧಗಳನ್ನು
ಸುಂದರ ಜಗತ್ತಿನ ಮೇಲೆ
ಅಣು ಬಾಂಬಿನ ಕರಿಮೋಡಗಳ
ವಿನಾಶದ ಬೆಂಕಿಯುಗುಳಿದ
ಭೀಕರ ಸ್ಮಶಾನ ಸದೃಶ ಜಗತ್ತು
ನದಿ ವನಗಳು ಉಳಿದರೆ
ಮನುಕುಲ ಉಳಿದೀತು।
ಹಾಡಿಯಾವು ಹಕ್ಕಿ ಮಧುರ
ನಕ್ಕಾವು ಮುಗುಳು ಕಂದನ ತೊಟ್ಟಿಲು
ಅರಳಿಯಾವು ಶಾಂತಿಯ ಹೂಬನ
ಹೃದಯದಲಿ ಅರಳೀತು
ಪ್ರೀತಿಯ ಬಣ್ಣದ ಕಾರಂಜಿ
ರೆಕ್ಕೆ ತೆರೆದು ಹಾರೀತು ಪಾರಿವಾಳ
ವಿಶ್ವಶಾಂತಿಯ ಸಂದೇಶ ಹೊತ್ತು
ಬಾಂಬುಗಳೇ ಸಿಡಿಯದಿರಿ
ಸ್ಫೋಟಿಸದಿರಿ ಸುಂದರ ಜಗತ್ತು

ಕೆ. ಷರೀಫಾ, ಹರಿಹರ

ಟಿಪ್ಪುವಿನ ಸುತ್ತ...

ನೆಸಪ್ರ

ಟಿಪ್ಪು ಸುಲ್ತಾನ್ ಸ್ವಾತಂತ್ರ ಪೂರ್ವ ಭಾರತ ಕಂಡ ಅಪ್ರತಿಮ ಹೋರಾಟಗಾರ. ಬ್ರಿಟೀಷ್ ವಸಾಹತುಶಾಹಿಯನ್ನು ಮೂಲೋತ್ಪಾಟನೆ ಮಾಡಲು ಆತ ನಡೆಸಿದ ಹೋರಾಟ ಸ್ವಾತಂತ್ರ್ಯ ಪೂರ್ವ ಇತಿಹಾಸದ ಅಮೂಲ್ಯ ಅಧ್ಯಾಯ. ಕೇವಲ ತನ್ನ ಪ್ರಭುತ್ವದ ಉಳಿವಿಗಾಗಷ್ಟೇ ಪ್ರಯತ್ನಿಸದೆ ತನ್ನ ಆಡಳಿತ ಅವಧಿಯ ಉದ್ದಕ್ಕೂ ನಾಡು-ನುಡಿ-ಸಂಸ್ಕೃತಿಯ ರಕ್ಷಕನಾಗಿ ಆತ ನಡೆದುಕೊಂಡ ರೀತಿ ಅನನ್ಯವಾದುದು. ಟಿಪ್ಪು ಪ್ರಗತಿಪರರು-ಪುರೋಗಾಮಿಗಳಿಗೆ ಒಬ್ಬ ಉದಾತ್ತ ಆಡಳಿತಗಾರನಂತೆ ಕಾಣಿಸಿದರೆ, ಕೋಮುವಾದಿಗಳಿಗೆ ದೇಶದ್ರೋಹಿ, ಕಟುಕ ಮುಂತಾದ ರೂಪಗಳಲ್ಲಿ ಕಾಣಿಸುತ್ತಿದ್ದಾನೆ. ಈ ಕುರಿತ ಅವಲೋಕನ ಇಲ್ಲಿದೆ.

○ ನಾ. ದಿವಾಕರ

ಕರ್ನಾಟಕದ ಇತಿಹಾಸದಲ್ಲಿ ಟಿಪ್ಪುಸುಲ್ತಾನ್ ಎಂಬ ಹೆಸರು ಹೇಳಿದೊಡನೆ ಎರಡು ಅಭಿಪ್ರಾಯಗಳು ಧುತ್ತೆಂದು ಮುಂದೆ ಬಂದು ನಿಲ್ಲುತ್ತವೆ. ಒಂದು ರೀತಿಯಲ್ಲಿ ಎರಡು ಅಭಿಪ್ರಾಯಗಳು ಭಾವನಾತ್ಮಕವೆಂದೇ ಹೇಳಬಹುದು. ಒಂದೆಡೆ ಕೋಮುವಾದಿಗಳು, ಸಂಘ ಪರಿವಾರದ ರೂಪದಲ್ಲಿ ಟಿಪ್ಪುವನ್ನು ಒಬ್ಬ ದೇಶದ್ರೋಹಿ, ಹಿಂದೂ ವಿರೋಧಿ, ಕಟುಕ ದೊರೆ, ಮತಾಂತರದ ಹರಿಕಾರ ಎಂದೆಲ್ಲಾ ದೂಷಿಸಿದರೆ, ಇನ್ನೊಂದೆಡೆ ಪ್ರಗತಿಪರರು, ಪುರೋಗಾಮಿಗಳು ಟಿಪ್ಪುವನ್ನು ಒಬ್ಬ ಸೆಕ್ಯುಲಾರ್ ದೊರೆ ಎಂದೂ, ಬ್ರಿಟೀಷರ ವಿರುದ್ಧ ವಿರೋಚಿತವಾಗಿ ಸೆಣಸಾಡಿ ಪ್ರಾಣತ್ಯಾಗ ಮಾಡಿದ ಮಹಾನ್ ದೇಶಪ್ರೇಮಿ ಎಂದು ಕೊಂಡಾಡುತ್ತಾರೆ. ಮೂರನೆಯ ಮಜಲಿನಲ್ಲಿ ನೋಡಿದಾಗ ಒಮ್ಮೊಮ್ಮೆ ಟಿಪ್ಪು ಮುಸಲ್ಮಾನರ ಖಾಸಗಿ ಆಸ್ತಿಯು ಆಗಿಬಿಡುತ್ತಾನೆ. ಈ ಎಲ್ಲಾ ಗೋಜಲುಗಳ ನಡುವೆ ಸಿಲುಕಿ, ಮೈಸೂರು ಹುಲಿಯೆಂದು ಬಿರುದಾಂಕಿತನಾಗಿದ್ದ, ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದ ಟಿಪ್ಪು ಇಂದು ರಾಜಕೀಯದ ಕೇಂದ್ರ ಬಿಂದುವಾಗಿರುವುದು ವಿಷಾದನೀಯ.

ಆದರೂ ಸಂಘ ಪರಿವಾರವು ಇತ್ತೀಚಿನ ವರ್ಷಗಳಲ್ಲಿ, ಕರ್ನಾಟಕದಲ್ಲಿ ತನ್ನ ರಾಜಕೀಯ ನೆಲೆ ಸ್ಥಾಪಿಸಲು ಟಿಪ್ಪುವನ್ನು ಕೇಂದ್ರ ವ್ಯಕ್ತಿಯನ್ನಾಗಿ ಮಾಡಿದೆ. ಉತ್ತರ ಭಾರತದಲ್ಲಿ ಘಜನಿ ಮೊಹಮ್ಮದ್, ಇಬ್ರಾಹಿಂ ಲೋಧಿ, ಬಾಬರ್‌ರವರನ್ನು ಗುರಿಯಾಗಿಟ್ಟುಕೊಂಡು, ರಾಜಕೀಯ ನಡೆಸಿ, ೧೯೯೨ರಲ್ಲಿ ಬಾಬ್ರಿ ಮಸೀದಿಯನ್ನು ಉರುಳಿಸುವ ಮೂಲಕ ದೇಶದೆಲ್ಲೆಡೆ ವಿಷ ಬೀಜ ಬಿತ್ತು, ಕೋಮುಜ್ವಾಲೆಯನ್ನು ಹರಡಿದ ಸಂಘ ಪರಿವಾರಕ್ಕೆ ಕರ್ನಾಟಕದ ಇತಿಹಾಸದಲ್ಲಿ ಒಂದು ಅಸ್ತ್ರವಾಗಿ ದೊರೆಯುವ ಏಕೈಕ ಮುಸ್ಲಿಂ ದೊರೆ ಎಂದರೆ ಟಿಪ್ಪು ಸುಲ್ತಾನ್ ಮಾತ್ರ. ಆದೀಲ್ ಶಾಹಿ ಇದ್ದರೂ ಆತ ಟಿಪ್ಪುವಿನಷ್ಟು ಜನಪ್ರಿಯನಾಗಿರಲಿಲ್ಲ. ಉತ್ತರಪ್ರದೇಶದಲ್ಲಿ ಬಾಬ್ರಿ ಮಸೀದಿಯಂತೆ ಕರ್ನಾಟಕದಲ್ಲಿ ಟಿಪ್ಪು ಮಸೀದಿ ಇಲ್ಲದಿರುವ ಕಾರಣ ಸಂಘ ಪರಿವಾರದವರು ಶ್ರೀರಂಗಪಟ್ಟಣದ ದರಿಯಾ ದೌಲತ್, ದರ್ಗಾಗಳನ್ನೆ ವಿವಾದಾಸ್ಪದ ಮಾಡಲು ಹೊರಟಿದ್ದಾರೆ. ದರ್ಗಾ ಮೊದಲು ಶಿವ ದೇವಾಲಯವಾಗಿತ್ತೆಂದು ಅವರ ವಾದ. ಸಂಘ ಪರಿವಾರದವರಿಗೆ ಅಲ್ಪಸಂಖ್ಯಾತರ ಎಲ್ಲಾ ಪೂಜಾಸ್ಥಳಗಳೂ ಮೊದಲು ಹಿಂದೂ ದೇವಾಲಯಗಳೇ ಆಗಿರುತ್ತವೆ. ಶ್ರೀರಂಗಪಟ್ಟಣದ ದರ್ಗಾ, ಮರುಗಮಲ್ಲಾದ ದರ್ಗಾ, ಮೈಸೂರಿನ ಸಂತ ಫಿಲೊಮಿನ ಚರ್ಚು, ಆಗ್ರಾದ ತಾಜ್‌ಮಹಲ್, ಮಥುರದ ಗ್ಯಾನ್ ವ್ಯಾಪಿ ಮಸೀದಿ, ಅಷ್ಟೇಕೆ ಮೆಕ್ಕಾದಲ್ಲಿರುವ ಕಾಬಾ ಸಹ ಶಿವದೇವಾಲಯವಾಗಿತ್ತೆಂದು ಸಂಘ ಪರಿವಾರದವರ ವಾದ. ಅವರ ಹುರುಳಿಲ್ಲದ ವಾದಗಳಿಗೆ ಪುಷ್ಟಿ ನೀಡಲು ಅನಂತಕುಮಾರ್, ಮಧುಸೂದನ್ ಮುಂತಾದ ರಾಜಕಾರಣಿಗಳಿದ್ದರೆ, ಎಸ್.ಪಿ.ಗುಪ್ತ ಪಿ.ಎನ್.ಓಕ್ ಮುಂತಾದ ಇತಿಹಾಸಕಾರರು, ಸಂಶೋಧಕರು ಇದ್ದಾರೆ. ಪ್ರಾಣಿಗಳು ನೆಲ ಅಗೆಯುವಂತೆ ಇತಿಹಾಸವನ್ನು ಅಗೆಯುವುದರಲ್ಲಿ ನೈಪುಣ್ಯತೆ ಪಡೆದಿರುವ ಈ ಸಂಶೋಧಕರಿಗೆ ಭೂಮಿಯಲ್ಲಿ ಒಂದು ಕಂಬ ಸಿಕ್ಕರೂ ಅದು ಹಿಂದೂ ದೇವಾಲಯದ ಅವಶೇಷವಾಗಿರುತ್ತದೆ. ಉತ್ಖನನ ಶಾಸ್ತ್ರದ ಗಂಧವಿಲ್ಲದ ಇವರುಗಳಿಗೆ ಕೇಂದ್ರ ಸರ್ಕಾರ ಇತಿಹಾಸಕಾರರೆಂಬ ಪಟ್ಟ ನೀಡಿರುವುದು ವಿಷಾದನೀಯ.

ಟಿಪ್ಪುವಿನ ವಿಷಯವನ್ನೇ ಪ್ರಸ್ತಾಪಿಸುವುದಾದರೆ, ಟಿಪ್ಪು ಒಬ್ಬ ದೇಶ ಪ್ರೇಮಿ ದೊರೆ ಎಂದು ಸಾಬೀತು ಪಡಿಸಲು ಯಾವ ಐತಿಹಾಸಿಕ ಸಂಶೋಧನೆಯ ಅಗತ್ಯವೂ ಇಲ್ಲ. ಟಿಪ್ಪುವಿನ ಜನಪರ ಕಾಳಜಿಯಾಗಲಿ, ಧರ್ಮ ಸಹಿಷ್ಣುತೆಯಾಗಲೀ ಆತನ ಆಡಳಿತಾವಧಿಯ ಸಾಧನೆಗಳಲ್ಲೇ ಬಿಂಬಿತವಾಗಿದೆ. ಆದರೂ ಸಂಘ ಪರಿವಾರದ ಸುಳ್ಳು ಸೃಷ್ಟಿಗಳನ್ನು ನಿರಾಕರಿಸಲು ಇತಿಹಾಸದೊಳಗೆ ಇಣುಕಿ ನೋಡುವುದು ಅವಶ್ಯವೆನಿಸುತ್ತದೆ. ಟಿಪ್ಪು ಮತ್ತು ಅವನ ತಂದೆ ಹೈದರ್‌ಅಲಿ ಕರ್ನಾಟಕವನ್ನು (ಅಂದಿನ ಮೈಸೂರು) ಆಳಿದ್ದು ೩೮ ವರ್ಷಗಳ ಕಾಲ (೧೭೬೧ ರಿಂದ ೧೭೯೯) ಹೈದರಾಲಿ ಮೈಸೂರು ರಾಜ್ಯದ ಆಧಿಪತ್ಯ ವಹಿಸಿಕೊಂಡಾಗ ಮೈಸೂರು ರಾಜ ಮನೆತನ ತೀರ ನಿಶ್ಯಕ್ತವಾಗಿ, ಒಳಜಗಳಗಳಿಂದ ಕುಂದಿ ಹೋಗಿತ್ತು. ಇಂತಹ ಸಮಯದಲ್ಲಿ ಹೈದರಾಲಿ ಮತ್ತು ಅವನ ನಂತರ, ೧೭೮೨ ರಿಂದ ಟಿಪ್ಪು ಸುಲ್ತಾನ್ ಮೈಸೂರು ರಾಜ್ಯವನ್ನು ಸುಭಿಕ್ಷ ರಾಜ್ಯವನ್ನಾಗಿ ಮಾಡುವುದರಲ್ಲಿ ಯಶಸ್ವಿಯಾಗಿದ್ದರು. ೧೮ನೇ ಶತಮಾನದಲ್ಲಿ ಮೊಗಲ್ ಸಾಮ್ರಾಜ್ಯ ಬಹುತೇಕ ಪತನವಾದ ನಂತರದಲ್ಲಿ, ಭಾರತದಲ್ಲಿ ಕೇಂದ್ರೀಯ ಆಡಳಿತವೂ ಕೊನೆಗೊಂಡಿತೆಂದು ಹೇಳಬಹುದು. ಒಂದು ರೀತಿಯಲ್ಲಿ ಅತಂತ್ರ ಸ್ಥಿತಿಯನ್ನು ಎದುರಿಸುತ್ತಿದ್ದ ರಾಜ್ಯ - ಪ್ರಾಂತ್ಯಗಳಲ್ಲಿ ಪ್ರತ್ಯೇಕತೆ ಹೆಚ್ಚಾಗಿ, ವಿವಿಧ ರಾಜ್ಯಗಳ ನಡುವೆ ಯುದ್ಧಗಳು ಸರ್ವೆ ಸಾಮಾನ್ಯವಾದವು. ಈ ಸ್ಥಿತಿಯಲ್ಲಿ ಅನೇಕ ರಾಜ್ಯಗಳಲ್ಲಿ ಪಾಳೇಗಾರರ ಆಳ್ವಿಕೆಗಳೂ ಹೇಳತೀರದಾಯಿತು. ಯಾವುದೇ ರಾಜನಿಗೆ ತನ್ನ ಸಾಮ್ರಾಜ್ಯ ವಿಸ್ತರಿಸುವುದು ಒಂದು ಪ್ರತಿಷ್ಠೆಯ ಪ್ರಶ್ನೆಯಾಗಿರುತ್ತದೆ. ಈ ವಿದ್ಯಮಾನಕ್ಕೆ ಹಿಂದೂ ಅಥವಾ ಮುಸ್ಲಿಂ ಎಂಬ ಭೇದ ಇರುವುದಿಲ್ಲ. ಇದಕ್ಕೆ ಟಿಪ್ಪುವೂ ಹೊರತಲ್ಲ, ಕೃಷ್ಣದೇವರಾಯನೂ ಹೊರತಲ್ಲ. ಪಾಳೇಗಾರರು ತಮ್ಮ ಅಡಿಯಾಳಾಗಿರಬೇಕೆಂದು ಬಯಸುವುದು ರಾಜಧರ್ಮದ ಮೂಲ ಅಂಶ.

ಈ ಪರಿಸ್ಥಿತಿಯನ್ನು ತಮ್ಮ ಸಾಮ್ರಾಜ್ಯಶಾಹಿ ಧ್ಯೇಯ ಸಾಧನೆಗೆ ಉಪಯೋಗಿಸಿಕೊಂಡು, ವಿವಿಧ ಪ್ರಾಂತ್ಯಗಳ ರಾಜರುಗಳನ್ನು ಪರಸ್ಪರ ಎತ್ತಿಕಟ್ಟಿ, ತಮ್ಮ ಬ್ರಿಟೀಷ್ ಸಾಮ್ರಾಜ್ಯವನ್ನು ವಿಸ್ತರಿಸುವುದು ಬ್ರಿಟೀಷ್ ರಾಣಿಯ ಕುತಂತ್ರವಾಗಿತ್ತು. ಇಂತಹ ವಿಷಮ ಸ್ಥಿತಿಯಲ್ಲಿ ಮೈಸೂರಿನಲ್ಲಿ ಅರಸರ ಮನೆತನದಲ್ಲಿ ಒಡಕುಂಟಾಗಿ ರಾಜ್ಯ ಕೈಬಿಟ್ಟು ಹೋಗುವ

ಪರಿಸ್ಥಿತಿ ಬಂದಾಗ ಮೈಸೂರಿನ ನೆರವಿಗೆ ಬಂದವರು ಹೈದರಾಲಿ ಮತ್ತು ಟಿಪ್ಪು ಸುಲ್ತಾನ್. ಈ ಸಂದರ್ಭದಲ್ಲಿ ಹೈದರಾಲಿ ಮದಕರಿ ನಾಯಕನ ಮೇಲೆ ಆಕ್ರಮಣ ನಡೆಸಿದ್ದು ತನ್ನ ರಾಜ ಧರ್ಮಕ್ಕನುಗುಣವಾಗಿಯೇ ಹೊರತು, ಧರ್ಮಾಂದತೆಯಿಂದಲ್ಲ. ಮದಕರಿ ನಾಯಕನಿಗೂ ಸಹ ದೇಶಪ್ರೇಮಕ್ಕಿಂತಲೂ ತಮ್ಮ ಪಾಳೇಗಾರಿಕೆ ಉಳಿಸಿಕೊಳ್ಳುವುದು ಮುಖ್ಯವಾಗಿತ್ತು. ಒಂದು ವೇಳೆ ಮದಕರಿ ನಾಯಕರಿಗೆ ಇಡೀ ಭಾರತದ ಬಗ್ಗೆ ಕಾಳಜಿ ಇದ್ದಿದ್ದಲ್ಲಿ, ಬ್ರಿಟೀಷರ ವಿರುದ್ಧ ಹೋರಾಟದಲ್ಲಿ ಸಹಕರಿಸಬಹುದಿತ್ತು. ಆದರೆ ತಮ್ಮ ಪ್ರಾಂತ್ಯವನ್ನು ರಕ್ಷಿಸಿಕೊಂಡು ಆಳ್ವಿಕೆ ನಡೆಸುವುದು ಎಲ್ಲ ರಾಜರುಗಳ ಧ್ಯೇಯವಾಗಿರುತ್ತದೆ. ಹೈದರಾಲಿಯ ನಂತರ ಟಿಪ್ಪು ಇಡೀ ಮೈಸೂರು ಪ್ರಾಂತ್ಯವನ್ನು ಆಳಿದ ಸಮಯದಲ್ಲಿ ನಾಲ್ಕು ಬಾರಿ ಬ್ರಿಟೀಷರ ವಿರುದ್ಧ ಸೆಣಸಾಡಬೇಕಾಯಿತು. ಈ ಹೋರಾಟದಲ್ಲಿ ಟಿಪ್ಪುವಿನ ಬೆಂಬಲಕ್ಕೆ ಯಾವುದೇ ಪಾಳೆಗಾರರೂ ಇರಲಿಲ್ಲ. ಆದರೆ ಬ್ರಿಟೀಷರೊಡನೆ ಹೈದ್ರಾಬಾದಿನ ನಿಜಾಮ್, ಮಹಾರಾಷ್ಟ್ರದ ಮರಾಠ ದೊರೆಗಳೂ ಇದ್ದರು. ೧೭೯೯ರ ನಾಲ್ಕನೆ ಯುದ್ಧದಲ್ಲಿ ಬ್ರಿಟಿಷರ ಬೃಹತ್ ಸೇನೆ, ತನ್ನವರ ಮಿತ್ರದ್ರೋಹದಿಂದ ಟಿಪ್ಪು ಸಾವನ್ನಪ್ಪಬೇಕಾಯಿತು. ಮೂರು ಯುದ್ಧಗಳಲ್ಲಿ ಬ್ರಿಟೀಷರನ್ನು ಸೋಲಿಸಿ, ಮೈಸೂರು ಹುಲಿ ಎಂದು ಹೆಸರುಗಳಿಸಿ ಬ್ರಿಟೀಷರಿಗೆ ಸಿಂಹ ಸ್ವಪ್ನವಾಗಿದ್ದ ಟಿಪ್ಪು ಕಡೆಗಳಿಗೆಯಲ್ಲಿ ಅಸಹಾಯಕನಾಗಿ ಹುತಾತ್ಮನಾಗಬೇಕಾಯಿತು.

ಮೇ ೪ ೨೦೦೪ ಕ್ಕೆ ಟಿಪ್ಪು ಹುತಾತ್ಮನಾಗಿ ೨೦೫ ವರ್ಷಗಳು ಸಂದಿವೆ. ಈ ೨೦೦ ವರ್ಷಗಳ ಕಾಲವೂ ಜನರ ನಾಲಿಗೆಯ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಟಿಪ್ಪು ಪ್ರಚಲಿತನಾಗಿರುವುದೇ ಆತನ ಹಿರಿಮೆ. ಕರ್ನಾಟಕದ ಇತಿಹಾಸದಲ್ಲಿ ಕೆಲವೇ ದೊರೆಗಳಿಗೆ ಈ ಭಾಗ್ಯ ಲಭಿಸಿದೆ. ಆದರೆ ಟಿಪ್ಪು ಜನರ ಮನದಲ್ಲಿ ಚಿರಸ್ಥಾಯಿಯಾಗುಳಿದಿರುವುದು ಆತನ ಖಡ್ಗ ಬಲದಿಂದಾಗಲೀ, ಮತಾಂಧತೆಯಿಂದಾಗಲೀ ಅಲ್ಲ. ಒಬ್ಬ ರಾಜನ ಘನತೆ ಗೌರವ ಹೆಚ್ಚುವುದು ಅವಽ ಕಾರ್ಯ ಸಾಧನೆಗಳಿಂದಲೇ ಹೊರತು, ಸಾಮ್ರಾಜ್ಯ ವಿಸ್ತರಣೆಯಿಂದಲ್ಲ. ಪ್ರಪಂಚದಲ್ಲಿ ರೋಮ್‌ನಂತಹ ಮಹಾನ್ ಸಾಮ್ರಾಜ್ಯಗಳೇ ಇತಿಹಾಸದ ಕಸದ ಬುಟ್ಟಿ ಸೇರಿದೆ. ಆದರೆ ಟಿಪ್ಪು ಇಂದಿಗೂ ಜನರ ಹೃದಯಾಂತರಾಳದಲ್ಲಿ ಜೀವಂತವಾಗಿರುವುದು ಆತನ ಕಾರ್ಯದಕ್ಷತೆಯಿಂದಲೇ.

ಸಂಘ ಪರಿವಾರದವರು ಟಿಪ್ಪುವನ್ನು ಖಂಡಿಸಲು ಮಲಬಾರ್ ದಂಗೆಯನ್ನೇ ಉದಾಹರಣೆಯಾಗಿ ಉಲ್ಲೇಖಿಸುತ್ತಾರೆ. ಟಿಪ್ಪು ಅಲ್ಲಿ ತನ್ನ ಖಡ್ಗದ ಬಲದಿಂದ ಹಿಂದೂಗಳನ್ನು ಮತಾಂತರಗೊಳಿಸಿದ ಎಂದು ದೂಷಿಸುತ್ತಾರೆ. ಇದಕ್ಕೆ ಯಾವುದೂ ಐತಿಹಾಸಿಕ ಪುರಾವೆಗಳಿಲ್ಲ. ಇನ್ನೊಂದೆಡೆ ಟಿಪ್ಪು-ಹೈದರಾಲಿಯ ಆಳ್ವಿಕೆಯ ಸಮಯದಲ್ಲಿ ಕರ್ನಾಟಕದಲ್ಲಿ ೨೫೦ಕ್ಕೂ ಹೆಚ್ಚು ಪಾಳೆಗಾರರು ಆಳ್ವಿಕೆ ನಡೆಸುತ್ತಿದ್ದು ಜನತೆಯನ್ನು ಶೋಷಿಸುತ್ತಿದ್ದರು. ಊಳಿಗಮಾನ್ಯ ಪದ್ಧತಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಆ ಸಮಯದಲ್ಲಿ ಬಡಜನತೆ, ರೈತರು, ರೈತ ಕಾರ್ಮಿಕರು ಪಾಳೆಗಾರರಿಂದ ಅತೀವ ಸುಲಿಗೆಗೆ ಈಡಾಗಿದ್ದರು. ಜನತೆ ಈ ಪಾಳೆಗಾರಿಕೆಯಿಂದ ಮುಕ್ತಿ ಬಯಸಿತ್ತು. ಇಂತಹ ಸ್ಥಿತಿಯಲ್ಲಿ ಟಿಪ್ಪು ಎಲ್ಲಾ ಪಾಳೆಗಾರರ ವಂಶಗಳನ್ನು ನಿರ್ಮೂಲನ ಮಾಡುವುದರಲ್ಲಿ ಯಶಸ್ವಿಯಾಗಿದ್ದ. ಮಲಬಾರಿನಲ್ಲೂ ಸಹ ಈ ಪಾಳೆಗಾರರ ದಂಗೆಯನ್ನು ಸದೆಬಡಿದದ್ದು ಇತಿಹಾಸದಲ್ಲಿ ದಾಖಲಾಗಿದೆ. ಜನರನ್ನು ಪಾಳೆಗಾರರ ಶೋಷಣೆಯಿಂದ ವಿಮುಕ್ತಿಗೊಳಿಸಿದ ಪ್ರಥಮ ದೊರೆ ಎಂಬ ಕೀರ್ತಿ ಟಿಪ್ಪುವಿಗೆ ಸಲ್ಲುತ್ತದೆ. ಇದನ್ನು ಟಿಪ್ಪುವಿನ ಧರ್ಮಾಂದತೆ, ಹಿಂದೂ ವಿರೋಧಿ ಕ್ರಮ ಎಂದು ಹೇಳುವುದು ಹಾಸ್ಯಾಸ್ಪದವಾದೀತು.

> **ಇಂದಿನ ಪ್ರಜಾತಾಂತ್ರಿಕ ಸರ್ಕಾರಗಳೂ ಕೈಗೊಳ್ಳದಷ್ಟು ನೀರಾವರಿ ಯೋಜನೆಗಳನ್ನು ಟಿಪ್ಪು ೧೮ನೇ ಶತಮಾನದಲ್ಲಿ ಕೈಗೊಂಡಿದ್ದನೆಂಬುದು ಅಧಿಕೃತವಾಗಿ ದಾಖಲಾಗಿದೆ. ಕರ್ನಾಟಕದಲ್ಲಿನ ೪೮೦೦ ಕೆರೆಗಳ ಪೈಕಿ ಬಹುತೇಕ ಕೆರೆಗಳು ಟಿಪ್ಪುವಿನ ಕಾಲದಲ್ಲಿ ನಿರ್ಮಿತವಾದವು. ಕೋಲಾರ ಜಿಲ್ಲೆಯಂತಹ ಬರಡು ಜಿಲ್ಲೆಯಲ್ಲೂ ಎಲ್ಲಾ ತಾಲ್ಲೂಕು ಹೋಬಳಿ ಪ್ರದೇಶಗಳಲ್ಲಿ ಕೆರೆಗಳನ್ನು ನಿರ್ಮಿಸಿ, ಒಂದನೊಂದಕ್ಕೆ ಸೇರಿಸಿ ಆಂಧ್ರದ ಕುಪ್ಪಂನ ಕೆರೆಗೆ ಸೇರುವಂತೆ ಮಾಡಿರುವುದು ಟಿಪ್ಪುವಿನ ಶ್ಲಾಘನೀಯ ಕಾರ್ಯ. ಅಂದಿನ ಕಾಲದಲ್ಲೆ ಶೇಕಡ ೨೫ಕ್ಕಿಂತಲೂ ಹೆಚ್ಚು ಭೂಮಿ ನೀರಾವರಿಗೆ ಒಳಗಾಗಿದ್ದುದು ಇತಿಹಾಸದಲ್ಲಿ ದಾಖಲಾಗಿದೆ. ಅಷ್ಟೆ ಅಲ್ಲದೆ ೧೭೮೦ರ ದಶಕದಲ್ಲೇ ಈಗಿನ ಕನ್ನಂಬಾಡಿ ಅಣೆಕಟ್ಟಿನ ಸ್ಥಳದಲ್ಲಿ ಅಣೆಕಟ್ಟು ನಿರ್ಮಿಸಲು ಟಿಪ್ಪು ಅಸ್ತಿಭಾರ ಹಾಕಿದ್ದನೆಂದೂ ದಾಖಲಾಗಿದೆ. ಈ ನಿಟ್ಟಿನಲ್ಲಿ ಟಿಪ್ಪುವಿನ ಜನಪರ ಕಾಳಜಿ ವ್ಯಕ್ತವಾಗುತ್ತದೆ.**

ಟಿಪ್ಪು ಮತಾಂಧನಾಗಿದ್ದಲ್ಲಿ, ಬ್ರಾಹ್ಮಣ ದೊರೆಗಳಾದ ಮರಾಠದ ಪೇಶ್ವಗಳಿಂದ ಧ್ವಂಸಗೊಂಡಿದ್ದ ಶೃಂಗೇರಿ ದೇವಾಲಯವನ್ನು ಪುನರುಜ್ಜೀವನಗೊಳಿಸುತ್ತಿರಲಿಲ್ಲ, ಶ್ರೀರಂಗಪಟ್ಟಣದ ದೇವಾಲಯವನ್ನು ಉದ್ಧಾರ ಮಾಡುತ್ತಿರಲಿಲ್ಲ. ಮುಸ್ಲಿಂ ರಾಜರುಗಳ ಆಗಮನದ ನಂತರದಲ್ಲಿ ಭಾರತದಲ್ಲಿ ಮತಾಂತರ ಪ್ರಕ್ರಿಯೆ ಆರಂಭಗೊಂಡಿದ್ದು ಐತಿಹಾಸಿಕ ಸತ್ಯ. ಆದರೆ ಖಡ್ಗ ಬಲದಿಂದಲೇ ಮತಾಂತರಗೊಳಿಸಲಾಯಿತೆಂದು ಹೇಳುವುದು ಮೂಢತನವಾದೀತು. ಭಾರತೀಯ ಸಮಾಜದ ಇತಿಹಾಸವನ್ನು ಅರಿಯದಿದ್ದವರು ಮಾತ್ರ ಹೀಗೆ ವಾದಿಸಲು ಸಾಧ್ಯ. ನಮ್ಮ ಸಮಾಜದಲ್ಲಿದ್ದ ಇಂದಿಗೂ ಇರುವ ಜಾತಿ ಪದ್ಧತಿಯೇ ಮತಾಂತರಕ್ಕೆ ಕಾರಣವೇ ಹೊರತು, ಯಾವುದೇ ಮುಸ್ಲಿಂ ದೊರೆಯ ಮತಾಂಧತೆಯಲ್ಲ. ಈ ಕುರಿತು ಹೆಚ್ಚಿನ ಚರ್ಚೆಗೆ ತೊಡಗುವ ಅವಶ್ಯಕತೆಯಿಲ್ಲ ಎಂದು ತೋರುತ್ತದೆ.

ಆದರೆ ಟಿಪ್ಪುವಿನ ಅಪ್ರತಿಮ ಸಾಧನೆಗಳನ್ನು ಯಾರೂ ಅಲ್ಲಗಳೆಯುವಂತಿಲ್ಲ. ಮೈಸೂರು ಪ್ರಾಂತ್ಯದ ಯಾವುದೇ ರಾಜರು ಸಾಧಿಸಲಾಗದಿದ್ದನ್ನು ಟಿಪ್ಪು ಸಾಧಿಸಿರುವುದು ಐತಿಹಾಸಿಕ ಸತ್ಯ. ನಿದರ್ಶನ ರೂಪದಲ್ಲಿ ಹೇಳುವುದಾದರೆ-

೧. ಕರ್ನಾಟಕದಲ್ಲಿ ರೇಷ್ಮೆ ಕೃಷಿಯನ್ನು ಆರಂಭಿಸಿದ್ದೆ ಟಿಪ್ಪುವಿನ ಕಾಲದಲ್ಲಿ. ೧೮ನೇ ಶತಮಾನದ ಮುನ್ನ ಕರ್ನಾಟಕದಲ್ಲಿ ರೇಷ್ಮೆ ಬೆಳೆ ಲಭ್ಯವಿರಲಿಲ್ಲ. ಆದರೆ ಟಿಪ್ಪುವಿನ ಉದ್ಯಮಶೀಲತೆ ಹಾಗೂ ಜನಪರ ಹಿತಾಸಕ್ತಿಗಳ ಫಲವಾಗಿ ವಿದೇಶಿ ಬೆಳೆಯಾಗಿದ್ದ ರೇಷ್ಮೆ ೧೭೭೦-೮೦ರ ದಶಕದಲ್ಲಿ ಕರ್ನಾಟಕಕ್ಕೂ ಆಗಮಿಸಿತು.. ಇಂದು ಕರ್ನಾಟಕ ರೇಷ್ಮೆ ಬೆಳೆಯಲ್ಲಿ ಅತ್ಯುನ್ನತ ಸ್ಥಾನ ಹೊಂದಿದ್ದರೆ ಅದರ ಶ್ರೇಯಸ್ಸು ಟಿಪ್ಪುವಿಗೆ ಸಲ್ಲಬೇಕು. ಆದರೆ ವೇದಗಳ ಕಾಲದಲ್ಲಿ ರೇಷ್ಮೆ ಲಭ್ಯವಿತ್ತು ಎಂದು ಹೇಳುವವರಿಗೆ ಈ ಐತಿಹಾಸಿಕ ಸತ್ಯ ಅರಿವಾಗುವುದಿಲ್ಲ.

೨. ಇಂದಿನ ಪ್ರಜಾತಾಂತ್ರಿಕ ಸರ್ಕಾರಗಳೂ ಕೈಗೊಳ್ಳದಷ್ಟು ನೀರಾವರಿ ಯೋಜನೆಗಳನ್ನು ಟಿಪ್ಪು ೧೮ನೇ ಶತಮಾನದಲ್ಲಿ ಕೈಗೊಂಡಿದ್ದನೆಂಬುದು ಅಧಿಕೃತವಾಗಿ ದಾಖಲಾಗಿದೆ. ಕರ್ನಾಟಕದಲ್ಲಿನ ೪೮೦೦ ಕೆರೆಗಳ ಪೈಕಿ ಬಹುತೇಕ ಕೆರೆಗಳು ಟಿಪ್ಪುವಿನ ಕಾಲದಲ್ಲಿ ನಿರ್ಮಿತವಾದವು. ಕೋಲಾರ ಜಿಲ್ಲೆಯಂತಹ ಬರಡು ಜಿಲ್ಲೆಯಲ್ಲೂ ಎಲ್ಲಾ ತಾಲ್ಲೂಕು ಹೋಬಳಿ ಪ್ರದೇಶಗಳಲ್ಲಿ ಕೆರೆಗಳನ್ನು ನಿರ್ಮಿಸಿ, ಒಂದನೊಂದಕ್ಕೆ ಸೇರಿಸಿ ಆಂಧ್ರದ ಕುಪ್ಪಂನ ಕೆರೆಗೆ ಸೇರುವಂತೆ ಮಾಡಿರುವುದು ಟಿಪ್ಪುವಿನ ಶ್ಲಾಘನೀಯ ಕಾರ್ಯ. ಅಂದಿನ ಕಾಲದಲ್ಲೆ ಶೇಕಡ ೨೫ಕ್ಕಿಂತಲೂ ಹೆಚ್ಚು ಭೂಮಿ ನೀರಾವರಿಗೆ ಒಳಗಾಗಿದ್ದುದು ಇತಿಹಾಸದಲ್ಲಿ ದಾಖಲಾಗಿದೆ. ಅಷ್ಟೆ ಅಲ್ಲದೆ ೧೭೮೦ರ ದಶಕದಲ್ಲೇ ಈಗಿನ ಕನ್ನಂಬಾಡಿ ಅಣೆಕಟ್ಟಿನ ಸ್ಥಳದಲ್ಲಿ ಅಣೆಕಟ್ಟು ನಿರ್ಮಿಸಲು ಟಿಪ್ಪು ಅಸ್ತಿಭಾರ ಹಾಕಿದ್ದನೆಂದೂ ದಾಖಲಾಗಿದೆ. ಈ ನಿಟ್ಟಿನಲ್ಲಿ ಟಿಪ್ಪುವಿನ ಜನಪರ ಕಾಳಜಿ ವ್ಯಕ್ತವಾಗುತ್ತದೆ.

೩. ಟಿಪ್ಪುವಿನ ಇನ್ನೊಂದು ಮಹತ್ತರ ಸಾಧನೆ ಎಂದರೆ ಭೂಸುಧಾರಣೆ. ಊಳಿಗ ಮಾನ್ಯ ಪದ್ಧತಿಯನ್ನು ನಿರ್ಮೂಲನೆ ಮಾಡಿ ದುಡಿಯುವ ಕೈಗಳಿಗೆ ಭೂಮಿ ನೀಡುವ ಮಹತ್ಕಾರ್ಯವನ್ನು ಟಿಪ್ಪು ಅಂದೇ ಕೈಗೊಂಡಿದ್ದ. ಜಹಗೀರು ನೀಡುವ ಪದ್ಧತಿಯನ್ನು ನಿಲ್ಲಿಸಿ, ಜಾತಿ ಮತ ಎನ್ನದೆ ಭೂಮಿಯನ್ನು ಹಂಚಿರುವುದು ಟಿಪ್ಪುವಿನ ಸಾಧನೆ. ಈಗಲೂ, ಹೈದರಾಲಿಯ ಜನ್ಮ ಸ್ಥಳವಾದ ಕೋಲಾರ ಜಿಲ್ಲೆಯಲ್ಲಿ ಸಣ್ಣ ಸಂಖ್ಯೆಯಲ್ಲಾದರೂ ದಲಿತ ಜಮೀನ್ದಾರರನ್ನು ಕಂಡರೆ ಅದು ಟಿಪ್ಪುವಿನ ಕೊಡುಗೆಯೆ.

೪. ಮೇಲೆ ಹೇಳಿದ ಈ ಮೂರು ಸಾಧನೆಗಳನ್ನು ಹೊರತುಪಡಿಸಿ ಟಿಪ್ಪು ಸುಲ್ತಾನ್ ಕರ್ನಾಟಕದಲ್ಲಿ ಪಾಳೆಗಾರಿಕೆಯನ್ನು ಬಹುತೇಕವಾಗಿ ನಿರ್ಮೂಲ ಮಾಡುವುದರಲ್ಲಿ ಯಶಸ್ವಿಯಾಗಿದ್ದ. ಮಠಗಳ ಅಧಿಪತ್ಯಕ್ಕೆ ಕಡಿವಾಣ, ಲಾಲ್ ಬಾಗ್‌ನಂತಹ ಸುಂದರ ಸಸ್ಯ ತೋಟದ ನಿರ್ಮಾಣ, ಶ್ರೀರಂಗಪಟ್ಟಣದಂತಹ ನಗರ ಅಭಿವೃದ್ಧಿ, ಸೈನಿಕರಿಗೆ ಭೂ ಹಂಚಿಕೆ, ವಾಣಿಜ್ಯ ಅಭಿವೃದ್ಧಿ, ತ್ವರಿತ ಕೈಗಾರಿಕ ಬೆಳವಣಿಗೆ, ಪ್ರಗತಿಪರ ಭೂಕಂದಾಯ ಕಾಯಿದೆಗಳು, ಮತೀಯ ಸೌಹಾರ್ದತೆ, ಧರ್ಮ ಸಹಿಷ್ಣುತೆ, ದೇವಾಲಯಗಳ ರಕ್ಷಣೆ ಇವೇ ಮುಂತಾದವುಗಳು ಟಿಪ್ಪು ಸುಲ್ತಾನನ ಅಪ್ರತಿಮ ಗಣನೀಯ ಸಾಧನೆಗಳಾಗಿವೆ.

ವಿಪರ್ಯಾಸವೆಂದರೆ ಇತಿಹಾಸ ಎನ್ನುವುದು ರಬ್ಬರ್ ಇದ್ದಂತೆ. ಅದನ್ನು ಹೇಗೆ ಬೇಕಾದರೂ ತಿರುಚಬಹುದು, ಯಾವ ರೂಪವನ್ನಾದರೂ ಕೊಡಬಹುದು. ಭಾರತೀಯ ಸನ್ನಿವೇಶದಲ್ಲಿ ಇದು ವ್ಯವಸ್ಥಿತವಾಗಿ ನಿರೂಪಿತವಾಗಿದೆ. ಬ್ರಿಟೀಷರಿಂದ ಆರಂಭಗೊಂಡ ಈ ಪ್ರಕ್ರಿಯೆ ಈಗ ಸಂಘ

ಪರಿವಾರದ ಚಾಳಿಗೆ ಬಂದಿದೆಯಷ್ಟೆ. ಬ್ರಿಟೀಷರು ರಚಿಸಿದ, ಬರೆಸಿದ ಇತಿಹಾಸದಲ್ಲಿ ಮುಸ್ಲಿಂ ದೊರೆಗಳು ಆಳಿದ ಕಾಲವನ್ನು ಮುಸ್ಲಿಂ ಯುಗ ಎಂದು ಕರೆಯಲಾಯಿತಾದರೂ ಬ್ರಿಟೀಷರ ಆಳ್ವಿಕೆಯನ್ನು ಕ್ರೈಸ್ತ ಯುಗ ಎಂದು ಹೇಳಿಕೊಳ್ಳಲಿಲ್ಲ. ಘಜನಿ-ಲೋಧಿ-ಬಾಬರ್ ಮುಂತಾದ ಮುಸ್ಲಿಂ ದೊರೆಗಳು ಮಾಡಿದ ಆಕ್ರಮಣ ಲೂಟಿಯನ್ನು ಇಸ್ಲಾಂಗೆ ಸಮೀಕರಿಸಿದ ಇತಿಹಾಸಕಾರರು, ಬ್ರಿಟೀಷರು ಮಾಡಿದ ಲೂಟಿಯನ್ನು ಕೇವಲ ಸಾಮ್ರಾಜ್ಯಶಾಹಿ-ವಸಾಹತುಶಾಹಿ ಎಂದು ಕರೆದರೇ ಹೊರತು ಕ್ರೈಸ್ತ ಧರ್ಮಕ್ಕೆ ಸಮೀಕರಿಸಲಿಲ್ಲ. ಒಂದೆಡೆ ಬ್ರಿಟೀಷ್ ಇತಿಹಾಸವನ್ನು ಧಿಕ್ಕರಿಸುವ ಸಂಘ ಪರಿವಾರದವರು, ಬ್ರಿಟೀಷರ ಶೈಲಿಯಲ್ಲಿ ಇತಿಹಾಸವನ್ನು ವಿಶ್ಲೇಷಿಸಲು ಹೊರಟಿರುವುದು ವಿಪರ್ಯಾಸವಲ್ಲವೇ?

ಇಲ್ಲಿ ಈ ಅಂಶವನ್ನು ಪ್ರಸ್ತಾಪಿಸುವ ಕಾರಣವೆಂದರೆ ಭಾರತಕ್ಕೆ ಅನೇಕ ಮುಸ್ಲಿಂ ದೊರೆಗಳು ಮಧ್ಯ ಪ್ರಾಚ್ಯದಿಂದ, ಅರಬ್ ಪ್ರದೇಶದಿಂದ ಆಗಮಿಸಿದರೂ, ಇಬ್ರಾಹಿಂ ಲೋಧಿಯ ನಂತರ ಬಂದ ಯಾವುದೇ ಮುಸ್ಲಿಂ ದೊರೆಯು ಭಾರತವನ್ನು ಬಿಟ್ಟುಹೋಗಲಿಲ್ಲ. ಇದಕ್ಕೆ ಮುನ್ನ ಬಂದವರಲ್ಲಿ ಅನೇಕರು ಪಾಳೆಗಾರರಾಗಿದ್ದು, ಕೇವಲ ಸಂಪತ್ತಿನ ಲೂಟಿಗಾಗಿಯೇ ವಿವಿಧ ದೇಶಗಳ ಮೇಲೆ ಆಕ್ರಮಣ ಮಾಡುತ್ತಿದ್ದರು. ಭಾರತದಂತಹ ಧಾರ್ಮಿಕ ದೇಶದಲ್ಲಿ ಬಹುತೇಕ ಸಂಪತ್ತು ರಾಜರ ಅರಮನೆ ಅಥವಾ ದೇವಾಲಯಗಳಲ್ಲಿ ಅಡಗಿರುವುದು ಇಂದಿಗೂ ಸಹಜವೇ. ಹಾಗಾಗಿಯೇ ಆ ಮುಸ್ಲಿಂ ದೊರೆಗಳು ದೇವಾಲಯಗಳ ಮೇಲೆ ಹೆಚ್ಚಾಗಿ ಆಕ್ರಮಣ ಮಾಡುತ್ತಿದ್ದರೂ ರಾಜ್ಯವನ್ನು ಆಕ್ರಮಿಸುವ ಉದ್ದೇಶ ಇಲ್ಲದಿದ್ದ ಕಾರಣ ಆ ದೊರೆಗಳು ಇಲ್ಲಿ ನೆಲೆಸಲೂ ಇಲ್ಲ. ಅವರ ಆಕ್ರಮಣಗಳಿಗೆ ಧಾರ್ಮಿಕ ಲೇಪನ ನೀಡುವುದು ಅನವಶ್ಯಕ ಎನಿಸುತ್ತದೆ. ಆದರೆ ಎಲ್ಲರೂ ಒಪ್ಪಲೇಬೇಕಾದ ಸತ್ಯಾಂಶವೆಂದರೆ ಇಬ್ರಾಹಿಂ ಲೋಧಿಯ ನಂತರ ಬಂದ ಎಲ್ಲಾ ಮುಸ್ಲಿಂ ದೊರೆಗಳು ಇಲ್ಲಿ ನೆಲೆಸಿದ್ದೇ ಅಲ್ಲದೆ, ಇಲ್ಲಿನ ಜನಾಂಗೀಯ ಸಂಸ್ಕೃತಿಯೊಂದಿಗೆ ಸಮ್ಮಿಳಿತವಾಗಿ, ಅವರ ಸಂಸ್ಕೃತಿ, ಶಿಲ್ಪಕಲೆ, ಸಂಗೀತ, ನಾಟ್ಯಕಲೆ, ವಾಸ್ತುಶಿಲ್ಪ ಮತ್ತು ನಾಗರಿಕತೆಗಳನ್ನು ಭಾರತೀಯರೊಡನೆ ಸಮೀಕರಿಸುವುದರಲ್ಲಿ ಯಶಸ್ವಿಯಾದರು. ಅಂತಹ ಮುಸ್ಲಿಂ ದೊರೆಗಳಲ್ಲಿ ಟಿಪ್ಪು ಸಹ ಒಬ್ಬನೆಂದು ಪರಿಗಣಿಸಿದರೆ ಸಾಕು. ತಾವು ಬಂದು ನೆಲೆಸಿದ ಪರಕೀಯ ದೇಶಕ್ಕೆ ಇಷ್ಟೆಲ್ಲಾ ಮಹತ್ತರ ಕೊಡುಗೆಗಳನ್ನು ನೀಡಿದವರನ್ನು ದೇಶದ್ರೋಹಿ ಎನ್ನುವುದು ಇತಿಹಾಸಕ್ಕೆ ದ್ರೋಹ ಬಗೆದಂತಾಗುತ್ತದೆ.

ಇನ್ನೊಂದೆಡೆ ಅವರನ್ನು ದೇಶಪ್ರೇಮಿಗಳೆನ್ನುವ ಅವಶ್ಯಕತೆಯು ಇಲ್ಲ. ಏಕೆಂದರೆ ಟಿಪ್ಪು ಆಗಲಿ, ಅಕ್ಬರ್ ಅಥವಾ ಕೃಷ್ಣದೇವರಾಯನಾಗಲಿ, ಯಾವುದೇ ರಾಜನಾಗಲೀ ದೇಶಪ್ರೇಮಿಯಾಗಲು ಸಾಧ್ಯವಿಲ್ಲ. ಏಕೆಂದರೆ ಐತಿಹಾಸಿಕ ಕಾಲಘಟ್ಟಗಳ ಇತಿಮಿತಿಗಳಲ್ಲಿ ಅವಲೋಕನ ಮಾಡಿದಾಗ, ರಾಜರಾಳ್ವಿಕೆಯ ಕಾಲದಲ್ಲಿ, ವಿಶೇಷವಾಗಿ ಭಾರತದಲ್ಲಿ, ರಾಷ್ಟ್ರ ಅಥವಾ ದೇಶದ ಪರಿಕಲ್ಪನೆಯೇ ಇರಲಿಲ್ಲ. ಹಾಗಿದ್ದಿದ್ದರೆ ಭಾರತದಲ್ಲಿ ೫೫೦ಕ್ಕಿಂತ ಹೆಚ್ಚು ಪ್ರಾಂತ್ಯಗಳಿರುತ್ತಿರಲಿಲ್ಲ. ಇಷ್ಟು ಪ್ರಾಂತ್ಯಗಳ ಯಾವ ರಾಜನೂ ಒಂದು ರಾಷ್ಟ್ರದ ನಿರ್ಮಾಣಕ್ಕಾಗಿ ಹೋರಾಡಲಿಲ್ಲ. ಏಕೆಂದರೆ, ಪ್ರತಿಯೊಬ್ಬ ರಾಜನ ಮೂಲ ಉದ್ದೇಶ ತನ್ನ ರಾಜ್ಯದ ಸ್ವಾತಂತ್ರ್ಯವನ್ನು ರಕ್ಷಿಸುವುದು ಮಾತ್ರವಾಗಿರುತ್ತದೆ. ಹೆಚ್ಚೆಂದರೆ ತನ್ನ ಸಾಮ್ರಾಜ್ಯದ ವಿಸ್ತರಣೆ ಅವರ ಧ್ಯೇಯವಾಗಿರುತ್ತದೆ. ಟಿಪ್ಪು ಸಹ ಇದಕ್ಕೆ ಹೊರತಾದವನಲ್ಲ. ಸಾಮ್ರಾಜ್ಯ ವಿಸ್ತರಣೆಯ ಸಂದರ್ಭದಲ್ಲಿ ಸಾವು-ನೋವು, ಕೊಲೆ, ಹಿಂಸೆ, ಯುದ್ಧ ವಿನಾಶ ಇವೆಲ್ಲವೂ ರಾಜಾಧರ್ಮಕ್ಕನುಗುಣವಾಗಿಯೇ ನಡೆಯುತ್ತದೆ. ಅಶೋಕನಂತಹ ನಿದರ್ಶನಗಳು ಇತಿಹಾಸದಲ್ಲಿ ವಿರಳ. ಈ ಪ್ರಕ್ರಿಯೆಗಳಿಗೆ ಧಾರ್ಮಿಕ ಲೇಪನ ನೀಡುವುದು ಮಾನವ ಸಮಾಜದ ಬೆಳವಣಿಗೆಯ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳದಂತಾಗುತ್ತದೆ.

ಈ ದೃಷ್ಟಿಯಿಂದ ನೋಡಿದಾಗ ಟಿಪ್ಪುವನ್ನು ದೇಶದ್ರೋಹಿ ಎಂದು ದೂಷಿಸುವುದೇ ಅಸಹಜವೆನಿಸುತ್ತದೆ. ಟಿಪ್ಪುವನ್ನು ದೇಶದ್ರೋಹಿ ಎನ್ನುವುದಾದರೆ, ನೂರಾರು ಮುಸ್ಲಿಂ ದೊರೆಗಳಿಗೆ ರತ್ನಗಂಬಳಿ ಹಾಸಿದ ಹಿಂದೂ ರಾಜರುಗಳು, ತಮ್ಮ ಅಧಿಕಾರ ಉಳಿಸಿಕೊಳ್ಳಲು ಮುಸ್ಲಿಂ ದೊರೆಗಳೊಡನೆ ಕೈಜೋಡಿಸಿ ಹಿಂದೂ ರಾಜರುಗಳ ಮೇಲೆ ಆಕ್ರಮಣ ಮಾಡಿದ ಅನೇಕ ಹಿಂದೂ ದೊರೆಗಳು, ಮೊಘಲರು ಬ್ರಿಟೀಷರ ವಿರುದ್ಧ ಹೋರಾಡುತ್ತಿದ್ದಾಗ ಬ್ರಿಟೀಷರ ಪರವಹಿಸಿದ ಹಿಂದೂ ದೊರೆಗಳು, ಬ್ರಿಟೀಷ್ ವಸಾಹತುಶಾಹಿಯೊಡನೆ ವ್ಯಾಪಾರಿ ಒಪ್ಪಂದಗಳನ್ನು ಮಾಡಿಕೊಳ್ಳುವ ಮೂಲಕ ತಮ್ಮ ರಾಜ್ಯಾಧಿಕಾರವನ್ನು ಉಳಿಸಿಕೊಂಡ ಹಿಂದೂ ದೊರೆಗಳು, ಇವರೆಲ್ಲರೂ ದೇಶದ್ರೋಹಿಗಳಾಗಿಬಿಡುತ್ತಾರೆ. ಈ ಅಂಶವನ್ನು ಸಂಘ ಪರಿವಾರ ಒಪ್ಪಿಕೊಳ್ಳುವುದೇ ?

ಟಿಪ್ಪು ದೇಶಪ್ರೇಮಿಯೋ ಅಥವಾ ದೇಶದ್ರೋಹಿಯೊ ಎನ್ನುವ ಪ್ರಶ್ನೆಗಿಂತಲೂ, ಟಿಪ್ಪು ಒಂದು ಪ್ರಾಂತ್ಯದ ರಾಜ ಎನ್ನುವ ಅಂಶವನ್ನು ಗಮನದಲ್ಲಿಟ್ಟುಕೊಂಡು ವಿಮರ್ಶಿಸುವುದು ಸೂಕ್ತವೆನಿಸುತ್ತದೆ. ಟಿಪ್ಪು ಒಬ್ಬ ರಾಜನಾಗಿದ್ದ, ಸಮಾಜ ಸೇವಕನಾಗಿರಲಿಲ್ಲ ಎಂಬ ಅಂಶವನ್ನು ಮನದಟ್ಟು ಮಾಡಿಕೊಳ್ಳಬೇಕು. ಐತಿಹಾಸಿಕ ಕಾಲಘಟ್ಟಗಳಲ್ಲಿ ಒಬ್ಬ ರಾಜನಿಂದ ನಡೆಯಬಹುದಾದ ಪ್ರಮಾದಗಳೆಲ್ಲವೂ ಟಿಪ್ಪುವಿನಿಂದಲೂ ಸಂಭವಿಸಿರಬಹುದು. ವಾಲ್ಮೀಕಿಯ ರಾಮಾಯಣದಲ್ಲಿ ರಾಮನೇ ಪ್ರಮಾದವೆಸಗಲಿಲ್ಲವೆ? ಆದರೆ ಪ್ರಜಾತಾಂತ್ರಿಕ ದೃಷ್ಟಿಕೋನದಿಂದ ತುಲನೆ ಮಾಡಿ ಟಿಪ್ಪು ಮಾಡಿರುವ ಉತ್ತಮ ಕಾರ್ಯಗಳನ್ನು ಶ್ಲಾಘಿಸಬೇಕಾಗುತ್ತದೆ. ಜನಪರ ಕಾಳಜಿಯಿಂದ ಟಿಪ್ಪು ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿಮರ್ಶೆಗೊಳಪಡಿಸಿ ಇತರ ರಾಜರುಗಳಿಗೆ ಹೋಲಿಸಿದಾಗ ಕರ್ನಾಟಕದ ಭವ್ಯ ಇತಿಹಾಸದಲ್ಲಿ ಟಿಪ್ಪು, ಕೃಷ್ಣದೇವರಾಯ - ಪುಲಿಕೇಶಿ - ನೃಪತುಂಗ - ಮಯೂರವರ್ಮ ಮತ್ತಿತರ ರಾಜರುಗಳೊಡನೆ ಸರಿಸಮಾನನಾಗಿ ನಿಲ್ಲುತ್ತಾನೆ.

ಹಾಗಾಗಿ ಟಿಪ್ಪುವನ್ನು ಕರ್ನಾಟಕದ ಶ್ರೇಷ್ಠ ದೊರೆಗಳಲ್ಲಿ ಒಬ್ಬನೆಂದು ಗೌರವಿಸಬೇಕೆ ಹೊರತು, ಆತನಿಗೆ ಧಾರ್ಮಿಕ ಲೇಪನ ಮಾಡುವ ಅವಶ್ಯಕತೆ ಇಲ್ಲ. ಏಕೆಂದರೆ ಟಿಪ್ಪು ಯಾವುದೇ ಜನಾಂಗದ ಅಥವಾ ಧರ್ಮದ ಖಾಸಗಿ ಆಸ್ತಿಯೂ ಅಲ್ಲ. ಟಿಪ್ಪುವಿನ ಹೆಸರಿನಲ್ಲಿ ರೈಲು, ರಸ್ತೆ, ಸರ್ಕಲ್, ವಿಮಾನ ನಿಲ್ದಾಣ ಅಥವಾ ನಗರಗಳನ್ನು ನಿರ್ಮಿಸುವುದರಿಂದ ನಮ್ಮ ಭಾವನೆಗಳು ವ್ಯಕ್ತವಾಗುವುದೇ ಹೊರತು ಇತಿಹಾಸದ ಅನರ್ಘ್ಯ ರತ್ನವಾದ ಟಿಪ್ಪುವಿನ ಸ್ಥಾನ-ಮಾನಗಳು ನಿರ್ಧಾರಿತವಾಗುವುದಿಲ್ಲ. ಒಬ್ಬ ನಿರಂಕುಶ ಪ್ರಭುವಾಗಿ ಟಿಪ್ಪು ಕೈಗೊಂಡ ಜನಪರ ಕಾರ್ಯಗಳನ್ನು ನಮ್ಮ ಪ್ರಜಾತಾಂತ್ರಿಕ ಸರ್ಕಾರಗಳು ಕೈಗೊಳ್ಳುತ್ತಿವೆಯೆ ಎಂದು ಪರಾಮರ್ಶಿಸಿದರೆ, ಅದು ನಾವು ಟಿಪ್ಪು ಮತ್ತು ಆತನಂತಹ ಮಹಾನ್ ದೊರೆಗಳಿಗೆ ನೀಡುವ ಗೌರವವಾಗುತ್ತದೆ. ಟಿಪ್ಪುವಿನ ಸುತ್ತ ವಿಷಬೀಜಗಳ ನೆಟ್ಟು ವಿಷದ ಹಾವುಗಳ ಹುತ್ತ ನಿರ್ಮಿಸುವ ಬದಲು, ಲಾಲ್‌ಬಾಗಿನಂತಹ ಸುಂದರ ಸಸ್ಯಕಾಶಿಗಳನ್ನು ಬೆಳೆಸುವುದು, ಸಾಮಾಜಿಕ ಕಳಕಳಿಯುಳ್ಳ ಹಾಗೂ ನಾಗರಿಕತೆಯನ್ನು ಬಯಸುವ ಪ್ರತಿಯೊಬ್ಬ ವ್ಯಕ್ತಿಯ ಧ್ಯೇಯವಾಗಲಿ, ಅದೇ ಟಿಪ್ಪುವಿಗೆ ನಾವು ನೀಡಬಹುದಾದ ಅಶ್ರುತರ್ಪಣ. □

ಅನುಭವದ ಗರ್ಭದಿಂದ

ಹಸಿವು - ಅಸ್ಪೃಶ್ಯತೆ ಮತ್ತು ಅವಮಾನ ಮನುಷ್ಯನ ಅಂತಃಶಕ್ತಿಯನ್ನು ಉಡುಗಿಸಿ ಅವನನ್ನು ನಿಸ್ತೇಜನನ್ನಾಗಿಸುವ ಸಾಮಾಜಿಕ ದುರಂತಗಳು. ಇಪ್ಪತ್ತೊಂದನೆ ಶತಮಾನದ ವೈಜ್ಞಾನಿಕ ಯುಗದಲ್ಲಿ ಕೂಡ ಭಾರತೀಯ ಸಮಾಜ ಇವುಗಳಿಂದ ಹೊರಬರಲು ಸಾಧ್ಯವಾಗಿಲ್ಲ. ಬಡತನ ಮತ್ತು ಸಾಮಾಜಿಕ ಅಸಮಾನತೆಗಳ ಕಾರಣದಿಂದಲೇ ಭಾರತದಲ್ಲಿ ಪ್ರತಿಭೆಗಳನ್ನು ಗುರುತಿಸಲೂ ಸಾಧ್ಯವಾಗುತ್ತಿಲ್ಲ.

ಹಸಿವು ದಾರುಣವಾದುದಾದರೆ, ಅಸ್ಪೃಶ್ಯತೆ ಅಮಾನವೀಯವಾದುದು. ಅಸ್ಪೃಶ್ಯರಲ್ಲದ ಕೆಲವು ಕೆಳಜಾತಿಗಳ ಅಪಮಾನ ಕೂಡ ಕಡಿಮೆಯಾದದ್ದೇನಲ್ಲ.

ನಮ್ಮ ನಡುವಿನ ಹಲವಾರು ಅಸಮಾನ್ಯ ಪ್ರತಿಭೆಗಳು, ಸಾಹಿತಿ-ಕಲಾವಿದರು- ಮೊದಲ ತಲೆಮಾರಿನ ಶಿಕ್ಷಿತರು ಇಂಥ ಅಸಮಾನತೆಗಳನ್ನು ಉಂಡು ಬೆಳೆದವರೇ ಆಗಿದ್ದಾರೆ. ಇಂಥ ನೋವುಗಳ ಅನುಭವ ಕಥಾನಕಗಳನ್ನು 'ಸಂವಾದ' ವಿಶೇಷಾಂಕಕ್ಕಾಗಿ ಆಹ್ವಾನಿಸುತ್ತದೆ. ದಯಮಾಡಿ ಒಂದು ಸಾವಿರ ಪದಗಳಿಗೆ ಮೀರದಂತೆ ನಿಮ್ಮ ಅನುಭವಗಳನ್ನು ನಮಗೆ ಬರೆದು ಕಳುಹಿಸಿ. ಭಾಷೆ-ಶೈಲಿಯ ಬಗೆಗೆ ತಲೆಕೆಡಿಸಿಕೊಳ್ಳಬೇಡಿ. ನಿಮಗೆ ಅನಿಸಿದ ಹಾಗೆ ನಿಮ್ಮದೇ ಭಾಷೆ-ಶೈಲಿ ಇರಲಿ.

ನಿಮ್ಮ ಬರಹ ನಮಗೆ ತಲುಪಬೇಕಾದ ದಿನಾಂಕ ಆಗಸ್ಟ್ ೩೧, ೨೦೦೪

ವಿಳಾಸ : ಸಂಪಾದಕರು, 'ಸಂವಾದ' ಮಾಸ ಪತ್ರಿಕೆ, ೬೩, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಮಾಗಡಿ ರಸ್ತೆ, ಬೆಂಗಳೂರು - ೫೬೦ ೦೯೧

ಕತೆ ಹೇಳು ಗಿಣಿಯೇ



ಮುಂಗೈ ಮೇಲೆ ಕುಳಿತು
ನಾಳೆಗಳ
ಕೊಕ್ಕಲ್ಲಿ ಹೆಕ್ಕಿ ಹೆಕ್ಕಿ
ಶಾಸ್ತ್ರಪುರಾಣ ಹೇಳುವುದು ಸಾಕು
ಗಿಳಿಯೇ,
ಕತೆ ಹೇಳು;

ರಾಜಕುಮಾರಿಯ ಕತೆ
ಸುಪ್ಪತ್ತಿಗೆಯ ಕತೆ
ಕಾಡು ಮೇಡಿನ ಕತೆ
ಗವಿ ಗುಡ್ಡಗಳ ಕತೆ
ಕೀಲು ಕುದುರೆಯನೇರಿ
ರಾಜಕುಮಾರ
ಸಮುದ್ರಗಳ ದಾಟಿದ ಕತೆ
ಮಂತ್ರವಾದಿ ರಕ್ಕಸರ ಕತೆ

ಹೇಳು ಗಿಣಿಯೇ ಹೇಳು.

ಎಲ್ಲಿಂದ ಎಲ್ಲಿಗೆ ಬಂದೆ
ಏಸೊಂದು ಕತೆ ಹೇಳಿ
ಯಾರ್‍ಯಾರ ಮನವನು ಹೊಕ್ಕು
ಹಗಲು ರಾತ್ರಿಗಳ ದಾಟಿ
ಬಂದೆ ಹೇಳು
ಗಿಣಿಯೇ ಕತೆ ಹೇಳು.

೨
ಈ ಹಗಲು ಈ ರಾತ್ರಿ
ಹೀಗೆಯೇ ಇರುವುದಿಲ್ಲ
ಭೂಮಿ ನಡುಗುತ್ತದೆ
ಬಿರುಗಾಳಿ ಬೀಸುತ್ತದೆ
ಮರಗಿಡಗಳೆಲ್ಲ ಬೇರು ಸಹಿತ
ಹಾರಿ ಹೋಗುತ್ತವೆ
ನಿನ್ನ ಗೂಡು ಗಾಳಿಪಟವಾಗಿ ಹಾರುತ್ತದೆ.

ನಿನ್ನ ರೆಕ್ಕೆ ಪುಕ್ಕಗಳೆಲ್ಲ ಉದುರಿ
ಮಾಂಸವೆಲ್ಲ ಚೂರುಚೂರಾಗಿ
ನೀನೇ ಇಲ್ಲವಾಗುತ್ತೀಯ;

ನನ್ನ ಸ್ಥಿತಿಯೂ ಭಿನ್ನವಲ್ಲ
ಸೂರ್ಯಚಂದ್ರರ ಸಮ್ಮುಖದಲ್ಲಿ
ಈ ನಕ್ಷತ್ರಗಳ ಬೆಳಕಲ್ಲಿ
ನಾನೂ ಕರಗಿ ಹೋಗುತ್ತೇನೆ.

ನಾಳಿನ ನಮ್ಮವರಿಗಾಗಿ
ಕತೆ ಹೇಳು ಗಿಣಿಯೇ
ನಿನ್ನ ಕತೆ
ನನ್ನ ಕತೆ
ನಮ್ಮ ಕತೆ
ಬದುಕಿನ ಕತೆ.

ಜಿ.ಪಿ. ಬಸವರಾಜು
ಎರಡು ಕವನಗಳು

ಕನ್ನಡಿಯಲ್ಲಿ ಕಂಡ ಕೊಕ್ಕು



ಥರಾವರಿ ಹಕ್ಕಿಗಳು
ಥಳಥಳ ಹೊಳೆವ ಬಣ್ಣಗಳು.

ಮಿಣಮಿಣ ಹೊಳೆವ ಕಣ್ಣುಗಳು
ಮಾಟ ಕೊಕ್ಕುಗಳು.

ಪುಟ್ಟ ಗೂಡಲ್ಲಿ
ಬೆಚ್ಚನೆ ಮಲಗಿದ ಮರಿಗಳು.

ಒಂದು ಹುಳುವೋ
ಹೂವಿನ ರಸವೋ
ತಾಯಿ ತಂದ
ಕೊಕ್ಕಲ್ಲಿನ ಗುಕ್ಕು
ಮರಿ ಹಕ್ಕಿಗಳ ತೆರೆದ ಬಾಯಿಗಳಿಗೆ.

ಮೈಮರೆತು ನೋಡುತ್ತ ನಿಂತವನು
ಬಿರುಗಾಳಿ ಎದ್ದು
ಮನೆಗೆ ಬಂದ-
ಹಕ್ಕಿ ಗೂಡು ಮರಿ ಎಲ್ಲ ಮರೆತು.

೨
ಆಳೆತ್ತರದ ನಿಲುವು ಕನ್ನಡಿಯಲ್ಲಿ
ನೋಡಿಕೊಂಡ:
ತನ್ನ ಗೂಡು ಮರಿ ಕೊಕ್ಕಿನಲ್ಲಿ ಗುಕ್ಕು.

ಜನ್ಮ ಜನ್ಮಾಂತರ ತಿಂದರೂ
ಸವೆಯದ ರಾಶಿ ಕಣಜದಲ್ಲಿ.

ಪೆಚ್ಚಾಗಿ
ಮತ್ತೆ ಕನ್ನಡಿಯಲ್ಲಿ ಇಣುಕಿದರೆ :

ತನ್ನ ಬಣ್ಣ
ತಿಳಿದು
ಕಸಿವಿಸಿಗೊಂಡ;

ಸಿಕ್ಕವರನ್ನು ಹರಿದು
ಹಾಕುವಂಥ ತನ್ನ
ಕೊಕ್ಕು:

ಎಷ್ಟು ಉದ್ದ!
ಎಷ್ಟು ಹರಿತ!

ಕಾಯಕ ಸಿದ್ಧಾಂತ ವಾದ :
ಒಂದು ಸಾಮಾಜಿಕ ವಿಶ್ಲೇಷಣೆ

ಜಿಜ್ಞಾಸೆ

ಯಾವುದೇ ದುಡಿಮೆಯಲ್ಲಿ ಶಕ್ತಿವಿನಿಯೋಗವಾಗಿ ಸಮಾಜದ ಹಿತಕ್ಕಾಗಿ ಸೃಜನಾತ್ಮಕ ಮತ್ತು ಫಲದಾಯಕವನ್ನು ಸಾಧಿಸಿದರೂ ಅದು ತನ್ನಷ್ಟಕ್ಕೆ ತಾನೇ ಕಾಯಕವೆನಿಸುವುದಿಲ್ಲ. ದಾಸೋಹ ಭಾವನೆಯಿಂದ ತನಗಾಗಿ ಮತ್ತು ಪರರ ಹಿತಕ್ಕಾಗಿ ದುಡಿಮೆ ಮಾಡುವುದು ಕಾಯಕವೆಂದು ಹೇಳಬಹುದು. ವ್ಯಕ್ತಿಯು ತನ್ನನ್ನು ಸಮಾಜದ ಚೌಕಟ್ಟಿನಿಂದ ಭಿನ್ನವೆಂದು ಭಾವಿಸದೇ ಈ ವಿಶಾಲವಾದ ಸಮಾಜದ ಒಂದು ಅಂಗವೆಂದು ತಿಳಿಯಬೇಕಾಗುವುದು. ಕಾಯಕದ ತತ್ವವೆಂದರೆ ಮಾನವನ ಜೀವನವೆಂಬುದು ಪರಮಾತ್ಮನಿಂದ ದಯಪಾಲಿಸಲ್ಪಟ್ಟ ಒಂದು ಕಾಣಿಕೆ ಅಥವಾ ಕೊಡುಗೆಯಾಗಿದೆ.

❍ ಅಂಬಾರಾವ ಉಪಳಾಂವಕರ
ಅನು : ಎಸ್. ಎಸ್. ಬಾಣದ

ಕಾಯಕ ಸಿದ್ಧಾಂತವಾದವು ವೀರಶೈವ ಧರ್ಮದ ಒಂದು ಅಪೂರ್ವವಾದ, ವಿಶಿಷ್ಟಪೂರ್ಣವಾದ ದುಡಿಮೆ, ನೀತಿ ಹಾಗೂ ತತ್ವವಾಗಿದೆ. ವೈದಿಕ ಧರ್ಮದ ಸಂಪ್ರದಾಯಗಳಾದ ಕರ್ಮ ಮತ್ತು ವೈರಾಗ್ಯ ಸಿದ್ಧಾಂತಗಳ ಪ್ರಭಾವದಿಂದ ೧೨ನೇ ಶತಮಾನದಲ್ಲಿ ಸಾಮಾಜಿಕ ಮತ್ತು ನೈತಿಕ ಮಟ್ಟ ಕುಂದಿದಾಗ ಬಸವಣ್ಣನವರು ಕಾಯಕ ಸಿದ್ಧಾಂತವಾದದ ಮೂಲಕ ಹಿಂದು ಸಾಮಾಜಿಕ ಜೀವನಕ್ಕೆ ಚೇತನ ಶಕ್ತಿ ನೀಡಿದರು.

ಜೀವನದಲ್ಲಿ ಮತ್ತು ಸಮಾಜದಲ್ಲಿ ಕಾಯಕ ತತ್ವದ ಮಹತ್ವವನ್ನು ಗುರುತಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಪ್ರಸಿದ್ಧ ಸಮಾಜ ವಿಜ್ಞಾನಿಗಳಾದ ಡುರ್ಕಹ್ಯಾಮ್, ಮನೋಶಾಸ್ತ್ರಜ್ಞರಾದ ಫ್ರಾಯಿಡ್ ಅವರು ವ್ಯಕ್ತಿಯ ಸಾಧನೆಗೆ ಕಾಯಕವೇ ಅತ್ಯಂತ ಮಹತ್ವದ್ದೆಂದು ಗಣಿಸಿದರು. ಮನುಷ್ಯ ಜೀವನದಲ್ಲಿ ತನ್ನ ಅಸ್ತಿತ್ವ ಮತ್ತು ಸ್ವಂತಿಕೆಯನ್ನು ಉಳಿಸಿಕೊಳ್ಳಬೇಕಾದರೆ, ಬೆಳೆಸಿಕೊಳ್ಳಬೇಕಾದರೆ ಮತ್ತು ಕಾಯ್ದುಕೊಳ್ಳಬೇಕಾದರೆ ದುಡಿಮೆ ಮುಖ್ಯ. ಸಮಾಜ ವ್ಯಕ್ತಿಯನ್ನು ಸಂಪೂರ್ಣ ಸದಸ್ಯತ್ವ ಅನುಗ್ರಹಿಸುವ ಪೂರ್ವದಲ್ಲಿ ವ್ಯಕ್ತಿಯಿಂದ ದುಡಿಮೆಯ ಕೊಡುಗೆಯನ್ನು ಅಪೇಕ್ಷಿಸುತ್ತದೆ. (ಎ.ಡಬ್ಲ್ಯೂ.ಗ್ರೀನ್ ೧೯೫೬)

ಕಾಯಕ ಸಿದ್ಧಾಂತ ವಾದದ ಬಗ್ಗೆ ಸಮಾಜಶಾಸ್ತ್ರ ವಿಜ್ಞಾನದಲ್ಲಿ ವಿವರಣೆ ಕಡಿಮೆಯಿದ್ದು ವೀರಶೈವ ಧರ್ಮದ ತತ್ವ ವಿಚಾರ, ಸಿದ್ಧಾಂತ, ಯಲ್ಲದೆ ದೈವಿ ಕೃಪೆಯನ್ನು ಪವಿತ್ರವಾದ ಕರ್ತವ್ಯದ ಮೂಲಕ ಕಂಡುಕೊಂಡಿದ್ದಾರೆ. ಪ್ರತಿಯೊಂದು ಕಲ್ಪನೆಗೆ ಆಧ್ಯಾತ್ಮಿಕ (Spiritual) ಮತ್ತು ಲೌಕಿಕ (Secular) ಪರಿಕಲ್ಪನೆಗಳಿವೆ.

ಕಾಯಕ ಪದದ ಅರ್ಥಕ್ಕೆ ಮಹತ್ವ ಬರಬೇಕಾದರೆ ಪ್ರಾಯೋಗಿಕ ಜೀವನಕ್ಕೆ ಆರ್ಥಿಕ ಮತ್ತು ಆಧ್ಯಾತ್ಮಿಕ ವಿಚಾರಗಳಿಗೆ ಮಹತ್ವ ನೀಡಿದಾಗ ಅವುಗಳಲ್ಲಿ ಪರಸ್ಪರ (ಹೆಚ್ಚಿನ ಮಾಹಿತಿಗೆ ಚಂದ್ರಶೇಖರರವರ ವೀರಶೈವ ಕಾನ್ಸೆಪ್ಟ್ ಆಫ್ ಕಾಯಕ ಮತ್ತು ದಾಸೋಹ, ೧೯೯೦ ಲೇಖನವನ್ನು ನೋಡಿ) ಸಂಬಂಧವನ್ನು ಕಲ್ಪಿಸಿದಂತಾಗುತ್ತದೆ. ಕಾಯಕ ಸಿದ್ಧಾಂತದ ಗುರಿಯು ಮನುಷ್ಯನ ಅಗತ್ಯಗಳಾದ ಆಹಾರ, ಬಟ್ಟೆ, ವಸತಿ, ಆರೋಗ್ಯ ಮತ್ತು ಶಿಕ್ಷಣವನ್ನು ಸಾಧಿಸುವುದೆ ಮುಖ್ಯವಾಗಿದೆ. ಆಧ್ಯಾತ್ಮಿಕ ಸಾಧನೆಗಾಗಿ ಭೌತಿಕ ಸಂಪತ್ತನ್ನು ಪಡೆಯಬೇಕಾಗುತ್ತದೆ.

ಪ್ರಸುತ್ತ ಲೇಖನದಲ್ಲಿ ಕಾಯಕ ಪದದ ಅರ್ಥವನ್ನು ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆ ದೃಷ್ಟಿಯಿಂದ ವ್ಯಾಖ್ಯಾನಿಸುವುದು ಹಾಗೂ ಕಾಯಕದಿಂದ ಆಧ್ಯಾತ್ಮಿಕ ಗುರಿಯನ್ನು ಸಾಧಿಸುವ ಸಾಧನವೆಂದು ತಿಳಿಸುವ ಉದ್ದೇಶವಾಗಿದೆ.

ಕಾಯಕ ಸಿದ್ಧಾಂತವಾದದ ಆಯಾಮಗಳು :

ಕಾಯಕ ಸಿದ್ಧಾಂತವಾದದಲ್ಲಿ ಎರಡು ಆಯಾಮಗಳುಂಟು :

೧. ದಾಸೋಹ ೨. ದುಡಿಮೆ

ದುಡಿಮೆಯ ಅರ್ಥ :

ಸಾಮಾನ್ಯವಾಗಿ ದುಡಿಮೆ ಪದದ ಅರ್ಥವನ್ನು ಉದ್ಯೋಗ ಅಥವಾ ಕಸುಬು ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ದುಡಿಮೆಯ ಅರ್ಥವು ಹೊಟ್ಟೆಯ ಪಾಡಿಗಾಗಿ ಮಾಡುವ ಕಾರ್ಯಕ್ಕಿಂತ ಶ್ರೇಷ್ಠವಾಗಿದೆ. ದುಡಿಮೆ ಶಬ್ದ ಅರ್ಥವನ್ನು ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳೆಂದು ಭಾವಿಸಲಡ್ಡಿಯಿಲ್ಲ. ಗ್ರೀನ್ ಅವರ ಅಭಿಪ್ರಾಯದಂತೆ ದುಡಿಮೆಯೆಂದರೆ ಐಹಿಕ ಅವಶ್ಯಕತೆಗಳನ್ನು ಸಾಧಿಸುವ ಕಾರ್ಯವಾಗಿದೆ (೧೯೫೬). ಅವರು ಭೌತಿಕ ಅರ್ಥಕ್ಕೆ ಹೆಚ್ಚು ಒತ್ತನ್ನು ಕೊಟ್ಟು ಆಧ್ಯಾತ್ಮಿಕ ಹಾಗೂ ಮಾನಸಿಕ ಅಥವಾ ಸಾಮಾಜಿಕ ಮಹತ್ವವನ್ನು ಪರಿಗಣಿಸಿಲ್ಲ. ಇದರಿಂದ ದುಡಿಮೆಯ ವ್ಯಾಖ್ಯೆಯ ಕೇವಲ ಭೌತಿಕ ಸಾಧನೆಗಳನ್ನು ಸಿದ್ಧಿಸುವ

ವಿರಳವಾಗಿದೆ. ಕಾಯಕ ಸಿದ್ಧಾಂತದ ಪದದ ಅರ್ಥವು ಸಾಮಾಜಿಕವಾಗಿ ಸಂಶೋಧನೆಗೆ ಒಳಗಾದಾಗ ಅದಕ್ಕೊಂದು ಸಮಾಜಶಾಸ್ತ್ರೀಯ ಕಲ್ಪನೆಯ ವ್ಯಾಖ್ಯೆ ನೀಡಲು ಸಾಧ್ಯ.

ಸಮಾಜ ಶಾಸ್ತ್ರಜ್ಞರಾದ ಪಾರ್ವತಮ್ಮ (೧೯೭೨) ಬಾಲಿ (೧೯೭೮), ಈಶ್ವರನ್ (೧೯೬೩) ಶೌತನ (೧೯೯೫) ಮತ್ತು ಸಾಖರೆ (೧೯೭೮) ಈ ಶಬ್ದದ ತಾತ್ಪರ್ಯವನ್ನು ಕುರಿತು ತಿಳಿಸುವಾಗ ಉದ್ಯೋಗಕ್ಕೆ ವಿಶಾಲಾರ್ಥವನ್ನು ನೀಡಿದ್ದಾರೆ. ಅದೇ ರೀತಿಯಾಗಿ ಬ್ಲೇಕ್(೧೯೬೪) ಆರ್.ಟಿ. ಜಂಗಮ (೧೯೬೪) ಉದ್ಯೋಗ, ದೈಹಿಕ ಶ್ರಮ, ಕಸುಬುಗಳಿಗೆ ಯಾವುದೇ ರೀತಿಯ ತಾರತಮ್ಯ ಮಾಡಲಾರದೆ ಕಾಯಕ ಸಿದ್ಧಾಂತಕ್ಕೆ ವಿಶೇಷವಾದ ಒತ್ತನ್ನು ಕೊಟ್ಟಿದ್ದಾರೆ. ಇದಲ್ಲದೆ ವಚನ ಸಾಹಿತ್ಯವು ದೈವೀ ಶಕ್ತಿಯನ್ನು ಆರ್ಥಿಕತೆಯನ್ನು ಯಾವುದೇ ಆಧ್ಯಾತ್ಮಿಕವಾಗಿ ಫಲದಾಸೆ

ದಾಗಿದೆ. ಈ ವ್ಯಾಖ್ಯೆ ಆರ್ಥಿಕ ದೃಷ್ಟಿಯಿಂದ ಮಹತ್ವ ಪಡೆದಿದ್ದರೂ, ಅದರಿಂದ ಮಾನವನ ಚಟುವಟಿಕೆಗಳಾದ ಮನೆಗೆಲಸ, ಮಕ್ಕಳ ಪಾಲನೆ ಪೋಷಣೆ, ಸಾಮಾಜಿಕ ಮತ್ತು ಸಮಾಜ ಸೇವೆಗಳನ್ನು ಬೇರ್ಪಡಿಸಲಾಗಿದೆ.

ಈ ಎಲ್ಲ ಚಟುವಟಿಕೆಗಳನ್ನು ವೃತ್ತಿಗೆ ಶಕ್ತಿ ಮತ್ತು ವೇಳೆಯನ್ನು ವ್ಯಯಿಸುವುದರಿಂದ ಮಹತ್ವ ಕೊಡಬೇಕಾಗುತ್ತದೆ. ಈ ಕೆಲಸಗಾರರು ಪೂರ್ಣಾವಧಿಯ ಕಾರ್ಯಕರ್ತರಾಗಿದ್ದು ಅವರಿಗೆ ಜಾಣ್ಮೆ, ಕೌಶಲ್ಯ ಕಾರ್ಯಮಗ್ನತೆ ಅವಶ್ಯಕವಾಗಿರಬೇಕಾಗುತ್ತದೆ. ಇದಲ್ಲದೆ ಓದುವಿಕೆ, ಬರೆಯುವಿಕೆ, ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಗಳಾಗಿರುವುದನ್ನು ಪರಿಗಣಿಸಬೇಕಾಗುತ್ತದೆ. ಈ ಚಟುವಟಿಕೆಗಳಿಂದ ಅವನಿಗೆ/ಅವಳಿಗೆ ಯಾವುದೇ ಆರ್ಥಿಕ ಲಾಭವಿರದಿದ್ದರೂ ಅವು ನಮ್ಮ

ಸಾಮಾಜಿಕ ಜೀವನದಲ್ಲಿ ಒಂದಾಗಿವೆ. ಅದನ್ನು ಪಡೆಯುವ ಶಕ್ತಿ ಸಾಮರ್ಥ್ಯ, ವ್ಯಕ್ತಿ ಮತ್ತು ಸಮಾಜದ ಸಲುವಾಗಿ ಕೈಕೊಳ್ಳುವುದು ಅಗತ್ಯವಾಗಿದೆ. ಅಮೇರಿಕದಲ್ಲಿ ದುಡಿಮೆಯ ಬಗ್ಗೆ ಒಂದು ವರದಿಯನ್ನು ನೀಡುತ್ತ ದುಡಿಮೆಯೆಂದರೆ ಜನರಿಗಾಗಿ ಬೆಲೆಯುಳ್ಳದ್ದನ್ನು ಮಾಡುವುದೇ ಒಂದು ಚಟುವಟಿಕೆಯಾಗಿದೆ. ಈ ವ್ಯಾಖ್ಯೆಯಿಂದ ದುಡಿಮೆಗೆ ಮತ್ತಷ್ಟು ಅರ್ಥವನ್ನು ಕಲ್ಪಿಸಿದೆ.

ಕೇವಲ ಭೌತಿಕ ಸಂಪತ್ತನ್ನು ದುಡಿಮೆಯ ಮೂಲಕ ಗಳಿಸುವುದಾಗದೆ, ಅದಕ್ಕೊಂದು ಉದ್ದೇಶವುಂಟು. ಈ ಮೇಲೆ ತಿಳಿಸಿದ ವ್ಯಾಖ್ಯೆ ದುಡಿಮೆಯೆಂದರೆ ಉದ್ಯೋಗದ ಭಾಗವಾಗಿ, ಸೃಜನಾತ್ಮಕ ಉತ್ಪಾದಕ ಗುರಿಗಳಾಗಿವೆಯೆಂದು ಅಭಿಪ್ರಾಯವಾಗಿದೆ. ದುಡಿಮೆಯ ಅರ್ಥವನ್ನು ಉದ್ಯೋಗದ ಸಂಕುಚಿತ ಅರ್ಥದಲ್ಲಿ ಹೇಳಿದರೆ, ಬಹುಸಂಖ್ಯಾತ ಸ್ತ್ರೀಯರು, ಧಾರ್ಮಿಕ ಗುರುಗಳು ಉಪದೇಶಕರನ್ನು ಕೆಲಸಗಾರರಲ್ಲರೆಂದು ಪರಿಗಣಿಸಬೇಕಾಗುತ್ತದೆ. ಮೇಲೆ ಹೇಳಿದ ವ್ಯಾಖ್ಯೆಯಂತೆ ಎಲ್ಲ ತರದ ಉದ್ಯೋಗಗಳು ಸಹ ದುಡಿಮೆಯೆಂದು ಮಾನ್ಯ ಮಾಡಬೇಕಾಗುತ್ತದೆ. ಹೀಗಾಗಿ ಕಾಯಕ ಸಿದ್ಧಾಂತ ವಾದವು ಮಾನವನ ಎಲ್ಲ ಚಟುವಟಿಕೆಗಳನ್ನೊಳಗೊಂಡು ಅವನು ಮಾಡತಕ್ಕಂತಹ ಉದ್ಯೋಗಕ್ಕೂ ಸಹ ಸಂಪರ್ಕ ಏರ್ಪಡುತ್ತದೆ.

ದುಡಿಮೆಯೆಂದರೆ ಕಸುಬು (ವೃತ್ತಿ)

ಈ ವಿಭಾಗದಲ್ಲಿ ದುಡಿಮೆಯೆಂದರೆ, ಆರ್ಥಿಕ ಚಟುವಟಿಕೆ ಮತ್ತು ವ್ಯಕ್ತಿ ಸಮಾಜ ಮತ್ತು ರಾಷ್ಟ್ರದ ಪ್ರಗತಿಗೆ ತಳಹದಿಯಾಗಿದೆಯೆಂದು ವಾದಿಸುವುದಾಗಿದೆ. ದುಡಿಮೆ ಪದದ ಅರ್ಥವನ್ನು ಆರ್ಥಿಕ ಅರ್ಥದಲ್ಲಿ ವೃತ್ತಿ ಅಥವಾ ಕಸುಬು ಎಂದು ಹೇಳಲಡ್ಡಿಯಿಲ್ಲ. ಉದ್ಯೋಗ ಅಥವಾ ವೃತ್ತಿ ವ್ಯಕ್ತಿಯ ಸಮಾಜದಲ್ಲಿ ಅರಿವು, ಪದವಿ, ಅಂತಸ್ತು ಮತ್ತು ಪಾತ್ರದ ಬಗ್ಗೆ ಸಂಪರ್ಕವಾಗಿದೆ. ಅದು ಆರ್ಥಿಕ ಸಂಪತ್ತಿನ ಉಗಮವಾಗಿದ್ದು ಮತ್ತು ಜೀವನ ಮಟ್ಟವನ್ನು ನಿರ್ಣಯಿಸುವುದಾಗಿದೆಯೆಂದು ಹೇಳಲಾಗಿದೆ. ಸಾಲ್ಪು (೧೯೪೪) ಅವರು ವೃತ್ತಿಯ ವ್ಯಾಖ್ಯೆಯನ್ನು ನಿರಂತರವಾಗಿ ಪ್ರವಹಿಸುವ ಆಧಾರವೆಂದು ವ್ಯಕ್ತಿಯು ಶ್ರಮಿಸುತ್ತಾನೆ. ವ್ಯಕ್ತಿಯ ಮಟ್ಟವನ್ನು ಈ ಚಟುವಟಿಕೆಯಿಂದ ನಿರ್ಧರಿಸಲಾಗುತ್ತದೆ. ಮೇಲೆ ಹೇಳಿದ ವ್ಯಾಖ್ಯೆಗೆ ಅನುಗುಣವಾಗಿ ದುಡಿಮೆಯೆಂದರೆ ಉದ್ಯೋಗ ಮತ್ತು ಆರ್ಥಿಕ ಸಂಪಾದನೆಗಾಗಿ ವ್ಯಯಿಸುವ ಶಕ್ತಿ, ಲಾಭದಾಯಕ ಉದ್ಯೋಗ ಮತ್ತು ಚಟುವಟಿಕೆಗಳಾಚೆಗಿರುವ ಅರ್ಥವೆಂದರೆ ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಪರಿಣಾಮಗಳು ವ್ಯಕ್ತಿ ಮತ್ತು ಸಮಾಜಕ್ಕೆ ಸಂಬಂಧಿಸಿದ್ದಾಗಿವೆ.

ವೃತ್ತಿ ಅಥವಾ ಕಸುಬು

ಉದ್ಯೋಗ ಅಥವಾ ಕಸುಬು ದುಡಿಮೆಯ ಭಾಗವಾಗಿದ್ದು ವ್ಯಕ್ತಿ ಮತ್ತು ಸಮಾಜದ ಸಾಮಾಜಿಕ ಮತ್ತು ಆರ್ಥಿಕ ಅಂತಸ್ತನ್ನು ರೂಪಿಸುವುದರಲ್ಲಿ ಪ್ರಧಾನಪಾತ್ರ ವಹಿಸುತ್ತದೆ. ಉದಾಹರಣೆಗಾಗಿ -ಮಾನವ ಸಂಪನ್ಮೂಲಗಳನ್ನು ಸಂಘಟಿಸಿ, ಕಾರ್ಯವಿಧಾನದಿಂದ ವೈವಿಧ್ಯಮಯವಾದ ಕಸುಬುಗಳ ಮೂಲಕ ಸಾಮಾಜಿಕ ಬೇಡಿಕೆಗಳನ್ನು ಈಡೇರಿಸುವುದಾಗಿದೆ. ಕಸುಬುಗಳು ಆರ್ಥಿಕ ಪದ್ಧತಿ ಮತ್ತು ಸಾಮಾಜಿಕ ಪದರುಗಳನ್ನು ಕೇಂದ್ರದ ಕಾರ್ಯವಿಧಾನಗಳೆಂದು ತಿಳಿಯಬಹುದಾಗಿದೆ. ಕಸುಬು ಯುವಕರಿಗೆ ಮತ್ತು ದೊಡ್ಡವರಿಗೆ ಉದ್ಯೋಗವನ್ನು ಒದಗಿಸುವುದು ಸಾಮಾಜಿಕ ಮತ್ತು ಆರ್ಥಿಕ ಅವಶ್ಯಕತೆಗಳಾದ ಆಹಾರ, ವಸತಿ, ಶಿಕ್ಷಣ ಮತ್ತು ಆರೋಗ್ಯಗಳನ್ನು ಉದ್ಯೋಗದ ಮೂಲಕ ಸಾಧಿಸಿ

ಕಾಯಕವೆಂದರೆ ಕೇವಲ ವೃತ್ತಿ ಅಥವಾ ಕಸುಬು ಅಲ್ಲ. ಗೃಹ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸ್ತ್ರೀಯನ್ನು ಕಾಯಕದ ಪರಿಕಲ್ಪನೆಯ ಅರ್ಥದಿಂದ ದೂರ ಇಡಲಾಗಿದೆ. ಮನೆ ಕೆಲಸದಲ್ಲಿ ಶಕ್ತಿಯ ವ್ಯಯವಾಗುವುದರಿಂದ ಅದನ್ನು ಕಾಯಕವೆಂದು ಪರಿಗಣಿಸಬೇಕಾಗುತ್ತದೆ. ದುಡಿಮೆ ಎಂಬ ಪರಿಕಲ್ಪನೆ ಸಾಮಾಜಿಕ ಮತ್ತು ಆರ್ಥಿಕ ಬಹುಮಾನಗಳನ್ನು ಪಡೆಯಲು ಶಕ್ತಿ ವ್ಯಯಿಸುವ ವಿಷಯದ ಆಚೆಗೆ ಕಾಯಕ ಪದದ ಅರ್ಥ ವಿಸ್ತಾರವಾಗಿದೆ. ದುಡಿಮೆಯ ಗುರಿ ಎಂದರೆ ವ್ಯಕ್ತಿಗಳ ಮತ್ತು ಸಮೂಹಗಳ ಭೌತಿಕ ಅಭಿವೃದ್ಧಿಯನ್ನು ಸಂಪಾದಿಸುವುದು. ಈ ಅಂಶ ಅತಿ ಸಂಕುಚಿತ ಪರಿಕಲ್ಪನೆ. ಭೌತಿಕ ಸಂಪತ್ತನ್ನು ಗಳಿಸುವ ಉದ್ದೇಶಕ್ಕೆ ಕೈಗೊಂಡ ದುಡಿಮೆ ವ್ಯಾಪಾರ ಅಥವಾ ವಾಣಿಜ್ಯದ ಗುರಿ ಹೊಂದಿರುತ್ತದೆ.

ಸಾಮಾಜಿಕ ಅವ್ಯವಸ್ಥೆ, ಅಪರಾಧ, ವ್ಯಭಿಚಾರ ಮತ್ತು ಇನ್ನುಳಿದ ಅಹಿತಕರ ಚಟುವಟಿಕೆಗಳನ್ನು ಕುಗ್ಗಿಸುವುದಾಗಿದೆ.

ಉದ್ಯೋಗ ರಹಿತ ವ್ಯಕ್ತಿಯು ಸಾಮಾಜಿಕ ಅಂತಸ್ತನ್ನು ಕಳೆದುಕೊಂಡು ಪರಿತಪಿಸಬೇಕಾಗುವುದು. ವ್ಯಕ್ತಿಯು ಜೀವನದ ಉದ್ದೇಶವನ್ನು ದುಡಿಮೆಯ ಮೂಲಕ ಅರ್ಥೈಸಬೇಕಾಗುವುದು. ಈ ತೆರನಾಗಿ ಕಸುಬು ಅಥವಾ ವೃತ್ತಿ ದುಡಿಮೆಯ ಮಹತ್ವದ ಪ್ರಾಥಮಿಕ ಭಾಗವಾಗಿದ್ದು ಸಾಮಾಜಿಕ ಭೌತಿಕ ಪ್ರಗತಿ ಮತ್ತು ಚಾರಿತ್ರ್ಯ ಮತ್ತು ನೀತಿಯ ಮೇಲೆ ಪ್ರಭಾವ ಬೀರುತ್ತದೆ. ದುಡಿಮೆ ಪದದ ಅರ್ಥವು ಉದ್ಯೋಗ ಶಬ್ದಕ್ಕಿಂತ ಹೆಚ್ಚು ಅರ್ಥಗರ್ಭಿತವಾಗಿದೆ. ಕಸುಬಿನ ಪದಾರ್ಥವು ಭೌತಿಕ ಅವಶ್ಯಕತೆಗಳನ್ನು ಪೂರೈಸುವುದಾಗಿದೆ. ದುಡಿಮೆ ಪದದ ಅರ್ಥ ಸಾಮಾಜಿಕ ಲಾಭ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಶಕ್ತಿಯ ವ್ಯಯದ ಮೂಲಕ ಪಡೆಯುವುದಾಗಿದೆ. ದುಡಿಮೆ ಪದದ ಅರ್ಥವೆಂದರೆ ಉತ್ಪಾದಕ ಮತ್ತು ರಚನಾತ್ಮಕ ಉದ್ದೇಶಕ್ಕಾಗಿ ಶಕ್ತಿಯನ್ನು ವ್ಯಯಿಸುವುದು. ಶಕ್ತಿಯ ವ್ಯಯಿಸುವ ಉದ್ದೇಶಗಳೆಂದರೆ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರಗತಿ ಸಾಧಿಸುವುದು.

ಈ ವ್ಯಾಖ್ಯೆ ಸಾಧುಗಳು ಮತ್ತು ಭಿಕ್ಷುಕರು ಮಾಡುವ ಕಾರ್ಯವನ್ನು ದುಡಿಮೆಯೆಂದು ಅರ್ಥೈಸಬಾರದು. ಈ ದುಡಿಮೆ ಪದದ ಅರ್ಥವನ್ನು ಅರ್ಥಪೂರ್ಣ ವಾದ ಶಕ್ತಿಯ ವ್ಯಯವೆಂದು ವ್ಯಕ್ತಿಯ ಮತ್ತು ಸಾಮಾಜಿಕ ದೃಷ್ಟಿಕೋನವೆಂದು ತಿಳಿಯಬೇಕಾಗುವುದು. ಹೆಚ್ಚು ವಿಶೇಷವಾಗಿ ಹೇಳಬೇಕೆಂದರೆ ದುಡಿಮೆ ಪದದ ಅರ್ಥವನ್ನು ಆರ್ಥಿಕ ಮತ್ತು ಭೌತಿಕ ಚಟುವಟಿಕೆಗಳ ಮೂಲಕ ಆರ್ಥಿಕ ಸಂಪತ್ತನ್ನು ಪಡೆಯುವುದು. ಈ ನಿಟ್ಟಿನಲ್ಲಿ ಉದಾಹರಿಸಬೇಕಾದರೆ ಮನೆಗೆಲಸಗಳು, ಸಾಮಾಜಿಕ ಸೇವೆಗಳೂ ದುಡಿಮೆ ಎಂಬ ಅರ್ಥದಲ್ಲಿ ಬರುತ್ತವೆ. ದುಡಿಮೆ ಪದಕ್ಕೆ ಆರ್ಥಿಕ ಮತ್ತು ಆರ್ಥಿಕವಲ್ಲದ ಆಯಾಮಗಳಾಗುವುವು.

ಕಾಯಕದ ಅರ್ಥ

ಕಾಯಕ ಶಬ್ದದ ಅರ್ಥವನ್ನು ವಿಶೇಷವಾಗಿ ಶಾರೀರಿಕ ಶ್ರಮ, ಕಸುಬು ಮತ್ತು ವೃತ್ತಿಗಳೆಂದು ಸಾಮಾನ್ಯವಾಗಿ ಉಪಯೋಗಿಸಲಾಗುತ್ತದೆ. ಕೇವಲ ಕೆಲಸ ಅಥವಾ ದುಡಿಮೆ ಎಂದರೆ ಕಾಯಕವಲ್ಲ. ಅದು ವಿಶೇಷ ಲಾಭದಾಯಕ ವೆನಿಸಿದರೂ ಕಾಯಕವಾಗುವುದಿಲ್ಲ. ಕಾಯಕ ಪದದ ಎರಡು ಅರ್ಥಗಳುಂಟು. ೧. ಕಾಯಕವೆಂದರೆ ಸ್ವಯಂ (ದೇಹ, ಮನಸ್ಸು ಮತ್ತು ಆತ್ಮ), ೨. ಕ - ಅಕ್ಷರ ಅರ್ಥ ಕ್ರಿಯೆ ಅಥವಾ ದುಡಿಮೆ, ಶ್ರಮ ಒಳಾರ್ಥವೆಂದರೆ ವ್ಯಕ್ತಿಯೂ ಮತ್ತೊಬ್ಬರನ್ನು ಅವಲಂಬಿಸದೇ ತನ್ನ ಸ್ವಯಂ ದುಡಿಮೆಯ ಮೂಲಕ ಬದುಕುವುದು ಸ್ಪಷ್ಟವಾಗಿ ಹೇಳಬೇಕಾದರೆ : ವ್ಯಕ್ತಿಯು ಸೃಜನಾತ್ಮಕ ಮತ್ತು ಉತ್ಪನ್ನದಾಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು.

ಕಾಯಕವೆಂದರೆ ಕೇವಲ ವೃತ್ತಿ ಅಥವಾ ಕಸುಬು ಅಲ್ಲ, ಗೃಹ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸ್ತ್ರೀಯನ್ನು ಕಾಯಕದ ಪರಿಕಲ್ಪನೆಯ ಅರ್ಥದಿಂದ ದೂರ ಇಡಲಾಗಿದೆ. ಮನೆ ಕೆಲಸದಲ್ಲಿ ಶಕ್ತಿಯ ವ್ಯಯವಾಗುವುದರಿಂದ ಅದನ್ನು ಕಾಯಕವೆಂದು ಪರಿಗಣಿಸಬೇಕಾಗುತ್ತದೆ. ದುಡಿಮೆ ಎಂಬ ಪರಿಕಲ್ಪನೆ ಸಾಮಾಜಿಕ ಮತ್ತು ಆರ್ಥಿಕ ಬಹುಮಾನಗಳನ್ನು ಪಡೆಯಲು ಶಕ್ತಿ ವ್ಯಯಿಸುವ ವಿಷಯದ ಆಚೆಗೆ ಕಾಯಕ ಪದದ ಅರ್ಥ ವಿಸ್ತಾರವಾಗಿದೆ. ದುಡಿಮೆಯ ಗುರಿ ಎಂದರೆ ವ್ಯಕ್ತಿಗಳ ಮತ್ತು ಸಮೂಹಗಳ ಭೌತಿಕ ಅಭಿವೃದ್ಧಿಯನ್ನು ಸಂಪಾದಿಸುವುದು. ಈ ಅಂಶ ಅತಿ ಸಂಕುಚಿತ ಪರಿಕಲ್ಪನೆ. ಭೌತಿಕ ಸಂಪತ್ತನ್ನು ಗಳಿಸುವ ಉದ್ದೇಶಕ್ಕೆ ಕೈಗೊಂಡ ದುಡಿಮೆ. ವ್ಯಾಪಾರ ಅಥವಾ ವಾಣಿಜ್ಯದ ಗುರಿ ಹೊಂದಿರುತ್ತದೆ.

ವ್ಯಾಪಾರ ಅಥವಾ ವಾಣಿಜ್ಯ ಉದ್ದೇಶಕ್ಕಾಗಿ ಕೈಗೊಂಡ ದುಡಿಮೆಯಿಂದ ಭ್ರಷ್ಟಾಚಾರ ಮತ್ತು ಶೋಷಣೆಗೆ ಎಡೆಯಾಗುತ್ತದೆ. ಮತ್ತೊಂದು ಅರ್ಥದಲ್ಲಿ ಹೇಳಬೇಕಾದರೆ ಕಾಯಕ ಪದದ ಅರ್ಥಕ್ಕೆ ಭೌತಿಕ ಮತ್ತು ಆಧ್ಯಾತ್ಮಿಕ ಗುರಿಗಳಿವೆ. ಕಾಯಕ ಧಾರ್ಮಿಕ ಮತ್ತು ಆಧ್ಯಾತ್ಮಿಕ ಆಯಾಮಗಳನ್ನು ಜೋಡಿಸುವ ಕೊಂಡಿಯಾಗಿದ್ದು ತನ್ಮೂಲಕ ಪರಿಶುದ್ಧತೆ ಮತ್ತು ಲೌಕಿಕತೆಯನ್ನು ಒಂದುಗೂಡಿಸುತ್ತವೆ. ಬಸವಣ್ಣನವರು ಕಾಯಕದ ಬಗ್ಗೆ ಹೇಳುತ್ತ ಕಾಯಕದ ಉದ್ದೇಶ ಸಾಮಾಜಿಕ ಮತ್ತು ಆರ್ಥಿಕ ಸಿದ್ಧಿಗಳನ್ನು ಸಂಪಾದಿಸುವುದಲ್ಲದೆ ಪರಮಾತ್ಮನ ಮತ್ತು ಮಾನವನ ಕುಲಕ್ಕೆ ಸೇವೆ ಸಲ್ಲಿಸುವುದಾಗಿದೆ. ಕೇವಲ ಹಣ ಮತ್ತು ಲೌಕಿಕ ಸಂಪಾದನೆ

ಗಾಗಿ ಮಾಡುವ ಕಾರ್ಯ ಕಾಯಕವೆನಿಸುವುದಿಲ್ಲ. ದುಡಿಮೆಯನ್ನು ಹಣ ಸಂಪಾದನೆಗಾಗಿ ಮತ್ತು ವಾಣಿಜ್ಯ ದೃಷ್ಟಿಕೋನದಿಂದ ಮಾಡಿದ ಕಾರ್ಯ ಸಂಕುಚಿತ ವಿಚಾರ ದುಡಿಮೆಯನ್ನು ವಾಣಿಜ್ಯ ಚಟುವಟಿಕೆಗಳಾಗಿ ಉಪಯೋಗಿಸುವುದರಿಂದ ಸಂಕುಚಿತ ಮನೋಭಾವನೆ ಮತ್ತು ಸ್ವಾರ್ಥ ಲಾಲಸೆಯನ್ನು ಉದ್ದೀಪನಗೊಳಿಸುವುದಾಗಿದೆ. ಸಾಮಾಜಿಕ ಅಭಿವೃದ್ಧಿಗೆ ಅಡೆತಡೆಯನ್ನುಂಟುಮಾಡುವುದು. ವ್ಯಕ್ತಿ ಭೌತಿಕ ಜಗತ್ತಿನ ಚಕ್ರದಲ್ಲಿ ಒಂದು ಹುಲ್ಲಿನಂತೆ ಆಗಿ ಅವನು ತನ್ನ ಮಾನವೀಯ ಮತ್ತು ಆಧ್ಯಾತ್ಮಿಕ ಮೌಲ್ಯಗಳಿಂದ ವಂಚಿತನಾಗುತ್ತಾನೆ. ಇಂಥ ದುಡಿಮೆ ದೃಷ್ಟಿ ಶೋಷಣೆ ಮತ್ತು ಅವ್ಯವಸ್ಥೆಗೆ ಗುರಿಯಾಗುತ್ತದೆ.

ದುಡಿಮೆಯ ಗುರಿಗಳಾದ ಲೌಕಿಕ ಮತ್ತು ಕಸುಬುಗಳ ಸಂಪಾದನೆಯೂ ಆಧ್ಯಾತ್ಮಿಕ ಅಥವಾ ದೈವಿ ಮಟ್ಟಕ್ಕೆ ಏರಿದಾಗ ಕಾಯಕವೆಂದಿನಿಸುವುದು. ಉದಾಹರಣೆಗಾಗಿ ವ್ಯಾಪಾರವನ್ನು ಕೇವಲ ಹಣ ಸಂಪಾದನೆ ಮಾಡುವ ಗುರಿಯಲ್ಲದೆ ಉಚ್ಚಮಟ್ಟದ ಅಥವಾ ಗುಣಾತ್ಮಕ ವಸ್ತುಗಳನ್ನು ಒದಗಿಸುವುದಾಗಿದೆ. ವೈದ್ಯರು ಮತ್ತು ನ್ಯಾಯವಾದಿಗಳು ತಮ್ಮ ಕಕ್ಷಿದಾರರಿಗೆ ರೋಗಿಗಳಿಗೆ ಆರೋಗ್ಯ ಮತ್ತು ನ್ಯಾಯವನ್ನು ಒದಗಿಸಿ, ಶೋಷಣೆ ಮಾರ್ಗದಿಂದ ದೂರ ಇರಬೇಕಾಗುವುದು. ಇದೇ ತೆರನಾಗಿ ಶಿಕ್ಷಕರು ತಮ್ಮ ಕಲಿಸುವ ಉದ್ಯೋಗವನ್ನು ಸಂಬಳಕ್ಕಾಗಿ ಕೈಕೊಳ್ಳದೇ ಜ್ಞಾನ ಸಂಪಾದಿಸಿಕೊಂಡು ತಮ್ಮ ವಿದ್ಯಾರ್ಥಿಗಳಿಗೆ ಜ್ಞಾನಾಮೃತವನ್ನು ನೀಡಿ ಅವರ ಭವಿಷ್ಯ ಜೀವನ ರೂಪಿಸಲು ಸಹಕಾರಿಯಾಗಬೇಕು.

ಕಾಯಕವು ಲೌಕಿಕ ಮತ್ತು ಆಧ್ಯಾತ್ಮಿಕ ಲೋಕಗಳಿಗೆ ಸಂಪರ್ಕ ಕಲ್ಪಿಸುವುದಲ್ಲದೆ ವ್ಯಕ್ತಿ ಮತ್ತು ಬೃಹತ್ ವಿಶ್ವದ ಜೊತೆಗೆ ಒಂದಾಗುವುದಾಗಿದೆ. ದುಡಿಮೆಯು ಆಧ್ಯಾತ್ಮಿಕ ರೂಪಗೊಂಡಾಗ ಅದು ದಾಸೋಹವೆನಿಸುವುದು. ಉದಾಹರಣೆಗಾಗಿ, ಶ್ರೀಮಂತರ ಕುಟುಂಬಗಳಲ್ಲಿ ಮನೆಗೆಲಸಗಳನ್ನು ಕೈಕೊಳ್ಳುವುದು ಕೀಳು ಮಟ್ಟದ್ದೆಂದು ಭಾವಿಸಿ ಸೇವಕರಿಂದ ಮನೆಗೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ವಿಶೇಷವಾಗಿ ಬ್ರಾಹ್ಮಣ ಕುಟುಂಬದವರು ಮನೆಗೆಲಸವನ್ನು ತುಚ್ಛವೆಂದು ಪರಿಗಣಿಸುತ್ತಾರೆ. ಮನೆಯಲ್ಲಿ ತಟ್ಟೆ ಬಟ್ಟಲು ಮತ್ತು ಬಟ್ಟೆಗಳನ್ನು ಸೇವಕರಿಂದ ಸ್ವಚ್ಛ ಮಾಡಿಸಿಕೊಳ್ಳುತ್ತಾರೆ.

ಇದೇ ತೆರನಾಗಿ, ಬೇಸಾಯ ವೃತ್ತಿಯನ್ನು ಕೈಕೊಳ್ಳುವುದು ಸಹ ಕೀಳೆಂದು ಭಾವಿಸುತ್ತಾರೆ. ಬ್ರಾಹ್ಮಣಮಯವಾದ ಕಸುಬಿನ ಪಾವಿತ್ರ್ಯದ ಭಾವನೆಯಿಂದ ಜಮೀನು ದಾರಿ ಪದ್ಧತಿ ಮತ್ತು ಭಾರತೀಯ ಅರ್ಥವ್ಯವಸ್ಥೆಗೆ ಕಾರಣೀ ಭೂತವಾಗಿದೆ. ದೈಹಿಕ ದುಡಿಮೆ ಕೀಳುಮಟ್ಟದ್ದೆಂದು ಭಾವಿಸಿ ದರೆ ನಾವು ದೇವರ ದೃಷ್ಟಿಯಲ್ಲೂ ಮಹಾಪಾಪವೆಸಗಿ ದಂತೆಯೇ ಸರಿ ಎಂದು ಬಸವಣ್ಣನವರು ಉದ್ಘೋಷಿಸಿ ದ್ದಾರೆ. ದೈಹಿಕ ಕೆಲಸವೂ ಒಂದು ತರದ ದುಡಿಮೆ. ಅದರಿಂದ ದೇಹ, ಮನಸ್ಸು ಮತ್ತು ಆತ್ಮದ ಮೇಲೆ ಪ್ರಭಾವ ಬೀರುತ್ತದೆ. ದುಡಿಮೆಯನ್ನು ಪರಮಾತ್ಮನ ಸೇವೆ ಎಂದು ಪರಿಗಣಿಸಿದಾಗ ಅದಕ್ಕೊಂದು ಅರ್ಥ ಬರುತ್ತದೆ.

ದೈಹಿಕ ಚಟುವಟಿಕೆಗಳಿಂದ ಅಂತರಾತ್ಮ ಜಾಗೃತಗೊಳ್ಳುವುದು. ದೇಹವನ್ನು ದುಡಿಸಿಕೊಳ್ಳುವುದರಿಂದ ಸ್ಥಿರತೆ ಮತ್ತು ಮನಸ್ಸಿನ ಶಾಂತಿಯನ್ನು ವ್ಯಕ್ತಿತ್ವಕ್ಕೆ ಮೆರಗುಕೊಡುವುದು. ಚಟುವಟಿಕೆ ರಹಿತ ಅಥವಾ ಆಲಸ್ಯ ದೇಹದಿಂದ ಆತ್ಮನಾಶವಾದಂತೆ. ಸಾಮಾಜಿಕ ಸೇವಾ ಕಾರ್ಯಗಳು ಮತ್ತು ಲಾಭದಾಯಕವಾದ ಉದ್ಯೋಗಗಳು ಬಸವಣ್ಣನವರು ಬೋಧಿಸಿದಂತೆ ಕೈಗೊಂಡಾಗ ಅವು ದಾಸೋಹ ಮಾರ್ಗದ

ಕಾಯಕವು ಲೌಕಿಕ ಮತ್ತು ಆಧ್ಯಾತ್ಮಿಕ ಲೋಕಗಳಿಗೆ ಸಂಪರ್ಕ ಕಲ್ಪಿಸುವುದಲ್ಲದೆ ವ್ಯಕ್ತಿ ಮತ್ತು ಬೃಹತ್ ವಿಶ್ವದ ಜೊತೆಗೆ ಒಂದಾಗುವುದಾಗಿದೆ. ದುಡಿಮೆಯು ಆಧ್ಯಾತ್ಮಿಕ ರೂಪಗೊಂಡಾಗ ಅದು ದಾಸೋಹವೆನಿಸುವುದು. ಉದಾಹರಣೆಗಾಗಿ, ಶ್ರೀಮಂತರ ಕುಟುಂಬಗಳಲ್ಲಿ ಮನೆಗೆಲಸಗಳನ್ನು ಕೈಕೊಳ್ಳುವುದು ಕೀಳುಮಟ್ಟದ್ದೆಂದು ಭಾವಿಸಿ ಸೇವಕರಿಂದ ಮನೆಗೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ. ವಿಶೇಷವಾಗಿ ಬ್ರಾಹ್ಮಣ ಕುಟುಂಬದವರು ಮನೆಗೆಲಸವನ್ನು ತುಚ್ಛವೆಂದು ಪರಿಗಣಿಸುತ್ತಾರೆ. ಮನೆಯಲ್ಲಿ ತಟ್ಟೆ ಬಟ್ಟಲು ಮತ್ತು ಬಟ್ಟೆಗಳನ್ನು ಸೇವಕರಿಂದ ಸ್ವಚ್ಛ ಮಾಡಿಸಿಕೊಳ್ಳುತ್ತಾರೆ.

ಸೋಪಾನಗಳಾಗುತ್ತವೆ. ಹಿಂದು ಸಮಾಜದಲ್ಲಿಯ ಪುರುಷಾರ್ಥ ಮತ್ತು ಸಂಸ್ಕಾರಗಳಿಂದ ಕಾಯಕದ ಮಹತ್ವವನ್ನು ಅರಿಯಲು ಚೇತೋಹಾರಿಯಾಗುವುವು.

ಪುರುಷಾರ್ಥ - ಜಾಗತಿಕ ದೃಷ್ಟಿಕೋನ

ಕಾಯಕ ಪದದ ಅರ್ಥವನ್ನು ಸಾಮಾಜಿಕ ಮತ್ತು ಆರ್ಥಿಕ ಸಿದ್ಧಾಂತವೆಂದು ಸ್ಪಷ್ಟವಾಗಿ ವಿವರಿಸಿ, ಅದನ್ನು ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಿದ್ಧಾಂತವೆಂದು ಹೇಳಬಹುದು. ಅದು ಜೀವನದ ಮಾರ್ಗವಲ್ಲದೇ ಜೀವನದ ಪದ್ಧತಿಯಾಗಿದೆ. ಜೀವನದ ಅರ್ಥವನ್ನು ಬಸವಣ್ಣನವರು ಮತ್ತು ಶಿವಶರಣರು ಗ್ರಹಿಸಿ/ಸಂಶೋಧಿಸಿ ಕಾಯಕದ ಮೂಲಕ ಅರಿವು, ಜ್ಞಾನ ಮತ್ತು ಅನುಭವಗಳಿಗೆ ಪರಿಪೂರ್ಣತೆಯನ್ನು ಒದಗಿಸುವುದಾಗಿದೆ ಎಂದು ಹೇಳಿದ್ದಾರೆ. ಕಾಯಕದ ಮೂಲಕ ಜೀವನಕ್ಕೆ ಪರಿಪೂರ್ಣತೆಯು ಬರುವುದೆಂದು ಅವರು ಹೇಳಿದ್ದಾರೆ. ಪ್ರಾರ್ಥನೆ, ಧಾರ್ಮಿಕ ಚಟುವಟಿಕೆಗಳು ಅಥವಾ ತೀರ್ಥ ಯಾತ್ರೆಯ ಮೂಲಕ ಪರಮಾತ್ಮವನ್ನು ಸಾಕ್ಷಾತ್ಕರಿಸಲಾಗದು ಆದರೆ ಭಕ್ತರು ಕಾಯಕದ ಮೂಲಕ ದೇವರ ಸಾಕ್ಷಾತ್ಕಾರವನ್ನು ಸಿದ್ಧಿಸಬಹುದು. ಈ ಕೆಳಗಿನ ವಚನಗಳಲ್ಲಿ ಕಾಯಕದ ಸಿದ್ಧಾಂತದ ತಿರುಳನ್ನು ಹೇಳಲಾಗಿದೆ.

ಗುರುವಾದರು ಕಾಯಕದಿಂದಲೇ ಜೀವನ ಮುಕ್ತಿ
ಲಿಂಗವಾದರೂ ಕಾಯಕದಿಂದಲೇ ಶಿಲೆಯ
ಕುರುಹು ಹರಿಯುವುದು
ಜಂಗಮವಾದರೂ ಕಾಯಕದಿಂದಲೇ ತನ್ನ
ವೇಷದ ಪಾಶ ಹರಿಯುವುದು

ವೀರಶೈವ ಧರ್ಮವು ಕಾಯಕವೆಂದರೆ ದೇವರೆಡೆ ಹೋಗುವ ಮಾರ್ಗ ಮತ್ತು ಆತ್ಮಸ್ವರೂಪ ಸಾಕ್ಷಾತ್ಕಾರವೆನಿಸುವುದು. ಮಾನವನ ಜನ್ಮವೆಂದರೆ ಪರಮಾತ್ಮನು ದಯಪಾಲಿಸಿದ ಕಾಣಿಕೆ, ಅದನ್ನು ಮಾನವನ ಮತ್ತು ಸಮಾಜ ಸೇವೆಗಾಗಿ ಇರುವ ಚಟುವಟಿಕೆಗಳಲ್ಲಿ ತೊಡಗಿಸಬೇಕಾಗುವುದು. ಕಾಯಕವಲ್ಲದ ಜೀವನವೆಂದರೆ ಸಾವು. ಈ ತೆರನಾಗಿ ಕಾಯಕವೆಂದರೆ ಆಧ್ಯಾತ್ಮಿಕ ಮತ್ತು ಐಹಿಕಗಳಿಂದ ಮೇಳವಸಿದ ಜೀವನ.

ಸಂಸ್ಕಾರಗಳು :

ಪುರುಷಾರ್ಥಗಳು ಜೀವನದ ಗುರಿಗಳಾದರೆ, ಸಂಸ್ಕಾರಗಳು ಗುರಿಗಳನ್ನು ಸಾಂಸ್ಥಿಕ ಯಂತ್ರಗಳ (Institutional) ಮೂಲಕ ಕಾರ್ಯಗತ ಮಾಡುವ ವಿಧಿವಿಧಾನಗಳು. ಅವು ಮನುಷ್ಯನ ದೇಹ, ಮನಸ್ಸು ಮತ್ತು ಆತ್ಮವನ್ನು ಶುದ್ಧೀಕರಿಸಿ ಕಾಯಕ ಸಿದ್ಧಾಂತದ ತತ್ವ ಹಾಗೂ ಮೌಲ್ಯಗಳನ್ನು ಮೈಗೂಡಿಸುತ್ತವೆ. ಜೀವನವನ್ನು ಶುದ್ಧೀಕರಿಸಲು ವೈದಿಕದ ಧರ್ಮ ಅಳವಡಿಸಿದ ಮಾಟ-ಮಂತ್ರಗಳ ಮಾರ್ಗಗಳನ್ನು ವೀರಶೈವ ಧರ್ಮ ಸಂಪೂರ್ಣ ಧಿಕ್ಕರಿಸಿ, ಲೌಕಿಕ (Non Religious/Secular) ಮಾರ್ಗವಾದ ಕಾಯಕ ಸಿದ್ಧಾಂತವನ್ನು ಅಳವಡಿಸಿತು. ತಾಮಸಿಕ ಪ್ರವೃತ್ತಿಗಳನ್ನು ಸಂಪೂರ್ಣವಾಗಿ ಸಾತ್ವಿಕ ಪ್ರವೃತ್ತಿಗಳನ್ನಾಗಿ ಕಾಯಕ ಸಿದ್ಧಾಂತ ಪರಿವರ್ತಿತಗೊಳ್ಳುತ್ತದೆ. ಪರಮಾತ್ಮನ ಕೃಪೆಗೆ ಪಾತ್ರರಾಗಲು ಕೇವಲ ಕಾಯಕದಿಂದ ಸಾಧ್ಯವೆಂದು ವೀರಶೈವರು ಬಲವಾಗಿ ನಂಬಿದ್ದಾರೆ.

ದೇಹ, ಮನಸ್ಸು ಮತ್ತು ಆತ್ಮವನ್ನು ದುಡಿಮೆಯ ಮೂಲಕ ಪರಮಾತ್ಮನ ಸೇವೆಯಲ್ಲಿ ತೊಡಗಿಸಿರುವುದರಿಂದ ಸಾತ್ವಿಕ ಗುಣಗಳ ಉದ್ಭವವಾಗುತ್ತವೆ. ಶುದ್ಧ ಕಾಯಕದಲ್ಲಿ ತೊಡಗಿಸುವುದರಿಂದ ಸ್ವರ್ಗದಲ್ಲಿ ಸ್ಥಾನ ಲಭಿಸುತ್ತದೆ. ನಿಜವಾದ ಜೀವನದ ಅರ್ಥವನ್ನು ಕಾಯಕದಿಂದ ಅನುಭವಿಸಲು ಸಾಧ್ಯ. ಕಾಯಕ ಸಿದ್ಧಾಂತವಾದ ಆಧ್ಯಾತ್ಮಿಕ (Spiritual) ಮತ್ತು ಲೌಕಿಕ (Secular) ಈ ಎರಡು ತತ್ವಗಳನ್ನು ಒಳಗೊಂಡಿದೆ.

ಕಾಯಕದ ಲಕ್ಷಣಗಳು

ಕಾಯಕ ಪದದ ಅರ್ಥವನ್ನು ವಿವಿಧ ಲಕ್ಷಣಗಳಲ್ಲಿ ವಿಶ್ಲೇಷಿಸಿದಾಗ ಕೆಳಗಿನ ಲಕ್ಷಣಗಳು ಕಂಡುಬರುತ್ತವೆ.

೧. ಚೈತನ್ಯ ಶಕ್ತಿಯ ವ್ಯಯ :

ಕಾಯಕದ ಮೂಲವೆಂದರೆ ಚೈತನ್ಯ ಶಕ್ತಿಯ ವಿನಿಯೋಗವಾದ ಹಾಗೆ ಪ್ರತಿಯೊಬ್ಬ ಸ್ತ್ರೀ ಮತ್ತು ಪುರುಷರು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಚಟುವಟಿಕೆಗಳಲ್ಲಿ ಕಾರ್ಯರೂಪಕ್ಕೆ ತರುವುದಾಗಿದೆ. ಮೂಲಭೂತವಾಗಿ ಹೇಳಬೇಕಾದರೆ ಕಾಯಕ ಪದದ ಅರ್ಥ ಆಲಸ್ಯತನದ ವಿರುದ್ಧ ವೈರಾಗ್ಯ ಪ್ರವೃತ್ತಿಗಳ ವಿರುದ್ಧವಾಗಿದೆ. ಅದರ ಅರ್ಥವೆಂದರೆ ಸದಾ ಚಟುವಟಿಕೆಯ ಕಾರ್ಯಗಳಲ್ಲಿ ಮಗ್ನರಾಗುವುದು. ಚಟುವಟಿಕೆಯೇ ಜೀವನ, ಸೋಮಾರಿತನವೇ ಮರಣ (ಶ್ರಮವೇ ಜೀವನ, ಆಲಸ್ಯವೇ ಮರಣ).

ಅದು ಚಟುವಟಿಕೆ ಮತ್ತು ಆಲಸ್ಯತನದ ತತ್ವದ ಘಟನಾ ಪ್ರವಾಹವೆಂದೆನಿಸಿವೆ. ಆರೋಗ್ಯ, ಸಂಪತ್ತು ಪ್ರಗತಿ ಅಭಿವೃದ್ಧಿ ಸಮಸ್ಯೆಗಳೆಲ್ಲ ಈ ಚಟುವಟಿಕೆ ಮತ್ತು ಆಲಸ್ಯತನದ ತತ್ವದ ಘಟನಾ ಪ್ರವಾಹಕ್ಕೆ ಸಂಬಂಧಿಸಿದೆ. (Activity-Idleness Continum) ಸೋಮಾರಿತನವೆಂದರೆ ವ್ಯಕ್ತಿಯ ಮತ್ತು ಸಮಾಜದ ಕಡು ವೈರಿಯೆಂದು ವೀರಶೈವಧರ್ಮ ಪರಿಗಣಿಸುತ್ತದೆ.

೨. ಫಲದಾಯಕ ಮತ್ತು ಪ್ರಯೋಜನಕಾರಕ

ಚೈತನ್ಯ ಶಕ್ತಿಯನ್ನು ಉಪಯೋಗಿಸುವುದು ಕಾಯಕದ ಮೂಲ ತತ್ವವಾದರೂ ಸಹ ಅದು ಸಾಕಷ್ಟು ಎನಿಸುವುದಿಲ್ಲ. ಚೈತನ್ಯ ಶಕ್ತಿಯನ್ನು ವಿನಿಯೋಗಿಸಿದಾಗ ಕಾಯಕಕ್ಕೆ ಫಲದಾಯಕ ಮತ್ತು ಪ್ರಯೋಜನಕಾರಕ ಎಂದು ವಿಶಿಷ್ಟ ಅರ್ಥ ಬರುತ್ತದೆ. ಕಾಯಕ ಪದಕ್ಕೆ ಅರ್ಥ ಅನ್ವಯಿಸಬೇಕಾದರೆ ಪರೋಕ್ಷವಾಗಿ ಮತ್ತು ಅಪರೋಕ್ಷವಾಗಿ ಆರ್ಥಿಕ ಮತ್ತು

(.... ೩೪ನೇ ಪುಟಕ್ಕೆ)

ಅಣ್ಣ ಬಸವಣ್ಣನವರಿಗೊಂದು ಬಹಿರಂಗ ಪತ್ರ

○ ಶ್ರೀ ಮುರುಘರಾಜೇಂದ್ರ ಶರಣರು

ಅಣ್ಣಾ ನೀನು ಕುಶಲವೇ? ನಿನ್ನ ಕರುಣೆಯಿಂದ ನಾನು ಕುಶಲವಾಗಿದ್ದೇನೆ. ನಿನಗೊಂದು ಅವಸರದ ಓಲೆಯನ್ನು ಬರೆಯುತ್ತಿದ್ದೇನೆ. ನನಗೇನೂ ಅವಸರವಿದೆ! ಆದರೆ ಕೆಲವರಿಗೆ ಅದು ಮುಜುಗರ ತಂದಿದೆ. ಆಹಾರವು ಅಂತರವನ್ನು ನಿರ್ಮಿಸಬಾರದು ಎಂಬುದೇ ನನ್ನ ಕಾಳಜಿ. ಅಲ್ಪಸಂಖ್ಯಾತ ಬಂಧುಗಳನ್ನು ಕರೆದುಕೊಂಡು ಪ್ರಸಾದವನ್ನು ಆಸ್ವಾದಿಸಿದರೆ ಬಲು ಖುಷಿ. ಅದು ಸಹಭೋಜನ; ಸಹಜೀವನ ಅನಿಸಿಕೊಳ್ಳುತ್ತದೆ.

ನಮ್ಮ ಭೋಜನಕ್ಕೆ ಅಲ್ಪ ಸಂಖ್ಯಾತ ಅಣ್ಣಗಳನ್ನು ಕರೆಯುವುದನ್ನೇ ನಿಲ್ಲಿಸಿದ್ದೇವೆ. ಅಂದು ನೀನು ಚನ್ನಯ್ಯನ ಅಂಬಲಿಯ ಪ್ರಸಾದವನ್ನು ಮೆಲಿದೆ. ಡೋಹರ ಕಕ್ಕಯ್ಯನ ಮಿಕ್ಕ ಪ್ರಸಾದಕ್ಕಾಗಿ ಅದೆಷ್ಟು ಹಾತೊರೆದೆ! ನಾಗೀದೇವನ ಮನೆಯಲ್ಲಿ ಪ್ರಸಾದ ಸವಿದು, ಅಂತರ ವನ್ನು ತೊಡೆದು ಹಾಕಿದೆ. ಮೋಳಿಗೆ ಮಾರಯ್ಯನವರ ಮನೆಗೆ ಮಾರುವೇಷದಲ್ಲಿ ಹೋಗಿ ಅವರ ವಿಶೇಷ ಪ್ರಸಾದವನ್ನು ಸವಿದು ಬಂದು, ಕುಲಮದವನ್ನು ಕಳೆದುಕೊಂಡೆಯೆಂದು ಹೇಳುವುದನ್ನು ಕೇಳಿದ್ದೇನೆ. ನಾವಿಂದು ಅವರನ್ನು ದುಡಿಸಿಕೊಂಡು ದೂರ ಇಟ್ಟಿದ್ದೇವಲ್ಲ! ಈ ಸ್ಥಿತಿಯನ್ನು ಕಂಡು ನಿನ್ನ ಹೃದಯ ಅದೆಷ್ಟು ನೊಂದಿದೆಯೋ! ದುಡಿಮೆಗೆ ಅವರು ಬೇಕೇ ಬೇಕು; ಧರ್ಮದಿಂದ ಅವರು ದೂರವಿರಬೇಕು. ಅಪ್ಪಾ! ನಿನಗಾಗುತ್ತಿರುವ ವೇದನೆಯನ್ನು ಯಾರು ಅರ್ಥ ಮಾಡಿಕೊಳ್ಳುವರು?

ನಾವೂ, ನಿನ್ನ ಹೆಸರಲ್ಲಿ ಸ್ಥಾವರ ನಿರ್ಮಿಸಿ, ಪುತ್ಥಳಿ ಸ್ಥಾಪಿಸಿ, ವಚನ-ಭಜನೆ ನೆರವೇರಿಸಿ, ನಿನ್ನ ಜಯಂತಿಯಂದು ಒಂದಷ್ಟು ಭಾಷಣ ಬಿಗಿದು, ಬಿಗಿಸಿ ಖುಷಿಪಡುವವರು. ನಿನ್ನ ಒಡನಾಡಿಗಳಾದ ದೀನದಲಿತ ದುಃಖಿತರ ನೋವು ನಮಗೆಲ್ಲಿ ಅರ್ಥವಾಗುವುದು! ನೀನು ಅವರಿಗಾಗಿಯೇ ಹೊಸಧರ್ಮವನ್ನು ಕಟ್ಟಿಕೊಟ್ಟೆ. ಅವರೇ ನಿಮ್ಮ ಕ್ರಾಂತಿಯ ಕೇಂದ್ರಬಿಂದು ಆಗಿದ್ದರು. ಹುಳ ಹುತ್ತ ಕಟ್ಟಿತು. ಹಾವು ಬಂದು ಹೊಕ್ಕಿತು ಎನ್ನುವಂತಾಗಿದೆ ಸದ್ಯದ ಸ್ಥಿತಿ.

ಅಣ್ಣಾ! ಮನೆ-ಮಠಗಳಲ್ಲಿ ಬೆಕ್ಕು ನಾಯಿಗಳನ್ನು ನಾವು ಪ್ರೀತಿಯಿಂದ ಸಾಕುತ್ತೇವೆ. ನಿನ್ನ ಪ್ರಾಣಿದಯೆಯನ್ನು ಹೀಗೆ ಮೆರೆಸುತ್ತಿದ್ದೇವೆ. ಇವುಗಳನ್ನು ನಮ್ಮ ಪಲ್ಲಂಗದ ಮೇಲೆ ಮಲಗಿಸಿಕೊಳ್ಳುತ್ತೇವೆ. ಆಟವಾಡುತ್ತೇವೆ; ಕಾಲ ಕಳೆಯುತ್ತೇವೆ. ಮಠದೊಳಗಿದ್ದು ಹಾಲು ಕುಡಿಯುತ್ತ ಇಲಿ ಕಂಡಾಕ್ಷಣ ಜಿಗಿದು, ಅದನ್ನು ಬಾಯಲ್ಲಿ ಜಗಿದುಬಿಡುವ ಬೆಕ್ಕು ಮತ್ತು ನಮ್ಮ ನಲ್ಮೆಗೆ ಒಳಗಾಗಿ ಮುದ್ದಿನ 'ಟಾಮಿ'ಯೆಂದು ಕರೆಯಿಸಿಕೊಳ್ಳುವ, ಮಾಂಸದ ವಾಸನೆ ಕಂಡುಬಂದ ಕಡೆಗೆ ಕೂಡಲೇ ಓಡುವ ನಾಯಿಗೆ ನಮ್ಮಲ್ಲಿ ಯಾವ ನಿರ್ಬಂಧಗಳಿಲ್ಲ. ಅವು ಸರ್ವತಂತ್ರ ಸ್ವತಂತ್ರ; ಮಾಂಸಾಹಾರಿಗಳು ಬೇರೆ. ನಮ್ಮ ಪಾದಕ್ಕೆ ಚಪ್ಪಲಿ ಒದಗಿಸುವ, ಹಗ್ಗ ನೇಯುವ, ಕೂದಲು ತೆಗೆವ, ಕಸಗುಡಿಸುವ, ಭಂಗಿ ಬಳಿಯುವ, ವಾದ್ಯ ಮೊಳಗಿಸುವ, ಬುಟ್ಟಿ ಹೆಣೆಯುವ, ಮಾಲೆ ಮಾಡುವ, ಬಟ್ಟೆ ತೊಳೆಯುವ, ಕೂಲಿಗೆ ಬರುವ, ಇತ್ಯಾದಿ ಕಾಯಕದವರನ್ನು ಗೌರವಿಸದ ಕಠಿಣ ಹೃದಯದವರು ನಾವಣ್ಣ. ಅವರ ಸೇವೆ ಬಯಸುತ್ತೇವೆ; ಅವರನ್ನು ಮಾತ್ರ ದೂರವಿಡುತ್ತ ಬಂದಿದ್ದೇವೆ. ಬಸವಣ್ಣಾ! ನೀನೇನೋ ಮಹಾಮನೆಗೆ ಅವರನ್ನು ಬಿಟ್ಟುಕೊಂಡೆ. ಅವರ ಕಾಯಕಗಳನ್ನು ಗೌರವಿಸಿದೆ. ಅಪ್ಪ, ಬೊಪ್ಪ ಎಂದು ಕರೆದೆ; ಅವರೊಂದಿಗೆ ಹೆಚ್ಚಾಗಿ ಗುರುತಿಸಿಕೊಂಡೆ. ಅವರನ್ನು ಹತ್ತಿರ ಕರೆದುಕೊಂಡು, ಪರಿವರ್ತನೆಗೆ ಅವಕಾಶ ಮಾಡಿಕೊಟ್ಟೆ. ನಾವೋ ಅವರನ್ನು ದೂರವಿಡುವುದರಲ್ಲೆ ಖುಷಿ ಕಾಣುತ್ತೇವೆ; ಸಂತಸಪಡುತ್ತೇವೆ. ಅವರು ಪರಿವರ್ತನೆ ಆಗಿ ನಮ್ಮೊಳಗೆ

> ಬೈದವರೆನ್ನ ಬಂಧುಗಳೆನ್ನುತ್ತೇನೆ,
> ನಿಂದೆ ನೋವುಗಳನ್ನು ಸಹಿಸಿಕೊಳ್ಳುತ್ತೇನೆ.
> ನಿನ್ನ ಸಹನೆ ನನಗೆ ಸ್ಫೂರ್ತಿ.

ಬರಲೆಂದು ನಮಗೆ ನಾವೇ ಲಕ್ಷ್ಮಣ ರೇಖೆಯನ್ನು ವಿಧಿಸಿದ್ದೇವೆ. ಈ ನಮ್ಮ ತಪ್ಪನ್ನು ಮನ್ನಿಸುವೆಯಾ ತಂದೆ!

ನಮ್ಮ ಹೃದಯಗಳೆಲ್ಲ ಕಲ್ಲಾಗಿವೆ. ಕರಗಿಸು. ಮತ್ತೆ ಮತ್ತೆ ಕರಗಿಸು. ಇನ್ನಾದರು ನಮ್ಮ ಹೃದಯ ಕರಗಲಿ; ಊರ ಹೊರಗಿನ ಶರಣರ ನೋವಿಗೆ ಮರುಗುವಂಥಾಗಲಿ. ನಿನ್ನ ವಚನಾಂಕಿತವನ್ನೇ ತಿದ್ದಲಾಯಿತು. ಅದನ್ನಾರು ತಡೆಯಲಿಲ್ಲ; ಹೋರಾಟ ಮಾಡಲೇ ಇಲ್ಲ. ನಿನ್ನ ಹೆಸರಲ್ಲಿ 'ಬಸವಶ್ರೀ' ಪ್ರಶಸ್ತಿಯನ್ನು ಕ್ರಾಂತಿಕವಿ ಗದ್ದರ್‌ಗೆ ನೀಡಿ ಗೌರವಿಸಿ ಸನ್ಮಾನಿಸಿದಾಗ, ಕೆಲವರು ನನ್ನ ಪ್ರತಿಕೃತಿಯನ್ನು ಸುಟ್ಟರು. ಆಗ ಮಾದರ ಚೆನ್ನಯ್ಯ, ಸಮಾಜದ ಶರಣರು, ನಿನಗೆ ಅತ್ಯಂತ ನಿಕಟರಾದವರು ಪ್ರತಿಭಟಿಸಿ, ಬಸವಪ್ರಜ್ಞೆಯನ್ನು ಮೆರೆದರು, ತಂದೆ.

ಮೊನ್ನೆ ಕೂಡಲ ಸಂಗಮದಲ್ಲಿ ನಿನ್ನ ಹೆಸರಲ್ಲಿ ಸಮ್ಮೇಳನ ಜರುಗಿತು. ಕೆಲ ಮಠಾಧೀಶರು ಆ ಸಮಾವೇಶಕ್ಕೆ ಬಹಿಷ್ಕಾರ ಹಾಕಿದರೂ ತುಂಬಾ ಯಶಸ್ವಿ ಆಯಿತು. ಕೊನೆಯ ದಿನ ಎಂಟು ನಿರ್ಣಯಗಳನ್ನು ಮಂಡಿಸಲಾಯಿತು. ಅದರಲ್ಲಿ ಕೊನೆಯ ನಿರ್ಣಯವು, ಆಹಾರಕ್ಕೆ ಸಂಬಂಧಿಸಿದ್ದಾಗಿತ್ತು. ಲಿಂಗಕಟ್ಟಿಕೊಂಡವರೆಲ್ಲ ಅಭಕ್ಷ ಭೋಜನ ಮಾಡಬೇಕೆಂದು ಹೇಳಲಿಲ್ಲ. ಲಿಂಗಾಯತೇತರರು ನಿನ್ನ ಧರ್ಮಕ್ಕೆ ಬರಲು ಅವಕಾಶ ಕೊಡಿರೆಂದು ಲಿಂಗಧಾರಿಗಳಿಗೆ ಕೇಳಿಕೊಂಡೆನು. ನೀನಾದರು, ಮೊದಲು ನಿಮ್ಮ ವರ್ಗದವರನ್ನು ಹತ್ತಿರ ಕರೆದುಕೊಂಡು, ನಂತರ ಶರಣರಾಗಲು ಅನುವು ಮಾಡಿಕೊಟ್ಟೆ. ಲಿಂಗ ಸಿಗಲಿಲ್ಲವೆಂದು, ದಾರಿಯಲ್ಲಿ ಬಿದ್ದಿದ್ದ ಕಲ್ಲನ್ನು ಕಟ್ಟಿಕೊಂಡು ಬಂದಿದ್ದ ಒಬ್ಬ ಶರಣ. ಇಷ್ಟಲಿಂಗ ಕಟ್ಟಿಕೊಂಡ ಕೆಲವರ ಹೃದಯಗಳಿಂದು ಕಲ್ಲಾಗಿವೆ; ಆದರೆ ಕಲ್ಲಿನಲ್ಲಿ ಲಿಂಗವನ್ನು ಕಂಡ ಆ ಶರಣನನ್ನು ಕಂಡ ನಿನ್ನಲ್ಲಿ ಅದೆಂಥ ಭಕ್ತಿಭಾವ. ಅದಕ್ಕೇ ನೀವು ಮಹಾಶರಣರು; ನಾವು ಮಾನವರು. ನಿನ್ನ ಮಹಾಮನೆಗೆ ಬಂದ ಕಳ್ಳ, ಅವನಲ್ಲಿ ನೀನು ಸಂಗಮ ರೂಪಿ ಜಂಗಮನನ್ನು ಕಂಡೆ. ಬರುವ ಮುನ್ನ ಕಳ್ಳ; ನಿನ್ನ ಸಂಪರ್ಕ-ಪರಿಸರದಿಂದಾಗಿ ಆತ ಮುಂದೆ ಶರಣನಾದನೆಂದು ಹೇಳುತ್ತಾರೆ.

ನಾನಾದರೋ, ಮಾಂಸಾಹಾರದ ಭೋಜನ ಏರ್ಪಡಿಸಲಿಲ್ಲ. ಲಿಂಗಾಂಗಿಗಳೆಲ್ಲ ಮಾಂಸಭಕ್ಷಕರೆಂದು ಕರೆಯಲಿಲ್ಲ. ಮಾಂಸಾಹಾರಿಗಳಿಗೂ ಅವಕಾಶವಿರಲಿ. ಬಂದ ನಂತರ ಪರಿವರ್ತನೆ ಆಗಬಹುದೆಂದೆ. ಅಷ್ಟಕ್ಕೆ ನನ್ನ ಮೇಲೆ ಮುಗಿಬಿದ್ದರು. ನಿತ್ಯವೂ ಟೀಕೆಗಳ ಸುರಿಮಳೆ. ನೀನಾದರು ಲಿಂಗಿಗಳಲ್ಲಿ ಮಾತ್ರ ಕೂಡಲಸಂಗಮನನ್ನು ಕಾಣಲಿಲ್ಲ; ನಿನ್ನ ದೃಷ್ಟಿಯಲ್ಲಿ ಎಲ್ಲರು ಲಿಂಗಿಗಳೇ. ಈ ಭಾವ ಬಂದವರೇ ಶರಣರು. ಕೆಲವರು ನನಗೆ ಪೀಠ ತ್ಯಜಿಸಲು ಫರ್ಮಾನ್ ಹೊರಡಿಸಿದ್ದಾರೆ.

ಹೇಳಿಕೆಯನ್ನು ವಾಪಾಸ್ ತೆಗೆದುಕೊಳ್ಳದಿದ್ದರೆ ನಾವು ನಿನ್ನ ಸಂಗಡ ಬರುವುದಿಲ್ಲೆಂದು ಕೆಲವರು ಬೆದರಿಸುತ್ತಿದ್ದಾರೆ. 'ಸಸ್ಯಾಹಾರಿಗಳಿಗೆ ಮಾತ್ರ ಬಸವ ಧರ್ಮದಲ್ಲಿ ಅವಕಾಶ ಎಂದು ಹೇಳದಿದ್ದರೆ, ನಿನ್ನ ದಾರಿ ನಿನಗೆ; ನಮ್ಮ ದಾರಿ ನಮಗೆ' ಎಂದು ನಿನ್ನನುಯಾಯಿಗಳೆಂದು ಬೀಗುವವರು ನನಗೆ ಪ್ರತಿಭಟನೆ ಮಾಡಲು ಹೊರಟಿದ್ದಾರೆ. ಈ ನಿಂದೆ, ಪ್ರತಿಭಟನೆ ಮತ್ತು ಬಹಿಷ್ಕಾರವನ್ನು ನೀನಂದು ಅನುಭವಿಸಿದೆಯಲ್ಲ. ನಿನಗೆ ಅಂದು ಜಾತಿವಾದಿಗಳು ಗಡಿಪಾರು ಶಿಕ್ಷೆ ನೀಡಿದರು. ಆಗಲೂ ನೀನು ಸಹನೆಯನ್ನು ತೋರಿ ಅದೆಲ್ಲವನ್ನು ಲಿಂಗಕ್ಕರ್ಪಿಸಿ, ನಿರ್ಲಿಪ್ತನಾದೆ. ಬಹಿಷ್ಕಾರ ತಿರಸ್ಕಾರಗಳು ಶರಣರಿಗೆ ಸಹಜ.

ನಿನ್ನ ಸಹನೆ ನನಗೆ ಸ್ಫೂರ್ತಿ. ಸಹಿಸಿಕೊಳ್ಳುತ್ತೇನೆ. ನಿನ್ನನ್ನು ಅರ್ಥಮಾಡಿಕೊಳ್ಳಲಾರದವರು ಕೊಡುವ ಎಲ್ಲ ಟೀಕೆ-ಟಿಪ್ಪಣಿಗಳನ್ನು, ನಿಂದೆ ನೋವುಗಳನ್ನು ಸಹಿಸಿಕೊಳ್ಳುತ್ತೇನೆ. ತಿರಸ್ಕಾರವನ್ನು ಅನುಭವಿಸುತ್ತೇನೆ. ಬಹಿಷ್ಕಾರವನ್ನು ಸ್ವೀಕರಿಸಲು ಸಿದ್ಧನಿದ್ದೇನೆ. ಬಡಿದರೆ ಬಡಿಸಿಕೊಳ್ಳುತ್ತೇನೆ. ಬೈದವರೆನ್ನ ಬಂಧುಗಳೆಂದು ಭಾವಿಸುತ್ತೇನೆ. ಪ್ರತೀಕಾರ ಮನೋಭಾವ ನನ್ನಲ್ಲಿಲ್ಲ, ಇದೆಲ್ಲ ನಿನಗಾಗಿ; ನಿನ್ನ ಶರಣರಿಗಾಗಿ. ಮತ್ತೆ ಮತ್ತೆ ಸಹಿಸಿಕೊಂಡು, ನಿಮ್ಮ ತತ್ತ್ವವನ್ನು ಎತ್ತಿ ಹಿಡಿಯುತ್ತೇನೆ.

ನಾನೇನಾದರು ತಪ್ಪು ಮಾಡಿದ್ದರೆ ಕ್ಷಮಿಸು, ನನ್ನವರ ತಪ್ಪುಗಳನ್ನು ಮನ್ನಿಸು. ನಮಗೆಲ್ಲ ಸು-ಮತಿಯನ್ನು ನೀಡಿ ಉದ್ಧರಿಸು. ಪತ್ರ ದೀರ್ಘವಾಯಿತೆಂದು ಕಾಣುತ್ತದೆ. ಮುಂದಿನ ಪತ್ರದಲ್ಲಿ ಹೆಚ್ಚಿನ ವಿಚಾರ. □



ವಿಶ್ಲೇಷಣೆ

ಭಾರತದಂತಹ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಪೆಡಂಭೂತವಾಗಿದೆ. ಕೃಷಿ ಹಾಗೂ ಕೃಷಿಯೇತರ ಗ್ರಾಮೀಣ ಕಸುಬುಗಳಿಗೆ ಹೊಸ ಆಯಾಮದ ಅಗತ್ಯ ಎಂದಿಗಿಂತ ಇಂದು ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಕೇಂದ್ರದ ಹಣಕಾಸು ಸಚಿವ ಪಿ. ಚಿದಂಬರಂ ಹೇಳಿದಂತೆ 'ಭಾರತ ಎಲ್ಲರಿಗೂ ಪ್ರಕಾಶಿಸಬೇಕು, ಸದ್ಯದ ಪರಿಸ್ಥಿತಿಯಲ್ಲಿ ಭಾರತ ಪ್ರಕಾಶಿಸುತ್ತಿದೆ ಎಂದರೆ ಬಡವರನ್ನು ಗೇಲಿ ಮಾಡಿದಂತಾಗುತ್ತದೆ' ಎನ್ನುವ ಮಾತು ಅಕ್ಷರಶಃ ಸತ್ಯ. ಈ ಎಲ್ಲ ವಾಸ್ತವದ ನಡುವೆ 'ಹಿತಾನುಭವ'ದ ವಾತಾವರಣವನ್ನು ಸೃಷ್ಟಿ ಮಾಡುವ ಜಾಣ್ಮೆ ಹಾಗೂ ನೈತಿಕ ಜವಾಬ್ದಾರಿ ಯುಪಿಎ ಸರ್ಕಾರದ ಮೇಲಿದೆ.

○ ಸುಜಾತ ಕುಮಟಾ

ಸಾಮಾನ್ಯ ಕನಿಷ್ಠ ಕಾರ್ಯಕ್ರಮ :

ಬದಲಾಗಬೇಕಾದ ದೃಷ್ಟಿಕೋನ

ಅಂತೂ ಇಂತೂ ಚುನಾವಣೆ ಕಳೆಯಿತು. ಭಾರತದ ಮತದಾರ ಯಾವುದೇ ಪಕ್ಷಕ್ಕೂ ಸಂಪೂರ್ಣ ಬಹುಮತ ನೀಡಿಲ್ಲ. ಆದರೆ ದೇಶದ ಸೌಹಾರ್ದತೆ ಹಾಗೂ ಏಕತೆಯನ್ನು ಮಣ್ಣುಪಾಲಾಗಿಸಿ ದೇಶದ ಬಹುಮುಖಿ ಸಂಸ್ಕೃತಿಯ ಪರಂಪರೆಯನ್ನು ನಾಶಮಾಡಿ ಏಕಮುಖಿ ಸಂಸ್ಕೃತಿಯನ್ನು ವಿಸ್ತರಿಸಬೇಕೆಂದಿದ್ದ ಹಾಗೂ ಆ ಮೂಲಕ ತಮ್ಮ ಪ್ರಭುತ್ವವನ್ನು ನಿರಂಕುಶವಾಗಿ ಮುಂದುವರೆಸಬೇಕೆಂದಿದ್ದ ಬಿಜೆಪಿ ಬಟರಂಗಿಗಳು ಹಾಗೂ ಶಿವಸೇನೆಯಂತಹ ಶಕ್ತಿಗಳು ನಿಜವಾಗಿ ಭಾರತದ ಬಹುಸಂಖ್ಯಾತ ಮತದಾರರು ಏನನ್ನು ಬಯಸುತ್ತಾರೆ ಎಂಬುದನ್ನು ಗಂಭೀರವಾಗಿ ಮನಗಾಣಬೇಕಿದೆ ಎಂಬುದನ್ನು ತಿಳಿಸಿದ್ದಾರೆ.

ಹಾಗೆಯೇ ಎನ್‌ಡಿಎಗೆ ಬೆಂಬಲ ನೀಡಿದ ತೆಲುಗು ದೇಶಂ ಪಕ್ಷ ಕೂಡ ಬಿಜೆಪಿ ಮಾದರಿಯ 'ಭಾರತ ಪ್ರಕಾಶಿಸುತ್ತಿದೆ' ಘೋಷಣೆಯ ರೀತಿಯಲ್ಲಿಯೇ ತಮ್ಮ ರಾಜ್ಯಭಾರವನ್ನು ನಡೆಸಿದರು. ಇವರ ಹೈಟೆಕ್‌ನ ವ್ಯಾಮೋಹ, ಐಟಿಯ ಅತಿ ಬುದ್ಧಿವಂತಿಕೆ ಜನಸಾಮಾನ್ಯರನ್ನು ಬಡರೈತರನ್ನು ಅದೆಷ್ಟು ಕಂಗೆಡಿಸಿತ್ತು ಎನ್ನುವುದಕ್ಕೆ ಈ ಬಾರಿಯ ಚುನಾವಣಾ ಫಲಿತಾಂಶವೇ ಸಾಕ್ಷಿ.

ಹಾಗೆಯೆ ಕರ್ನಾಟಕದ ಮುಖ್ಯಮಂತ್ರಿಗಳೂ ಕೂಡ ಆಂಧ್ರ ಮಾದರಿಯ ಸುಧಾರಣಾ ನೀತಿಯನ್ನೇ ಅನುಸರಿಸಿ ಕೆಲವೊಂದು ಹಂತದಲ್ಲಿ, ಅವರಿಗಿಂತ ಮೇಲ್ಮೆ ಸಾಧಿಸಿ ಮಾಧ್ಯಮಗಳ ಕಣ್ಮಣಿಯಾಗಲು ಸಾಕಷ್ಟು ಪ್ರಯತ್ನ ನಡೆಸಿದರು. ಜೊತೆ ಜೊತೆಗೆ ಬೆಂಗಳೂರನ್ನು ಸಿಂಗಾಪೂರವಾಗಿಸುವ ಕನಸಿಗೆ ಚಾಲನೆ ನೀಡಿದರು. ಆದರೆ ಎಡೆಬಿಡದೆ ಕಾಡಿದ ಮೂರು ವರ್ಷಗಳ ನಿರಂತರ ಬರಗಾಲ ಹಳ್ಳಿಯ ರೈತರನ್ನು, ಕೂಲಿಕಾರರನ್ನು ಕಂಗೆಡಿಸಿತ್ತು. ನ್ಯಾಯ ಬೆಲೆ ದೊರೆಯದೆ ಕಂಗಾಲಾದ ರೈತ ಬೆಳೆದ ಬೆಳೆಗೆ ನ್ಯಾಯವಾದ ಬೆಲೆ ಸಿಗದೆ ತಂದ ಬೆಳೆ, ತರಕಾರಿಗಳನ್ನು ರಸ್ತೆ ಮೇಲೆ ಚೆಲ್ಲಿ ಪ್ರತಿಭಟಿಸಿ ಕಣ್ಣೀರುಗರೆದ. ತೀರದ ಸಾಲದ ಸುಳಿಯಲ್ಲಿ ಸಿಕ್ಕು ಹೊರಕ್ಕೆ ಬರಲಾಗದೆ ಆತ್ಮಹತ್ಯೆಗೆ ಶರಣಾದ. ಹೈಟೆಕ್, ಇನ್‌ಫರ್‌ಮೇಶನ್ ಟೆಕ್ನಾಲಜಿ, ತ್ವರಿತಗತಿಯ ನಗರ ಕೇಂದ್ರಿತ ಅಭಿವೃದ್ಧಿ ಯೋಜನೆಗಳು ಒಂದು ಸರ್ಕಾರದ ಯಶಸ್ಸಿಗೆ ಕಾರಣವಾಗುವುದೆಂಬ ಭ್ರಮೆಯಲ್ಲಿ ಎಲೈಟ್ (Elite) ವರ್ಗದಿಂದ ಬಂದಂತಹ ರಾಜಕಾರಣಿಗಳು ತಮ್ಮ ಅಧಿಕಾರದ ಪಾಲಿಸಿಗಳನ್ನು ರೂಪಿಸಿಕೊಳ್ಳುತ್ತಾರೆ. ಇದು ಸರಿಯಲ್ಲ ಎಂದು ಜನತೆ ತಮ್ಮ ಅಭಿಪ್ರಾಯ ನೀಡಿತು.

ಈ ಬಾರಿಯ ಚುನಾವಣೆ ಮುಖಾಮುಖಿಯಾಗಿಸಿರುವ ಪ್ರಶ್ನೆಗಳಲ್ಲಿ ಪ್ರಮುಖವಾಗಿರುವುದು ಇದೇ ಅಂಶವೆ. ಭಾರತದಂತಹ ಹಳ್ಳಿಗಾಡಿನ ಪ್ರದೇಶಗಳೆ ಹೆಚ್ಚಾಗಿರುವ, ಕೃಷಿಯನ್ನೇ ಆಧಾರವಾಗಿಸಿಕೊಂಡಿರುವ ದೇಶಕ್ಕೆ ಪಾಶ್ಚಾತ್ಯ ಮಾದರಿಯ ಚಿಂತನೆಯನ್ನಾಧರಿಸಿದ ಆರ್ಥಿಕ ಸುಧಾರಣಾ ನೀತಿಗಳು ಎಷ್ಟರ ಮಟ್ಟಿಗೆ ಅನ್ವಯವಾಗುತ್ತದೆ ಎಂಬುದು ಗಂಭೀರವಾದ ಪ್ರಶ್ನೆ. ಉದಾ: ಚುನಾವಣೆಯ ನಂತರ ಬಿಜೆಪಿ ಅಧಿಕಾರ ಪಡೆಯಲು ಸೋತಿತು ಎಂಬ ಕಾರಣಕ್ಕಾಗಿಯೆ ಮುಂಬಯಿ ಇಡಿ ಸ್ಟಾಕ್ ಮಾರ್ಕೆಟ್ ಇನ್ನಿಲ್ಲದಂತೆ ತಲ್ಲಣಿಸಿತು. ಹಾಗಾದರೆ ಒಂದು ಸರ್ಕಾರ ಎಷ್ಟರಮಟ್ಟಿಗೆ ವ್ಯಾಪಾರಿಗಳು, ಹೂಡಿಕೆದಾರರ, ಕೈಗಾರಿಕೋದ್ಯಮಿಗಳ ಹಿತವನ್ನು ಕಾಪಾಡಬೇಕು. ಇದು ಪ್ರಸ್ತುತ ಸರ್ಕಾರದ ಮುಂದಿರುವ ಸವಾಲುಗಳು.

ಇಂದು ಕಾಂಗ್ರೆಸ್ಸಿನ ಬದ್ಧ ದ್ವೇಷಿಯಾಗಿದ್ದ ಕಮ್ಯೂನಿಸ್ಟ್ ಪಕ್ಷ ಸರಕಾರಕ್ಕೆ ತನ್ನ ಸಹಾಯ ಹಸ್ತ ಚಾಚಿದೆ. ಜೊತೆಗೆ ಅಧಿಕಾರದಿಂದ ಹೊರಗುಳಿದಿದೆ. ಅವರೇ ಹೇಳುವಂತೆ ದೇಶದ ಆರ್ಥಿಕ ಸ್ಥಿತಿಯ ಸುಧಾರಣೆಯ ಜೊತೆ ಜೊತೆಗೆ ಕೋಮುಶಕ್ತಿಗಳನ್ನು ದಮನ ಮಾಡುವುದು ಈ ಸರಕಾರದ ಪ್ರಮುಖ ಉದ್ದೇಶ. ಈ ನಿಟ್ಟಿನಲ್ಲಿ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ' ಅಧಿಕಾರ ರೂಢಪಕ್ಷಕ್ಕೆ ಒಂದು ಸೈದ್ಧಾಂತಿಕ ನೆಲೆಗಟ್ಟನ್ನು ನೀಡುವಲ್ಲಿ ಯಶಸ್ವಿಯಾಗಲಿದೆ.

ಹಿಂದಿನ ಸರಕಾರವನ್ನು 'Feel not good' ಎಂದು ತಳ್ಳಿಹಾಕಿದ ಜನತೆ ಈಗ 'Common minimum programme' ನತ್ತ

ಮುಖ ಮಾಡಿದ್ದಾರೆ. ಈ ಕಾರ್ಯಕ್ರಮಗಳ ಸಾರಥ್ಯವನ್ನು ವಹಿಸಿಕೊಂಡಿರುವವರು ಒಂದು ಕಾಲದಲ್ಲಿ ಐಎಂಎಫ್ ನ ಏಜೆಂಟ್ ಹಾಗೂ ಭಾರತದ ಪ್ರಭುತ್ವದ ಮಾರಾಟಗಾರನೆಂದು ಹೆಸರಾದ ಮನಮೋಹನ್ ಸಿಂಗ್. ಮಧ್ಯಮ ವರ್ಗದವರ ಕಣ್ಮಣಿಯಾಗಿ ಮೆರೆದ ಮನಮೋಹನ್‌ಸಿಂಗ್ ಆರ್ಥಿಕ ಸುಧಾರಣೆಯನ್ನು ಸುಧಾರಿಸುವರೆಂಬ ನಂಬಿಕೆ ಹಲವರಲ್ಲಿದೆ.

ಆದರೆ ಆರ್ಥಿಕ ಸುಧಾರಣೆ ನಗರವಾಸಿ ಮಧ್ಯಮ ವರ್ಗದವರಿಗೆ ಮಾತ್ರ ಮೀಸಲಾಗುವುದನ್ನು ತಪ್ಪಿಸಿ, ಹಳ್ಳಿಗಳ ಹಾಗೂ ನಗರದ ಬಡ ಜನರ ಬದುಕನ್ನು ಸುಧಾರಿಸಬೇಕಾಗಿದೆ. ಅದರಲ್ಲಿಯೂ ಮುಖ್ಯವಾಗಿ ನೀರಾವರಿ, ರೈತರಿಗೆ ಸುಲಭ ಸಾಲ, ಬಂಜರು ಭೂಮಿ ಅಭಿವೃದ್ಧಿ, ತಂತ್ರಜ್ಞಾನದ ಬಳಕೆ, ಹಳ್ಳಿಗಳಲ್ಲಿ ರಸ್ತೆಗಳು, ಆಸ್ಪತ್ರೆ, ನೀರು, ಶಿಕ್ಷಣದಂತಹ ವಿಷಯಗಳು ಆದ್ಯತೆ ಪಡೆದುಕೊಳ್ಳಬೇಕಾದ ಕ್ಷೇತ್ರಗಳಾಗಿವೆ.

ಹಾಗೆಯೆ ಜಾಗತೀಕರಣದ ಈ ಸಂದರ್ಭದಲ್ಲಿ ಸಬಲ ರಾಷ್ಟ್ರಗಳು, ದುರ್ಬಲ ರಾಷ್ಟ್ರಗಳಲ್ಲಿ ಬಂಡವಾಳ ಹೂಡಲು ತಾಮುಂದು - ನಾಮುಂದು ಎಂದು ಮುನ್ನುಗ್ಗುತ್ತಿವೆ.

ಇದರ ಪರಿಣಾಮದಿಂದ ಭಾರತದಂತಹ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಪೆಡಂಭೂತವಾಗಿದೆ. ಕೃಷಿ ಹಾಗೂ ಕೃಷಿಯೇತರ ಗ್ರಾಮೀಣ ಕಸುಬುಗಳಿಗೆ ಹೊಸ ಆಯಾಮದ ಅಗತ್ಯ ಎಂದಿಗಿಂತ ಇಂದು ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಕೇಂದ್ರದ ಹಣಕಾಸು ಸಚಿವ ಪಿ. ಚಿದಂಬರಂ ಹೇಳಿದಂತೆ 'ಭಾರತ ಎಲ್ಲರಿಗೂ ಪ್ರಕಾಶಿಸಬೇಕು, ಸದ್ಯದ ಪರಿಸ್ಥಿತಿಯಲ್ಲಿ ಭಾರತ ಪ್ರಕಾಶಿಸುತ್ತಿದೆ ಎಂದರೆ . ಬಡವರನ್ನು ಗೇಲಿ ಮಾಡಿದಂತಾಗುತ್ತದೆ' ಎನ್ನುವ ಮಾತು ಅಕ್ಷರಶಃ ಸತ್ಯ. ಈ ಎಲ್ಲ ವಾಸ್ತವದ ನಡುವೆ 'ಹಿತಾನುಭವ'ದ ವಾತಾವರಣವನ್ನು ಸೃಷ್ಟಿ ಮಾಡುವ ಜಾಣ್ಮೆ ಹಾಗೂ ನೈತಿಕ ಜವಾಬ್ದಾರಿ ಯುಪಿಎ ಸರ್ಕಾರದ ಮೇಲಿದೆ. ಕಷ್ಟಕ್ಕೆ ಸಿಕ್ಕ ಜನ ಕಣ್ಣೀರು ಹರಿಸುತ್ತಿರುವವರೆಗೆ ರಾಜಕೀಯ ಸ್ವಾತಂತ್ರ್ಯ ಅಪೂರ್ಣ ಎಂಬ ಗಾಂಧೀಜಿಯವರ ಮಾತನ್ನು ನೆನೆಯುವ ಡಾ|| ಸಿಂಗ್ 'ಬಡತನ, ಅಜ್ಞಾನ ಮತ್ತು ಶೋಷಣೆ ವಿರುದ್ಧ ಸರ್ಕಾರ ಧರ್ಮಯುದ್ಧವನ್ನು' ಸಾರಲಿದೆ ಎಂದಿದ್ದಾರೆ.

ಈ ನಿಟ್ಟಿನಲ್ಲಿ ಕನಿಷ್ಠ ಕಾರ್ಯಕ್ರಮಗಳ ಪಟ್ಟಿಯಲ್ಲಿ ಆದ್ಯತೆಯಿರುವ ಕ್ಷೇತ್ರಗಳಲ್ಲಿ ಪ್ರಮುಖವಾಗಿ ಕೃಷಿಕ್ಷೇತ್ರ ಬರುತ್ತದೆ. ಕೃಷಿ ಹಾಗೂ ಆಹಾರ ಕ್ಷೇತ್ರವನ್ನು ವಿಶ್ವವಾಣಿಜ್ಯ ಸಂಘಟನೆಯಿಂದ ಸಂಪೂರ್ಣವಾಗಿ ಹೊರಗಿಡಬೇಕು ಎನ್ನುವುದು ರೈತ ಮುಖಂಡರ ಬೇಡಿಕೆಯಾಗಿದೆ. ಜಾಗತೀಕರಣದ ಹೊಡೆತಕ್ಕೆ ಸಿಕ್ಕ ಕೃಷಿಕ್ಷೇತ್ರದ ಉಳಿತಿಗಾಗಿ ತನ್ನ ಬಲವನ್ನು ಪುನರ್ ಪ್ರದರ್ಶನ ಮಾಡಲು ರೈತ ಸಮುದಾಯ ತಣ್ಣಗೆ ತನ್ನಷ್ಟಕ್ಕೆ ತಾನು ಬಲವಾಗಿ ಸಂಘಟನೆಯಾಗುವತ್ತ ಹೆಜ್ಜೆಯಿಡುತ್ತಿದೆ. ಇಂದು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಈ ರೀತಿಯ ಬೆಳವಣಿಗೆ ಕಂಡುಬರುತ್ತಿದೆ. ಮರೆತುಹೋದ ಹಸಿರು ಕ್ರಾಂತಿಯ ಮಂತ್ರವನ್ನು ಇಂದಿನ ಕೇಂದ್ರ ಸರ್ಕಾರ ಪುನರುಚ್ಚರಿಸಬೇಕಾಗಿದೆ.

ಭೂಮಿ, ನೀರು, ಸಂಪನ್ಮೂಲಗಳನ್ನು ಪರಭಾರೆ ಮಾಡುವ ಸರ್ಕಾರಗಳು ರೈತನ ಹಿತರಕ್ಷಣೆ ಮಾಡಲು ಸಾಧ್ಯವಿಲ್ಲ ಎಂಬ ಭಾವನೆ ಮನೆಮಾಡಿದೆ. ಈ ಭಾವನೆಗೆ ಸಮಾಧಾನ ನೀಡಬೇಕಾದ ಕರ್ತವ್ಯ ಸರ್ಕಾರದ ಮೇಲಿದೆ. ಎಡಪಕ್ಷಗಳ ಜಾಗತೀಕರಣದ ವಿರುದ್ಧದ ಧ್ವನಿ ಈ ಸಂದರ್ಭದಲ್ಲಿ ಕಾಂಗ್ರೆಸ್‌ನ ನೀತಿಯೊಂದಿಗೆ ಜುಗಲ್‌ಬಂಧಿಯಾಗಬೇಕಾಗಿದೆ. ಈ ಮಾನವೀಯ ಭಾವನೆಯ ಹಿನ್ನೆಲೆಯಲ್ಲಿ ಯಾವುದೇ ರೀತಿಯ ತಾಂತ್ರಿಕ ಅಡೆ ತಡೆಗಳನ್ನು ಕಡೆಗಣಿಸಿ, ರೈತರ ಆತ್ಮಹತ್ಯಾ ಘಟನೆಗಳ ಸರಮಾಲೆಗೆ ಕೊನೆ ಹಾಡಬೇಕಾಗಿದೆ. ಈ ದಿಸೆಯಲ್ಲಿ ಅಪ್ಪಟ ದೇಶಿ ಕೃಷಿ ನೀತಿಯೆ ರೂಪುಗೊಳ್ಳಬೇಕಾಗಿದೆ. ಡಾ|| ಎಂ. ಎಸ್. ಸ್ವಾಮಿನಾಥನ್ ರವರನ್ನು ರಾಷ್ಟ್ರೀಯ ರೈತ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಭಾರತದಲ್ಲಿ 'ಹಸಿರು ಕ್ರಾಂತಿಯ' ಹರಿಕಾರನೆಂದೇ ಕರೆಯಲ್ಪಡುವ ಇವರು ಕೃಷಿ ಸುಧಾರಣೆ ಪ್ರಕ್ರಿಯೆಯನ್ನು ಯಾವ ವೇಗದಲ್ಲಿ ಕೈಗೊಳ್ಳುತ್ತಾರೆ ಎನ್ನುವುದನ್ನು ಕಾಣಬೇಕಾಗಿದೆ. ಮಾರುಕಟ್ಟೆ ಧೋರಣೆ, ಕೃಷಿ ಉತ್ಪನ್ನಗಳ ಬೆಲೆಯ ಬಗ್ಗೆ ಸ್ಪಷ್ಟ ನೀತಿಯನ್ನು ರೂಪಿಸಬೇಕಾದ ಜವಾಬ್ದಾರಿ ಈ ಆಯೋಗದ ಮೇಲಿದೆ.

ಈ ಎಲ್ಲಾ ಸಂಕ್ಷಿಪ್ತ ಅಂಶಗಳು ಕೃಷಿಗಾದರೆ ಮುಂದಿನ ಆದ್ಯತೆಯಿರುವುದು ಗ್ರಾಮೀಣಾಭಿವೃದ್ಧಿಗೆ. ಸ್ವಾತಂತ್ರ್ಯ ಬಂದ ಇಷ್ಟು ವರ್ಷಗಳ ಬಳಿಕವು ಭಾರತದ ಅನೇಕ ಗ್ರಾಮಾಂತರ ಪ್ರದೇಶಗಳು ಕನಿಷ್ಠ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಸರಿಯಾದ ನೀರಿನ ಸೌಲಭ್ಯ, ರಸ್ತೆ, ಆಸ್ಪತ್ರೆ, ಶಾಲೆಗಳಂಥ ಅಗತ್ಯಗಳಿಂದ ವಂಚಿತವಾಗಿದೆ. ನಮ್ಮದೇ ರಾಜ್ಯದಲ್ಲಿ ಚಾಮರಾಜನಗರ ಜಿಲ್ಲೆಯ ಅನೇಕ ಹಳ್ಳಿಗಳು ಇಂದಿಗೂ ಇಂತಹ ಸೌಲಭ್ಯಗಳಿಂದ ದೂರ ಉಳಿದಿದೆ. ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ ಇದಕ್ಕಿಂತ ನಾಚಿಕೆಗೇಡಿನ ವಿಷಯ ಇನ್ನೊಂದಿಲ್ಲ. ಹಳ್ಳಿಗಳ ಸುಧಾರಣೆಯಾಗಿದೆ, ಭಾರತ ಅಭಿವೃದ್ಧಿ ಹೊಂದುತ್ತಿದೆ ಎನ್ನುವ ಮಾತು ಹಾಸ್ಯಾಸ್ಪದ.

> **ನಿರುದ್ಯೋಗ ಸಮಸ್ಯೆ ಉಲ್ಬಣಿಸಿರುವ ಈ ದೇಶದಲ್ಲಿ ಉದ್ಯೋಗ ಸೃಷ್ಟಿ ಒಂದು ಸವಾಲು. ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ಉದ್ಯೋಗ ಎನ್ನುವುದು ಕೇವಲ ಕನಸಿನ ಗಂಟಾಗಿದೆ. ಉಳ್ಳವರು ತಮ್ಮ ಮಕ್ಕಳಿಗೆ ತಾಂತ್ರಿಕ ವಿಷಯಗಳಲ್ಲಿ ಪರಿಣಿತಿ ಪಡೆಯಲು ಸಾಕಷ್ಟು ಹಣ ವ್ಯಯ ಮಾಡಬಹುದು. ಆದರೆ ಬಡ ಮಧ್ಯಮ ವರ್ಗದ, ಬಡವರ್ಗದ ದಲಿತರ ಉದ್ಯೋಗಕ್ಕೆ ಪೂರಕವಾಗುವ ಶಿಕ್ಷಣವನ್ನು ನೀಡಲು ಅಸಮರ್ಥರಾಗಿದ್ದಾರೆ. ಇಂತಹ ಕುಟುಂಬದ ಅನೇಕ ನಿರುದ್ಯೋಗಿ ಯುವಕರು ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಲಸೆ ಬಂದು ತಮ್ಮ ಬದುಕಿಗಾಗಿ ಹೋರಾಡುತ್ತಿದ್ದಾರೆ. ಇಂತಹವರಿಗೆ ಸರಕಾರ ಎಷ್ಟರ ಮಟ್ಟಿಗೆ ಸ್ವಯಂ ಉದ್ಯೋಗ ವ್ಯವಸ್ಥೆ ನಿರ್ಮಾಣ ಮಾಡಲು ಸಾಧ್ಯ. ಹಾಗೂ ಮಾನವ ಸಂಪನ್ಮೂಲದ ಸಂಪೂರ್ಣ ಬಳಕೆಯ ಹೊಸಮಾರ್ಗಗಳನ್ನು ಎಂದಿಗಿಂತ ಇಂದು ಸರ್ಕಾರ ಗಂಭೀರವಾಗಿ ಆಲೋಚಿಸಬೇಕಾಗಿದೆ. ಇದು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದಲೂ ಮುಖ್ಯವಾಗಿದೆ.**

ಮಹಿಳೆಯರ ರಾಜಕೀಯ, ಶೈಕ್ಷಣಿಕ ಮತ್ತು ಆರ್ಥಿಕ ಸಬಲೀಕರಣ, ದಲಿತ ಹಾಗೂ ಹಿಂದುಳಿದವರ ಪರವಾದ ಸಾಮಾಜಿಕ ನ್ಯಾಯದ ಕಲ್ಪನೆ ಮಹಿಳೆಯರಿಗೂ ಬೇಷರತ್ ಆಗಿ ಅನ್ವಯಿಸಬೇಕಾಗಿದೆ. ಒಂದು ವರ್ಗದ ಮಹಿಳೆಯರಲ್ಲಿ ಶಿಕ್ಷಣದ, ಆರ್ಥಿಕ ಸ್ಥಿತಿಯ ನಿರಂತರ ಬೆಳವಣಿಗೆ ಕಾಣುತ್ತೇವೆ. ಇನ್ನೊಂದು ವರ್ಗದ ಮಹಿಳೆಯರು ತಮ್ಮ ಜಾತಿ ಹಾಗೂ ಆರ್ಥಿಕತೆಯ ಕಾರಣಗಳಿಂದಾಗಿ ಶಿಕ್ಷಣ, ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಿಂದ ಬಹಳಷ್ಟು ದೂರವೇ ಉಳಿದಿದ್ದಾರೆ. ಇಂದಿನ ರಾಜಕೀಯ ಸ್ಥಾನಮಾನವನ್ನು ಪ್ರತಿನಿಧಿಸುವ ಮಹಿಳೆ ಮೇಲ್ಜಾತಿಯ ಬಲಿಷ್ಠ ಪಂಗಡದ, ಆರ್ಥಿಕ ಸ್ಥಿರತೆಯಿರುವ ಮಹಿಳೆಯ ಹೊರತು ಆಕೆ ಬಡ, ದುರ್ಬಲ ವರ್ಗದ ಹಿಂದುಳಿದ ಜಾತಿಯ ಮಹಿಳೆಯಾಗಿರುವುದಿಲ್ಲ. ಈ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಹಿಳೆಯರ ಸಬಲೀಕರಣ ಕಾರ್ಯಕ್ರಮಗಳು ರೂಪಿತವಾಗಬೇಕಿದೆ.

ನಿರುದ್ಯೋಗ ಸಮಸ್ಯೆ ಉಲ್ಬಣಿಸಿರುವ ಈ ದೇಶದಲ್ಲಿ ಉದ್ಯೋಗ ಸೃಷ್ಟಿ ಒಂದು ಸವಾಲು. ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ಉದ್ಯೋಗ ಎನ್ನುವುದು ಕೇವಲ ಕನಸಿನ ಗಂಟಾಗಿದೆ. ಉಳ್ಳವರು ತಮ್ಮ ಮಕ್ಕಳಿಗೆ ತಾಂತ್ರಿಕ ವಿಷಯಗಳಲ್ಲಿ ಪರಿಣಿತಿ ಪಡೆಯಲು ಸಾಕಷ್ಟು ಹಣ ವ್ಯಯ ಮಾಡಬಹುದು. ಆದರೆ ಬಡ ಮಧ್ಯಮ ವರ್ಗದ, ಬಡವರ್ಗದ ದಲಿತರ ಉದ್ಯೋಗಕ್ಕೆ ಪೂರಕವಾಗುವ ಶಿಕ್ಷಣವನ್ನು ನೀಡಲು ಅಸಮರ್ಥರಾಗಿದ್ದಾರೆ. ಇಂತಹ ಕುಟುಂಬದ ಅನೇಕ ನಿರುದ್ಯೋಗಿ ಯುವಕರು ಗ್ರಾಮೀಣ ಪ್ರದೇಶದಿಂದ ನಗರಕ್ಕೆ ವಲಸೆ ಬಂದು ತಮ್ಮ ಬದುಕಿಗಾಗಿ ಹೋರಾಡುತ್ತಿದ್ದಾರೆ. ಇಂತಹವರಿಗೆ ಸರಕಾರ ಎಷ್ಟರ ಮಟ್ಟಿಗೆ ಸ್ವಯಂ ಉದ್ಯೋಗ ವ್ಯವಸ್ಥೆ ನಿರ್ಮಾಣ ಮಾಡಲು ಸಾಧ್ಯ. ಹಾಗೂ ಮಾನವ ಸಂಪನ್ಮೂಲದ ಸಂಪೂರ್ಣ ಬಳಕೆಯ ಹೊಸಮಾರ್ಗಗಳನ್ನು ಎಂದಿಗಿಂತ ಇಂದು ಸರ್ಕಾರ ಗಂಭೀರವಾಗಿ ಆಲೋಚಿಸಬೇಕಾಗಿದೆ. ಇದು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದಲೂ ಮುಖ್ಯವಾಗಿದೆ.

ಇತ್ತೀಚಿನ ಮಾಹಿತಿಯ ಪ್ರಕಾರ ೨೦ ಲಕ್ಷ ಸಣ್ಣ ಕೈಗಾರಿಕೆಗಳು ಮುಚ್ಚಿವೆ. ೩.೦೬ ಲಕ್ಷ ಸಣ್ಣ ಕೈಗಾರಿಕೆಗಳು ರೋಗಗ್ರಸ್ಥ ಪಟ್ಟಿಗೆ ಸೇರಿವೆ. ಈ ಕೈಗಾರಿಕೆಗಳಿಗೆ ಪುನಶ್ಚೇತನ ನೀಡುವ ಕಾರ್ಯ ಆರಂಭವಾಗಬೇಕಿದೆ. ಈ ನಿಟ್ಟಿನಲ್ಲಿ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿಯಾಗಿದೆ.

ಸಮಾಜದ ಅರ್ಧದಷ್ಟಿರುವ ಮಹಿಳೆಯರು ಇಂದಿಗೂ ಅತ್ಯಾಚಾರದಂತಹ ಘಟನೆಗಳಿಂದ ಮುಕ್ತವಾಗಲು ಸಾಧ್ಯವಾಗಿಲ್ಲ. ಯಾವುದೇ ರೀತಿಯ dicision making ಸ್ಥಾನದಲ್ಲಿ ಆಕೆಯನ್ನು ನೋಡಲು ಪುರುಷ ಪ್ರಧಾನ ವ್ಯವಸ್ಥೆ ತಯಾರಾಗಿಲ್ಲ. ಹೀಗಿರುವಾಗ ಎಲ್ಲ ಮಹಿಳೆಯರು ತಮ್ಮ ಸಬಲೀಕರಣಕ್ಕಾಗಿ ಲೋಕಸಭೆ ವಿಧಾನ ಸಭೆಗಳ ಶೇ. ೩೩ರ ಮೀಸಲಾತಿಯನ್ನು ಎದುರು ನೋಡುತ್ತಿದ್ದಾರೆ.

ಅಯೋಧ್ಯೆ ಸಮಸ್ಯೆ ಪರಿಹಾರವಾದರೆ ದೇಶದ ಕೋಮುಸೌಹಾರ್ದತೆಗೆ ನಿಜವಾದ ಅರ್ಥ ಬರಲಿದೆ. ಈ ಪ್ರಸ್ತುತ ಸರ್ಕಾರ ನ್ಯಾಯಾಲಯದ ತೀರ್ಪು ಅಥವಾ ಮಾತುಕತೆ ಮೂಲಕ ಪರಿಹರಿಸಲು ಮುಂದಾಗಿದೆ. ಆದರೆ ಇದಕ್ಕೂ ಮುಂಚಿತವಾಗಿ ಸರ್ಕಾರ ಗಂಭೀರವಾದ ಸಾಮಾಜಿಕ ಹಾಗೂ ಸಾಂಸ್ಕೃತಿಕ ವಾತಾವರಣವನ್ನು ನಿರ್ಮಾಣ ಮಾಡು

ವಲ್ಲಿ ಹೆಜ್ಜೆಯಿಡಬೇಕಾಗಿದೆ. ಈ ಹಿಂದೆ 'ಸ್ವಾಮಿ ಏಕತಾ' ಎನ್ನುವ ಸಮಿತಿಯೊಂದನ್ನು ಕಾಂಗ್ರೆಸ್ ಸರ್ಕಾರ ಹುಟ್ಟು ಹಾಕಿತ್ತು. ಆದರೆ ಅದರ ಕಾರ್ಯನಿರ್ವಹಣೆಯ ರೀತಿ ಗಳೇನು ಎನ್ನುವುದು ಯಾರಿಗೂ ತಿಳಿದಿರಲಿಲ್ಲ.

ಜೊತೆ ಜೊತೆಗೆ ಕೋಮುಗಲಭೆಯ ಬಗ್ಗೆ ಸೂಕ್ತ ವಾದ ಕಾನೂನಿನ ರಚನೆಯಾಗಬೇಕಾಗಿದೆ. ಈ ವಿಷಯಕ್ಕೆ ಸಂಬಂಧಪಟ್ಟ ಯಾವುದೇ ತಪ್ಪಿತಸ್ಥರು ತಲೆಮರೆಸಿಕೊಳ್ಳದೆ ಶಿಕ್ಷೆ ಅನುಭವಿಸುವಂತಾಗಬೇಕು.

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣ ಸೌಲಭ್ಯದ ಸಂಪೂರ್ಣ ಪ್ರಯೋಜನವಾಗಬೇಕಾಗಿದೆ. ಗ್ರಾಮಾಂತರ ಪ್ರದೇಶದ ಮಕ್ಕಳು ಬಡತನದ ಕಾರಣಕ್ಕಾಗಿ ಕನಿಷ್ಠ ವಿದ್ಯಾಭ್ಯಾಸದಿಂದಲೂ ಅನೇಕ ಬಾರಿ ವಂಚಿತರಾಗಿದ್ದಾರೆ. ನಗರ ಹಾಗೂ ಗ್ರಾಮೀಣ ಪ್ರದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಹಳ್ಳಿಯ ಮಕ್ಕಳು ಉತ್ತಮ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಆದರೂ ನಗರದ ಮಕ್ಕಳ ಜೊತೆಗೆ ಅವರು ಸ್ಪರ್ಧಿಸಬೇಕಾದ ಅನಿವಾರ್ಯತೆಯಿರುತ್ತದೆ.

ಈ ರೀತಿಯ ಸೂಕ್ಷ್ಮ ಹಾಗೂ ಗಂಭೀರ ಸಮಸ್ಯೆ ಗಳನ್ನು ಪರಿಹರಿಸುವಲ್ಲಿ ಸರ್ಕಾರ ಮುಂದಾಗಬೇಕಾಗಿದೆ. ಶಿಕ್ಷಣದಂತಹ ಮೂಲಭೂತ ಸೌಕರ್ಯದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ.

ನೀರು, ವಿದ್ಯುತ್, ರಸ್ತೆ ಹಳ್ಳಿಗಾಡಿನ ಅನೇಕ ಪ್ರದೇಶ ಗಳು ಈ ಎಲ್ಲಾ ಸೌಲಭ್ಯಗಳಿಂದ ವಂಚಿತವಾಗಿ ಸಾಮಾಜಿಕ ಮುಖ್ಯವಾಹಿನಿಯಿಂದ ದೂರವಾಗಿಯೇ ಉಳಿದಿವೆ. ಜನ ಪ್ರತಿನಿಧಿಗಳು ಚುನಾವಣಾ ಸಮಯದಲ್ಲಿ ಇಲ್ಲದ ಆಶ್ವಾಸನೆ ನೀಡಿ ನಂತರ ಆ ಜನರನ್ನು ಮರೆತೇ ಬಿಡುತ್ತಾರೆ. ಹಳ್ಳಿಗಳಲ್ಲಿ ಇಂದಿಗೂ ಆರೋಗ್ಯ ಪೂರ್ಣವಾದ ಕುಡಿಯುವ ನೀರಿನ ಕೊರತೆಯಿದೆ. ಇನ್ನು ರಸ್ತೆ ವಿದ್ಯುತ್‌ಗಳು ಈ ಜನಗಳಿಗೆ ಕನಿಷ್ಠ ಅಗತ್ಯಗಳು ಎನ್ನುವ ಕಲ್ಪನೆ ಸರ್ಕಾರಗಳಿಗಿಲ್ಲ. ಉದಾ: ಕರ್ನಾಟಕ ಸರ್ಕಾರವನ್ನೆ ತೆಗೆದುಕೊಳ್ಳಿ. ಹೈಟೆಕ್ ಮಂತ್ರವನ್ನು ಘೋಷಿಸುತ್ತಿದ್ದ ಎಸ್.ಎಂ. ಕೃಷ್ಣರವರು ಗ್ರಾಮೀಣ ಜನತೆಯ ಕನಿಷ್ಠ ಸೌಲಭ್ಯಗಳನ್ನು ಪೂರೈಸುವಲ್ಲಿ ವಿಫಲರಾದರು. ಅದಕ್ಕೆ ಪ್ರತಿಫಲ ಅವರ ಸರ್ಕಾರ ಹೀನಾಯವಾಗಿ ಅನುಭವಿಸಿದ ಸೋಲು. ಗ್ರಾಮೀಣ ಪ್ರದೇಶದ ಜನರ ನೋವುಗಳು ಚುನಾವಣಾ ಪ್ರತಿನಿಧಿಗಳಿಗೆ ಅರ್ಥವಾಗಬೇಕು. ಹಾಗೂ ಅದನ್ನು ಒದಗಿಸುವ ಬಗ್ಗೆ ಗಂಭೀರವಾಗಿ ಕೆಲಸ ಮಾಡಬೇಕಾಗಿದೆ.

ಗ್ರಾಮೀಣ ಯುವಕರಿಗೆ ೧೦೦ ದಿನಗಳ ಕನಿಷ್ಠ ಉದ್ಯೋಗ ಕೂಡ ಗ್ರಾಮೀಣಾಭಿವೃದ್ಧಿಯ ಒಂದು ಭಾಗ ವಾಗಬಹುದು. ಅಲ್ಲಿಯ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಸ್ಥಳೀಯ ಕೂಲಿಗಳನ್ನೇ ಉಪಯೋಗಿಸಿಕೊಳ್ಳಬಹುದಾಗಿದೆ.

ಸಾಮಾಜಿಕ ನ್ಯಾಯದ ಕಲ್ಪನೆಯಲ್ಲಿ ಸಮಾನ ವಿನಿಮಯವೂ ಒಂದು ಭಾಗ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪ್ರಾಮಾಣಿಕ ಪ್ರಯತ್ನವಾಗಬೇಕಾಗಿದೆ.

ಆಹಾರ ಮತ್ತು ಪೌಷ್ಟಿಕತೆಯ ಭದ್ರತೆ : ಭಾರತ ಕೃಷಿ ಪ್ರಧಾನವಾದ ರಾಷ್ಟ್ರವಾದರೂ ಹಸಿವಿನಿಂದ ಸಾಯುತ್ತಿರುವ ಅನೇಕ ಜನರ ಸ್ಥಿತಿಗತಿಗಳನ್ನು ನಾವು ಕಂಡಿದ್ದೇವೆ. ಈ ಸಂದರ್ಭದಲ್ಲಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಕರ್ನಾಟಕದ ಜನರ ಹೊಟ್ಟೆಗೆ ಬರೆಹಾಕಿ ಆಫ್ರಿಕಾಕ್ಕೆ ಅಕ್ಕಿ ಸರಬರಾಜು ಮಾಡಿದ ಘಟನೆ ನೆನಪಿರಬೇಕಲ್ಲವೆ? ಹೀಗಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಶಕ್ತಗೊಳಿಸಬೇಕಾಗಿದೆ. ವಿತರಣಾ ವ್ಯವಸ್ಥೆಗೆ ಸಹಕಾರಿ ಸಂಘಗಳನ್ನು ಒಳಗೊಳ್ಳುವಾಗ ಮಹಿಳಾ ಸಹಕಾರಿ ಸಂಸ್ಥೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದರಿಂದ ಸಾಕಷ್ಟು ಅವ್ಯವಹಾರಗಳನ್ನು ತಡೆಗಟ್ಟಬಹುದು.

ಕಳೆದ ಹಲವು ವರ್ಷಗಳಲ್ಲಿ ಆಡಳಿತದಲ್ಲಿದ್ದ ಎನ್‌ಡಿಎ ಸರ್ಕಾರಕ್ಕೆ ಈ ದೇಶದ ದಲಿತರ, ಅಲ್ಪಸಂಖ್ಯಾತರ ಪರ, ಬಡಜನತೆಯ ಜೀವನದ ಬಗ್ಗೆ ಯಾವುದೇ ಕಾಳಜಿಗಳಿರಲಿಲ್ಲ. ಆ ಸರ್ಕಾರ ಕೇವಲ ಹೂಡಿಕೆದಾರರ, ಬಂಡವಾಳಶಾಹಿಗಳು ವ್ಯಾಪಾರಿಗಳ ಹಿತಾಸಕ್ತಿಯನ್ನು ಮಾತ್ರ ಕಾಪಾಡಲು ಪ್ರಾಮಾಣಿಕ ಪ್ರಯತ್ನ ನಡೆಸಿ, ಚುನಾವಣೆಯ ಸಂದರ್ಭದಲ್ಲಿ 'ಭಾರತ ಪ್ರಕಾಶಿಸುತ್ತಿದೆ' ಹಾಗೂ "Feel good' ನಂತಹ ಹೇಳಿಕೆಗಳ ಮೂಲಕ ತನ್ನ ಗೋಮುಖ ವ್ಯಾಘ್ರತೆಯನ್ನು ಮರೆಯಲು ಪ್ರಯತ್ನಿಸಿತು. ಆದರೆ ಈ ದೇಶದ ಮತದಾರನನ್ನು ಎಲ್ಲಾ ಸಮಯದಲ್ಲಿಯೂ ಮೋಸಗೊಳಿಸಲು ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸಿದೆ. ಈ ಚುನಾವಣೆ ಆ ನಂಬಿಕೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ಈ ಸರ್ಕಾರಕ್ಕಿದೆ.

ಪಂಚಾಯತ್ ರಾಜ್ ಪರಿಕಲ್ಪನೆಗೆ ಮಹತ್ವ ನೀಡಲಾಗಿದ್ದು ಗ್ರಾಮಸಭೆ ಈ ಪರಿಕಲ್ಪನೆಯ ತಾಯಿ ಬೇರಾಗಿರುತ್ತದೆ. ಗ್ರಾಮಗಳ ಉದ್ಧಾರಕ್ಕೆ ಸೂಕ್ತ ಹಣಕಾಸಿನ ನೆರವನ್ನು ನೀಡಲಾಗುತ್ತದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು, ಹಳ್ಳಿಗಾಡಿನಲ್ಲಿ ವಾಸಿಸುತ್ತಿರುವ ಬುಡಕಟ್ಟು ಜನಾಂಗಗಳು ಸದಾಕಾಲ ಅರಣ್ಯ ಅಧಿಕಾರಿಗಳ ಆಕ್ರೋಶಕ್ಕೆ ಬಲಿಯಾಗುತ್ತಿದ್ದಾರೆ. ಅರಣ್ಯವನ್ನೇ ಆಧರಿಸಿ ಬದುಕುವ ಅವರ ಜೀವನ ಯಾವ ಸಂದರ್ಭದಲ್ಲಿ ಕಾನೂನು ಯಾವ ಕ್ರಮವನ್ನು ತಮ್ಮ ಮೇಲೆ ಕೈಗೊಳ್ಳುವುದೋ ಎಂಬ ಭಯದಲ್ಲಿ ಕಳೆಯುತ್ತಿದೆ. ಹೀಗಾಗಿ ಇಂತಹ ಜನರ ಬದುಕನ್ನು ಹಸನುಮಾಡುವ ಭರವಸೆಯನ್ನು ಸಾಮಾನ್ಯ ಕನಿಷ್ಠ ಕಾರ್ಯಕ್ರಮ ನೀಡಿದೆ.

ದಲಿತರು, ಆದಿವಾಸಿಗಳು, ಭೂರಹಿತ ಜನಗಳಿಗಾಗಿ ಅವರು ಬೇಸಾಯ ಮಾಡುತ್ತಿರುವ ಜಮೀನಿಗೆ ಸಣ್ಣ ನೀರಾವರಿ ವ್ಯವಸ್ಥೆಯನ್ನು ನೀಡುವ ಆಲೋಚನೆಯಲ್ಲಿದೆ. ಬಹುಶಃ ಇದು ಕಾರ್ಯಗತವಾದರೆ ಈ ಬಡಜನತೆಯಷ್ಟು ಸುಖಿಗಳು ಯಾರೂ ಇಲ್ಲ ಎನ್ನಬಹುದು.

ಪ್ರಾದೇಶಿಕ ಅಸಮತೋಲನ : ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವಿನ ಸಂಬಂಧಗಳ ಬಗ್ಗೆ ಹೆಚ್ಚಿನ ಚಿಂತನೆ ನಡೆಯಬೇಕಾಗಿದೆ. ಸಹಕಾರಿ ಸಮಿತಿಯ ನಂತರ ಹೊಸದೊಂದು ಸಮಿತಿಯನ್ನು ರಚಿಸುವ ಉದ್ದೇಶ ಸರ್ಕಾರ ಕೈಗೊಳ್ಳಲಿದೆ. ಆ ಮೂಲಕ ರಾಜ್ಯದ ಒಳಗೇ ಇರುವ ಅಸಮತೋಲನ ಹಾಗೂ ರಾಜ್ಯ ಮತ್ತು ರಾಜ್ಯಗಳ ನಡುವಿನ ಅಸಮತೋಲನದ ಬಗ್ಗೆ ಆಲೋಚಿಸಲು ಸರ್ಕಾರ ಮುಂದಾಗಿದೆ.

ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಸಾಕಷ್ಟು ಸುಧಾರಣೆ ತರುವ ಯೋಜನೆ, ವಿದೇಶಾಂಗ ವ್ಯವಹಾರಗಳಲ್ಲಿ ಸುಧಾರಣೆ, ಭಾಷೆಯ ಬಗ್ಗೆ ಪ್ರಾಶಸ್ತ್ಯ, ಎಲ್ಲಾ ರೀತಿಯ ಮೂಲಭೂತ ಬದಲಾವಣೆಯ ಕಲ್ಪನೆ ಯುಪಿಎ ಸರ್ಕಾರದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಬಗೆಗಿದೆ. ಆದರೆ ಇಷ್ಟೆಲ್ಲಾ ವರ್ಷಗಳು ವ್ಯಾಪಾರಿಗಳು, ಬಂಡವಾಳಶಾಹಿಗಳು ಅಧಿಕಾರಶಾಹಿ ವರ್ಗದ, ಹಿತಾಸಕ್ತಿಯನ್ನೇ ಕಾಪಾಡಿಕೊಂಡು ಬರುತ್ತಿದ್ದ ಸರ್ಕಾರಗಳ ನೀತಿಯಿಂದ ದೇಶ ನಮಗೆ ಗೋಚರಿಸುವುದಕ್ಕಿಂತ ಬಹಳಷ್ಟು ಹಿಂದುಳಿದಿದೆ. ಈ ದೇಶದ ಬಹುಸಂಖ್ಯಾತ ಬಡಜನರು ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ ಸೂರಿಲ್ಲದೆ ಪ್ರಾಣಿಗಳಿಗಿಂತ ಹೀನಾಯವಾಗಿ ಜೀವನ ನಡೆಸುತ್ತಿದ್ದಾರೆ. ಈ ಮುಂದಿಗೆ ಈ ಸರ್ಕಾರದ ಅವಧಿಯಲ್ಲಿ ಕನಿಷ್ಠ ಸೌಲಭ್ಯಗಳ ಜೀವನ ಸಿಗುವುದು ಕೂಡ ಕಷ್ಟಸಾಧ್ಯ ಎನ್ನುವ ಸಿನಿಕತನ ಎಲ್ಲರನ್ನು ಆವರಿಸಿದೆ.

ಈ ದೇಶದ ಅಲ್ಪಸಂಖ್ಯಾತರ ಹಾಗೂ ದಲಿತರ ಆರ್ಥಿಕ ಸುಧಾರಣೆಯ ಬಗ್ಗೆ ಸರ್ಕಾರ ಎಂದಿಗಿಂತ ಹೆಚ್ಚಾಗಿ ಇಂದು ಆಲೋಚಿಸಬೇಕಾಗಿದೆ. ಬೆಳೆದಿರುವ ಹಾಗೂ ಬೆಳೆಯುತ್ತಿರುವ ಖಾಸಗೀಕರಣದ ತೀವ್ರತೆಯನ್ನು ನಿಯಂತ್ರಿಸಲು ಅಸಾಧ್ಯ. ಆದರೆ ಖಾಸಗಿ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಜಾರಿಗೆ ತರುವಂತಹ ಕಠಿಣವಾದ ಕಾನೂನುಗಳನ್ನು ಸರ್ಕಾರ ಜಾರಿಗೊಳಿಸಬೇಕು. ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ಯುಪಿಎ ಸರ್ಕಾರದ ಅಂಗ ಪಕ್ಷಗಳಲ್ಲಿ ಪ್ರಾಮಾಣಿಕತೆ ಹಾಗೂ ತಾತ್ವಿಕ ಬದ್ಧತೆಯು ಅನಿವಾರ್ಯ. ಅದಿಲ್ಲದಿದ್ದರೆ ಯಾವುದೇ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಕ್ರಿಯೆ ಅನಗತ್ಯವಾಗಿ ವಿಳಂಬಿತ ವಾಗಬಹುದು.

'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬ ಘೋಷಣೆ ಕೇವಲ ಕನಸಾಗದೆ – ನನಸಾಗುವ ದಾರಿಯಲ್ಲಿ ಪ್ರಯತ್ನಗಳನ್ನು ಆರಂಭಿಸುವ ದಿನಗಳನ್ನು ಈ ದೇಶದ ಜನರು ಎದುರು ನೋಡುತ್ತಿದ್ದಾರೆ.

ಕೋಮುಗಲಭೆಗಳು, ಖಾಸಗೀಕರಣ, ಜಾಗತೀಕರಣ, ಜಾತಿ ಕಲಹಗಳಿಂದ ಬೆಂದು ನೊಂದಿರುವ ಈ

ಪ್ರತಿಭಟನೆಯ ಸಂಕೇತ – ಪಾಲ್ ಸ್ವೀಜಿ

ಜಗತ್ತಿನ ಅತಿ ದೊಡ್ಡ ಬಂಡವಾಳಶಾಹಿ ರಾಷ್ಟ್ರ ಅಮೆರಿಕ ಕಂಡ ಮಹಾನ್ ಮಾರ್ಕ್ಸ್‌ವಾದಿ ಅರ್ಥಶಾಸ್ತ್ರಜ್ಞ ಹಾಗೂ ಚಿಂತಕ ಪಾಲ್ ಎಂ. ಸ್ವೀಜಿ ಇತ್ತೀಚೆಗೆ ನ್ಯೂಯಾರ್ಕ್‌ನಲ್ಲಿ ಅಸುನೀಗಿದರು. ತಮ್ಮ ೯೪ನೇ ಇಳಿವಯಸ್ಸಿನಲ್ಲಿ ಜೀವನಕ್ಕೆ ವಿದಾಯ ಹೇಳಿದ ಸ್ವೀಜಿ ತಾನು ನಂಬಿದ ಸಮಾಜವಾದದ ಏಳು-ಬೀಳುಗಳನ್ನು ಕಂಡವರು; ವಿಶ್ಲೇಷಿಸಿದವರು. ಅವರು ಬಾಳಿನುದ್ದಕ್ಕೂ ಅನೇಕ ಸಂಕಷ್ಟಗಳನ್ನು ಎದುರಿಸಿದರೂ ತತ್ವ ಬದ್ಧತೆಯಿಂದ ವಿಮುಖರಾಗಲಿಲ್ಲ. ದಿಟ್ಟ ಹೋರಾಟಗಾರರಾಗಿ ಅನೇಕರಿಗೆ ದಾರಿದೀಪವಾದರು.

ಸ್ವೀಜಿ ಏಪ್ರಿಲ್ ೧೦, ೧೯೧೦ರಂದು ನ್ಯೂಯಾರ್ಕ್‌ನಲ್ಲಿ ಜನಿಸಿದರು. ಹಾರ್ವರ್ಡ್‌ನಲ್ಲಿ ಅರ್ಥಶಾಸ್ತ್ರವನ್ನು ಒಂದು ವರ್ಷ ಓದಿದ ನಂತರ ೧೯೩೨ರಲ್ಲಿ ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಸೇರಿದರು. ಟ್ರಾಟ್‌ಸ್ಕಿಯವರ 'ಹಿಸ್ಟರಿ ಆಫ್ ರಷ್ಯನ್ ರೆವಲ್ಯೂಷನ್' ಹಾಗೂ ಹೆರಾಲ್ಡ್ ಲಸ್ಕಿಯವರ ಭಾಷಣಗಳಿಂದ ಪ್ರಭಾವಿತರಾಗಿ ಮಾರ್ಕ್ಸ್‌ವಾದಿಯಾದರು.

೩೨ರ ತಾರುಣ್ಯದಲ್ಲೇ 'ದಿ ಥಿಯರಿ ಆಫ್ ಕ್ಯಾಪಿಟಲಿಸ್ಟ್ ಡೆವಲಪ್‌ಮೆಂಟ್' ಎಂಬ ಗಹನ ಕೃತಿಯನ್ನು ರಚಿಸಿದರು. ೧೯೪೨ರಲ್ಲಿ ಅವರ 'ಪ್ರಿನ್ಸಿಪಲ್ಸ್ ಆಫ್ ಮಾರ್ಕ್ಸಿಯನ್ ಪೊಲಿಟಿಕಲ್ ಎಕಾನಮಿ' ಎಂಬ ಗ್ರಂಥ ಪ್ರಕಟವಾಯಿತು.

ಈ ಅವಧಿಯಲ್ಲಿ ಅವರು 'ಲೀಗ್ ಎಗೈನ್ಸ್ಟ್ ಫ್ಯಾಸಿಸಂ ಅಂಡ್ ವಾರ್' ನ ಸದಸ್ಯರಾದರು. ವಿಶ್ವ ಶಾಂತಿಗಾಗಿ ಶ್ರಮಿಸಿದರು. ೧೯೪೨ರಲ್ಲಿ ಹಾರ್ವರ್ಡ್ ಬಿಟ್ಟು ಸೈನ್ಯವನ್ನು ಸೇರಿದರು. ಆರ್ಮಿ ರಿಸರ್ಚ್ ಬ್ರಾಂಚ್‌ನಲ್ಲಿ ಕೆಲಸ ಮಾಡುತ್ತಿದ್ದಾಗ 'ಯುರೋಪಿಯನ್ ಪೊಲಿಟಿಕಲ್ ರಿಪೋರ್ಟ್' ಎಂಬ ಮಾಸಿಕದ ಸಂಪಾದಕರಾದರು. ಅದು ಎಡ ಪಂಥೀಯ ವಿಚಾರಧಾರೆಗೆ ಒತ್ತು ನೀಡಿ, ಫ್ಯಾಸಿಸಂನ ಉಗ್ರ ಪ್ರತಿಭಟನೆಯ ದನಿಯಾಗಿ ಹೊರಹೊಮ್ಮಿತು. ಮಾರ್ಕ್ಸಿಸ್ಟರಾದ್ದರಿಂದ ಅವರಿಗೆ ಹಾರ್ವರ್ಡ್‌ನಲ್ಲಿ ಅಧ್ಯಾಪಕ ವೃತ್ತಿ ಸಿಗಲಿಲ್ಲ. ಧೃತಿಗೆಡದ ಸ್ವೀಜಿ ಮೇ ೧೯೪೯ರಲ್ಲಿ ಪ್ರಥಮ ಸ್ವತಂತ್ರ ಸಮಾಜವಾದಿ ಪತ್ರಿಕೆಯನ್ನು ಪ್ರಕಟಿಸಿದರು. ಅದೇ 'ಮಂಥ್ಲಿ ರಿವ್ಯೂ' (ಎಂ.ಆರ್) ಪ್ರಥಮ ಸಂಚಿಕೆಯಲ್ಲಿ ಖ್ಯಾತ



ವ್ಯವಸ್ಥೆಯೊಡನೆ ರಾಜಿಯಾಗದೆ, ತತ್ವಬದ್ಧರಾಗಿ ಸಮಾಜವಾದದ ಹೋರಾಟಗಾರರಾಗಿ, ಅರ್ಥಶಾಸ್ತ್ರಜ್ಞರಾಗಿ ಬಾಳಿದ ಸ್ವೀಜಿ

ವಿಜ್ಞಾನಿ ಆಲ್ಬರ್ಟ್ ಐನ್ಸ್ಟೀನ್ 'ವೈ ಸೋಶ್ಯಲಿಸಂ?' ('ಸಮಾಜವಾದ ಏತಕ್ಕೆ'?) ಎಂಬ ಲೇಖನವನ್ನು ಬರೆದರು.

೧೯೫೦ರ ದಶಕದಲ್ಲಿ ಎಂ.ಆರ್‌ನ ಸಂಚಿಕೆಗಳಲ್ಲಿ ಸ್ವೀಜಿ ಅಮೆರಿಕ ಪ್ರೇರಿತ ಶೀತಲ ಸಮರದ ವಿರುದ್ಧ ಕಿಡಿ ಕಾರಿದರು. ಇವುಗಳ ಪ್ರತಿಪಾದನೆಗಾಗಿ ಅವರು ಜೈಲುವಾಸಿಯಾಗಬೇಕಾಯಿತು. ಆದರೂ ಕೆಚ್ಚೆದೆಯ ಸ್ವೀಜಿ ಹಿಮ್ಮೆಟ್ಟದೆ ತಾವು ನಂಬಿದ ಮೌಲ್ಯಗಳನ್ನು ಎತ್ತಿ ಹಿಡಿದರು. ಕೊರಿಯಾ ಯುದ್ಧದ ಒಳ ಮರ್ಮಗಳ ಬಗ್ಗೆ ಖ್ಯಾತ ಪತ್ರಕರ್ತ ಐ.ಎಫ್. ಸ್ಟೋನ್ ಪುಸ್ತಕವೊಂದನ್ನು ಬರೆದಿದ್ದರು. ಆ ಕಾಲದಲ್ಲಿ ಅಮೆರಿಕದಲ್ಲಿ ಈ ವಿವಾದಾತ್ಮಕ ಪುಸ್ತಕವನ್ನು ಪ್ರಕಟಿಸಲು ಯಾವ ಪ್ರಕಾಶಕನು ಮುಂದೆ ಬರದಿದ್ದಾಗ ಸ್ವೀಜಿ ಧೈರ್ಯದಿಂದ ಅದನ್ನು ಪ್ರಕಟಿಸಲು ಮುಂದಾದರು. ಹೀಗೆ ಪ್ರಾರಂಭವಾಯಿತು ಎಂ.ಆರ್.ಪ್ರೆಸ್. ಎಂ.ಆರ್.ನಲ್ಲಿ ಸ್ವೀಜಿ ವಿಯೆಟ್ನಾಂ ಯುದ್ಧದಲ್ಲಿ ಅಮೆರಿಕ ಅನುಸರಿಸಿದ ಕ್ಷುದ್ರ ನೀತಿಗಳ ವಿರುದ್ಧ ಪುಂಖಾನುಪುಂಖವಾಗಿ ಬರೆದರು. ೧೯೫೯ರಲ್ಲಿ ಕ್ಯೂಬಾದಲ್ಲಿ ಕ್ರಾಂತಿಯಾದಾಗ ಅಲ್ಲಿಗೆ ಭೇಟಿ ನೀಡಿ ಚೇ ಗೆವಾರ ಹಾಗೂ ಫಿಡೆಲ್ ಕಾಸ್ಟ್ರೋನ ಗೆಳೆಯರಾದರು. ಪಾಲ್ ಬರಾನ್ ಜೊತೆಗೂಡಿ 'ಮನಾಪಲಿ ಕ್ಯಾಪಿಟಲ್' ಎಂಬ ಗ್ರಂಥವನ್ನು ಬರೆದರು. ಹೈಟಿ, ಪನಾಮ, ಎಲ್‌ಸಾಲ್ವೆಡಾರ್, ಗ್ರೆನಡಾ, ನಿಕರಾಗ್ವ, ಚಿಲಿ ಮುಂತಾದ ದೇಶಗಳಲ್ಲಿ ಅಮೆರಿಕ ಹಸ್ತಕ್ಷೇಪ ಮಾಡಿದಾಗ, ಸ್ವೀಜಿ ಅದು ನವವಸಾಹತು ನೀತಿಯ ಪ್ರತೀಕವೆಂದು ದಿಟ್ಟವಾಗಿ ಎಂ.ಆರ್‌ನಲ್ಲಿ ಸಾರಿದರು. ಹಾಗೆಯೇ ಇತ್ತೀಚೆಗೆ ಆಫ್‌ಘಾನಿಸ್ತಾನ್ ಮತ್ತು ಇರಾಕ್‌ಗಳ ಮೇಲೆ ಅಮೆರಿಕ ಮಾಡಿದ ಸಮರವನ್ನು ಖಂಡಿಸಿದರು.

ಭವಿಷ್ಯದಲ್ಲಿ ತೃತೀಯ ಜಗತ್ತಿನ ದೇಶಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆ ವಿರುದ್ಧ ಪ್ರಬಲ ಕ್ರಾಂತಿಕಾರಕ ಹೋರಾಟ ರೂಪುಗೊಂಡು ಅದು ಸಮಾಜವಾದದ ಬೆಳವಣಿಗೆಗೆ ಪೂರಕವಾಗುವುದೆಂದು ಸ್ವೀಜಿಯವರ ವಿಶ್ಲೇಷಣೆಯಾಗಿತ್ತು. ಸೋವಿಯತ್ ಯೂನಿಯನ್ ಪತನ ಹಾಗೂ ಪೂರ್ವ ಯುರೋಪ್ ರಾಷ್ಟ್ರಗಳ ಸಮಾಜವಾದಿ ಸರ್ಕಾರಗಳ ಕುಸಿತ, ಸಮಾಜವಾದದ ವೈಫಲ್ಯಗಳಲ್ಲ ಎಂಬುದು ಅವರ ದೃಢವಾದ ನಿಲುವಾಗಿತ್ತು. ವಿಶ್ವದ ದೊಡ್ಡಣ್ಣ ಅಮೆರಿಕದ ಕುತಂತ್ರಗಳನ್ನು, ಇಬ್ಬಗೆಯ ನೀತಿಗಳನ್ನು ಭಯೋತ್ಪಾದನೆಯನ್ನು ಪ್ರಚೋದಿಸುವ ಷಡ್ಯಂತರಗಳ ಬಗ್ಗೆ ಅಮೆರಿಕದ ಅಗ್ರಗಣ್ಯ ಕಮ್ಯುನಿಸ್ಟ್ ನಾಯಕರಾಗಿದ್ದ ಗಸ್ ಹಾಲ್ ಚಿಂತಕ ನೋಮ್ ಚಾಮ್‌ಸ್ಕಿ ಮುಂತಾದವರೊಡನೆ ಸೇರಿ ಪ್ರತಿಭಟನೆಯ ದನಿ ಎತ್ತಿದ್ದರು.

ವ್ಯವಸ್ಥೆಯೊಡನೆ ರಾಜಿಯಾಗದೆ, ತತ್ವಬದ್ಧರಾಗಿ ಸಮಾಜವಾದದ ಹೋರಾಟಗಾರರಾಗಿ, ಅರ್ಥಶಾಸ್ತ್ರಜ್ಞರಾಗಿ ಬಾಳಿದ ಸ್ವೀಜಿಯವರ ಸಿದ್ಧಿ-ಸಾಧನೆಗಳು ಶೋಷಣಾರಹಿತ, ಸಮ ಸಮಾಜದ ಸ್ಥಾಪನೆಯ ಮೂಲಕ ಇಡೀ ಮನುಕುಲದ ಸರ್ವಾಂಗೀಣ ಅಭ್ಯುದಯಕ್ಕಾಗಿ ಮೂಲಭೂತ ಬದಲಾವಣೆಗಳನ್ನು ಬಯಸುವ ಎಲ್ಲರಿಗೂ ಆದರ್ಶಪ್ರಾಯ.

○ಮ. ಶ್ರೀ. ಮುರಳಿ ಕೃಷ್ಣ

ದೇಶದ ಜನತೆಗೆ ಸೌಹಾರ್ದದ ಹಾಗೂ ಆರೋಗ್ಯಪೂರ್ಣ ಸಮಾಜದ ಕಲ್ಪನೆ ಕನಸಿನ ಗಂಟಾಗದೆ ನಿಜವಾಗಬೇಕಾಗಿದೆ.

ಕಳೆದ ಹಲವು ವರ್ಷಗಳಲ್ಲಿ ಆಡಳಿತದಲ್ಲಿದ್ದ ಎನ್‌ಡಿಎ ಸರ್ಕಾರಕ್ಕೆ ಈ ದೇಶದ ದಲಿತರ, ಅಲ್ಪಸಂಖ್ಯಾತರ ಪರ, ಬಡಜನತೆಯ ಜೀವನದ ಬಗ್ಗೆ ಯಾವುದೇ ಕಾಳಜಿಗಳಿರಲಿಲ್ಲ. ಆ ಸರ್ಕಾರ ಕೇವಲ ಹೂಡಿಕೆದಾರರ, ಬಂಡವಾಳಶಾಹಿಗಳು ವ್ಯಾಪಾರಿಗಳ ಹಿತಾಸಕ್ತಿಯನ್ನು ಮಾತ್ರ ಕಾಪಾಡಲು ಪ್ರಾಮಾಣಿಕ ಪ್ರಯತ್ನ ನಡೆಸಿ, ಚುನಾವಣೆಯ ಸಂದರ್ಭದಲ್ಲಿ 'ಭಾರತ ಪ್ರಕಾಶಿಸುತ್ತಿದೆ' ಹಾಗೂ 'Fell good' ನಂತಹ ಹೇಳಿಕೆಗಳ ಮೂಲಕ ತನ್ನ ಗೋಮುಖ ವ್ಯಾಘ್ರತೆಯನ್ನು ಮರೆಯಲು ಪ್ರಯತ್ನಿಸಿತು. ಆದರೆ ಈ ದೇಶದ ಮತದಾರನನ್ನು ಎಲ್ಲಾ ಸಮಯದಲ್ಲಿಯೂ ಮೋಸಗೊಳಿಸಲು ಸಾಧ್ಯವಿಲ್ಲ ಎಂಬುದನ್ನು ಸಾಬೀತುಪಡಿಸಿದೆ. ಈ ಚುನಾವಣೆ ಆ ನಂಬಿಕೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ಈ ಸರ್ಕಾರಕ್ಕಿದೆ.

ಸೋನಿಯಾಗಾಂಧಿ ಪ್ರಧಾನಿಯಾಗುವ ಸುದ್ದಿ ಬಿಜೆಪಿಗಳಿಗೆ ಸಮೂಹ ಸನ್ನಿಯನ್ನು ಹಿಡಿಸಿತು. ತಾವೂ ಮಹಿಳೆಯರಾದರು ಸುಷ್ಮಾ ಸ್ವರಾಜ್ ಹಾಗೂ ಉಮಾಭಾರತಿಯಂತಹವರು ಈ ದೇಶದ ರಾಜ್ಯಭಾರವನ್ನು ನಿರ್ದೇಶಿಸುವ ಸ್ವಯಂ ಘೋಷಿತ ಹಿಟ್ಲರಿಣಿಗಳಂತೆ ಅಪ್ಪಟ ಚಡ್ಡಿಗಳಂತೆ ವಿರೋಧಿಸಿದರು.

ಆದರೆ ಅದೆಲ್ಲವನ್ನು ತುಂಬಾ ಗಂಭೀರವಾಗಿ ಹಾಗೂ ಸಾಕಷ್ಟು ಉದಾತ್ತತೆಯಿಂದ ಆಲೋಚಿಸಿದ ಸೋನಿಯಾ ಒಬ್ಬ ಸಂತಳಂತೆ ತನ್ನ ಸ್ಥಾನವನ್ನು ತೆರವುಗೊಳಿಸಿ ಈ ದೇಶದ ಜನತೆಯ ಧನ್ಯತೆಯ ಭಾವನೆಗೆ ಕಾರಣರಾದರು.

ಆಕೆಯ ಸಂತಳಂತಹ ಮನಸ್ಥಿತಿ ಈ ದೇಶದ ಜನತೆಯ ಬಗ್ಗೆ ಪ್ರೀತಿ ಹಾಗೂ ಔದಾರ್ಯವನ್ನು ಮೆರೆದಿದೆ. ಈ ಗಳಿಗೆಯವರೆಗೆ ತನ್ನ ಆದರ್ಶಗಳನ್ನೆಲ್ಲಾ ಈ ಸರ್ಕಾರದ ಮೂಲಕ ಈಡೇರಿಸಿಕೊಳ್ಳುವ ತವಕವನ್ನು ಹೊಂದಿರುವ ಕಮ್ಯೂನಿಸ್ಟ್ ಪಕ್ಷ ಸುಗಮವಾಗಿ ಆಡಳಿತ ನಡೆಸುವಂತಾಗಲಿ. ಈ ದೇಶದ ಜನತೆ ಸೌಹಾರ್ದಯುತ ವಾತಾವರಣದಲ್ಲಿ ಕನಿಷ್ಠ ಸಾಮಾನ್ಯ ಕಾರ್ಯಕ್ರಮಗಳ ಜೊತೆಗೆ ನೆಮ್ಮದಿಯಿಂದ ಬದುಕುವ ವಾತಾವರಣ ನಿರ್ಮಾಣವಾಗಲಿ ಎಂದು ಮನಸಾರೆ ಹಾರೈಸುತ್ತೇನೆ. □

ಚಳವಳಿಗಳಿಗೆ ಆಧ್ಯಾತ್ಮ ಅಗತ್ಯವೇ ?

ಒಳ ಚರ್ಚೆ

''ಕ್ರಾಂತಿಯು ತತ್ತ್ವಜ್ಞಾನದ ಜನನಿ, ಅಥವಾ ತತ್ತ್ವಜ್ಞಾನದ ಪ್ರಕಾಶವನ್ನು ಹರಡುವ ಜ್ಯೋತಿ'' ಎಂದು ಅಂಬೇಡ್ಕರರು ಹೇಳುತ್ತಾರೆ. ತತ್ತ್ವಜ್ಞಾನವೆಂದರೆ ವಸ್ತು ಮತ್ತು ಘಟನೆಗಳನ್ನು ಕುರಿತು ತೀರ್ಮಾನಿಸುವಾಗ ಅನುಸರಿಸುವ ವಿವೇಕ. ಯಾವುದೇ ಸಂದರ್ಭಗಳನ್ನು ಎದುರಿಸುವಾಗ ಅನುಸರಿಸಬೇಕಾದ ವಿವೇಕದ ಕೊರತೆ ದಲಿತ ಪೀಳಿಗೆಯಲ್ಲಿ ಎದ್ದು ಕಾಣುತ್ತಿದ್ದು ಈ ಸಮಸ್ಯೆ ಎಲ್ಲ ಸಮಸ್ಯೆಗಳಿಗಿಂತಲೂ ಕ್ಲಿಷ್ಟ. ದಲಿತ ನಾಯಕ ಅಥವಾ ಸಾಹಿತಿಗಳಿಗೆ ಯುವಕರಲ್ಲಿ ಒಂದು ಜಾಗೃತ ತಾತ್ವಿಕ ಕಟ್ಟು ಪಾಡುಗಳನ್ನಾದರೂ ಸ್ಥಾಪಿಸಲು ಪ್ರಯತ್ನಗಳು ನಡೆದಿಲ್ಲ ಎನ್ನಬಹುದು.

○ ಪದ್ಮಾಲಯ ನಾಗರಾಜ್

ಜಾಯಸೋ ವಿಷಯಾನ್ ಪುಂಸಃ । ಸಾಂಗ್ತೇಷು ಭಯಾಯತಿ ಸಂಗಾತ್ ಸಂಜಾಯತೇ ಕಾಮಃ । ಕಾಮಾತ್ ಕ್ರೋಧೋಬಿಜಾಯತೇ ಕೋಧಾದ್ಭವತಿ ಸಮ್ಮೊಹಃ। ಸಮ್ಮೋಹಃ ಸ್ಮೃತಿ ವಿಭ್ರಮಃ ಸ್ಮೃತಿ ಬ್ರಂಶಾತ್ ಬುದ್ದಿನಾಶೋ। ಬುದ್ಧಿ ನಾಶಾತ್ ಪ್ರಣಶ್ಯತಿ॥

ಇಂದಿನ ದಲಿತ ಚಿಂತನೆಯ ಪ್ರಮುಖ ವಿಚಾರಗಳಾದ ಜಾತಿ ಮೂಲಭೂತವಾದ, ಸಮಾನತೆ, ಶೋಷಣೆ, ಮೌಢ್ಯ, ಧರ್ಮಾಂಧತೆ ಇತ್ಯಾದಿಗಳ ಚರ್ಚೆ ಯಾವ ಹಂತ ತಲುಪಿದೆ ಎಂಬುದಕ್ಕೆ ಈ ಶ್ಲೋಕದ ಮೂಲಕ ಸುಲುಭವಾಗಿ ಅರ್ಥೈಸಬಹುದು.

.... ಇವೆಲ್ಲವುಗಳ ವಿಪರೀತ ಚಿಂತನೆಯ ಪರಿಣಾಮವಾಗಿ ಭಯ; ಭಯದಿಂದ ಆಸೆ; ಆ ಆಸೆಯಿಂದ ಅಸೂಯೆ; ಅಸೂಯೆಯಿಂದ ಭ್ರಮೆ; ಭ್ರಮೆಯಿಂದ ನಮ್ಮ ಆರೋಗ್ಯ ಪೂರ್ಣ ಚಿಂತನಾ ಕೋಶವು ಅಧಃ ಪತನವಾಗುತ್ತಾ, ಸ್ವಾಸ್ಥ್ಯ ಚಿಂತನೆಯನ್ನು ಕಳೆದುಕೊಳ್ಳುತ್ತಾ 'ದಲಿತತ್ವ ಅಥವಾ ದಲಿತ ವಿವೇಕ' ವನ್ನು ಇಂದು ನಾವೇ ಕಳೆದುಕೊಳ್ಳುವ ಹಂತ ತಲುಪಿದ್ದೇವೆ.

ದಲಿತ ಪ್ರಾಜ್ಞ ಮತ್ತು ವಿವೇಕಿಗೆ ಕಾಲಗತಿಯಲ್ಲಿ ಈ ರೀತಿಯ ಎಲ್ಲಾ ಸಮಸ್ಯೆಗಳು ಸಂಕೀರ್ಣವಾಗತೊಡಗಿವೆ. ಈ ಮುಂದುವರಿದ ನೆಲೆಯಲ್ಲೇ 'ಹೊಸ ತಲೆಮಾರಿನ ತಲ್ಲಣಗಳು' ಉದ್ಭವಿಸಿವೆ. ಈ ಸಮಸ್ಯೆಗಳ ಪರಿಹಾರೋಪಾಯವಾಗಿ ಒಂದು ಸಾಮೂಹಿಕ ಸ್ಪಷ್ಟ ನಿಲುವನ್ನು ತಾಳಲು ಸೋತುಹೋಗಿದ್ದಾನೆ.

ಈ ತಲ್ಲಣಗಳು ಹಲವು ಬಗೆಯಾಗಿ ನಮೂದಿಸಿರುವುದು ಇನ್ನೂ ವಿಷರ್ಯಾಸವೆನಿಸತೊಡಗಿದೆ. ಏಕೆಂದರೆ ಈ ತಲ್ಲಣಗಳು ಹುಟ್ಟಿ ಕೊಳ್ಳಲು ಕಾರಣ, ಕಾರಣದಲ್ಲಿಯೇ ಮೂಲವನ್ನು ಕಂಡುಕೊಳ್ಳುವ ನಿರ್ಧಾರಕ್ಕೆ ಬಂದಾಗ, ಎಲ್ಲಾ ತಲ್ಲಣಗಳ ಉದ್ಭವವು ಒಂದೇ ಕಾರಣ ದಿಂದಾಗಿವೆ ಎಂಬ ಸ್ಪಷ್ಟತೆಗೆ ಬರಬಹುದೆನಿಸುತ್ತದೆ.

ಈ ರೀತಿಯಾಗಿ ಸಾಗಿದಾಗ ಇದುವರಿಗೂ ನಾವು ಕೇವಲ ವಿಪರೀತವಾಗಿ ನಮ್ಮ ಸಮಸ್ಯೆಗಳನ್ನು ಆಲೋಚಿಸಿದೆವೆನಿಸುತ್ತದೆ. ವಿಪ ರೀತ ಚಿಂತನೆ ವೈಪರೀತ್ಯವನ್ನು ಸೃಷ್ಟಿಸಿದರೆ, ಗಾಢ ಚಿಂತನೆ ವಿಮೋಚನೆ ಯನ್ನು ಸೃಷ್ಟಿಸುತ್ತದೆ. ಹಾಗೂ ಸತ್ಯಪಥ ನಿಷ್ಠೂರವೂ ನಿಕೃಷ್ಟವೂ ಆಗಿದೆ ಎಂಬುದನ್ನು ನಾವು ಇದುವರಿಗೂ ಅರ್ಥಮಾಡಿಕೊಂಡಂತೆ ಕಾಣುವುದಿಲ್ಲ. ಈ ಸಂದರ್ಭದಲ್ಲಾದರೂ ದಲಿತ ಚಿಂತನಾಸಕ್ತರು ತಮ್ಮ ನಿಲುವುಗಳನ್ನು ಸತ್ಪಥದೊಂದಿಗೆ ಬದಲಿಸಿಕೊಳ್ಳದಿದ್ದರೆ ಬೇರೆ ಗತ್ಯಂತರವಿಲ್ಲ. ವೈಪರೀತ್ಯ: ಗಾಢತೆ, ಇಂದಿನ ದಲಿತ ನಾಯಕ/ಚಿಂತಕರ ಆಲೋಚನಾ ಪದ್ಧತಿಗೂ, ಅಂಬೇಡ್ಕರ್‌ರ ಆಲೋಚನಾ ಪದ್ಧತಿಗೂ ಇಷ್ಟೇ ವ್ಯತ್ಯಾಸ! ಈ ರೀತಿಯ ಕೋನದಲ್ಲಿ ದೃಷ್ಟಿ ಹಾಯಿಸಿದಾಗ ದಲಿತ ಚಳವಳಿಗಳು ಪ್ರಾರಂಭವಾದ ಅಂದಿನ ದಿನಗಳನ್ನು ಸ್ಮರಿಸಿಕೊಳ್ಳಲೇಬೇಕಿದೆ.

''ಯಾವುದೇ ಚಳವಳಿ ಅಥವಾ ಸಂಸ್ಥೆಯು ತಾತ್ವಿಕ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಆಯಾ ಚಳವಳಿಗಳು ಅಥವಾ ಸಂಸ್ಥೆಯು ಎದುರಿಸಿದ ಸಂಘರ್ಷ ಮತ್ತು ಕ್ರಾಂತಿಗಳನ್ನು ಅಧ್ಯಯನ ಮಾಡಬೇಕೆಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ''-ಅಂಬೇಡ್ಕರ್ (ಅಂ.ಭಾ.ಬ; ಸಂಪಿ..ಪು.ಸಂ.೧೧)

ಅಂದಿನ ಚಳವಳಿಗಳು ಸಂವಿಧಾನವು ನಮಗೆ ನೀಡಿದ ರಕ್ಷಣೆಯ ಅಡಿಪಾಯದ ಮೇಲೆ ಮಾನವೀಯ ಅನುಕಂಪದ ಸೌಧವನ್ನು ನಿರ್ಮಿಸಿದ್ದರು, ದುರಾದೃಷ್ಟವಶಾತ್ ಆ ಸೌಧಕ್ಕೆ ಮೌಢ್ಯತೆಯ ವಿರುದ್ಧವಾಗಿ ಅಸ್ವಸ್ಥವಾದ ನಾಸ್ತಿಕ ಬಣ್ಣ ಲೇಪಿಸಿದ್ದರು, ಆ ಚಳವಳಿಗಳು ಮಾನವೀಯ ಅನುಕಂಪಗಳ ಆಧಾರದ ಮೇಲೆ, ಭರವಸೆಗಳನ್ನು ಹುಟ್ಟಿಸಿದ್ದವು ಅದರಿಂದಾಗಿ ಐತಿಹಾಸಿಕವಾಗಿ ಸಾಫಲ್ಯಗೊಂಡವು. ಆದರೆ ಅಸ್ವಸ್ಥ ನಾಸ್ತಿಕ ವಾದವನ್ನು ಅಂದಿನ ಯುವಕರ ಮೇಲೆ ಎರಚಿದ ಪರಿಣಾಮವೇನು? ಈ ಪ್ರಶ್ನೆಯನ್ನು ಕೆಲವರು ಆಕ್ಷೇಪಿಸಬಹುದು। ಅಥವಾ ಉಪೇಕ್ಷೆ ತಾಳಬಹುದು.

''ದೇವರು ಅಥವಾ ಧರ್ಮದ ಮೂಲಕ ಹುಟ್ಟಿಕೊಳ್ಳುವ ಮೂಲ ಭೂತವಾದವು ಈ ಸಮಾಜಕ್ಕೆ ಎಷ್ಟು ಕಂಠಕವೋ! ಪ್ರಾಪಂಚಿಕ ಹಾಗೂ ಪಾರಮಾರ್ಥಿಕ ಪರಿಜ್ಞಾನವಿಲ್ಲದ ನಾಸ್ತಿಕವಾದವೂ ಅಷ್ಟೇ ಕಂಟಕ, ಅಪಾಯಕಾರಿಯೆಂದು ನಾನು ಆಪಾದಿಸುತ್ತೇನೆ''.

''ಕ್ರಾಂತಿಯು ತತ್ತ್ವಜ್ಞಾನದ ಜನನಿ, ಅಥವಾ ತತ್ತ್ವಜ್ಞಾನದ ಪ್ರಕಾಶವನ್ನು ಹರಡುವ ಜ್ಯೋತಿ'' ಎಂದು ಅಂಬೇಡ್ಕರರು ಹೇಳುತ್ತಾರೆ. (ಅದೇ ಪು.ಸಂ೧೧) 'ತತ್ತ್ವಜ್ಞಾನವೆಂದರೆ ವಸ್ತು ಮತ್ತು ಘಟನೆಗಳನ್ನು ಕುರಿತು ತೀರ್ಮಾನಿಸುವಾಗ ಅನುಸರಿಸುವ ವಿವೇಕ (ಅದೇ ಪು.ಸಂ೭). ಯಾವುದೇ ಸಂದರ್ಭಗಳನ್ನು ಎದುರಿಸುವಾಗ ಅನುಸರಿಸಬೇಕಾದ

ದಲಿತ ಚಳವಳಿಗೆ ಕಂಟಕವಾದ ನಾಸ್ತಿಕ ವಾದ

ವಿವೇಕದ ಕೊರತೆ ದಲಿತ ಪೀಳಿಗೆಯಲ್ಲಿ ಎದ್ದು ಕಾಣುತ್ತಿದ್ದು ಈ ಸಮಸ್ಯೆ ಎಲ್ಲ ಸಮಸ್ಯೆಗಳಿಗಿಂತಲೂ ಕ್ಲಿಷ್ಟ. ದಲಿತ ನಾಯಕ ಅಥವಾ ಸಾಹಿತಿಗಳಿಗೆ ಯುವಕರಲ್ಲಿ ಒಂದು ಜಾಗೃತ ತಾತ್ವಿಕ ಕಟ್ಟುಪಾಡುಗಳನ್ನಾದರೂ ಸ್ಥಾಪಿಸಲು ಪ್ರಯತ್ನಗಳು ನಡೆದಿಲ್ಲ ಎನ್ನಬಹುದು. ಇಲ್ಲಿ ಕ್ರಾಂತಿ ಎಂಬ ಪದವನ್ನು ನಮ್ಮಿಂದ ನಮ್ಮ ಏಳಿಗೆಗೆ ಬೇಕಾದ ''ಸಂಸ್ಕಾರಯುತ ಕ್ರಮ ಶಿಕ್ಷಣ''ದ ಅರ್ಥದಲ್ಲಿ ಗ್ರಹಿಸಬೇಕು. ೭೦-೮೦ರ ದಶಕದ ದಲಿತ ಚಳವಳಿಗಳು ಮಹಾನ್ ಕ್ರಾಂತಿಯನ್ನುಂಟು ಮಾಡುವ ಬದಲು ತತ್ಕಾಲಕ್ಕೆ ಸಾಫಲ್ಯಗೊಂಡ ದಲಿತ ಚಳವಳಿಗಳಾದವು. ಈ ಅಲ್ಪ ತೃಪ್ತಿಯಲ್ಲೇ ನಾವೆಲ್ಲ ನಲಿದಾಡಿದೆವು. ನಮ್ಮ ದಾರಿಯನ್ನು ನಾವು ಸರಿಯಾಗಿ ಕಂಡುಕೊಳ್ಳುವುದರಲ್ಲಿ ಸೋತೆವು ಎಂಬುದೊಂದಾದರೆ, ಸಂಘಟನೆಯ ಹೆಸರಿನಲ್ಲಿ ಆದದ್ದಂತೂ ಅಪಾಯಕಾರಿಯಾದ ವಿಘಟನೆ.

೧೨ನೇ ಶತಮಾನದಲ್ಲಿ ಬಸವಣ್ಣನವರು ಕ್ರಾಂತಿ ಮಾಡಿದರು. ವೇಮನ, ಅವ್ವೆಯಾರ್, ಸರ್ವಜ್ಞ ಇವರುಗಳು ಅವಿದ್ಯಾವಂತ ಸಮಾಜದಲ್ಲಿ ಬದುಕಿನ ದ್ವಂದ್ವಗಳನ್ನು ಅಳಿಸಿಹಾಕುವುದರ ಮೂಲಕ ಬದಲಾವಣೆ ತಂದರು. ೨೦ನೇ ಶತಮಾನದ ಮಾನವೀಯ ಮಹಾನ್ ಪ್ರಜ್ಞೆ ಡಾ.ಅಂಬೇಡ್ಕರರ ಕ್ರಾಂತಿಯ ಫಲವಾಗಿ ಈ ದೇಶದ ಹಣೆಬರಹವೇ ಬದಲಾಯ್ತು! ಆದರೆ ಒಂದು ನೈತಿಕ ಕ್ರಮ ಶಿಕ್ಷಣ ಅಥವಾ ನಮ್ಮಲ್ಲಿ ನಮಗೋಸ್ಕರ ಬದಲಾವಣೆಯ ವಿಚಾರವನ್ನು ಮನಸ್ಸಿನಲ್ಲಿ ಊಹಿಸಿಕೊಳ್ಳುವುದೂ ಕಷ್ಟವಾಗಿದೆ ಏಕೆ? ಈ ಬದಲಾವಣೆ ಸ್ವರೂಪ ಮತ್ತು ಅವಶ್ಯಕತೆಯ ಬಗ್ಗೆ ದಲಿತ ಪ್ರಾಜ್ಞರ ಹತ್ತಿರ ವಾದಿಸಿದ್ದೇನೆ. ಅವರ ಬಹುಶಃ ಉತ್ತರ ಹೇಗಿದೆ ಅಂದರೆ ವಸ್ತುಗಳ ಅವಲಂಬಿತ ಜೀವನ (Meterial life) ವನ್ನು ಮೀರಲಾಗದ ಅಸಹಾಯಕತನ ತೋಡಿಕೊಂಡಿದ್ದಾರೆ. ವಸ್ತುಗಳ ಮೇಲಿನ ಅವಲಂಬನೆ ಜಾಸ್ತಿಯಾಗಿದೆ ನಿಜ! ಆದರೆ ಇವೆಲ್ಲವುಗಳ ಉದ್ದೇಶ ಸುಖ ಮತ್ತು ತೃಪ್ತಿ ಇದೂ ಬದಲಾವಣೆಯೆ? ಕೇವಲ ವಸ್ತುಗಳನ್ನು ಪಡೆದುಕೊಳ್ಳುವುದಕ್ಕೋಸ್ಕರ ವಿವೇಕವನ್ನು ಮತ್ತು ಅಂತಃಕರುಣೆಯನ್ನು ಕೊಂದುಕೊಳ್ಳುವುದು ಯಾವ ಸತ್ಪಥದ ಸಮರ್ಥನೆ? ಇದನ್ನು ಆಮೇಲೆ ಚರ್ಚಿಸೋಣ.

ಭಾರತದ ಪ್ರಾಥಮಿಕ ದುರಾದೃಷ್ಟವೇನೆಂದರೆ ಇಲ್ಲೊಂದು ಸತ್ಪಥದ ಆಯ್ಕೆ ಸಾಫಲ್ಯವಾಗಬೇಕೆಂದರೆ ''ಹಿಂದೂ ಧರ್ಮದ ಪ್ರಬಲ ಯೋಜನೆಗಳನ್ನು'' (ಪಂಚ ಪ್ರಾಣಗಳು) ಭೇದಿಸದೇ ಮಾಡುವ ಯಾವ ಚಳವಳಿಗಳೂ ಪ್ರಬಲವಾಗಲಾರವು ಎಂಬುದನ್ನು ಸುಧಾರಕರ ಜೀವನ ಚರಿತ್ರೆ ತಿಳಿಹೇಳುತ್ತದೆ. ವಾಸ್ತವದಲ್ಲಿ ಭಾರತೀಯನ ಮಟ್ಟಿಗೆ ಹಿಂದೂ ಧರ್ಮವು ಬದುಕಿನ ಪ್ರತಿಯೊಂದು ಘಟನೆಗಳಲ್ಲಿ ನಿಯಂತ್ರಣ ಶಕ್ತಿಯಾಗಿ ಅತಿಕ್ರಮ ಪ್ರವೇಶಮಾಡಿ ತನ್ನ ವಜ್ರ ಕೋಟೆಯನ್ನು ನಿರ್ಮಿಸಿಕೊಂಡಿದೆ ಎಂದುದನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಸನಾತನ ಹಿಂದೂವಿನ ಪಂಚಪ್ರಾಣಗಳನ್ನು ಭೇದಿಸುವುದು ಸುಲಭ.

ಭಾರತದ ಪ್ರಾಥಮಿಕ ದುರಾದೃಷ್ಟವೇನೆಂದರೆ ಇಲ್ಲೊಂದು ಸತ್ಪಥದ ಆಯ್ಕೆ ಸಾಫಲ್ಯವಾಗಬೇಕೆಂದರೆ ''ಹಿಂದೂ ಧರ್ಮದ ಪ್ರಬಲ ಯೋಜನೆಗಳನ್ನು'' (ಪಂಚ ಪ್ರಾಣಗಳು) ಭೇದಿಸದೇ ಮಾಡುವ ಯಾವ ಚಳವಳಿಗಳೂ ಪ್ರಬಲವಾಗಲಾರವು ಎಂಬುದನ್ನು ಸುಧಾರಕರ ಜೀವನ ಚರಿತ್ರೆ ತಿಳಿಹೇಳುತ್ತದೆ. ವಾಸ್ತವದಲ್ಲಿ ಭಾರತೀಯನ ಮಟ್ಟಿಗೆ ಹಿಂದೂ ಧರ್ಮವು ಬದುಕಿನ ಪ್ರತಿಯೊಂದು ಘಟನೆಗಳಲ್ಲಿ ನಿಯಂತ್ರಣ ಶಕ್ತಿಯಾಗಿ ಅತಿಕ್ರಮ ಪ್ರವೇಶಮಾಡಿ ತನ್ನ ವಜ್ರ ಕೋಟೆಯನ್ನು ನಿರ್ಮಿಸಿಕೊಂಡಿದೆ ಎಂದುದನ್ನು ಅರ್ಥಮಾಡಿಕೊಳ್ಳುವುದರ ಮೂಲಕ ಸನಾತನ ಹಿಂದೂವಿನ ಪಂಚಪ್ರಾಣಗಳನ್ನು ಭೇದಿಸುವುದು ಸುಲಭ.

ಇಲ್ಲಿ ಹೇಗೆ ಜೀವಿಸಬೇಕು? ಶವ ಸಂಸ್ಕಾರ ಹೇಗೆ? ಮಗು ಜನಿಸಿದಾಗ ಯಾವ ಆಚರಣೆಗಳನ್ನು ಮಾಡಬೇಕು? ಮದುವೆ ಎಂದರೆ ಹೇಗೆ? ಹಬ್ಬಗಳನ್ನು ಹೇಗೆ ಆಚರಿಸಬೇಕು? ಆಗ ಎಂತಹ ಆಹಾರ ಸೇವಿಸಬೇಕು? ಅಥವಾ ತಿನ್ನಬಾರದು? ಮನೆ ಕಟ್ಟುವಾಗ ಎಂತಹ ನಿಯಮಗಳನ್ನು ಪಾಲಿಸಬೇಕು?.......

ಇದರ ಜೊತೆಗೆ ದೇವಾನು ದೇವತೆಗಳ ಚಿತ್ರ-ವಿಚಿತ್ರ ಸಂಸ್ಕೃತಿಗಳೂ ನಮ್ಮಲ್ಲಿ ಮನೆ ಮಾಡಿಕೊಳ್ಳಲು ಪ್ರಾರಂಭಿಸಿದೆ...ಇಲ್ಲಿ ನಾವು ಅರ್ಥಮಾಡಿಕೊಳ್ಳಬೇಕಾಗಿರುವುದು ಇಷ್ಟೇ. ನಮ್ಮ ಸಮಾಜದ ಬ್ರಾಹ್ಮ ರಿಗೂ ಸಹಿತ ಮನುಸ್ಮೃತಿ ಓದಿಲ್ಲ, ಬಾದರಾಯಣನ ಬ್ರಹ್ಮಸೂತ್ರಗಳು ಭಗವದ್ಗೀತೆ, ಶಾಸ್ತ್ರಗಳೂ ಗೊತ್ತಿಲ್ಲ ಆದರೆ ಆ ಪುಸ್ತಕಗಳು ಹೇಳುವ ಎಲ್ಲಾ ಧಾರ್ಮಿಕ ನಿಯಮಗಳನ್ನು ಜನರು ಪಾಲಿಸುತ್ತಿದ್ದಾರೆ. ಇದು ಧರ್ಮದ ಲೀಲೆ.

...ಹೀಗೆ ಧರ್ಮವು ಸ್ವಯಂ ನಿಯಂತ್ರಿತ ಸಾಮಾಜಿಕ ಶಕ್ತಿಯಾಗಿ ಅದು ಹೇಗೆ ಪ್ರಬಲವಾಗಿದೆ ಎಂದರೆ ಅದನ್ನೆಷ್ಟು ತೀವ್ರವಾಗಿ ವಿರೋಧಿಸಿದರೂ ಅದರ ನಿಯಮಕ್ಕೆ ಒಂದಿಲ್ಲೊಂದು ರೀತಿಯಲ್ಲಿ ಬದ್ಧರಾಗುತ್ತಾ ಅನಾಮದೇಯ ಅನಾಮಿಕ ಮೂಲಭೂತ ವಾದಕ್ಕೆ ನಾವೂ ಸಹ ಬದ್ಧರಾಗಲೇಬೇಕಿದೆ. ಇದು ಹೇಗಿದೆ ಎಂದರೆ ಮೂಲಭೂತವಾದದ ವಿರುದ್ಧದ ಏಕೈಕ ದನಿ ಕ್ಷೀಣಗೊಳ್ಳುವ ಅಪಾಯವನ್ನು ಇಂದು ನಾವೇ ಸೃಷ್ಟಿಸಿದಂತಾಯಿತು. ಇದು ಮೂಲಭೂತವಾದವನ್ನು ನಿರಂತರ ಪೋಷಿಸುವ ಕ್ರಿಯೆ, ಮೂಲಭೂತವಾದವನ್ನು ವಿರೋಧಿಸುತ್ತಾ ಅದರದೇ ಭಾಗವಾದ ನರಸಿಂಹನಿಗೆ ಬಲಿಯಾದ ಹಿರಣ್ಯಕಶ್ಯಪುವಿನಂತೆ, ಹಿರಣ್ಯಾಕ್ಷನಂತೆ, ಘಟೋದ್ಗಜನಂತೆ.

ಮೂಲಭೂತವಾದವು ಏನಿದೆಯೋ ಅದು ಭಾರತೀಯನ ವಾಸ್ತವಿಕ ಸಮಾಜದಲ್ಲಿ ಪರಿಣಾಮಕಾರಿಯಾಗಿದೆ. ನಮ್ಮ ಮನಸ್ಸಿನ ಉದ್ದಗಲದಲ್ಲಿ ನಮ್ಮ ನಿಯಂತ್ರಣ ಶಕ್ತಿಯ ಮತ್ತೊಂದು ರೂಪ ಪಡೆದು ಅದು ನಿಷ್ಕಳಂಕವಾಗಿ ಪ್ರಪಂಚವಾಗಿದೆ. ಈ ರೀತಿಯಾಗಿ ನಾವು ಮತಾಂತರವಾಗುವ ಪ್ರಶ್ನೆ ಸಹಜವಾಗಿ ಉದ್ಭವಿಸಿದರೂ ಇದರಲ್ಲಿ ಸತ್ಯವನ್ನು ತಿರುಚುವ ಅಪಾಯವೇ ಹೆಚ್ಚಿದೆ.

೧. ಅಂಬೇಡ್ಕರ್ ಏಕೆ ಮತಾಂತರವಾದರು?

ಈ ಪ್ರಶ್ನೆಗೆ ನಮ್ಮಲ್ಲಿರುವ ಬಹುಶಃ ಉತ್ತರ ಜಾತಿ, ಧರ್ಮ, ಅನೇಕ ಕಾರಣಗಳಲ್ಲಿ ಇದು ಒಂದಾಗಿರಬಹುದು.

ಮುಖ್ಯವಾಗಿ ಸತ್ಯವನ್ನು ಒಪ್ಪಿಕೊಳ್ಳುವುದರ ಮೂಲಕ ಅಸತ್ಯವನ್ನು ನಿರಾಕರಿಸಲು. ಹುಟ್ಟು ಸಾವುಗಳ ಮಧ್ಯೆ ಒಂದು ಅವಕಾಶವಾಗಿ ಬಂದ ಬದುಕು ಒಂದು ಸುಯೋಗವಂತೂ ಅಲ್ಲ! ತಾನು ಕಂಡುಕೊಂಡಿರುವ ವಿವೇಕವನ್ನು ವಾಸ್ತವಿಕ ಪ್ರಪಂಚದೊಂದಿಗೆ ರಾಜೀ ಮಾಡಿಕೊಳ್ಳುವುದು ಧೀಮಂತನ ಲಕ್ಷಣವಲ್ಲ ಎಂಬೀ ಕಾರಣಗಳು ನನಗೆ ಮುಖ್ಯವಾದವುಗಳು. ಈ ಮಹತ್ತರ ಕಠಿಣ ಪರಿಶ್ರಮದಿಂದಾಗಿಯೇ ಭಾರತದ ದಲಿತನು ಇಲ್ಲಿ ಸುಧಾರಣೆಗೊಂಡ. ಇಂದು...

★ ತನ್ನ ವಿವೇಕವನ್ನು ಅಲ್ಪ ಜೀವನ ಕಾರಣಕ್ಕಾಗಿ ಬಲಿಕೊಡುವ ನಾಯಕ ಅಥವಾ ಸಾಹಿತಿ ಏನು ತಾನೇ ಮಾಡಬಲ್ಲ?

★ ಸತ್ಯವನ್ನು ಒಪ್ಪಿಕೊಳ್ಳಲು ಪುರುಣತ್ವವಿಲ್ಲದೆ ಅಸತ್ಯವನ್ನೇ ಸತ್ಯವೆಂದು ಭ್ರಮಿಸಿ, ವಾದಿಸುವ ನಾಯಕ ಅಥವಾ ಬುದ್ಧಿಜೀವಿ ಯಾವ ಸುಧಾರಣೆ ತರಬಲ್ಲ?

★ ಅಂಬೇಡ್ಕರ್, ಕಾಲಮಾರ್ಕ್ಸ್, ಲೋಹಿಯಾ ಎಂದು ಮಾತನಾಡುತ್ತಾ ಕಾಡುವ ಪಾಪಪ್ರಜ್ಞೆಯ ಫಲವಾಗಿ ದೇವರು ಮತ್ತು ಕ್ಷುಲ್ಲಕ ಆಚರಣೆಗಳನ್ನೆಲ್ಲಾ ದಲಿತರ ಮೂಲಸ್ವತ್ತೆಂದು ವಾದಿಸುವ ಅವಿವೇಕಿಗೆ 'ದಲಿತತ್ವವನ್ನು' ಉಳಿಸಬೇಕಾದ ಅನಿವಾರ್ಯತೆಯ, ಕಾಳಜಿಯ ರುಚಿ ಗೊತ್ತೆ?

★ ಸ್ವಯಂ ವಿವೇಚನಾ ಶಕ್ತಿ ಇಲ್ಲದೆ ಬದುಕಿನ ದ್ವಂದ್ವಗಳಲ್ಲಿ ಸಮೀಪವರ್ತಿ ಪ್ರಭಾವಗಳಿಗನುಗುಣವಾಗಿ, ಅನುಕರಿಸುವ ಅಂತಃಸತ್ವ ಹೀನನು ಹೇಗೆ ಜಗತ್ತಿನ ದುಃಖಕ್ಕೆ ಸ್ಪಂದಿಸಬಲ್ಲ?

ಕ್ಷಮಿಸಿ! ವಿಷಯಕ್ಕೆ ಬರುತ್ತೇನೆ. ಹಿಂದೂವಿನ ವಜ್ರ ಶರೀರದಲ್ಲಿನ ಪಂಚ ಪ್ರಾಣಗಳನ್ನು ಬೇಧಿಸದೇ ಭಾರತದ ಮಟ್ಟಕ್ಕೆ ಯಾವ ಚಳವಳಿಗಳೂ ಕ್ರಾಂತಿಕಾರಿಗಳಾಗಿ ಪರಿಣಮಿಸಲಾರವು ಎಂಬ ನಿರ್ಧಾರವನ್ನು ಅಂಬೇಡ್ಕರರು ಸಂಸ್ಕೃತ ಅಧ್ಯಯನ ಮಾಡಿದ ಅತ್ಯಾವಶ್ಯಕತೆಯಲ್ಲಿ ಕಾಣಬಹುದು. ಸಂತಸದ ವಿಚಾರವೇನೆಂದರೆ ನಾವಿಂದು ಹಿಂದುವನ್ನು ವೇದ, ಉಪನಿಷತ್ ಭಗವದ್ಗೀತೆ ಪುರಾಣಗಳಲ್ಲಿ ಹುಡುಕುವ ಕಷ್ಟಕ್ಕೆ ಸಿಲುಕಬೇಕಾಗಿಲ್ಲ. ಅಂಬೇಡ್ಕರ್ ಅದನ್ನಾಗಲೇ ಶೋಧಿಸಿ ತೆಗೆದಿದ್ದಾರೆ. ಅವರ ''ನ್ಯಾಯ ಮತ್ತು ತರ್ಕ''ಗಳ ಮುಂದೆ ವೇದ, ಶಾಸ್ತ್ರ ಪುರಾಣ, ಭಗವದ್ಗೀತೆ ಶೃತಿ ಮತ್ತು ಸ್ಮೃತಿಗಳ ಸಾರ ಸರ್ವಸ್ವವಾದ ದೈವ ಮತ್ತು ಆತ್ಮ (ಪರಮಾತ್ಮ ಪರಬ್ರಹ್ಮ ಎಂದೂ ಕರೆಯಬಹುದು) ಅಪರಾಧಿ ಸ್ಥಾನದಲ್ಲಿ ಕೈಕಟ್ಟಿ ನಿಂತುಕೊಂಡಂತೆ ಭಾಸವಾಗುತ್ತದೆ.

ಜೀವನದ ಆಕಸ್ಮಿಕಗಳಿಗೆ 'ವಿಧಿ'ಯೆಂದರು ವಿಧಿಯಿಂದ ಮೌಢ್ಯತೆ ಉಂಟಾಯಿತು. ಮೌಢ್ಯತೆಯಿಂದ ಅಜ್ಞಾನ ಆವರಿಸಿತು ವಿಧಿಕರ್ತನು ಬ್ರಹ್ಮನೆಂದರು ಹುಟ್ಟು ಸಾವುಗಳಿಗೂ ಅನೇಕ ದೇವರುಗಳನ್ನು ಕರ್ತನನ್ನಾಗಿಸಿದವು ಗ್ರಂಥಗಳು.

ಮಾನವನ ಕಷ್ಟ ಸುಖಗಳಿಗೆ, ರೋಗ ರುಜಿನಗಳಿಗೆ ಕರ್ಮ ಪಾಪ ಎಂದರು ಆ ಕರ್ಮಕ್ಕೆ ಹಿಂದಿನ ಜನ್ಮದ ಪಾಪ ಅಂಟಿಸುತ್ತಾ ತನ್ಮೂಲಕ ಪುನರ್ಜನ್ಮ ಸೃಷ್ಟಿಯಾಯಿತು. ಆ ಪುನರ್ಜನ್ಮಕ್ಕೆ ಆತ್ಮನನ್ನು ಕಾರಣೀಭೂತನನ್ನಾಗಿಸಿದರು.

ಸ್ಪರ್ಶನ್। ಶೃಣ್ವನ್। ಗಚ್ಛನ್। ಪ್ರಲಪನ್
ಇಂದ್ರಯಾಣಿಂದ್ರಿಯಾರ್ಥೇಷು ಇತಿಧಾರಯನ್
-ಭಗವತೀತೆ.

ಚರ್ಮವು ಸಾಯುವವರಿಗೂ ಕ್ಷಣವೂ ತಪ್ಪದೇ ಸ್ಪರ್ಶಜ್ಞಾನವನ್ನಿಟ್ಟುಕೊಳ್ಳುತ್ತದೆ. ಹಾಗೆಯೇ ಕಣ್ಣು, ಕಿವಿ, ಮೂಗು, ನಾಲಿಗೆ ಮನಸ್ಸು ತಂತಮ್ಮ ಕಾರ್ಯ ಮಾಡುತ್ತಲೇ ಇರುತ್ತವೆ. ಇಂತಹ ಯಾವ ಇಂದ್ರಿಯದ ಅನುಭವಕ್ಕೂ ವ್ಯಕ್ತವಾಗದಿರುವುದೇ 'ಆತ್ಮ'. ಈ ಆತ್ಮ ತತ್ತ್ವವನ್ನು ಯಾರು ಕಂಡುಕೊಳ್ಳುತ್ತಾರೋ ಅವರೇ ಮೋಕ್ಷ ಜೀವಿಗಳು, ಅವರು ಮತ್ತೆ ಹುಟ್ಟಲಾರರು. ಅವರು ಭಗವತ್ ಸ್ವರೂಪರು ಆಗಿದ್ದಾರೆ.

★ ಹಿಂದೂವಿನ ದೃಷ್ಟಿಯಲ್ಲಿ ಮೋಕ್ಷ ಪಡೆದವನು ಯಾರು? ಪ್ರಕೃತಿದತ್ತವಾದ ಆಸೆ-ಆಕಾಂಕ್ಷೆಗಳನ್ನೆಲ್ಲಾ ನಿರ್ಬಂಧಿಸಿ ಬದುಕಿನ ಅಸ್ತಿತ್ವವನ್ನು ಕಳೆದುಕೊಂಡವನು. ಇಂತಹ ವಿಚಿತ್ರ ಆತ್ಮದ ಕಲ್ಪನೆಯನ್ನು ಭಗವತ್ಗೀತೆ ಹೇಗೆ ಸಮರ್ಥಿಸುತ್ತದೆಂಬುದಕ್ಕೆ ಅಂಬೇಡ್ಕರ್ ಹೀಗೆ ಹೇಳುತ್ತಾರೆ

'ದೇಹ ಮತ್ತು ಆತ್ಮ ಬೇರೆ ಬೇರೆಯಾದವು. ದೇಹ ನಶ್ವರ, ಆತ್ಮ ಅಮರ, ಸಾವು ಬಂದರೆ ಶರೀರ ಸಾಯುತ್ತದೆ. ಆತ್ಮ ಸಾಯುವುದಿಲ್ಲ ಅದನ್ನು ಗಾಳಿ ಒಣಗಿಸಲಾರದು, ಬೆಂಕಿ ಸುಡಲಾರದು ಶಸ್ತ್ರ ಕತ್ತರಿಸಲಾರದು. ಆದ್ದರಿಂದ ಮನುಷ್ಯನನ್ನು ಕೊಂದಾಗ ಅವನ ಆತ್ಮ ಸತ್ತಿತೆಂದು ತಿಳಿಯುವುದು ತಪ್ಪು. ದೇಹ ಮಾತ್ರ ಸಾಯುತ್ತದೆ. ವ್ಯಕ್ತಿ ಹಳೆಯ ಬಟ್ಟೆಗಳನ್ನು ಬಿಸಾಡುವಂತೆ ಆತ್ಮ ದೇಹವನ್ನು ತ್ಯಜಿಸುತ್ತದೆ. ಆತ್ಮ ಎಂದೂ ಕೊಲೆಯಾಗುವುದೇ ಇಲ್ಲದಿರುವುದರಿಂದ ವ್ಯಕ್ತಿಯನ್ನು ಕೊಲ್ಲುವುದು ತಪ್ಪಲ್ಲ. ಆದ್ದರಿಂದ ಯುದ್ಧ ಮತ್ತು ಕೊಲೆ ಮಾಡಲು ಯಾರೂ ಪಾಶ್ಚಾತ್ತಾಪ ಪಡಬೇಕಿಲ್ಲ'' -ಅಂಬೇಡ್ಕರ್ (ಅಂ.ಭಾ.ಬ.ಸಂಪು.ಪು.ಸಂ ೫೨೫)

ಹಾಗಾದರೆ ಮೋಕ್ಷ ಅಥವಾ ವಿಮೋಚನೆ ಎಂಬುದನ್ನು ಅಂಬೇಡ್ಕರ್ ಎಲ್ಲಿ ಕಂಡುಕೊಂಡರು? ಜಗತ್ತಿನ ದುಃಖ ಮತ್ತು ಅಶಾಂತಿಗೆ ಮೂಲವನ್ನು ಹುಡುಕುವುದರಲ್ಲಿ ಬುದ್ಧ ಮೋಕ್ಷವನ್ನು ಕಂಡುಕೊಂಡಿರುವುದನ್ನು ಸಮ್ಮತಿಸಿದರು. ಇಲ್ಲಿ ದೇವರು ಮತ್ತು ಆತ್ಮವನ್ನು ಪ್ರಯೋಜನಕಾರಿಯೆಂದು ಪರಿಗಣಿಸಿಲ್ಲ ಏಕೆಂದರೆ ನಿಜವಾದ ಜ್ಞಾನಕ್ಕಾಗಲಿ, ಕಾಮ ಭಾವನೆಯ ಶುದ್ಧಿಗಾಗಲಿ, ಹೃದಯ ತೃಪ್ತಿಗಾಗಲಿ, ಉತ್ತಮ ನಡೆತೆಯ ಅಂಶಗಳಿಗಾಗಲಿ ಅದು ಪ್ರಯೋಜನಕಾರಿ ಅಲ್ಲ.

★ ಹಿಂದೂವಿನ ಮೋಕ್ಷ ಜೀವಿ ಆಸೆಗಳನ್ನು ನಿರ್ಬಂಧಿಸುವಂತೆಯೇ ಬುದ್ಧ ಕೂಡಾ ಆಸೆಯೇ ದುಃಖಕ್ಕೆ ಮೂಲ ಕಾರಣ ಎನ್ನುತ್ತಾನಲ್ಲಾ?

ಹಿಂದೂವಿನ ಪ್ರಕಾರ ಅಸ್ತಿತ್ವವನ್ನು ಕಳೆದುಕೊಳ್ಳುವುದು ಮೋಕ್ಷವಾದರೆ, ಬುದ್ಧನ ಮಾತು ಆಸೆಯೇ ದುಃಖಕ್ಕೆ ಕಾರಣ ಎಂದ ಮಾತ್ರಕ್ಕೆ ಆಸೆಗಳನ್ನು ಕೊಂದುಕೋ ಎಂದು

> ಧರ್ಮವು ಸ್ವಯಂ ನಿಯಂತ್ರಿತ ಸಾಮಾಜಿಕ ಶಕ್ತಿಯಾಗಿ ಅದು ಹೇಗೆ ಪ್ರಬಲವಾಗಿದ ಎಂದರೆ ಅದನ್ನೆಷ್ಟು ತೀವ್ರವಾಗಿ ವಿರೋಧಿಸಿದರೂ ಅದರ ನಿಯಮಕ್ಕೆ ಒಂದಿಲ್ಲೊಂದು ರೀತಿಯಲ್ಲಿ ಬದ್ಧರಾಗುತ್ತಾ ಅನಾಮದೇಯ ಅನಾಮಿಕ ಮೂಲಭೂತ ವಾದಕ್ಕೆ ನಾವೂ ಸಹ ಬದ್ಧರಾಗಲೇಬೇಕಿದೆ. ಇದು ಹೇಗಿದೆ ಎಂದರೆ ಮೂಲಭೂತವಾದದ ವಿರುದ್ಧದ ಏಕೈಕ ದನಿ ಕ್ಷೀಣಗೊಳ್ಳುವ ಅಪಾಯವನ್ನು ಇಂದು ನಾವೇ ಸೃಷ್ಟಿಸಿದಂತಾಯಿತು.

ಅರ್ಥವಲ್ಲ. ಇದೊಂದು ತಪ್ಪು ಕಲ್ಪನೆ ನಿನ್ನ ಬದುಕನ್ನು ಪ್ರೀತಿಸು, ಬೇರೊಬ್ಬರೂ ಬದುಕುವುದನ್ನೂ ಪ್ರೀತಿಸು, ಅವಕಾಶ ನೀಡು. ಸಹೋದರತೆಯಿಂದ ನಡೆಯುವುದರಲ್ಲಿ ಸುಖವಿದೆ. ಅದುವೇ ಮಹಾಭಾವ. ಆ ಮಹಾಭಾವದ ತುತ್ತತುದಿಯೇ ಮೋಕ್ಷವೆಂದ. ಈ ರೀತಿಯಾಗಿ ಬದುಕಿ ವಾಸ್ತವತೆಯಲ್ಲಿ ಸತ್ಪಥ ಮಾರ್ಗ ಕಂಡುಕೊಳ್ಳುವುದೇ ಮೋಕ್ಷ.

....ಹೀಗೆ ಅಂಬೇಡ್ಕರರು ಮುಂದಿನ ದಲಿತ ಪೀಳಿಗೆಗಾಗಿ ಎಲ್ಲಾ ಸಮಸ್ಯೆಗಳಿಗೆ ಪೂರ್ವಬಾವಿಯಾಗಿ ಸಂಪನ್ಮೂಲವನ್ನಿರಿಸಿ ಹೋಗಿದ್ದರು. ಆದರೆ ಅವರ ಮಾರ್ಗದಲ್ಲಿ ಬಹುಶಃ ದಲಿತ ಪ್ರಾಜ್ಞನ ಗೈರು ಎದ್ದು ಕಾಣುತ್ತಿದೆ. ಈ ಪರಿಸ್ಥಿತಿಯಲ್ಲಿ ಎಲ್ಲೋ ಕೆಲವರು ಬೌದ್ಧ ಧರ್ಮದ ಕಡೆಗೆ ಬೆರಳು ತೋರಿಸುತ್ತಿದ್ದಾರೆ. ಅಂಬೇಡ್ಕರರು ಅರ್ಥೈಸಿಕೊಂಡಿರುವ ಬುದ್ಧನಿಗೂ ಪ್ರಸ್ತುತದಲ್ಲಿ ಆಚರಣೀಯವಾದ ಬುದ್ಧನಿಗೂ ಅಜಗಜಾಂತರವಿದೆ ಎಂಬುದು ಗಮನಾರ್ಹ. ಮಿಗಿಲಾಗಿ ಅಂಬೇಡ್ಕರ್ ಹಾದಿಯೇ ಸರ್ವಶ್ರೇಷ್ಠವೆಂದೂ ಇತರ ಎಲ್ಲಾ ಮಾರ್ಗಗಳಿಂದ ನಮಗೆ ಅಪಾಯಕಾರಿಯೆಂದು ನಾವು ಭಾವಿಸುವುದು ಸರಿಯಾಗಿದೆ. ಏಕೆಂದರೆ ನಿಜವಾದ ಧರ್ಮ ಮಾನವನ ಹೃದಯದಲ್ಲಿದೆ ಶಾಸ್ತ್ರಗಳಲಲ್ಲ.

ಈ ನಿಟ್ಟಿನಲ್ಲಿ ಅಂಬೇಡ್ಕರರ ಆಧ್ಯಾತ್ಮ ಚಿಂತನೆಯನ್ನು ದಲಿತ ಪ್ರಾಜ್ಞರು ಅರ್ಥೈಸಿಕೊಂಡು ಒಂದು ಕಡ್ಡಾಯ ನೀತಿ ಸಂಹಿತೆಯನ್ನಾದರೂ ಜಾರಿಗೆ ತರಬಹುದೆನಿಸುತ್ತದೆ. ಈ ರೀತಿಯ ಬದ್ಧತೆ ಬದುಕನ್ನು ಎಷ್ಟು ಮಹತ್ವವಾಗಿಸುತ್ತದೆ ಎಂಬುದನ್ನು ಜನರಲ್ಲಿ ಜಾಗೃತಿ ಉಂಟುಮಾಡಿ ಎಲ್ಲಾ ಮಹನೀಯರು ಒಂದು ಒಮ್ಮತಕ್ಕೆ ಬಂದು ಈ ನಿಟ್ಟಿನಲ್ಲಿ ಕ್ರಿಯೆ-ಪ್ರಕ್ರಿಯೆಗಳನ್ನು ಸಂಗ್ರಹಿಸಿ ನಿರ್ದಿಷ್ಟಪಡಿಸಿದ ಕೆಲವು ಮಹತ್ತೂರ್ಣ ನಿಯಮಗಳನ್ನೂ ಸ್ಪಷ್ಟಪಡಿಸಬಹುದಾಗಿದೆ.

ಹಾಗಾಗಿ ನಾನು ಬುದ್ಧನನ್ನು ಅರ್ಥಮಾಡಿಕೊಂಡಂತೆ ಈ ರೀತಿಯಾಗಿ ನನ್ನ ಅಭಿಪ್ರಾಯವನ್ನು ಸಂಗ್ರಹಿಸುವುದರ ಮೂಲಕ ನಮ್ಮ ತಲ್ಲಣಗಳನ್ನು ಕಡೆಯಲು ಸಾಧ್ಯ ಎಂದು ನಂಬುತ್ತೇನೆ.

★ ಈ ನೀತಿ ಸಂಹಿತೆಯನ್ನು ಬೇರೋಬ್ಬರ ಒತ್ತಡಕ್ಕಲ್ಲದೇ ನಾನೇ ಸ್ವಯಂ ವಿವೇಚನೆಯಿಂದ ಪ್ರೀತಿಯಿಂದ ಬದುಕಿನ ಸಾರ್ಥಕತೆಗೋಸ್ಕರ ಸ್ವೀಕರಿಸುತ್ತಿದ್ದೇನೆ.

★ ನಮ್ಮ - ನಮ್ಮಗಳ ನಡುವೆ ಸಂಘರ್ಷ ಮನೋಭಾವವಿದೆ. ನನ್ನವರ ಮತ್ತು ನನ್ನ ಉಳಿವಿಗಾಗಿ ಇಂತಹ ಮನೋವೃತ್ತಿಯನ್ನು ಬಿಟ್ಟು ಬಿಡುವುದರ ಮೂಲಕ ಆಧ್ಯಾತ್ಮಿಕವಾಗಿ ಪರಿವರ್ತನೆಯಾಗುತ್ತೇನೆ.

★ ಆಧ್ಯಾತ್ಮಕ ಎಂದರೆ ದೇವರು - ಆತ್ಮದ ಊಹೆ ಅಲ್ಲ, ಬದಲಾಗಿ ಬದುಕನ್ನು ಪರಿಶುದ್ಧಗೊಳಿಸಿ ಕೊಳ್ಳುವ ಪ್ರಯತ್ನ ಎಂದು ಅರಿತವರಿಂದ ತಿಳಿದುಕೊಳ್ಳುತ್ತೇನೆ.

★ ದೇವರು - ಆತ್ಮ ಇಲ್ಲ! ಜ್ಞಾನವನ್ನು ಪಡೆದವನು ಎಲ್ಲಕ್ಕಿಂತಲೂ ಶ್ರೇಷ್ಠ ಜ್ಞಾನಿಗಿಂತ ನೈತಿಕವಾಗಿ ಬದುಕುವವನು ಅತೀ ಹಿರಿಯ.

★ ದುಃಖ, ಅಶಾಂತಿ ಇವೆರಡಕ್ಕೂ ಕಾರಣ ನನ್ನ ದುರ್ನಡತೆ ಎಂದು ಭಾವಿಸುತ್ತೇನೆ. ಇದರಿಂದ ಪಾರಾಗಲು ಸ್ವವಿಮರ್ಶೆಯನ್ನು ಅಭ್ಯಾಸ ಮಾಡುತ್ತೇನೆ.

★ ಸ್ವಕೇಂದ್ರಿತನಾಗಿ ಪ್ರತಿಯೊಂದು ಥಳುಕಿನ ವಸ್ತುವೂ ಹೃದಯದ ಆಸೆಗಳನ್ನೆಲ್ಲಾ ಈಡೇರಿಸುತ್ತದೆಂದು ವ್ಯರ್ಥವಾಗಿ ಅದರ ಬೆನ್ನಟ್ಟುವುದರ ಬದಲು ಸರಿಯೋ? ತಪ್ಪೋ? ಯೋಚಿಸುತ್ತೇನೆ.

★ ನನ್ನಿಂದ ಇನ್ನೊಬ್ಬರಿಗೆ ಉಪಕಾರಿ; ಧರ್ಮಿಷ್ಠ; ಸಮಾಜ ಸೇವಕ; ಜ್ಞಾನಿ ಎಂಬ ದೌರ್ಬಲ್ಯ ಬಿಟ್ಟು ಬಿಡುತ್ತೇನೆ.

★ ನಾನೆಂದೂ ಸುಳ್ಳು ಹೇಳುವುದಿಲ್ಲ.

★ ಎಲ್ಲಾ ಜೀವಿಗಳಲ್ಲಿ ಹೆಚ್ಚಾಗಿ ಸಂಕಷ್ಟದಲ್ಲಿರುವವರಿಗೆ ಅನುಕಂಪ ಮತ್ತು ಸಹಾಯ ಮಾಡುವುದನ್ನು ಅದೃಷ್ಟವೆಂದು ಭಾವಿಸುತ್ತೇನೆ.

★ ಅನ್ಯಾಯವನ್ನು ನೇರವಾಗಿ ಪ್ರಶ್ನಿಸುತ್ತೇನೆ. ಬದಲಾಗಿ ಆ ಸಂದರ್ಭವನ್ನು ಅಸೂಯೆಯಾಗಿ ತಿರುಚುವುದಿಲ್ಲ.

★ ಬದುಕಿನ ವಾಸ್ತವತೆಗಳಾದ ಲೋಭ, ದುರಾಸೆ, ದುರ್ಭಾವನೆ, ಆಲಸ್ಯ, ಜಡತೆ ಚಂಚಲತೆ, ಉತ್ಸಾಹ ದುಷ್ಕೃತ್ಯಗಳನ್ನು ಸ್ವಾಸ್ಥ್ಯವಾಗಿ ಚಿಂತಿಸುತ್ತೇನೆ.

★ ತಾನು ಕೈಗೊಂಡಿರುವ ಈ ಸತ್ಪಥದ ಅನುಷ್ಠಾನಕ್ಕೆ ತನ್ನೆಲ್ಲಾ ಮನೋಬಲ ಉಪಯೋಗಿಸುತ್ತೇನೆ.

- ಈ ನಿಟ್ಟಿನಲ್ಲಿ ಯೋಚಿಸಲು ನಮ್ಮ ಹೃದಯದಲ್ಲಿ ಸ್ಥಳಾವಕಾಶ ಇದೆ ಎನ್ನುವುದಾದರೆ ಎಲ್ಲಾ ದಲಿತ ಪ್ರಾಜ್ಞರ ಅಭಿಪ್ರಾಯಕ್ಕೆ ಕಾಯುತ್ತಿರುವೆನು. □



'ಸಂವಾದ' ದೊರೆಯುವ ಸ್ಥಳ

☞ ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ

❖ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು-೫೬೦ ೦೦೧, ☎ : ೨೨೨೦೩೫೮೦

❖ ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೧೩೮೨ ❖ ಸ್ಟೇಷನ್ ರಸ್ತೆ ಗುಲ್ಬರ್ಗ-೨, ☎ : ೪೨೪೩೦೨

❖ ಕೆ.ಎಸ್.ರಾವ್ ರಸ್ತೆ ಮಂಗಳೂರು-೧, ☎ : ೨೪೪೧೧೦೧೬ ❖ ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೯೦೪

☞ ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦ ೦೨೦

☞ ಕೆಎಸ್ಆರ್‌ಟಿಸಿ ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ. ೧, ಸ್ಟಾಲ್ ನಂ. ೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು



ಝೆನ್

ಅವಲೋಕನ ಕಥೆ ಪ್ರಸಂಗ ಸಂವಾದ ಒಗಟು ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ



ಆ ಮುದುಕಿ



ಅನೇಕ ಝೆನ್ ಗುರುಗಳು ಹೇಳುತ್ತಿದ್ದ ಕಥೆ ಇದು–

ಬುದ್ಧದೇವ ಬದುಕಿದ್ದಾಗ, ಅದೇ ನಗರದಲ್ಲಿ ಒಬ್ಬ ಮುದುಕಿಯಿದ್ದಳು. ಚಿಕ್ಕ ಹುಡುಗಿಯಾಗಿದ್ದಾಗಿನಿಂದಲೂ ಏಕೋ, ಆಕೆಗೆ ಬುದ್ಧನನ್ನು ನೋಡಬೇಕೆಂದರೆ ವಿಚಿತ್ರವಾದ ಭಯ. ಜನರೆಲ್ಲ ಆಕೆಗೆ ಹೇಳುತ್ತಿದ್ದರು– ಬುದ್ಧದೇವನಂಥ ಕರುಣಾಮೂರ್ತಿ ಜಗತ್ತಿನಲ್ಲೇ ಇನ್ನೊಬ್ಬನಿಲ್ಲ; ಅಂಥವನ ಬಗ್ಗೆ ಹೆದರಲು ಕಾರಣವೇ ಇಲ್ಲ; ಒಂದು ಸಲ ಹೋಗಿ ದರ್ಶನ ಮಾಡು– ಎಂದು. ಎಲ್ಲ ಧೈರ್ಯ ತುಂಬಿಕೊಂಡು ಆಕೆ ಎಷ್ಟೋ ಸಲ ದರ್ಶನಕ್ಕೆ ಹೋದದ್ದುಂಟು; ಆದರೆ ಇನ್ನೇನು ಆತನ ಎದುರಾಗಬೇಕೆಂದಾಗ, ಅದೇನಾಗುತ್ತಿತ್ತೋ, ಆಕೆ ಹಿಂದಕ್ಕೆ ಓಡಿಬಂದು ಬಿಡುತ್ತಿದ್ದಳು.

ಒಂದು ದಿನ, ಆಕೆ ನಗರದ ದಾರಿಯಲ್ಲಿ ಹೋಗುತ್ತಿದ್ದಳು. ಆಗ, ಕಾಷಾಯವಸ್ತ್ರ ಧರಿಸಿದ ತೇಜಸ್ವೀ ಸನ್ಯಾಸಿಯೊಬ್ಬ ಎದುರು ಬರುತ್ತಿರುವುದನ್ನು ಕಂಡಳು. ಅವನೇ ಬುದ್ಧದೇವ, ಆ ಕ್ಷಣಕ್ಕೆ ಆಕೆ ಭಯದಿಂದ ತಲ್ಲಣಿಸಿ ಹೋದಳು. ಅಲ್ಲಿಂದ ಓಡಬೇಕು. ಆದರೆ, ಕಾಲು ಕೀಳಲಿಕ್ಕೇ ಆಗಲಿಲ್ಲ, ಅಲ್ಲೇ ನೆಟ್ಟುಹೋದಂತಾಗಿತ್ತು. ಏನು ಮಾಡಲಿಕ್ಕೂ ತೋಚದೆ ತನ್ನೆರಡೂ ಕೈಗಳಿಂದ ಕಣ್ಣುಗಳನ್ನು ಬಿಗಿದು ಮುಚ್ಚಿಕೊಂಡಳು. ಆದರೆ, ಅಹೋ, ಏನಾಶ್ಚರ್ಯ –ಆಕೆ ಕೈಗಳಿಂದ ಕಣ್ಣನ್ನು ಬಿಗಿದುಕೊಂಡಷ್ಟೂ, ಬಿಗಿದ ಬೆರಳುಗಳ ನಡುವೆ ಎಡೆತೆರೆದಂತೆ, ಬುದ್ಧದೇವನ ಮಂಗಲಮೂರ್ತಿ ಹೆಚ್ಚು ಹೆಚ್ಚು ಸ್ಪಷ್ಟವಾಗಿ ಕಾಣತೊಡಗಿತ್ತು.

ಈಗ ಹೇಳಿ, ಆ ಮುದುಕಿ ಯಾರು?

ಮುಟ್ಟಿದರೆ ಮೂಕರಲ್ಲ

ಬುದ್ಧ ನಲವತ್ತೊಂಬತ್ತು ವರ್ಷಗಳ ಕಾಲ ಬೋಧೆ ಮಾಡಿದ; ಆದರೆ ಎಂದೂ ಆತನ ನಾಲಗೆ ಅಲುಗಿದ್ದೆ ಇಲ್ಲ– ಎನ್ನುವುದು ಝೆನ್‌ನಲ್ಲಿರುವ ಹೇಳಿಕೆ. ಇದರ ಬಗ್ಗೆ ಗುರು ಗೆನ್‌ಶಾ ಹೀಗೆ ಹೇಳಿದ :

'ಬೌದ್ಧಧರ್ಮ ನಮಗೆ ಸರ್ವದಾ ಸರ್ವತ್ರ ಮಾರ್ಗದರ್ಶನ ಮಾಡುತ್ತದೆ ಎಂದು ನಮ್ಮ ಸಾಧುಗಳಾದ ಗುರುಗಳು ಹೇಳುತ್ತಾರೆ. ಆದರೆ, ನೀವು ಕೊಂಚ ಚಿಂತಿಸಿ ನೋಡಿ. ಕುರುಡರಿದ್ದಾರೆ. ಅವರಿಗೆ, ಅವರ ಎದುರು ಎತ್ತಿ ಹಿಡಿದಿರುವ ಗುರುವಿನ ದಂಡ ಕಾಣಿಸುವುದೇ ಇಲ್ಲ, ಕಿವುಡರಿಗೆ, ಗುರುವಿನ ಉಪದೇಶ ಎಂಥ ಅಮೃತೋಪಮವೇ ಆಗಿದ್ದಾಗ್ಯೂ ಕೇಳಿಸುವುದೇ ಇಲ್ಲ, ಮೂಕರಾದರೋ ತಮ್ಮ ಸಂಶಯಗಳ ಬಗ್ಗೆ ಪ್ರಶ್ನೆ ಮಾಡಲಾರರು ಮತ್ತು ತಮ್ಮ ಅರಿವಿನ ಬಗ್ಗೆ ಹೇಳಿಕೊಳ್ಳಲೂ ಆರರು. ಹೀಗೆ, ಇಂಥ ಜನರಿಗೆಲ್ಲ ನಿಷ್ಪ್ರಯೋಜಕವಾದ ಬೌದ್ಧಧರ್ಮ, ಸರ್ವದಾ ಸರ್ವತ್ರ ಪ್ರಯೋಜಕ ಎಂದು ಹೇಗೆ ಹೇಳೋಣ?'



ಎಷ್ಟೋ ವರ್ಷಗಳು ಕಳೆದ ಮೇಲೆ ಒಬ್ಬ ಭಿಕ್ಷು ಗುರು ಗೆನ್‌ಶಾನ ಮೇಲಿನ ಹೇಳಿಕೆಯ ಬಗ್ಗೆ ಗುರು ಉಮ್ಮೊನ್‌ನನ್ನು ಪ್ರಶ್ನೆ ಮಾಡಿದ.

ಉಮ್ಮೊನ್, ಭಿಕ್ಷುವಿಗೆ ಸಾಷ್ಟಾಂಗ ನಮಸ್ಕಾರ ಮಾಡುವಂತೆ ಹೇಳಿದ. ಆತ ನಮಸ್ಕರಿಸಿ ಮೇಲಕ್ಕೇಳುತ್ತಿದ್ದಂತೆ, ತಟಕ್ಕನೆ, ಅವನನ್ನು ಚುಚ್ಚಿ ಬಿಡುವಂತೆ ತನ್ನ ದಂಡವನ್ನು ಮುಂದೆ ನೂಕಿದ. ಭಿಕ್ಷು ತಟ್ಟನೆ ಹಿಂಜರಿದುಕೊಂಡ.

'ಆಹಾ, ಕಂಡೆನಯ್ಯಾ, ನೀನು ಕುರುಡನಲ್ಲ' ಎಂದ, ಉಮ್ಮೊನ್. ಅನಂತರ, ಆ ಭಿಕ್ಷುವಿಗೆ ಮುಂದಕ್ಕೆ ಬರಲು ಹೇಳಿದ. ಭಿಕ್ಷು ಹಾಗೇ ಮಾಡಿದಾಗ, ಉಮ್ಮೊನ್, ಮತ್ತೆ 'ಆಹಾ, ಕಂಡೆಕಂಡೆ, ನೀನು ಕಿವುಡನಲ್ಲ' ಎಂದ. ಅದಾದ ಮೇಲೆ ಉಮ್ಮೊನ್ ಆತನನ್ನು ಪ್ರಶ್ನಿಸಿದ, 'ಇದೆಲ್ಲ ಏನೆಂದು ನಿನಗೆ ತಿಳಿಯಿತೇನಪ್ಪಾ' ಎಂದು. 'ಇಲ್ಲ ಗುರುವೇ' ಎಂದ ಭಿಕ್ಷು. ಉಮ್ಮೊನ್ ಗಹಗಹಿಸಿ ಹೇಳಿದ– 'ಆಹಾ, ನೀನು ಮೂಕನಲ್ಲಪ್ಪಾ' ಎಂದ.

ತೋರುಬೆರಳಿನ ಹಾಡು

ಒಬ್ಬ ಗುರು, ಹೀಗೆ ಹಾಡಿ ಹೇಳುತ್ತಾನೆ––

ಅದು ಏನು ಎಂದು ತತ್–ತ್ವ ಕೇಳುತ್ತಾರೆ
ಕಾತರ ತುಂಬಿ, ಚೆಲ್ಲಿ,
ನೋಡಪ್ಪ ಉತ್ತರ ಕಷ್ಟ
ಅಸ್ತಿ ಎನಬೇಡ, ನಾಸ್ತಿ ಎನಬೇಡ,
ಸತ್ಯವಲ್ಲ,
ಅಸ್ತಿಯೂ ಅಲ್ಲ ನಾಸ್ತಿಯೂ ಅಲ್ಲ
ಹೇಳಲು ಸ್ಪಷ್ಟ



ಸತ್ಯ ಗೆದ್ದಿಲ್ಲ ನೀನು. ಗೆಲ್ಲಬೇಕಿನ್ನು,
ಗೆದ್ದೆ ಎನ್ನು–ಅದನ್ನು ಕರೆತರಬೇಕು.
ಕರೆತಂದು ಕಾಣಿಸಬೇಕು.
ಆದರೆ ಅಲ್ಲಿ ಸೇತುವೆ ಕಟ್ಟಿಲ್ಲ ಪಥಕ್ಕೆ
ಆ ಪ್ರಾಂತದಲ್ಲಿ ರಹದಾರಿಯೇ ಇಲ್ಲ ಮಾತಿನ ರಥಕ್ಕೆ.

ಪ್ರಶ್ನೆಗುತ್ತರವಿರಲಿ ನಿನ್ನ ಮೌನ
ಅದೆ ಉರಿವ ವಜ್ರದ ಹರಳು;
ದಾರಿ ಕಡೆ ಚಾಚಿರಲು ತೋರುಬೆರಳು.

ಮಸಿ ಖರ್ಚಾಗಿತ್ತು

ಕ್ಯೊಟೊದಲ್ಲಿ ಒಬಕು ದೇವಾಲಯದ ಹೊರದ್ವಾರದ ಮೇಲೆ, ಝೆನ್‌ನ 'ಪ್ರಥಮ ತತ್ವ'ವನ್ನು ಲಿಪಿಗಳಲ್ಲಿ ಕೆತ್ತಿದೆ. ಆ ಲಿಪಿಗಳನ್ನು ರಚಿಸಿಕೊಟ್ಟವನು ಗುರು ಕೊಸೆನ್. ಮೊದಲಿಗೆ ಅದನ್ನು ಆತ ಕುಂಚದಿಂದ ಕಾಗದದ ಮೇಲೆ ಲೇಖಿಸಿದ. ಆಮೇಲೆ, ಅದನ್ನೇ ಮರದಲ್ಲಿ ಕೆತ್ತಿಟ್ಟರು.



ಕೊಸೆನ್ ಅದನ್ನು ರಚಿಸುವಾಗ, ಒಬ್ಬ ಶಿಷ್ಯ ಮಸಿ ಕಲೆಸಿಕೊಡುತ್ತಿದ್ದ. ಆತ, ಗುರುವಿನ ರಚನೆಯ ಮೇಲೆ ಕಣ್ಣಿಟ್ಟುಕೊಂಡೇ ನಿಂತಿದ್ದ. ಮೊದಲ ಸಲ ಗುರು ಲೇಖಿಸಿದ್ದನ್ನು ನೋಡಿ 'ಇದು ಚೆನ್ನಾಗಿಲ್ಲ' ಎಂದ. ಕೊಸೆನ್ ಮತ್ತೊಮ್ಮೆ ರಚಿಸಿದ. 'ಇದು ಮೊದಲಿನದಕ್ಕಿಂತ ಕೆಟ್ಟುದಾಗಿದೆ' ಎಂದ, ಶಿಷ್ಯ. ಕೊಸೆನ್ ಮತ್ತೆ ಬರೆಯತೊಡಗಿದ.

ಕೊಸೆನ್, ಹೀಗೆ ಅರವತ್ತನಾಲ್ಕು ಸಲ ಲೇಪಿಸಿದ. ಮಸಿ ಖರ್ಚಾಗುತ್ತ ಬಂತು. ಶಿಷ್ಯ ಮತ್ತಷ್ಟು ಮಸಿ ಕಲಸಿ ತರಲು ಹೋದ. ಈಗ, ತಾನೊಬ್ಬನೇ ಉಳಿದಿದ್ದಾಗ, ನೆಟ್ಟು ನೋಡುವ ಬೇರೆ ಕಣ್ಣುಗಳು ಇಲ್ಲವಾದಾಗ, ಕೊಸೆನ್, ಉಳಿದ ಮಸಿಯಲ್ಲೇ ಆತುರಾತುರವಾಗಿ ಲೇಖಿಸತೊಡಗಿದ. ಶಿಷ್ಯ ಮರಳಿ ಬಂದಾಗ, ಗುರುವಿನ ಈ ಕೊನೆಯ ರಚನೆಯನ್ನು ದೀರ್ಘವಾಗಿ ನೋಡಿದ. 'ಇದೀಗ ನಿಜವಾದ ಆಚಾರ್ಯ ಕೃತಿ' ಎಂದ.

ಜಾಗೃತಿ

ಜಾಗತೀಕರಣ ನಮ್ಮ ಮನೆ ಬಾಗಿಲಿಗೇ ಬಂದಿದೆ. 'ಪ್ರಗತಿಯ ಬಸಿರೆಂದು' ಬಲಿಷ್ಠ ರಾಷ್ಟ್ರಗಳು ಬಣ್ಣಿಸುತ್ತಿರುವ ಜಾಗತೀಕರಣದಿಂದ ಭಾರತದ ಅಲಕ್ಷಿತ ಜನಸಮುದಾಯ ತತ್ತರಿಸಿ ಹೋಗುತ್ತಿದ್ದು ಮುಂಬರುವ ದಿನಗಳು ಕರಾಳವಾಗಲಿವೆ ಎಂಬುದು ಭಾರತದಲ್ಲಿ ದಲಿತ ಮಾನವ ಹಕ್ಕುಗಳ ರಾಷ್ಟ್ರೀಯಾಂದೋಲನ ಶೋಧಿಸಿ ಪ್ರಕಟಿಸಿರುವ ಮಾಹಿತಿಯಿಂದ ತಿಳಿದುಬಂದಿದೆ. ಜಾಗತೀಕರಣದ ಬಗೆಗಿನ ಎಲ್ಲಾ ಭರವಸೆಗಳು ಎಂಥ ಹಸಿ ಸುಳ್ಳು ಎಂಬುದು ಈ ಮಾಹಿತಿಯಿಂದ ತಿಳಿದುಬರುತ್ತದೆ. ಈ ಮಾಹಿತಿಯನ್ನಾಧರಿಸಿದ ಸಂಶೋಧನಾ ಲೇಖನಮಾಲೆಯ ಎರಡನೇ ಕಂತು ಇದು.

○ ಅನು: ಡಿ. ಡೊಮಿನಿಕ್

ವಂಚನೆಯ ಮಾಯಾಜಾಲ

ನಾರ್ಕ್ಸ್ ಹೈಡ್ರೊ, ಆಲ್‌ಕನ್ ಮತ್ತು ಇಂಡಾಗೋಲ್ಡೊ : ಕಂಪೆನಿಗಳು ಸ್ಥಾಪಿಸಿರುವ ಉತ್ಕಾಲ್ ಅಲ್ಯುಮಿನಿಯಂ ಗಣಿಗಾರಿಕೆಯು ಒರಿಸ್ಸಾ ರಾಜ್ಯದ ರಾಯಘಡ ಜಿಲ್ಲೆಯ ಕಾಶಿಪುರದಲ್ಲಿ ನಡೆಯುತ್ತಿದೆ. ಈ ಗಣಿಗಾರಿಕೆಯು ಶೇ. ೧೦೦ ರಷ್ಟು ರಫ್ತು ಉದ್ದೇಶವನ್ನು ಇಟ್ಟುಕೊಂಡು ಸ್ಥಾಪಿಸಲಾಗಿದ್ದು ಭಾರತ ಸರ್ಕಾರವೂ ಅಧಿಕವಾದ ಸಬ್ಸಿಡಿಯನ್ನು ಅಂದರೆ ಆದಾಯ ತೆರಿಗೆ ವಿನಾಯ್ತಿ ಹಾಗೂ ಅತಿ ಕಡಿಮೆಯಾದ ಆಮದು ಸುಂಕವನ್ನು ಅದಕ್ಕೆ ನೀಡಿದೆ. ಈ ಯೋಜನೆಯಡಿ ೯ ಸಾವಿರ ಜನರು ತೊಂದರೆಗೊಳಗಾಗುತ್ತಾರೆ ಅಲ್ಲದೆ ೩,೫೦೦ ಮಂದಿ ನಲವತ್ತು ಹಳ್ಳಿಗಳಿಂದ ನಿರಾಶ್ರಿತರಾಗುತ್ತಾರೆ. ಈ ಗಣಿಗಾರಿಕೆ ವಿರುದ್ಧ ಕಳೆದ ಏಳು ವರ್ಷ ಗಳಿಂದ ನಡೆದಿರುವ ಜನರ ಪ್ರತಿಭಟನೆಯನ್ನು ಸರ್ಕಾರ ನಿರ್ಲಕ್ಷಿಸಿದೆ. ಅನೇಕ ಆದಿವಾಸಿಗಳನ್ನು ಕಾರಣವಿಲ್ಲದೇ ಬಂಧಿಸಿದೆ. ಜನರು ಮತ್ತು ಕಂಪೆನಿ ಪರ ಇರುವ ಶಕ್ತಿಗಳ ನಡುವೆ ಡಿಸೆಂಬರ್ ೧೬, ೨೦೦೦ ದಂದು ಮೈ ಖಾಂಚ್ ಹಳ್ಳಿಯಲ್ಲಿ ೨ ಗೋಲಿಬಾರ್ ನಡೆಯಿತು. ಸುಮಾರು ೪ ಸಾವಿರ ಜನರು ರಸ್ತೆ ತಡೆಗಟ್ಟುವ ಬಗ್ಗೆ ಚರ್ಚಿಸಲು ಒಂದುಗೂಡಿದ್ದರು. ಆಗ ಶಸ್ತ್ರಸಜ್ಜಿತ ಪೊಲೀಸರು ಅವರನ್ನು ಸುತ್ತುವರೆದು ಗುಂಡುಹಾರಿಸಿದರು. ಇದರಲ್ಲಿ ಮೂರು ಜನ ಆದಿವಾಸಿಗಳು ಸತ್ತು ಅನೇಕ ಜನ ಗಾಯಗೊಂಡರು.

ರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರ ಸರ್ಕಾರವು ತನ್ನ ಬಂಡವಾಳ ಹಿಂತೆಗೆತ ಸಚಿವಾಲಯದಲ್ಲಿ ಆದಿವಾಸಿ ಸಂರಕ್ಷಿತ ಭಾರತೀಯ ಸಂವಿಧಾನಾತ್ಮಕ ಕಾನೂನಿಗೆ ತಿದ್ದುಪಡಿಯನ್ನು ತಂದು ಖಾಸಗಿ ಗಣಿಗಾರಿಕೆ, ಮೀನುಸಾಕಾಣಿಕೆ ಮತ್ತು ಇತರೆ ಅಭಿವೃದ್ಧಿ ಯೋಜನೆಗಳಿಗೆ ಪೂರಕವಾಗಿರುವಂತೆ ಪ್ರಚಾರವನ್ನು ಕೈಗೊಂಡಿದೆ.

೫. ಕಾರ್ಖಾನೆಗಳು

ತಮಿಳುನಾಡಿನಲ್ಲಿ ಸರ್ಕಾರದ ಕೈಯಲ್ಲಿ ಇರುವ ಹೆಚ್ಚುವರಿ ಭೂಮಿಯನ್ನು ಭೂರಹಿತ ದಲಿತರು ಮತ್ತು ಇತರೆ ಬಡವರಿಗೆ ಹಂಚಿಲ್ಲ ಬದಲು ರಾಜ್ಯ ಸರ್ಕಾರವು ನಿಗಮಗಳಿಗೆ ಭೂಮಿಯನ್ನು ಕೊಡುವ ಉದ್ದೇಶವನ್ನು ಹೊಂದಿದೆ. ಉದಾಹರಣೆಗೆ ಇತ್ತೀಚೆಗೆ ಮಹೀಂದ್ರ ಕಂಪೆನಿಯೂ ೧,೪೦೦ ಹೆಕ್ಟರ್ ಬಂಜರು ಭೂಮಿಯನ್ನು ಪಡೆದುಕೊಂಡಿತು. ಇಂಥ ಭೂಮಿಗಾಗಿ ಕೈಗಾರಿಕಾ ಉದ್ಯಮ ಗುಂಪುಗಳು, ಖಾಸಗಿ ಸಂಸ್ಥೆಗಳು ಮತ್ತು ನಿರ್ಮಾಪಕರು ಹೊಂಚುಹಾಕುತ್ತಿದ್ದಾರೆ.

೬. ಮೀನುಸಾಕಾಣಿಕೆ

೧೯೯೦ ಹಾಗೂ ೧೯೯೫ರ ನಡುವೆ ಭಾರತೀಯ ತೀರ ಪ್ರದೇಶದಲ್ಲಿ ವಾಣಿಜ್ಯ ಉದ್ದೇಶ ಮೀನುಗಾರಿಕೆಯನ್ನು ಪರಿಚಯಿಸಲಾಯಿತು. ಇದಕ್ಕೆ ವಿಶ್ವಬ್ಯಾಂಕು ೯೬.೮ ಮಿಲಿಯನ್ ಡಾಲರುಗಳನ್ನು ಭಾರತದಲ್ಲಿ ಸೀಗಡಿ ಉದ್ಯಮಕ್ಕಾಗಿ ನೀಡಿತು. ಭಾರತ ದೊಡ್ಡ ಉದ್ಯಮಗಳಾದ ಹಿಂದೂಸ್ಥಾನ್ ಲಿವರ್, ಟಾಟಾ, ಬಿರ್ಲಾ, ಕೋರಮಂಡಲ್ ಮತ್ತು ನಾಗಾರ್ಜುನ ಕಂಪೆನಿಗಳು ಈ ಸಂದರ್ಭದಲ್ಲಿ ಮುನ್ನುಗ್ಗಿ ತಮ್ಮ ಹಣ ಮತ್ತು ರಾಜಕೀಯ ಪ್ರಭಾವವನ್ನು ಉಪಯೋಗಿಸಿ ಅಧಿಕ ಭೂಭಾಗಗಳನ್ನು ಪಡೆದುಕೊಂಡವು. ಸಾವಿರಾರು ಎಕ್ಕರೆ ಬೇಸಾಯ ಹಾಗೂ ಬಂಜರು ಭೂಮಿಯನ್ನು ಈ ಮೀನುಗಾರಿಕೆಗೆ ಬಳಸಿಕೊಳ್ಳಲಾಯಿತು. ಸುಮಾರು ೫ ಸಾವಿರ ಹೆಕ್ಟರ್ ಸಾಮುದಾಯಿಕ ಭೂಮಿಯನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆ.



ಇದು ಬಡಜನರ ಬದುಕಿನ ಮೇಲೆ ಗಾಢ ಪ್ರಭಾವ ಬೀರಿದ್ದು ಬೇಸಾಯದ ಮೇಲೆ ಅವಲಂಬಿತರಾದ ಅನೇಕ ಸಮುದಾಯಗಳನ್ನು ತೆರವುಗೊಳಿಸಿತು. ಅಲ್ಲದೆ ಭೂ ಬಳಕೆಯ ರೀತಿಯನ್ನು ಬದಲಾಯಿಸಿತು. ಈ ಮೀನುಸಾಕಾಣಿಕೆಯು ಹೆಚ್ಚು ಶ್ರಮಶಕ್ತಿಯನ್ನು ಬೇಡಿದ್ದರಿಂದ ಬೇಸಾಯದಲ್ಲಿ ತೊಡಗುವ ದಿನಗಳು ಕಡಿಮೆಯಾದವು. ಹಾಗೆಯೇ ಭೂ ಬೇಡಿಕೆಯು ಸಹ ಈ ವಾಣಿಜ್ಯ ಮೀನು ಸಾಕಾಣಿಕೆಯಿಂದ ಹೆಚ್ಚಿತು. ಈ ನಡುವೆ ತಮ್ಮ ಭೂಮಿಯನ್ನು ಅಧಿಕ ಗುತ್ತಿಗೆಗೆ ಅಥವಾ ಮಾರಾಟಕ್ಕೆ ನೀಡಲಾಗದ ಸಣ್ಣ ಮತ್ತು ಅತಿಸಣ್ಣ ರೈತರಲ್ಲದೆ ಭೂರಹಿತ ದಲಿತರು ತೊಂದರೆಗೆ ಒಳಗಾದರು. ಗುತ್ತಿಗೆಗೆ ಭೂಮಿ ತೆಗೆದುಕೊಂಡು ಬೇಸಾಯ ಮಾಡುತ್ತಿದ್ದ ದಲಿತರು ಸಂಪೂರ್ಣವಾಗಿ ವಂಚಿತರಾದರು.

ಉದಾಹರಣೆಗೆ ಆಂಧ್ರದ, ಪಶ್ಚಿಮ ಗೋದಾವರಿ ಜಿಲ್ಲೆಯ ಗಾನ ಪವರಂನ ಇಂದುಕುರಿ ಕೃಷ್ಣನ್ ರಾಜು ಲಿಂಗಪಾಡುಹಳ್ಳಿಯ ೨೫೦ ಮಂದಿ ದಲಿತ ಕುಟುಂಬಗಳಿಗೆ ಸೇರಿದ ೬೯೧ ಎಕರೆ ಭೂಮಿಯನ್ನು ೯ ವರ್ಷಗಳಿಗೆ ಗುತ್ತಿಗೆಗೆ ತೆಗೆದುಕೊಂಡಿದ್ದಾನೆ. ಜೂನ್ ೨೦೦೨ರಲ್ಲಿ ಆ ಭೂಮಿಯನ್ನು ಮೀನು ಸಾಕಾಣಿಕೆಗಾಗಿ ಪರಿವರ್ತಿಸುತ್ತಾನೆ. ಹೀಗೆ ಭೂಮಿ ಮೀನು ಕೊಳಗಳಾಗಿ ಬದಲಾದುದನ್ನು ಪ್ರಶ್ನಿಸಿದ ದಲಿತರಿಗೆ, ಆ ಭೂಮಿಯನ್ನು ಕೃಷ್ಣರಾಜು ಖರೀದಿಸಿದ್ದಾನೆಂದು ಹೇಳಿದ. ಸ್ಥಳೀಯ ಪೊಲೀಸ್ ಠಾಣೆಯನ್ನು ಸಂಪರ್ಕಿಸಿದಾಗ, 'ತಾವು ಅಸಹಾಯಕರೆಂದು' ಪೊಲೀಸ್ ಹೇಳಿದರು. ಈ ಸಂಗತಿಯನ್ನು ಜಿಲ್ಲಾಧಿಕಾರಿಗೆ ತಿಳಿಸಿ, ದಲಿತರು ತಮ್ಮ ಭೂಮಿಗಾಗಿ ಉಪವಾಸ ಸತ್ಯಾಗ್ರಹ ಚಳವಳಿಯನ್ನು ಸೆಪ್ಟೆಂಬರ್ ೨೦೦೨ರಲ್ಲಿ ಆರಂಭಿಸಿದರು. ಹೀಗಿರುವಲ್ಲಿ ಜಿಲ್ಲಾಧಿಕಾರಿಯ ಉಪ ಅರಣ್ಯಾಧಿಕಾರಿಗೆ ಆ ಸಂಗತಿಯ ಬಗ್ಗೆ ಪರಿಶೀಲಿಸಲು ಸೂಚಿಸಿದರು. ಆ ಭೂಮಿಯು ಸಂರಕ್ಷಿತ ಕಾಡುಪ್ರಾಣಿಗಳ ವನವಾಗಿರುವುದರಿಂದ ವಿವಾದದಲ್ಲಿ ತೊಡಗಿರುವ ದಲಿತರಿಂದ ಆ ಭೂಮಿಯನ್ನು ವಶಪಡಿಸಿಕೊಳ್ಳುವಂತೆ ಆಜ್ಞಾಪಿಸಲಾಯಿತು. ಕೃಷ್ಣರಾಜು ಮೀನುಕೊಳವನ್ನಾಗಿ ಪರಿವರ್ತಿಸಿದ್ದು ಕಾನೂನು ಬಾಹಿರವಾದರೂ, ಅದಕ್ಕೆ ಚಕಾರವೆತ್ತಲಿಲ್ಲ. ಅಲ್ಲದೆ ೭೦ ವರ್ಷಗಳಿಂದ ಕೃಷಿ ಮಾಡುತ್ತಿದ್ದ ಭೂಮಿಯ ಹಕ್ಕನ್ನು ದಲಿತರು ಕಳೆದುಕೊಳ್ಳುವಂತಾಯಿತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕರ್ತವ್ಯಗಳು (ಭಾರತೀಯ ಸಂವಿಧಾನ ಮತ್ತು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಆಧಾರದ ಮೇರೆಗೆ)

★ ಭೂ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ಎಲ್ಲರ ಒಳಿತನ್ನು ಖಾತರಿಪಡಿಸಲು ಅದರ ಒಡೆತನ ಮತ್ತು ನಿಯಂತ್ರಣ ಹಂಚಿಕೆಯಾಗ ತಕ್ಕದ್ದು. (ಅನುಚ್ಛೇದ ೩೯(ಬಿ), ಭಾರತೀಯ ಸಂವಿಧಾನದ ರಾಜ್ಯನೀತಿಯ ನಿರ್ದೇಶಕ ತತ್ವಗಳು)

★ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಒಂದೆಡೆ ಸಂಗ್ರಹವಾಗದಂತೆ ನಿಗಾ ವಹಿಸತಕ್ಕದ್ದು. (ಅನುಚ್ಛೇದ ೩೯(ಸಿ) ಭಾರತೀಯ ಸಂವಿಧಾನದ ರಾಜ್ಯನೀತಿಯ ನಿರ್ದೇಶಕ ತತ್ವಗಳು)

★ ಪ್ರತಿಯೊಬ್ಬರಿಗೂ ಆಸ್ತಿ ಒಡೆತನದ ಹಕ್ಕಿರಬೇಕು ಮತ್ತು ಅದನ್ನು ಇತರರೊಡನೆ ಅನುಭೋಗಿಸು ವಂತಿರಬೇಕಲ್ಲದೆ ಗೊತ್ತು ಗುರಿಯಿಲ್ಲದೆ ಆತನ/ಆಕೆಯ ಆಸ್ತಿಯನ್ನು ಅಪಹರಿಸುವಂತಿಲ್ಲ. (ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ ಅನುಚ್ಛೇದ೧೭)

★ ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರದ ಸದಸ್ಯನು ಯಾರೇ ಆಗಲಿ ಆತ ಪರಿಶಿಷ್ಟ ಜಾತಿ ಅಥವಾ ಪಂಗಡ ವ್ಯಕ್ತಿಗೆ ಸೇರಿದ ಭೂಮಿ/ನಿವೇಶನ/ನೀರು ಇವುಗಳನ್ನು ಅಪಹರಿಸುವುದು ಅಥವಾ ಅವುಗಳ ಅನುಭೋಗದಲ್ಲಿ ಮಧ್ಯೆ ಪ್ರವೇಶಿಸುವುದು ಶಿಕ್ಷಾರ್ಹ ಅಪರಾಧವಾಗುತ್ತದೆ. ಅಂತಹವರನ್ನು ಶಿಕ್ಷಿಸಬೇಕು. (ಎಸ್‌ಸಿ/ಎಸ್‌ಟಿ ದೌರ್ಜನ್ಯ ತಡೆ ಕಾಯಿದೆ - ವಿಭಾಗ ೩(೧)(v))

ಗಂಭೀರ ಪ್ರಶ್ನೆಗಳು

೧. ಭೂ ಮಿತಿ ಕಾಯಿದೆಗಳನ್ನು ರದ್ದುಪಡಿಸುವಂತಹ ತೀವ್ರವಾದ ನೀತಿ ಬದಲಾವಣೆಯನ್ನು ತರುವಂತೆ ವಿಶ್ವಬ್ಯಾಂಕ್ ಒತ್ತಾಯಿಸಲು ಅದಕ್ಕಿರುವ ಅಧಿಕಾರ ಎಂಥದ್ದು?

೨. ಅಂತಹ ನೀತಿ ಬದಲಾವಣೆಯಿಂದ ಯಾರ ಹಿತಾಸಕ್ತಿಗಳಿಗೆ ಪ್ರಯೋಜನವಾಗುತ್ತದೆ? ಅಂತಹ ಬದಲಾವಣೆಗಳನ್ನು ತರುವುದರ ಮೂಲಕ ಸರ್ಕಾರ ಯಾರ ಪರವಾಗಿದೆ? ಭೂ ಮಾಲೀಕರ ಪರವಾಗಿದಯೇ? ಅಥವಾ ವಿದೇಶಿ ಶಕ್ತಿಗಳ ಪರವಾಗಿಯೇ? ಅಥವಾ ಸಣ್ಣ ಮತ್ತು ಅತಿ ಸಣ್ಣ ರೈತಾಪಿ ಮತ್ತು ಭೂ ರಹಿತ ದಲಿತರ ಪರವಾಗಿದೆಯೇ?

೩. ಜಾಗತೀಕರಣದಿಂದ ತಮ್ಮ ಭೂಮಿ ಕಳೆದುಕೊಂಡು ದಿನಗೂಲಿಗಳಾಗಿ ಸಣ್ಣ ದಲಿತ ರೈತಾಪಿ ವರ್ಗದ ಸಂಖ್ಯೆ ಹೆಚ್ಚುತ್ತಿರುವಾಗ, ದಲಿತರ ಭವಿಷ್ಯ ಇನ್ನೊಬ್ಬರ ಸುಖಕ್ಕಾಗಿ ದುಡಿಯುವುದೇ?

೪. ದುಡಿಯುವ ದಲಿತ ವರ್ಗಗಳು ತಮ್ಮ ಗುಲಾಮೀತನದ ಸಂಕೋಲೆಗಳನ್ನು ಕಿತ್ತೊಗೆದು, ಮೇಲ್ವರ್ಗ, ಭೂ ಮಾಲೀಕ ಶಕ್ತಿಗಳು ಸರ್ಕಾರದ ಕೃಪಾಕಟಾಕ್ಷದಲ್ಲಿ ತಮ್ಮ ಅನುಕೂಲಗಳನ್ನು ಭೋಗಿಸುತ್ತಿರುವುದರ ವಿರುದ್ಧ ದಂಗೆ ಏಳಲು ಇದು ಸಕಾಲವಲ್ಲವೇ?

೫. ನರ್ಮದಾ ಅಣೆಕಟ್ಟಿನಂಥ ದೊಡ್ಡ ಯೋಜನೆಗಳು ಲಕ್ಷಗಟ್ಟಲೆ ದಲಿತರು ಮತ್ತು ಆದಿವಾಸಿಗಳನ್ನು ಅವರಿಗೆ ಸೂಕ್ತ ಪುನರ್ವಸತಿ ಇಲ್ಲದೆ ನಿರಾಶ್ರಿತರನ್ನಾಗಿಸುವುದರ ಹಿಂದಿನ ತರ್ಕವೇನು?

೬. ಇಂಥ ಯೋಜನೆಗಳು ಅನುಷ್ಠಾನಗೊಳ್ಳುವಾಗ 'ರಾಷ್ಟ್ರೀಯ ಅಭಿವೃದ್ಧಿ' ಎನ್ನುವುದರ ನಿಜವಾದ ಅರ್ಥವೇನು? ದಲಿತರು ಮತ್ತು ಆದಿವಾಸಿಗಳು ಈ ರಾಷ್ಟ್ರದ ಭಾಗವಲ್ಲವೇ? ಹೀಗಿರುವಲ್ಲಿ, ಈ ಯೋಜನೆಗಳಿಗಾಗಿ ದುಡಿಯುವವರಿಗೆ ಈ ಯೋಜನೆಗಳು ನೀಡಬಹುದಾದ ಆಹಾರ ಭದ್ರತೆ, ವಿದ್ಯುಚ್ಛಕ್ತಿ ನೀರು ಇತ್ಯಾದಿಗಳು ಯಾಕೆ ದೊರೆಯುತ್ತಿಲ್ಲ?

೭. ಜಾಗತೀಕರಣದ ಈ ಯುಗದಲ್ಲಿ ದಲಿತರು ಹೆಚ್ಚು ಹೆಚ್ಚು ಭೂಹೀನರಾಗುತ್ತಿರುವುದರಿಂದ ಭಾರತ ಸಂವಿಧಾನದಲ್ಲಿರುವ ರಾಜ್ಯನೀತಿ ನಿರ್ದೇಶಕ ತತ್ತ್ವಗಳ ೩೯(ಸಿ) ಅನುಚ್ಛೇದದ ಅರ್ಥವಾದರೂ ಏನು? ಅಂದರೆ ಆರ್ಥಿಕ ವ್ಯವಸ್ಥೆಯೊಂದರಲ್ಲಿ ಸಂಪತ್ತು ಮತ್ತು ಉತ್ಪಾದನಾ ಸಾಧನಗಳ ಕ್ರೋಢೀಕರಣ, ಸಾಮುದಾಯಿಕ ಹಿತಕ್ಕೆ ತೊಂದರೆ ಎನ್ನುವುದನ್ನು ಏಕೆ ಬಿಟ್ಟುಬಿಡಲಾಗಿದೆ?

ಬೇಡಿಕೆಗಳು

ರಾಷ್ಟ್ರ ಮತ್ತು ರಾಜ್ಯದ ಹಂತದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರಾಷ್ಟ್ರೀಯ ಸಮಿತಿಯಡಿ ರಚನಾತ್ಮಕ ತಜ್ಞ ಸಮಿತಿಯೊಂದನ್ನು ನೇಮಿಸಿ ನಿರ್ದಿಷ್ಟ ಕಾಲದೊಳಗೆ ಕಾನೂನುಬಾಹಿರವಾಗಿ ದಲಿತರು ಕಳೆದುಕೊಂಡಂಥ ಭೂಮಿಯನ್ನು ಗುರುತಿಸಿ, ಅದು ಅವರಿಗೆ ವಾಪಾಸು ದೊರೆಯುವಂತೆ ಮಾಡುವುದು. ಇಂಥ ಕಾನೂನುಬಾಹಿರವಾಗಿ ದಲಿತರ ಭೂಮಿಯನ್ನು ಅಪಹರಿಸಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿಶೇಷ ನ್ಯಾಯಾಲಯಗಳನ್ನು ನೇಮಿಸುವುದು.

ಭೂಸುಧಾರಣಾ ನೀತಿಗಳನ್ನು ಮತ್ತು ಭೂಮಿತಿ ಕಾಯಿದೆಗಳನ್ನು ಸಂಪೂರ್ಣವಾಗಿ ಜಾರಿಯಾಗಿಸಿ, ಪ್ರತಿಯೊಬ್ಬ ಭೂರಹಿತ ದಲಿತ ಕುಟುಂಬಕ್ಕೂ ಕಮ್ಮಿಯೆಂದರೂ ಕೃಷಿಯುಕ್ತ ೩ ಎಕರೆ ಭೂಮಿಯನ್ನು ದಲಿತ ಮಹಿಳೆಯರ ಹೆಸರಿನಲ್ಲಿ ನೋಂದಾಯಿಸಲು ಹೆಚ್ಚುವರಿ ಭೂಮಿ, ಸರ್ಕಾರಿ ರೆವಿನ್ಯೂ ಭೂಮಿ, ದೇವಸ್ಥಾನದ ಭೂಮಿಯನ್ನು ನಿರ್ದಿಷ್ಟ ಕಾಲಾವಧಿಯಲ್ಲಿ ಮರುಹಂಚಿಕೆ ಮಾಡತಕ್ಕದ್ದು.

ಬಡತನ ರೇಖೆಗಿಂತ ಕೆಳಗಿರುವವರಿಗಾಗಿ ಅಭಿವೃದ್ಧಿ ಕಾರ್ಯಕ್ರಮಗಳಾದ ಡಿಪಿಎಪಿ, ಡಿಆರ್‌ಡಿಎ ಮತ್ತು ಎಸ್‌ಜಿಆರ್‌ವೈ ಯೋಜನೆಗಳು ಎಟುಕುವಂತೆ ಕಠಿಣ ಮಾರ್ಗದರ್ಶಿ ನೀತಿಯನ್ನು ಹೊರಡಿಸಿ, ಎಲ್ಲ ಬಡ ದಲಿತರು ಮತ್ತು ಆದಿವಾಸಿಗಳಿಗೆ ಈ ಅನುಕೂಲಗಳು ದೊರೆಯಲು ಪ್ರಮುಖ ಸ್ಥಾನಗಳಲ್ಲಿ ದಲಿತ ಮತ್ತು ಆದಿವಾಸಿ ಅಧಿಕಾರಿಗಳನ್ನು ನೇಮಿಸತಕ್ಕದ್ದು.

ಎಲ್ಲಿಗೆ ಕರೆದೊಯ್ಯಬಹುದು ಜಾಗತೀಕರಣದ ಈ ರೈಲು ದಾರಿ

> ೧೯೯೦ ಹಾಗೂ ೧೯೯೫ರ ನಡುವೆ ಭಾರತೀಯ ತೀರ ಪ್ರದೇಶದಲ್ಲಿ ವಾಣಿಜ್ಯ ಉದ್ದೇಶ ಮೀನುಗಾರಿಕೆಯನ್ನು ಪರಿಚಯಿಸಲಾಯಿತು. ಇದಕ್ಕೆ ವಿಶ್ವಬ್ಯಾಂಕು ೯೬.೮ ಮಿಲಿಯನ್ ಡಾಲರುಗಳನ್ನು ಭಾರತದಲ್ಲಿ ಸೀಗಡಿ ಉದ್ಯಮಕ್ಕಾಗಿ ನೀಡಿತು. ಭಾರತ ದೊಡ್ಡ ಉದ್ದಿಮೆಗಳು ಈ ಸಂದರ್ಭದಲ್ಲಿ ಮುನ್ನುಗ್ಗಿ ತಮ್ಮ ಹಣ ಮತ್ತು ರಾಜಕೀಯ ಪ್ರಭಾವವನ್ನು ಉಪಯೋಗಿಸಿ ಅಧಿಕ ಭೂಭಾಗಗಳನ್ನು ಪಡೆದುಕೊಂಡವು. ಇದು ಬಡಜನರ ಬದುಕಿನ ಮೇಲೆ ಗಾಢ ಪ್ರಭಾವ ಬೀರಿದ್ದು, ಬೇಸಾಯದ ಮೇಲೆ ಅವಲಂಬಿತರಾದ ಅನೇಕ ಸಮುದಾಯಗಳನ್ನು ತೆರವುಗೊಳಿಸಿತು.

ದಲಿತರ ಅಭಿವೃದ್ಧಿಗಾಗಿ ವಿಶೇಷ ಯೋಜನೆಯಡಿ ಮೀಸಲಿಟ್ಟ ನಿಧಿಯು ಸದುಪಯೋಗವಾಗುವಂತೆ ನೋಡಿಕೊಳ್ಳಲು ಒಂದು ವಿಶೇಷ ಕಾರ್ಯಪಡೆಯನ್ನು ನೇಮಿಸತಕ್ಕದ್ದು.

ದಲಿತರಿಗೆ ಗಳಿಕೆಯನ್ನು ತರುವ ಮತ್ತು ನಿರಂತರ ಉದ್ಯೋಗವನ್ನು ಖಾತರಿಪಡಿಸಲು ಎಲ್ಲ ಹೆಚ್ಚುವರಿ ಭೂಮಿ ಅಥವಾ ಸಮುದಾಯ ಆಸ್ತಿ ಸಂಪನ್ಮೂಲ ಇರುವುದಿಲ್ಲವೋ ಅಂಥ ಎಡೆಗಳಲ್ಲಿ ಕೃಷಿಯೇತರ ಉದ್ಯೋಗವಕಾಶಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸತಕ್ಕದ್ದು.

ಅಭಿವೃದ್ಧಿ ಯೋಜನೆಗಳಲ್ಲಿ ಅವುಗಳ ಅನುಕೂಲಗಳು ದಲಿತ ಮತ್ತು ಆದಿವಾಸಿ ಮಹಿಳೆಯರಿಗೆ ವಿಶೇಷವಾಗಿ ಏಕವ್ಯಕ್ತಿ ಮತ್ತು ಭೂರಹಿತ ಮಹಿಳೆಯರಿಗೆ ಸಮಾನವಾಗಿ ಸಿಗುವಂತೆ ಅವರನ್ನು ಒಳಗೊಳ್ಳತಕ್ಕದ್ದು.

ಸರ್ಕಾರ ಅಥವಾ ವಿಶ್ವಬ್ಯಾಂಕ್ ಪ್ರಾಯೋಜಿತ ಅಭಿವೃದ್ಧಿ ಯೋಜನೆಗಳಿಂದ ಅಥವಾ ಭಾರತದ ಕಂಪೆನಿಗಳು ಭೂಮಿಯನ್ನು ಆಕ್ರಮಿಸಿಕೊಳ್ಳುವುದರಿಂದ ನಿರಾಶ್ರಿತರಾದ ದಲಿತ ಮತ್ತು ಆದಿವಾಸಿ ಸಮುದಾಯದವರಿಗೆ ಸೂಕ್ತವಾದ ಪರಿಹಾರ ಕಾರ್ಯಕ್ರಮಗಳನ್ನು ತಕ್ಷಣ ಮತ್ತು ದೂರಗಾಮಿ ದೃಷ್ಟಿಯನ್ನಿಟ್ಟುಕೊಂಡು ರೂಪಿಸತಕ್ಕದ್ದು.

ಭವಿಷ್ಯದ ಯೋಜನೆಗಳು ಮತ್ತು ಕಾರ್ಯಕ್ರಮಗಳ ಹೂಡಿಕೆಯಲ್ಲಿ ಸ್ಥಳೀಯ ಸಮುದಾಯಗಳು ಭಾಗಿದಾರರಾಗುವಂತೆ ಹಾಗೂ ಎಲ್ಲ ಅಭಿವೃದ್ಧಿ ಯೋಜನೆಗಳಲ್ಲಿ ಪಾಲುದಾರರಾಗುವಂತೆ ನೋಡಿಕೊಳ್ಳತಕ್ಕದ್ದು.

ದುಡಿಮೆಯ ಹಕ್ಕು ಹಾಗೂ ಆಹಾರ ಭದ್ರತೆಯ ಹಕ್ಕಿನ ಮೇಲೆ ಆಗಿರುವ ಪರಿಣಾಮ

'ಒಂದೆಡೆ ಅತಿ ಹೆಚ್ಚಿನ ಆಹಾರಧಾನ್ಯಗಳ ಶೇಖರಣೆ ಮತ್ತು ಇನ್ನೊಂದೆಡೆ ಹಸಿವಿನಿಂದ ನರಳುತ್ತಿರುವ ಜನರ ಒಟ್ಟೊಟ್ಟಿಗಿನ ಇರುವಿಕೆಯು ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿದ್ದಂತೆ ವಾಣಿಜ್ಯೀಕರಣಗೊಂಡ ಕೃಷಿನೀತಿಯ ನೇರ ಪರಿಣಾಮವಾಗಿದೆ' (ವಂದನಾ ಶಿವ ಆಹಾರದ ಅಪಹರಣ, ೨೦೦೨)

ಗ್ರಾಮೀಣ ಕೃಷಿಯಾಧಾರಿತ ಭಾರತದ ಆರ್ಥಿಕ ವ್ಯವಸ್ಥೆಯು ಪ್ರಧಾನವಾಗಿ ಬಹುಸಂಖ್ಯಾತ ಜನರನ್ನು ಆಧರಿಸಿದ್ದು ಅದರಲ್ಲೂ ವಿಶೇಷವಾಗಿ ದಲಿತ ಕೃಷಿ ಕಾರ್ಮಿಕರು ಮತ್ತು ಸಣ್ಣ ರೈತರನ್ನು ಒಳಗೊಂಡಿದೆ. ಬದಲಾಗುತ್ತಿರುವ ಕೃಷಿ ನೀತಿಗಳು, ಕೃಷಿಯ ನಿಗಮೀಕರಣ, ಯಾಂತ್ರೀಕರಣ ಹಾಗೂ ಕೃಷಿಗೆ ನೀಡುತ್ತಿದ್ದ ಸಾಲ, ಸಬ್ಸಿಡಿಗಳ ಹಿಂತೆಗೆತ ಇವುಗಳನ್ನು ಗಮನದಲ್ಲಿಟ್ಟುಕೊಂಡು ದಲಿತರ ದುಡಿಮೆಯ ಹಕ್ಕುಗಳು ಮತ್ತು ಬಡಜನರ ಮೇಲೆ ಅದರಿಂದಾಗುವ ಪರಿಣಾಮಗಳನ್ನು ಅರ್ಥೈಸಬೇಕಿದೆ. ಎಲ್ಲಿ ದುಡಿಮೆಯು ನೇರವಾಗಿ ಆಹಾರ ಭದ್ರತೆ ಮತ್ತು ಭದ್ರ ಜೀವನಕ್ರಮಗಳಿಗೆ ಸಂಬಂಧಿಸಿದೆಯೋ, ಬಡಜನರ ಆಹಾರ ಭದ್ರತೆಯು ಮುಖ್ಯವಾಗಿ ಆಹಾರಧಾನ್ಯಗಳ ಉತ್ಪಾದನೆ,

ಹಂಚಿಕೆ, ಬೆಲೆನಿರ್ಣಯಗಳ ಮೇಲೆ ಹೊಂದಿಕೊಂಡಿರುತ್ತದೆ. ಆದ್ದರಿಂದ ಕೃಷಿಕ್ಷೇತ್ರ, ರಫ್ತು ಉದ್ದೇಶಿತ ಉತ್ಪಾದನೆ, ಸಾರ್ವಜನಿಕ ವಿತರಣಾ ವ್ಯವಸ್ಥೆ, ಸರ್ಕಾರಿ ಸಬ್ಸಿಡಿ ವ್ಯವಸ್ಥೆಗಳನ್ನು ನೇರವಾಗಿ ಪರಿಶೀಲನೆಗೆ ಒಳಗಾಗುತ್ತವೆ.

ಬದಲಾಗುತ್ತಿರುವ ನೀತಿಗಳು ಮತ್ತು ಗ್ರಾಮೀಣ ದುಡಿಮೆಯ ರೂಪಗಳು

ಕೃಷಿಯ ನಿಗಮೀಕರಣ : ಭಾರತೀಯ ನಾಗರಿಕರಿಗೆ ಅತ್ಯಧಿಕ ಉದ್ಯೋಗ ಕ್ಷೇತ್ರವಾದ ಕೃಷಿಯು ೧೯೯೧ರ ನಂತರ ರಫ್ತು ಉತ್ಪಾದನೆಗೆ ಬದಲಾದುದು ಕೃಷಿಯ ನಿಗಮೀಕರಣವನ್ನು ಸಾರಿ ಹೇಳುತ್ತದೆ.

ಭೂ ಒಡೆತನದ ಸ್ಥಿರೀಕರಣ ಮತ್ತು ಭೂಮಿತಿ ಕಾಯಿದೆಗೆ ಸೂಕ್ತ ಬದಲಾವಣೆಯನ್ನು ತರುವ ಹೆಸರಿನಲ್ಲಿ ಸರ್ಕಾರವು ತನ್ನ ಹೆಚ್ಚುವರಿ ಭೂಮಿಯನ್ನು ಆಕ್ರಮಿಸಿಕೊಳ್ಳುವುದು ಕಂಡುಬರುತ್ತಿದ್ದು ಈ ನಿಟ್ಟಿನಲ್ಲಿ ಭೂಮಿತಿ ಕಾಯಿದೆಯು ಅಡ್ಡಿಯಾದ್ದರಿಂದ, ಅದಕ್ಕೆ ತಿದ್ದುಪಡಿಯನ್ನು ತರುತ್ತಿದೆ. ಹೀಗೆ ವಶಪಡಿಸಿಕೊಂಡ ಭೂಮಿಯನ್ನು ಖಾಸಗಿ ಹೂಡಿಕೆದಾರರಿಗೆ, ಕಂಪೆನಿಗಳಿಗೆ ಅಥವಾ ದೊಡ್ಡ ಭೂಮಾಲೀಕರಿಗೆ ಗುತ್ತಿಗೆ ಆಧಾರದ ಮೇಲೆ ರಫ್ತು ಉದ್ದೇಶದ ಕೃಷಿ ಉದ್ಯಮಕ್ಕೆ ನೀಡಲಾಗುತ್ತಿದೆ.

ಯಾಂತ್ರೀಕರಣ : ಅಧಿಕ ಇಳುವರಿ ಸ್ವರೂಪಕ್ಕೆ ಬದಲಾಗುತ್ತಿರುವ ಕೃಷಿಯು ಹೆಚ್ಚೆಚ್ಚು ಯಾಂತ್ರೀಕರಣವನ್ನು ಬಯಸುತ್ತದೆ. ಇದನ್ನು ಕೇವಲ ಖಾಸಗೀ ಬಂಡವಾಳದ ಕೃಷಿಯಲ್ಲಷ್ಟೇ ಉಪಯೋಗಿಸುತ್ತಿದ್ದು ಅನೇಕ ದಲಿತರು ಮತ್ತು ಅಸಂಘಟಿತ ಕಾರ್ಮಿಕರಿಗೆ ಬಲವಾದ ಹೊಡೆತವನ್ನು ಕೊಟ್ಟಿದೆ. ಇದು ದೇಶದಲ್ಲಿ ಮತ್ತಷ್ಟು ನಿರುದ್ಯೋಗ ಸೃಷ್ಟಿಗೆ ಕಾರಣವಾಗುತ್ತದೆ. ಈ ಬದಲಾವಣೆಗಳಿಂದ ಬೇಸಾಯದ ಖರ್ಚು ಜಾಸ್ತಿಯಾಗಿದೆಯಲ್ಲದೆ ಸಣ್ಣ ರೈತರನ್ನು ಸಾಲದಲ್ಲಿ ಸಿಲುಕಿಸಿ, ಕೊನೆಗೆ ಕೃಷಿಯಿಂದ ಅವರನ್ನು ಹೊರದೂಡಲಾಗುತ್ತದೆ.

ಬಜೆಟ್‌ನ ಕಡಿತ : ಈ ಬದಲಾವಣೆಗಳು ಬಜೆಟ್‌ನ ಕಡಿತದೊಡನೆ ಕೃಷಿ ಕ್ಷೇತ್ರಕ್ಕೆ ಮೀಸಲಿರಿಸುತ್ತಿದ್ದ ಹಣವನ್ನು ಕಡಿತಗೊಳಿಸುತ್ತಿವೆ. ಆದ್ದರಿಂದ ೧೯೮೫ - ೯೦ ರ ಸಂದರ್ಭದಲ್ಲಿ ೧.೩ ಬಿಲಿಯನ್ ರೂ.ಗಳನ್ನು ಕೃಷಿಕ್ಷೇತ್ರಕ್ಕೆ ವಿನಿಯೋಗಿಸಿತ್ತು. ಆದರೆ ೧೯೯೦-೯೨ರ ವೇಳೆಗೆ ಆ ಮೊತ್ತ ೦.೬೮ ಬಿಲಿಯನ್ ರೂ.ಗಳಿಗೆ ಕಡಿತಗೊಂಡಿತು. ಹಾಗೆಯೇ ಕೃಷಿಯೇತರ ಕ್ಷೇತ್ರದಲ್ಲಿ ಸಾಲ ಮತ್ತು ಸಬ್ಸಿಡಿಯ ಅನುಕೂಲಗಳನ್ನು ಕಡಿತಗೊಳಿಸಲಾಯಿತು. ಇದು ೧೯೮೦ರ ದಶಕದಲ್ಲಿ ಕೃಷಿ ದುಡಿಮೆಯಿಂದ ಕೃಷಿ ಉದ್ಯಮಗಳಿಗೆ ಮತ್ತು ಕೃಷಿಯೇತರ ಉದ್ಯೋಗಗಳಿಗೆ ದಲಿತರು ಹೆಚ್ಚೆಚ್ಚು ಹೋಗುವಂತಾಗಿತ್ತು. ಆದರೆ ಕಡಿತದಿಂದ ಅದಕ್ಕೂ ಪೆಟ್ಟು ಬಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಗೆ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಬ್ಯಾಂಕ್ ನೀಡುತ್ತಿದ್ದ ಸಾಲವೂ ಸಹ ಕಮ್ಮಿಯಾಗಿದೆ. ಹೊಸ ಆರ್ಥಿಕ ನೀತಿಯು ಜಾರಿಯಾಗುವ ತನಕ ಬ್ಯಾಂಕ್ ಸಾಲ ಶೇ.೪೦ರಷ್ಟು ಇದ್ದದ್ದು ಅನಂತರದಲ್ಲಿ ೧೯೯೪ರ ಹೊತ್ತಿಗೆ ಶೇ. ೩೫ಕ್ಕೆ ಇಳಿಯಿತು. ಈ ಕಡಿತ ಆ ಕ್ಷೇತ್ರಗಳ ಮೇಲೆ ಮಾರಕ ಪರಿಣಾಮ ಬೀರಿತ್ತಲ್ಲದೇ, ಗ್ರಾಮೀಣ ದಲಿತ ಉದ್ಯೋಗದ ಮೇಲೂ ತೀವ್ರವಾದ ಪರಿಣಾಮ ಬೀರಿದೆ.

ಕೆಲಸದ ದಿನಗಳು ಕಮ್ಮಿಯಾದದ್ದು ಮತ್ತು ಬಡತನ ಹೆಚ್ಚುತ್ತಿರುವುದು

ದಲಿತರ ಬಡತನದ ಜೊತೆಗೆ ಅವರ ಅಭಿವೃದ್ಧಿಯ ಹೊಸ ಆರ್ಥಿಕ ಸುಧಾರಣೆಗಳ ನಂತರ ಮತ್ತಷ್ಟು ಕುಂಠಿತಗೊಂಡಿರುವುದು ಅವರ ದುಡಿಮೆ ಮತ್ತು ಆಹಾರ ಭದ್ರತೆಯ ಜೊತೆಗೆ ತಳಕು ಹಾಕಿಕೊಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ಬಹುಸಂಖ್ಯಾತ ದಲಿತರು ಭೂ ರಹಿತ ಕಾರ್ಮಿಕರಾಗಿದ್ದು ಅವರಲ್ಲಿ ಸಣ್ಣ ರೈತರೆಂದರೆ ಒಂದು ಎಕರೆ ಭೂಮಿಗಿಂತ ಕಮ್ಮಿ ಭೂಮಿಯನ್ನು ಹೊಂದಿದವರಾಗಿದ್ದಾರೆ. ಇಂಥ ಸಂದರ್ಭದಲ್ಲಿ ಅವರು ತಮ್ಮ ಬದುಕಿನ ನಿರ್ವಹಣೆಗಾಗಿ ಕೃಷಿಯೇತರ ಕೆಲಸಗಳನ್ನು ಹಿಡಿಯುತ್ತಾರೆ. ಇಂಥವರಿಗೆ ಅವಕಾಶಗಳು ಕಮರಿ ಹೋಗುತ್ತಿವೆ.

ಭೂಮಿಯಿಂದ ಪ್ರತ್ಯೇಕಗೊಳ್ಳುವಿಕೆ ಮತ್ತು ನಿರುದ್ಯೋಗ

೧೯೯೦ರಲ್ಲಿ ಬದಲಾದ ಕೃಷಿ ಮತ್ತು ಸಾಲ ನೀತಿಗಳು ಪ್ರಾಥಮಿಕ ಕ್ಷೇತ್ರದಲ್ಲಿ ಹೆಚ್ಚುವರಿ ಉದ್ಯೋಗಕ್ಕೆ ಕಾರಣವಾದವು. ಅದರಲ್ಲೂ ದಲಿತ ಶ್ರಮಶಕ್ತಿಯು ನಿರುದ್ಯೋಗದತ್ತ ವಾಲುವಂತಾಯ್ತು.

೧೯೯೩-೯೪ರಲ್ಲಿ ಶೇ. ೨೦.೧ರಷ್ಟಿದ್ದ ದಲಿತ ಕೃಷಿಕರ ಸಂಖ್ಯೆ ೧೯೯೯-೨೦೦೦ ದ ವೇಳೆಗೆ ಶೇ. ೧೬.೪ರಷ್ಟಕ್ಕೆ ಇಳಿಯಿತು. ಇದು ೧೯೮೭-೮೮ರಲ್ಲಿದ್ದುದಕ್ಕಿಂತಲೂ ಕಮ್ಮಿಯಾಗಿತ್ತು. ಇದೇ ವೇಳೆ ದಲಿತೇತರರಲ್ಲಿ ಈ ಇಳಿಮುಖ ಕಮ್ಮಿಯೆಂದೇ ಹೇಳಬೇಕು. ೧೯೯೯-೨೦೦೦ದಲ್ಲಿ ರೈತರ ಸಂಖ್ಯೆಯು ಶೇ. ೪೧.೧ರಷ್ಟು ಇತ್ತು. (ಕೋಷ್ಟಕ ನೋಡಿ)

ಹೀಗಿರುವಾಗ ೧೯೯೩-೯೪ರಲ್ಲಿ ಶೇ. ೪೯.೩ರಷ್ಟಿದ್ದ ಗ್ರಾಮೀಣ ದಲಿತ ಕೃಷಿ ಕಾರ್ಮಿಕರ ಸಂಖ್ಯೆ ೧೯೯೯-೨೦೦೦ ಹೊತ್ತಿಗೆ ಶೇ. ೫೧.೪ರಷ್ಟು ಹೆಚ್ಚಾಗಿದೆ. ಇದು ೧೯೮೭-೮೮ರ ಸಂಖ್ಯೆ ಸರಿಸಮಾನವಾದಂತಿದೆ. ಅಂದರೆ ಕೃಷಿಯಲ್ಲಿ ಸ್ವಾವಲಂಬಿಗಳಾದ ದಲಿತರು ಕೂಲಿಯಾಳುಗಳಾಗಿ ಮಾರ್ಪಟ್ಟಿರುವುದು ಒಳ್ಳೆಯ ಸಂಗತಿಯೆಂದೇನು ಅಲ್ಲ. ಕೃಷಿಯಲ್ಲಿ ಹೆಚ್ಚುತ್ತಿರುವ ಯಾಂತ್ರೀಕರಣ ಮತ್ತು ಜೈವಿಕ ತಂತ್ರಜ್ಞಾನದಿಂದಾಗಿ ಬೇಸಾಯದ ಖರ್ಚು ಹೆಚ್ಚುತ್ತಿದ್ದು ಸಣ್ಣ ಮತ್ತು ಅತಿಸಣ್ಣ ರೈತಾಪಿ ಕುಟುಂಬಗಳಿಗೆ ಮಾರಕವಾಗುತ್ತಿದೆ. ಇದರೊಡನೆ ಮಾರುಕಟ್ಟೆ, ನೀರಾವರಿ ಮತ್ತು ಸಾರಿಗೆ ಅನುಕೂಲಗಳು ದೊರೆಯದೆ, ಅನೇಕರು ಅನ್ಯಮಾರ್ಗವಿಲ್ಲದೆ ತಮ್ಮ ಸ್ವಲ್ಪ ಭೂಮಿಯನ್ನೂ ಮಾರಿಕೊಳ್ಳುವಂತಾಗಿದೆ. ಹೀಗೆ ಅವರು ಕೃಷಿ ಕೂಲಿಯಾಳುಗಳಾಗಿ ಮಾರ್ಪಡುತ್ತಿದ್ದಾರೆ. ಆದರೆ ದಲಿತೇತರ ಕೃಷಿ ಕಾರ್ಮಿಕರಲ್ಲಿ ೧೯೮೭-೮೮ರಲ್ಲಿ ಶೇ. ೨೩ರಷ್ಟಿದ್ದದ್ದು ೧೯೯೩-೯೪ರಲ್ಲಿ ಶೇ. ೧೯ಕ್ಕೆ ಇಳಿದಿದೆ. ಅಂದರೆ ಅವರಲ್ಲಿ ಕೃಷಿ ಕೂಲಿಯಾಳುಗಳ ಸಂಖ್ಯೆ ಕಮ್ಮಿಯಾಗುತ್ತಿದೆ.

ಆದ್ದರಿಂದ ದಲಿತ ಕೃಷಿ ಕೂಲಿಯಾಳುಗಳ ಕುಟುಂಬಗಳು ೧೯೯೩-೯೪ರಲ್ಲಿ ಶೇ. ೬೦.೩ರಷ್ಟಿದ್ದದ್ದು ೧೯೯೯-೨೦೦೦ದ ವೇಳೆಗೆ ಶೇ. ೬೧.೪ರಷ್ಟಕ್ಕೆ ಏರಿದೆ. ಆದರೆ ದಲಿತೇತರ ಕುಟುಂಬಗಳಲ್ಲಿ ಇಳಿಮುಖ ಕಂಡುಬರುತ್ತದೆ. ೧೯೯೩-೯೪ರಲ್ಲಿ ಅವರ ಸಂಖ್ಯೆ ಶೇ. ೨೯.೧ ಇದ್ದದ್ದು ೧೯೯೯-೨೦೦೦ ವೇಳೆಗೆ ಶೇ. ೨೫.೩ಕ್ಕೆ ಇಳಿದಿದೆ. (ಗ್ರಾಮೀಣ ಕಾರ್ಮಿಕ ಪರಿಶೀಲನೆ, ಗ್ರಾಮೀಣ ಕಾರ್ಮಿಕ ಕೌಟುಂಬಿಕ ವರದಿ, ೧೯೮೩-೮೪ ೧೯೯೩-೯೪ ೧೯೯೯-೨೦೦೦ ಕಾರ್ಮಿಕ ಬ್ಯೂರೋ, ಕಾರ್ಮಿಕ ಸಚಿವಾಲಯ, ಶಿಮ್ಲಾ)

ಭಾರತದಲ್ಲಿ ಸುಮಾರು ೮೭ ಮಿಲಿಯನ್ ಬಾಲ ಕಾರ್ಮಿಕರಿದ್ದು, ಅವರ ಸಂಖ್ಯೆಯು ಹೆಚ್ಚುತ್ತಿದೆ. ಬೇಸಾಯದಲ್ಲಿ ಅಧಿಕ ಸಂಖ್ಯೆಯ ಬಾಲಕಾರ್ಮಿಕರಿದ್ದು, ಶೇ. ೮೦ರಷ್ಟು ಬಾಲ ಕಾರ್ಮಿಕರು ದಲಿತರೇ ಆಗಿದ್ದಾರೆ. (ಸಿ.ಎ.ಸಿ.ಎಲ್, ಭಾರತದಲ್ಲಿ ಬಾಲಕಾರ್ಮಿಕ ಸ್ಥಿತಿ-ಗತಿ : ಒಂದು ಪರ್ಯಾಯ ವರದಿ)

ಆರ್ಥಿಕ ಸುಧಾರಣಾ ಪೂರ್ವದಲ್ಲಿ ಸರ್ಕಾರ ಬಡತನ ನೀಗುವಲ್ಲಿ ಪ್ರಮುಖ ಪಾತ್ರವಹಿಸಿತ್ತು. ಆದರೆ ಈಗ ಸರ್ಕಾರ ಬಡತನ ನಿರ್ಮೂಲನ ಕಾರ್ಯಕ್ರಮಗಳಿಗೆ ಹಣ ವ್ಯಯಿಸುತ್ತಿಲ್ಲ. ಆದ್ದರಿಂದ ಕೃಷಿಯೇತರ ಕ್ಷೇತ್ರಗಳಲ್ಲಿ ಉದ್ಯೋಗ ಕಮ್ಮಿಯಾಗುತ್ತಿದೆ. ಸರ್ಕಾರದ ಹಿಂತೆಗೆತದಿಂದಾಗಿ ದಲಿತರ ಕೆಲಸದ ದಿನಗಳು ಕಮ್ಮಿಯಾಗುತ್ತಿವೆ. ಹೀಗಿರುವಲ್ಲಿ 'ಸುಧಾರಣೆಗಳಿಗೆ ಒಂದು ಮಾನವೀಯ ಮುಖ' ಎನ್ನುವ ಘೋಷಣೆಯಡಿ ಸರ್ಕಾರವು ೧೯೯೪-೯೫, ೧೯೯೫-೯೬ರ ಬಜೆಟ್‌ಗಳಲ್ಲಿ ಮೇಲಿನ ಸ್ಥಿತಿ-ಗತಿಗಳನ್ನು ಸುಧಾರಿಸಲು ನಡೆಸಿದ ಪ್ರಯತ್ನಗಳು ದಿನಕ್ಕೆ ರೂ. ೨೧ರಂತೆ ವಾರ್ಷಿಕವಾಗಿ ೨೦ ಕೆಲಸದ ದಿನಗಳನ್ನ ಮಾತ್ರ ಒದಗಿಸಿತು.

ಕುಸಿಯುತ್ತಿರುವ ಗ್ರಾಹಕ ಖರ್ಚು

ದೊರೆತಿರುವ ಅಂಕಿ-ಅಂಶಗಳ ಪ್ರಕಾರ ತಳಮಟ್ಟದ ಶೇ. ೩೦ರಷ್ಟು ಭಾರತೀಯರು ಅದರಲ್ಲೂ ದಲಿತರು, ತಮ್ಮ ಗ್ರಾಹಕ ಅಗತ್ಯಗಳಿಗೆ ಎಷ್ಟು ವೆಚ್ಚ ಮಾಡುತ್ತಿದ್ದಾರೆಂದು ತಿಳಿಯುತ್ತದೆ. ೧೯೮೭ - ೮೮ ರಿಂದ ಹಿಡಿದು ೧೯೯೦ - ೯೧ ರ ಸಂದರ್ಭದಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಈ ಸಂಗತಿ ಎದ್ದು ಕಾಣುತ್ತದೆ. ಆದರೆ ಆರ್ಥಿಕ ಸುಧಾರಣೆಗಳನ್ನು ತಂದ ಮೇಲೆ ಈ ಗ್ರಾಹಕ ಪ್ರವೃತ್ತಿಯಲ್ಲಿ ವ್ಯತಿರಿಕ್ತ ಬೆಳವಣಿಗೆ ಕಂಡು ಬಂದಿದೆ.

ವೃತ್ತಿಪರ ಬದುಕಿನ ಕ್ರಮಗಳು : ಗ್ರಾಮೀಣ ಪ್ರದೇಶದಲ್ಲಿ (ಶೇಕಡಾವಾರು ಕ್ರಮದಲ್ಲಿ) ಪರಿಶಿಷ್ಟ ಜಾತಿ ಮತ್ತು ಇತರರು.

ಕುಟುಂಬದ ರೀತಿ	ಪರಿಶಿಷ್ಟ ಜಾತಿ (ಎಸ್‌ಸಿ)			ಇತರರು (ದಲಿತೇತರರು)			ಸರಾಸರಿ ವ್ಯತ್ಯಾಸ		
	೧೯೮೭-೮೮	೧೯೯೩-೯೪	೧೯೯೯-೨೦೦೦	೧೯೮೭-೮೮	೧೯೯೩-೯೪	೧೯೯೯-೨೦೦೦	೧೯೮೭-೮೮	೧೯೯೩-೯೪	೧೯೯೯-೨೦೦೦
ಕೃಷಿಯಲ್ಲಿ ಸ್ವಾವಲಂಬನೆ	೧೮.೯	೨೦.೧	೧೬.೪	೪೩.೩	೪೩.೩೨	೪೧.೧	೦.೪೪	೦.೪೬	೦.೪೦
ಕೃಷಿಯೇತರ ವೃತ್ತಿಯಲ್ಲಿ ಸ್ವಾವಲಂಬನೆ	೧೧.೦	೧೦.೭	೧೨.೦	೧೩.೮	೧೪.೪೨	೧೪.೮	೦.೮೦	೦.೭೪	೦.೮೧
ಕೃಷಿ ಕಾರ್ಮಿಕರು	೫೧.೭	೪೯.೩	೫೧.೪	೨೩.೨	೨೩.೨	೧೯.೦	೨.೨೩	೨.೧೩	೨.೭೧
ಇತರೆ ಕಾರ್ಮಿಕರು	೧೧.೪	೧೦.೨	೧೦.೦	೭.೯	೬.೯	೬.೩	೧.೪೪	೧.೪೮	೧.೫೯
ಇತರರು	೬.೯	೯.೭	೧೦.೨	೧೧.೫	೧೨.೧	೧೮.೭	೦.೬೦	೦.೮೦	೦.೫೫

ಮೂಲ: ರಾಷ್ಟ್ರೀಯ ಮಾದರಿ ಸಮೀಕ್ಷೆ ೧೯೮೭-೮೮ ೧೯೯೩-೯೪ ೧೯೯೯-೨೦೦೦.

ಬಡ ಜನರ ಗ್ರಾಹಕ ಖರ್ಚು-ವೆಚ್ಚ

ವರ್ಷ	ಗ್ರಾಮೀಣ	ನಗರ
೧೯೮೭-೮೮	೧೫.೫೭	೧೩.೩೩
೧೯೯೦-೯೧	೧೫.೯೬	೧೩.೭೪
೧೯೯೧-೯೨	೧೨.೭೪	೧೩.೧೭

ಇದೇ ವೇಳೆ ಶೇ. ೪೦ ರಷ್ಟು ಮಧ್ಯಮ ಜನರ ಗ್ರಾಹಕ ವೆಚ್ಚಗಳೂ ಸಹ ವ್ಯತಿರಿಕ್ತ ಬೆಳವಣಿಗೆಯಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳೆರಡರಲ್ಲೂ ಕಂಡುಬಂದಿದೆ. ಶೇ. ೭೦ರಷ್ಟು ಜನ ಕಳೆದುಕೊಂಡಿರುವುದು ಮೇಲಿನ ಶೇ. ೩೦ರಷ್ಟು ಜನಕ್ಕೆ ಪ್ರಯೋಜನವಾಗಿದೆ. ೧೯೯೦ರ ಆರ್ಥಿಕ ಸುಧಾರಣಾ ಪೂರ್ವದಲ್ಲಿ ಈ ಶ್ರೀಮಂತ ವರ್ಗಗಳ ಕುಸಿಯುತ್ತಿದ್ದ ಧಾರಣೆಯ ಅನಂತರದಲ್ಲಿ ಕೂಡಲೇ ಅಧಿಕಗೊಂಡಿದೆ.

ಹೆಚ್ಚುತ್ತಿರುವ ಸಾಲ : ಹೆಚ್ಚುತ್ತಿರುವ ದಲಿತ ಕಾರ್ಮಿಕರ ಕಮ್ಮಿ ಉದ್ಯೋಗ (under-employment) ಅಥವಾ ನಿರುದ್ಯೋಗ, ಕುಸಿಯುತ್ತಿರುವ ಕೂಲಿ ಅವರ ಸಾಲ ಹೆಚ್ಚುತ್ತಿರುವುದಕ್ಕೆ ಪ್ರಬಲ ಕಾರಣಗಳಾಗಿವೆ. ಅಂದರೆ ಅವರಿಗೆ ದೊರೆಯುತ್ತಿರುವ ಕೂಲಿಯಿಂದ ಅವರ ನಿತ್ಯದ ಅಗತ್ಯಗಳನ್ನು ಪೂರೈಸಿಕೊಳ್ಳಲಾಗುತ್ತಿಲ್ಲ. ಆದ್ದರಿಂದ ಅವರು ಸಾಲಕ್ಕೆ ಮೊರೆ ಹೋಗುತ್ತಾರೆ. ಆ ಸಾಲಕ್ಕೆ ವಿಪರೀತ ಬಡ್ಡಿಯನ್ನು ತೆರಬೇಕಾಗುತ್ತದೆ.

೧೯೮೩ರಲ್ಲಿ ದಲಿತರು ಸರ್ಕಾರದಿಂದ ತೆಗೆದುಕೊಂಡ ಸಾಲ ಶೇ. ೭.೯೩ರಷ್ಟಿತ್ತು. ಆದರೆ ೧೯೯೩-೦೪ ವೇಳೆಗೆ ಸರ್ಕಾರದಿಂದ ತೆಗೆದುಕೊಳ್ಳುತ್ತಿರುವ ಸಾಲ ಶೇ. ೦.೯೦ಕ್ಕೆ ಇಳಿದು, ಅದೇ ವೇಳೆ ಬಡ್ಡಿಗೆ ಸಾಲ ನೀಡುವವರ ಬಳಿ ತೆಗೆದುಕೊಂಡ ಸಾಲ ಶೇ. ೩೦.೮೮ರಷ್ಟಿದ್ದದ್ದು ಶೇ. ೪೦.೭೭ಕ್ಕೆ ಏರಿತು. ಇದು ದಲಿತರು ತಮ್ಮ ಅಗತ್ಯಗಳಿಗಾಗಿ ತೆಗೆದುಕೊಳ್ಳುತ್ತಿದ್ದ ಸಾಲ ೧೯೮೩ರಲ್ಲಿ ಶೇ. ೩೨.೮೯ರಷ್ಟಿದ್ದು ೧೯೯೩-೯೪ರ ವೇಳೆಗೆ ಶೇ. ೪೨.೭೧ಕ್ಕೆ ಏರಿತು. (ಗ್ರಾಮೀಣ ಕಾರ್ಮಿಕ ಪರಿಶೀಲನೆ, ಗ್ರಾಮೀಣ ಕಾರ್ಮಿಕ ಕೌಟುಂಬಿಕ ವರದಿ, ೧೯೮೩-೮೪, ೧೯೯೩-೯೪, ಕಾರ್ಮಿಕ ಬ್ಯೂರೋ, ಕಾರ್ಮಿಕ ಸಚಿವಾಲಯ, ಶಿಮ್ಲಾ)

೧೯೯೭-೨೦೦೦ದ ನಡುವೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯೊಂದರಲ್ಲೇ ೧೮೨೬ ರೈತಾಪಿ ಜನ ಹೆಚ್ಚಾಗಿ ದಲಿತರು ಹಸಿವನ್ನು ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಕೆಲವು ಪ್ರಕರಣಗಳಲ್ಲಿ ಸಾಲದ ಮೊತ್ತ ರೂ. ೩೧೬ ಆಗಿತ್ತು.

ಹೆಚ್ಚುತ್ತಿರುವ ಬಡತನ

ದೀರ್ಘವಾದ ಎರಡು ದಶಕಗಳ ಅವಧಿಯ ಬಡತನದಲ್ಲಿ ಇಳಿಮುಖ ಕಾಣುತ್ತಿದ್ದದ್ದು ಆರ್ಥಿಕ ಸುಧಾರಣೆಗಳ ನಂತರ ವ್ಯತಿರಿಕ್ತವಾಗಿ ಹೆಚ್ಚಾಗಲಾರಂಭಿಸಿದೆ. ದಲಿತರನ್ನು ಅಧಿಕವಾಗಿ ಕಾಡುವ ಗ್ರಾಮೀಣ ಬಡತನವು ಸುಧಾರಣಾ ಪೂರ್ವದಲ್ಲಿ ಅಂದರೆ ೧೯೮೯-೯೦ರಲ್ಲಿ ಶೇ. ೩೩.೭೦ರಷ್ಟಿತ್ತು, ಆದರದು ೧೯೯೮ರಲ್ಲಿ ಶೇ. ೪೫.೨೫ರಷ್ಟು ಹೆಚ್ಚಾಯಿತು.

ಉದ್ಯೋಗ ಸಮೀಕ್ಷೆಯ ಪ್ರಕಾರ ಗ್ರಾಹಕ ಖರ್ಚು-ವೆಚ್ಚಗಳು ೨೦೦೦ದಲ್ಲಿ ದಲಿತೇತರರಿಗೆ ಹೋಲಿಸಿದಾಗ ಗ್ರಾಮೀಣ ದಲಿತರ ಬಡತನವು ಶೇ. ೪೨.೬೬ರಷ್ಟಿದ್ದು ದಲಿತೇತರರಲ್ಲಿ ಶೇ. ೨೩.೨೦ ಯಷ್ಟೆ ಅಲ್ಲದೆ ೧೯೯೩-೯೪ ಹಾಗೂ ೧೯೯೯-೨೦೦೦ದ ನಡುವೆ ದಲಿತರಲ್ಲಿ ಬಡತನ ಹೆಚ್ಚಾದರೆ, ದಲಿತೇತರರಲ್ಲಿ ಇಳಿಮುಖ ಕಂಡುಬರುತ್ತದೆ. ಆದ್ದರಿಂದ, ಹೊಸ ಆರ್ಥಿಕ ನೀತಿಯ ಸುಧಾರಣೆಗಳು ದಲಿತೇತರರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ.

ಹೆಚ್ಚುತ್ತಿರುವ ಬೆಲೆಗಳು ಮತ್ತು ಸಬ್ಸಿಡಿ ಕಡಿತ

ಆಹಾರ ಧಾನ್ಯಗಳು ಮತ್ತು ರಾಸಾಯನಿಕ ಗೊಬ್ಬರಗಳಿಗೆ ನೀಡುತ್ತಿದ್ದ ಸಬ್ಸಿಡಿ ಕಡಿತದಿಂದ ಅವುಗಳ ಬೆಲೆಯಲ್ಲಿ ತೀವ್ರ ಏರಿಕೆ ಉಂಟಾಗಿ, ನೇರವಾಗಿ ದಲಿತರ ಮೇಲೆ ತೀವ್ರವಾದ ಪೆಟ್ಟನ್ನು ನೀಡಿತು. ೧೯೮೦ರ ದಶಕದಲ್ಲಿ ವಾರ್ಷಿಕ ಬೆಲೆ ಏರಿಕೆ ಶೇ. ೭ರಷ್ಟು ಅಕ್ಕಿಗೆ ಹಾಗೂ ಗೋಧಿಗೆ ಶೆ. ೩.೩ರಷ್ಟು ಹೆಚ್ಚಾಯಿತು. ಹೀಗಿದ್ದಾಗ್ಯೂ ೧೯೯೦ರ ನಂತರದ ೪ ವರ್ಷಗಳಲ್ಲಿ ವಾರ್ಷಿಕ ಬೆಲೆ ಏರಿಕೆಯು ಅಕ್ಕಿಗೆ ಶೇ. ೧೩.೫ ರಷ್ಟು ಹಾಗೂ ಗೋಧಿಗೆ ಶೇ. ೧೮.೧ ರಷ್ಟು ಹೆಚ್ಚಾಗಿದ್ದುದು ಕಂಡುಬಂತು. ಇದೇ (ಕೋಷ್ಟಕ ನೋಡಿ) ರೀತಿ ಇತರೆ ಧಾನ್ಯಗಳಲ್ಲಿ ಅದೇ ಕಾಲಾವಧಿಯಲ್ಲಿ

ಆಹಾರ ಧಾನ್ಯಗಳ ಉತ್ಪಾದನೆ (ಮಿಲಿಯನ್ ಟನ್ನುಗಳಲ್ಲಿ)

	೧೯೮೯-೯೦	೧೯೯೦-೯೧	೧೯೯೧-೯೨	೧೯೯೨-೯೩	೧೯೯೩-೯೪
ಆಹಾರ ಧಾನ್ಯಗಳು (ಅಕ್ಕಿ, ಗೋಧಿ ಎಣ್ಣೆ ಧಾನ್ಯಗಳು)	೧೭೧.೦	೧೭೪.೪	೧೬೮.೪	೧೮೦	೧೭೯
ಹಿಂದಿನ ವರ್ಷಗಳಲ್ಲಿನ ಶೇಕಡಾವಾರು ವ್ಯತ್ಯಾಸ	೦.೬	೩.೨	-೪.೫	೬.೯	-೦.೫

ಕಂಡುಬಂತು. ದ್ವಿದಳನ ಕಾಳುಗಳ ಬೆಲೆಯು ಶೇ. ೯೭.೨ ರಷ್ಟು ತರಕಾರಿಗಳು ಶೇ. ೧೬೩.೪ರಷ್ಟು ಹಣ್ಣು ಶೇ. ೭೪ ರಷ್ಟು ಹಾಗೂ ಮೊಟ್ಟೆ, ಮಾಂಸ ಮತ್ತು ಮೀನು ಶೇ. ೧೦೨.೫ ಹೆಚ್ಚಳವನ್ನು ಕಂಡವು.

ಪರೋಕ್ಷವಾಗಿದ್ದರೂ ದಲಿತರ ಆಹಾರ ಭದ್ರತೆಗೆ ಹೊಡೆತವನ್ನು ಮತ್ತು ಬೆಲೆಗಳ ಹೆಚ್ಚಳಕ್ಕೆ ಹೊಸ ಆರ್ಥಿಕ ಸುಧಾರಣೆಗಳ ಮೂಲಕ ಮುಕ್ತ ಮಾರುಕಟ್ಟೆಯು ಕಾರಣವಾಗಿದೆ.

೧೯೫೧ರಲ್ಲಿ ೩೬೩ ಮಿಲಿಯ ಜನರಿಗೆ ೪೬ ಮಿಲಿಯ ಟನ್ ಆಹಾರಧಾನ್ಯಗಳ ಉತ್ಪಾದನೆಯಲ್ಲಿದ್ದು, ೧೯೯೧ರಲ್ಲಿ ೮೩೨ ಮಿಲಿಯ ಜನರಿಗೆ ೧೭೦ ಮಿಲಿಯ ಟನ್ ಆಹಾರ ಧಾನ್ಯಗಳ ಉತ್ಪಾದನೆ ಮಾಡಬೇಕಾದರೆ ಗೊಬ್ಬರಗಳಿಗೆ ಸಬ್ಸಿಡಿ ನೀಡಿದ್ದೇ ಬಹು ಮುಖ್ಯವಾದ ಕಾರಣವಾಗಿದೆ. ಹೀಗಿದ್ದರೂ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ, ಒಂದು ಅಧ್ಯಯನದ ಪ್ರಕಾರ, ೧೯೯೦ರ ದಶಕದಲ್ಲಿ ಗೊಬ್ಬರ ಬಳಕೆಯಲ್ಲಿ ಮುಖ್ಯ ಕುಸಿತ ಕಂಡು ಬಂದಿರುತ್ತದೆ. ಇದು ಸ್ಥಳೀಯ ಮಾರುಕಟ್ಟೆಯಲ್ಲಿ ಬೆಲೆಯೇರಲು, ಅಂದರೆ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಕುಸಿತ ಕಾಣಲು ಕಾರಣವಾಗಿದೆ. ಅಂದರೆ ಕೂಲಿಜನರಾದ ದಲಿತರಿಗೆ ಮಾರಕವಾಗಿದೆ. (ಗೃಹಾ೧೯೯೪)

ಹಣದುಬ್ಬರವೂ ಸಹ ದಲಿತರಿಗೆ ತೀವ್ರವಾದ ಪೆಟ್ಟನ್ನು ನೀಡಿದೆ. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ದಲಿತ ಜನಕ್ಕೆ ಯಾವುದೇ ರೀತಿಯ ರಕ್ಷಣೆ ಇರುವುದಿಲ್ಲ. ಆದರೆ ಸಂಘಟಿತ ವಲಯದಲ್ಲಿರುವವರಿಗೆ ಭತ್ಯೆಗಳು ಸಿಗುತ್ತಿರುತ್ತವೆ. ಆಂತರಿಕ ಉತ್ಪಾದನೆ ಮತ್ತು ಬಳಕೆಗೆ ಸಂಬಂಧಿಸಿ ಆಮದು ಮಾಡಿಕೊಳ್ಳುವ ಪದಾರ್ಥಗಳ ವೆಚ್ಚವು ಹಣದುಬ್ಬರದಿಂದ ಏರುತ್ತಿರುತ್ತದೆ. ಹಣದುಬ್ಬರಕ್ಕೆ ಬಹುಮುಖ್ಯವಾಗಿ ರೂಪಾಯಿ ಅಪಮೌಲ್ಯವೇ ಕಾರಣವಾಗಿದೆ.

ಇಪಿಡಬ್ಲ್ಯೂ ಸಂಶೋಧನ ಸಂಸ್ಥೆಯವರು ಇತ್ತೀಚೆಗೆ ಮಾಡಿದ ಒಂದು ಅಧ್ಯಯನದ ಪ್ರಕಾರ ಎಲ್ಲಾ ಪದಾರ್ಥಗಳ ಬೆಲೆಗಳು ತೀವ್ರವಾಗಿ ಏರಿದೆ. ಹೋಲ್‌ಸೇಲ್ ಬೆಲೆ ಪಟ್ಟಿಯಲ್ಲಿ (ಡಬ್ಲ್ಯೂಪಿಐ) ಬಳಕೆಯ ಪ್ರಧಾನ ಪದಾರ್ಥಗಳ ಬೆಲೆಯು ಶೇ. ೪೨ ರಿಂದ ಶೇ. ೯೩ ರಷ್ಟು ಏರಿಕೆಯಾಗಿದೆ.

ತುತ್ತಿನ ಚೀಲ ತುಂಬುವುದೆಲ್ಲಿ? ಜಾಗತೀಕರಣದ ಭರಾಟೆಯಲ್ಲಿ!

ಎಲ್ಲಾ ಪದಾರ್ಥಗಳ ಬೆಲೆಯು ಶೇ. ೪೪.೪ರಷ್ಟು ಹೆಚ್ಚಾಯಿತಲ್ಲದೆ ವಾರ್ಷಿಕವಾಗಿ ಶೇ. ೧೦.೩ರಷ್ಟು ಬೆಲೆ ಏರಿಕೆ ಸಮಗ್ರವಾಗಿ ಕಂಡುಬಂದಿದೆ. (ಇದು ಆರ್ಥಿಕ ಸುಧಾರಣೆಗಳ ಹಿಂದಿನ ವರ್ಷದಲ್ಲಿ ಕೇವಲ ಶೇ. ೭ರಷ್ಟು ಮಾತ್ರ ಹೆಚ್ಚಳವನ್ನು ಕಂಡಿತು) ೧೯೯೦ರ ಸಂದರ್ಭದಲ್ಲಿ ಆರ್ಥಿಕ ಸುಧಾರಣೆಗಳಿಂದ ರಾಸಾಯನಿಕ ಗೊಬ್ಬರಗಳು ಶೇ. ೧೦೦.೬ರಷ್ಟು ಬೆಲೆ ಏರಿಕೆಯನ್ನು ಕಂಡಿತು. ಹಾಗೆಯೇ ವಿದ್ಯುತ್‌ಶಕ್ತಿ ಶೇ. ೬೫.೯ರಷ್ಟು ಮತ್ತು ಇದ್ದಿಲು ಶೇ. ೫೮.೧ ರಷ್ಟು ಏರಿದವು. ಅಂದರೆ ರೂಪಾಯಿ ಅಪಮೌಲ್ಯೀಕರಣ ಮತ್ತು ರಫ್ತು ಉದ್ದೇಶಿತ ಬೆಳವಣಿಗೆಯು ಅವುಗಳ ಆಮದು ಸಂಗತಿಯನ್ನನುಸರಿಸಿ ಒತ್ತಡವನ್ನು ಹೇರುತ್ತವೆ. ಹೀಗಿರುವಲ್ಲಿ ರೂಪಾಯಿ ಅಪಮೌಲ್ಯೀಕರಣವು ಪದಾರ್ಥಗಳ ಬೆಲೆಗಳು ಗಗನಕ್ಕೇರುವಂತೆ ಮಾಡಿದೆ.

(ಮುಂದುವರಿಯುವುದು)

ದೃಷ್ಟಿಕೋನ

೪೦ ++ ಆಗಿರುವ ಅಪ್ಪ ಅಮ್ಮಂದಿರೇ...

ಜಾಗತೀಕರಣದ ದಾಳಿಯಿಂದ ಬಚ್ಚಿಟ್ಟುಕೊಳ್ಳಲು ಏನಾದರೂ ನೆಲೆ ಸಿಗಬಹುದಾದರೆ ಅದು ನಮ್ಮ ನಮ್ಮ ಪ್ರಾದೇಶಿಕ ಸಾಂಸ್ಕೃತಿಕ ನೆರಳಲ್ಲಿ ಮಾತ್ರ. ಇಲ್ಲಿ ಮಾತ್ರವೇ ನಮ್ಮ ವ್ಯಕ್ತಿ ವಿಶಿಷ್ಟತೆಗಳು ಅರಳುತ್ತವೆ. ಬೆಚ್ಚಗಿನ ಅನುಭವ, ಮಾನಸಿಕ ಭದ್ರತೆ, ಶಾಂತಿ-ನೆಮ್ಮದಿಗಳು ಸಿಗಬಹುದಾದ ತಾಣವಾಗಿದೆ. ನಿಮ್ಮ ಜನಪದ ಸಾಂಸ್ಕೃತಿಕ ನೆಲೆಗಳನ್ನು ನಾವು ಎಲ್ಲೋ ಹುಡುಕಬೇಕಾಗಿಲ್ಲ ಅದು ಇಲ್ಲೇ ನಮ್ಮಲ್ಲೇ ನಮ್ಮ ಮನೆಯ ಅಂಗಳದಲ್ಲಿ, ಆಸುಪಾಸಿನಲ್ಲಿ, ನಮ್ಮ ಓಣಿಯ ತುದಿಗಳಲ್ಲಿ ಮುಂದಿರುವ ಕೂಟಗಳಲ್ಲಿದೆ. ನಮಗೀಗ ಬೇಕಾಗಿರುವುದು ಮುಖ್ಯವಾಗಿ ಈ ಕೂಟ ಸ್ಥಾನಗಳಲ್ಲಿ ನಿಲ್ಲುವ, ಕೂಡುವ, ತಿನ್ನುವ... ಅನುಭವಿಸುವ 'ತಾಳ್ಮೆ'.

○ ಡಾ|| ಗಂಗಾ ಸ್ವಾಮಿ

ಸಂಸ್ಕೃತಿ ಎಂಬುದು ಸಮೂಹ ಸಮ್ಮತ ಜೀವನ ಪದ್ಧತಿ. ನಮ್ಮ ಈ ದಿನದ ಬದುಕಿನ ರೀತಿ ನೀತಿ ಕ್ರಮಗಳ ಹಿಂದೆ ಸಾವಿರ ವರುಷಗಳ ಇತಿಹಾಸವಿದೆ. ಈ ನಾಡಿನಲ್ಲಿ ಪ್ರಕೃತಿಗೆ ಪರಿಸರಕ್ಕೆ ದೈವತ್ವ ತುಂಬಿದವರು ನಾವು. ಮರ ದೈವ ಮೊರಡಿ ದೈವ ಎಂದ ನಾವು ವೈಚಾರಿಕತೆಯ ಹೆಸರಿನಲ್ಲಿ ಈಗ ಎಲ್ಲವನ್ನೂ ತಿರಸ್ಕರಿಸಿ ಪ್ರಕೃತಿಯನ್ನೂ ಸೂರೆ ಮಾಡುತ್ತಾ ಹೊರಟಿದ್ದೇವೆ. 'ಪ್ರಕೃತಿ ಎಲ್ಲರ ಆಸೆಯನ್ನು ತಣಿಸುತ್ತದೆ ಆದರೆ ದುರಾಸೆಯನ್ನಲ್ಲ'

ಇವತ್ತಿನ ಬಾರದ ಮಳೆಗೆ ಬರದ ಬೇಗೆಗೆ ಕಾರಣ ನಾವೇ ಅಲ್ಲವೇ?

ನಮ್ಮ ಬದುಕಿನ ಕ್ರಮದಲ್ಲಿ ನಿಸರ್ಗಕ್ಕೆ ದೊಡ್ಡ ಸ್ಥಾನವಿತ್ತು. ಸತ್ಯ,ಪ್ರೇಮ, ಅನುಕಂಪ, ಸೇವೆ ನಿಸ್ವಾರ್ಥಗಳ ನೈತಿಕ ಚೌಕಟ್ಟಿತ್ತು. ನಮ್ಮ ಸಂಸಾರ ನಮ್ಮ ಊರು, ನಮ್ಮ ವಂಶ... ಎಂದೆಲ್ಲ ಹೇಳುವ 'ನಾವು' - ಎಂಬುದು ಭೂಮಿಯ ಮೇಲಿನ ಎಲ್ಲರನ್ನೂ, ಎಲ್ಲವನ್ನೂ ಪ್ರೀತಿಸುವ ಗೌರವಿಸುವ ಸಹಜ ಗುಣವನ್ನು ಹೊಂದಿದ್ದೆವು. 'ಸಾಧುಗೆ ಸಾಧುವಾಗಿ ಮಾಧುರ್ಯಂಗೆ ಮಾಧುರ್ಯವನ್ನು ನೀಡಿ'... ಸ್ವಾಭಿಮಾನವನ್ನು ಮೆರೆಯುತ್ತಿದ್ದ ನಮ್ಮ ಬದುಕು ಇಂದೇನಾಗಿದೆ? ನಮ್ಮ ಮಕ್ಕಳು ಹೀಗೇಕೆ ಆಗಿದ್ದಾರೆ ಆಗುತ್ತಿದ್ದಾರೆ...? ಇದು ನಲವತ್ತರ ಆಸುಪಾಸಿನಲ್ಲಿರುವ ಬಹುಪಾಲು ಅಪ್ಪ ಅಮ್ಮಂದಿರ ಪ್ರಶ್ನೆಗಳು. ಒಂದು ರೀತಿಯ ಅಳಲುಗಳು.

ಇಂದು ನಮ್ಮ ಜೀವನ ಕ್ರಮ ಅರ್ಥ ಸಿದ್ಧಾಂತದ ಮೇಲೆ ನಿಂತಿದೆ. ಆಧುನಿಕ ಅರ್ಥ ಸಿದ್ಧಾಂತದಲ್ಲಿ ಭೌತಿಕ ಸಂಪತ್ತಿನ ಶೇಖರಣೆಯೇ ಕಲ್ಯಾಣದ ಹಾದಿಯಾಗಿದೆ. ಇಲ್ಲಿ ವಾಣಿಜ್ಯ-ವ್ಯಾಪಾರ- ಪೈಪೋಟಿ ಹಣ ಲಾಭಗಳೇ ದಿನನಿತ್ಯ ಪೂಜೆಗೊಳ್ಳುವ ಪರದೈವಗಳು. ಈ ಜಾಗತೀಕರಣದ ನೇರ ಫಲಶ್ರುತಿ ವ್ಯಾಪಾರೀಕರಣ. ಇಲ್ಲಿ ತೀವ್ರವಾದ ಪೈಪೋಟಿಯಷ್ಟೇ ನಿಜ. ನೈತಿಕತೆ ಪೂರಾ ನಾಪತ್ತೆ! ಜಾಗತೀಕರಣದ ಈ ಸಂದರ್ಭದಲ್ಲಿ Survival of the fittest ಎಂಬುದು Survival of the fastest ಎಂದಾಗಿದೆ. ಈ Fast ಆಗಿರುವ ಜಗತ್ತು ಆಗಸದ ಮೂಲಕ ನಮ್ಮ ಮನೆಗಳಲ್ಲಿ ದಾಳಿ ಮಾಡುತ್ತಾ ನಡುಮನೆಯಲ್ಲೇ ಕೂತುಬಿಟ್ಟಿದೆ. ಈ ವಿವಿಧ ವಿದೇಶೀ ಚಾನೆಲ್‌ಗಳಿಂದ ನಾವು ಮತ್ತು ನಮ್ಮ ಮಕ್ಕಳು ರಕ್ಷಣೆ ಪಡೆಯಲು ಸಾಧ್ಯವೇ?

ಈ ಜಾಗತೀಕರಣದ ದಾಳಿಯಿಂದ ಬಚ್ಚಿಟ್ಟುಕೊಳ್ಳಲು ಏನಾದರೂ ನೆಲೆ ಸಿಗಬಹುದಾದರೆ ಅದು ನಮ್ಮ ನಮ್ಮ ಪ್ರಾದೇಶಿಕ ಸಾಂಸ್ಕೃತಿಕ ನೆರಳಲ್ಲಿ ಮಾತ್ರ. ಇಲ್ಲಿ ಮಾತ್ರವೇ ನಮ್ಮ ವ್ಯಕ್ತಿ ವಿಶಿಷ್ಟತೆಗಳು ಅರಳುತ್ತವೆ. ಬೆಚ್ಚಗಿನ ಅನುಭವ, ಮಾನಸಿಕ ಭದ್ರತೆ, ಶಾಂತಿ-ನೆಮ್ಮದಿಗಳು ಸಿಗಬಹುದಾದ ತಾಣವಾಗಿದೆ. ನಿಮ್ಮ ಜನಪದ ಸಾಂಸ್ಕೃತಿಕ ನೆಲೆಗಳನ್ನು ನಾವು ಎಲ್ಲೋ ಹುಡುಕಬೇಕಾಗಿಲ್ಲ ಅದು ಇಲ್ಲೇ ನಮ್ಮಲ್ಲೇ ನಮ್ಮ ಮನೆಯ ಅಂಗಳದಲ್ಲಿ, ಆಸುಪಾಸಿನಲ್ಲಿ, ನಮ್ಮ ಓಣಿಯ ತುದಿಗಳಲ್ಲಿ ಮುಂದಿರುವ ಕೂಟಗಳಲ್ಲಿದೆ. ನಮಗೀಗ ಬೇಕಾಗಿರುವುದು ಮುಖ್ಯವಾಗಿ ಈ ಕೂಟ ಸ್ಥಾನಗಳಲ್ಲಿ ನಿಲ್ಲುವ, ಕೂಡುವ, ತಿನ್ನುವ... ಅನುಭವಿಸುವ 'ತಾಳ್ಮೆ'.

ನಮ್ಮ ಯುವ ಪೀಳಿಗೆ ನಮ್ಮ ಸಾಂಸ್ಕೃತಿಕ ಸಂಪತ್ತು. ಅವರ ಕಥೆಯಾದರೂ ಏನು? ೨೯ ವರ್ಷಕ್ಕೆ ೩೦ ಸಾವಿರ ಪಗಾರ ತೆಗೆದುಕೊಳ್ಳುವ ಈ ಪೀಳಿಗೆಗೆ ದುಡ್ಡಿನ ಬೆಲೆಯೇ ಗೊತ್ತಿಲ್ಲ. ವಸ್ತುಗಳ ಪ್ರಪಂಚದಲ್ಲಿ ಕಳೆದು ಹೋಗುತ್ತಿದ್ದಾರೆ. ದೈಹಿಕ, ಮಾನಸಿಕ ಆರೋಗ್ಯಗಳ ಕಾಳಜಿಯೇ ಇಲ್ಲದೆ Fast food, Fast life ಗಳ ಕಡೆ Fast ಆಗಿ ಓಡುತ್ತಿದ್ದಾರೆ. ಪೈಪೋಟಿಯ ಈ ಜಗತ್ತಲ್ಲಿ ತಮ್ಮನ್ನು ತಾವೇ ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ.

ಈ ಗದ್ದಲದಲ್ಲಿ ಹಿರಿಯರನ್ನು ಗೌರವಿಸುವ ಕ್ರಮ ಇಲ್ಲ, ಅವರ ಅನುಭವಕ್ಕೆ ಬೆಲೆ ಇಲ್ಲ, ಅವರೊಂದಿಗೆ ಮಾತನಾಡಲು ಯುವ ಪೀಳಿಗೆಗೆ ಪುರುಸೊತ್ತಿಲ್ಲ. ಇವರದು Self centered ಬದುಕು. ಇದು ಬಹುಪಾಲು ಅಪ್ಪ-ಅಮ್ಮಂದಿರು ಹದಿಹರಯದವರ ಬಗೆಗಿನ ದೂರುಗಳಾಗಿವೆ. ಇದು ನಿಜವೇ?

ದಿನದಿಂದ ದಿನಕ್ಕೆ Generation gap ದೊಡ್ಡದಾಗುತ್ತಿದೆ. ಅತಿಯಾದ ಸ್ಪರ್ಧೆಗಳು ಯುವ ಜನಾಂಗದ ಎಲ್ಲ ಸಮಯವನ್ನು ನುಂಗಿ ಹಾಕುತ್ತಿವೆ. ಈ ಸ್ಪರ್ಧೆಗಳು ಪರಿಣಾಮ ಅತೀ ಸ್ವಾರ್ಥ ಬದುಕಾಗಿಸಿದೆ. ಮಾತೆತ್ತಿದರೆ ಸಮಯ ಇಲ್ಲ ಎನ್ನುವ ಈ ಮಕ್ಕಳಿಗೆ ತಾಳ್ಮೆಯೂ ಇಲ್ಲ, ಸಾಮಾಜಿಕ ಸಂಬಂಧಗಳು ಶಿಥಿಲಗೊಳ್ಳುತ್ತಿವೆ ಹಬ್ಬ ಹುಣ್ಣಿಮೆಗಳು ಹೊರೆಯಾಗಿವೆ. ಸಾಂಸ್ಕೃತಿಕ ಅನನ್ಯತೆಯೇ ಇಲ್ಲದ uniform ಬದುಕು ಇದರದಾಗುತ್ತಿದೆ. 'ಸಮಯ ಇಲ್ಲ'-ಎಂಬ ಇವರುಗಳ ಈ ಸೂತ್ರ ನಿಜವಿರಬಹುದು. ಆದರೆ ಯಾರಿಗೆ ಸಮಯವಿದೆ? ಎಲ್ಲರಿಗೂ ಇರುವುದು ೨೪ ತಾಸಲ್ಲವೇ? ಹಾಗಾದಲ್ಲಿ ಈ ಹುಡುಗರಿಗೆ Time management ಬರುತ್ತಿಲ್ಲವೇ?

ನಮ್ಮ ಜೀವನ ಕ್ರಮ Family oriented. ಈಗ ಹೆಚ್ಚುತ್ತಿರುವ Nuclear family ಇಂದಿನ ದಿನಗಳಲ್ಲಿ ೪೦ರ ಅಸುಪಾಸಿನಲ್ಲಿರುವ ಅಪ್ಪ-ಅಮ್ಮಂದಿರು ನಾವೇನು ಮಾಡಬಹುದು?

ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯ ಸಂಸ್ಕೃತಿಯಿಂದ ಎಚ್ಚರವಹಿಸಿ ತುಂಬಿಕೊಳ್ಳಬೇಕಾಗಿದೆ. ಹೊಸದೆಲ್ಲವೂ ಕೆಟ್ಟದ್ದೂ ಅಲ್ಲ, ಒಳ್ಳೆಯದ್ದೂ ಅಲ್ಲ.

ನಮ್ಮ ಯುವ ಜನಾಂಗವನ್ನು ಈ ಹೊಸ ನಾಗರೀಕತೆ ಸುಟ್ಟು ಹಾಕುವ ಮೊದಲು ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ಈಗ ನಮಗೆ ಅತ್ಯಂತ ಸಹನೆ ಬೇಕು. 'ತಾಳಿದವನು ಬಾಳಿಯಾನು'- ಎನ್ನಬೇಕು. ಈ ನಾಗರೀಕತೆಯಲ್ಲಿರುವ ಎಲ್ಲವೂ ಸುಟ್ಟುಹಾಕುವಂತಹುದೇ? ಹಾಗೇನಿಲ್ಲ.

'let noble thoughts come from all sides'-ಎಂದು ಗಾಂಧೀಜಿಯವರು ಹೇಳಿದ್ದು ಸರಿಯಾಗೇ ಇದೆ. ಪೂರ್ಣ ಬದುಕಿಗೆ ಅವಶ್ಯವಿರುವ ಕೊರತೆಗಳನ್ನು ಅನ್ಯ ಸಂಸ್ಕೃತಿಯಿಂದ ಎಚ್ಚರವಹಿಸಿ ತುಂಬಿಕೊಳ್ಳಬೇಕಾಗಿದೆ. ದೋಷಗಳನ್ನು ದೂರಸರಿಸಿ ಗುಣಾಂಶಗಳನ್ನು ಗುರುತಿಸಿ, ಅವುಗಳನ್ನು ಬದುಕಿನ ರೀತಿ ನೀತಿಗಳಲ್ಲಿ ವೇಷ-ಭೂಷಗಳಲ್ಲಿ ಸ್ವೀಕರಿಸೋಣ. ಹೊಸದೆಲ್ಲವೂ ಕೆಟ್ಟದ್ದೂ ಅಲ್ಲ, ಒಳ್ಳೆಯದ್ದೂ ಅಲ್ಲ. ಯುವಕ ಯುವತಿಯರಿಗೆ ಹೊಸದೆಲ್ಲವೂ ಚೆನ್ನವೇ. ಈ ಸಂದರ್ಭದಲ್ಲಿ ಹಿರಿಯರ ತಾಳ್ಮೆ ಅನಿವಾರ್ಯ.

ಯುವಕರು ತಮ್ಮ ವಯಸ್ಸಿನ ಜೊತೆ, ಜೊತೆಯವರ ವ್ಯಕ್ತಿತ್ವದ ಜೊತೆ, ಬದುಕಿನ ಗುರಿಯ ಜೊತೆ ಹೊರಗೆ-ಒಳಗೆ ಎಲ್ಲ ಕಡೆಯೂ ಹೋರಾಡುತ್ತಿದ್ದಾರೆ. ಸಮಯದೊಂದಿಗಿನ ಹೋರಾಟದಲ್ಲಿ ಅನೇಕ ಸಂಬಂಧಗಳನ್ನು ಕಳಚಿಕೊಳ್ಳುತ್ತಿದ್ದಾರೆ. ಅಣ್ಣ-ತಂಗಿ, ಮಗ-ಅಪ್ಪ ಅಕ್ಕ-ತಮ್ಮ - ಇದ್ಯಾವೂ ಅವರುಗಳಿಗೆ ಕಾಣಿಸುತ್ತಿಲ್ಲ TV and computer ಗಳು ಎಲ್ಲವಕ್ಕೂ Substitute ಅಲ್ಲ. ಆದರೆ ಈ ಯುವಕರು ಈ ಯಂತ್ರಗಳನ್ನು ಎಲ್ಲವಕ್ಕೂ Substitute ಮಾಡಿಕೊಳ್ಳತ್ತಾ 'ಬೋರಡಂ' -ಏಕಾಂಗಿತನಗಳನ್ನು ಅವರಿಗೇ ಅರಿವಿಲ್ಲದೆ ಆಹ್ವಾನಿಸುತ್ತಿದ್ದಾರೆ. ಈ ಯುವಕರು ತಮ್ಮ ಹಿರಿಯರಿಗಿಂತ ೧೦೦ಕ್ಕೆ ೧೦೦ ಭಾಗ ಬುದ್ಧಿವಂತರು ನಿಜ. ಆದರೆ ಈ ಬುದ್ಧಿವಂತಿಕೆಯೇ ಅವರ ಸುಖ-ಸಂತೋಷಗಳನ್ನು ಹಾಳುಮಾಡುತ್ತಿವೆ. ಭೌತಿಕ ಸಂಪತ್ತಿನ ಶೇಖರಣೆಯಲ್ಲೇ ಇವರುಗಳು ಪ್ರಗತಿ ಕಂಡುಕೊಂಡರೆ, ಸಂತೋಷ ಕೊಂಡುಕೊಂಡರೆ ಮನುಷ್ಯನ ಭಾವ ಕೋಶದ ಹಸಿವುಗಳನ್ನು ಈ ವಸ್ತುಗಳ ಪ್ರಪಂಚ ಕಡೆಗಣಿಸಿ

ಬಿಡುತ್ತದೆ. ಆಗ ಈ ಯುವಕರು ಮನುಷ್ಯತ್ವ ಇಲ್ಲದ, ಸಮಾಜದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ ಸ್ವವಿಮರ್ಶೆಯನ್ನು ಕಳೆದುಕೊಂಡ ಮೃಗಗಳಾಗಿಬಿಡುತ್ತಾರೆ.

೪೦++...ಆಗಿರುವ ಅಪ್ಪ-ಅಮ್ಮಂದಿರು ಏನು ಮಾಡಬಹುದು?

ಈ ಯುವಕರಿಗೆ ಹಿರಿಯರಿಗೆ ಗೌರವ ಕೊಡಿ ಎಂದು ಹೇಳುವುದರಲ್ಲಿ ಅರ್ಥವೇ ಇಲ್ಲ. ಅಪ್ಪ-ಅಮ್ಮಂದಿರಾದ ನಾವು ನಮ್ಮ ನಿತ್ಯದ ಸಂಗತಿಗಳಲ್ಲಿ ಉಡುವ, ಉಣ್ಣುವ ಕ್ಷಣಗಳಲ್ಲಿ ಹಿರಿಯರೊಂದಿಗಿನ ಮಾತು ಕಥೆಗಳು ಯುವಕರಿಗೆ ಮಾದರಿಯಾಗಬೇಕು. ಬಾಯಲ್ಲಿ ಗೌರವವನ್ನು ಕೇಳಿ ಪಡೆಯುವುದಕ್ಕಿಂತ ನಮ್ಮ ರೀತಿ-ನೀತಿಗಳು ಉತ್ತರವಾಗಬೇಕು. ನಿತ್ಯದ ಸಣ್ಣ-ಸಣ್ಣ ಸಂಗತಿಗಳು ಯುವ ಮನಸ್ಸಿನಲ್ಲಿ ಸಂಗ್ರಹವಾಗಿರುತ್ತವೆ. ಅವು ನಾವು ನಮ್ಮ ಮಕ್ಕಳ ಮನಸ್ಸಿನಲ್ಲಿ ಕೂಡಿಟ್ಟ ನಿಧಿಯಾಗಿರುತ್ತದೆ. ಇಂದು ನಾವು ನಮ್ಮ ಮನೆಯಲ್ಲಿ ನಮ್ಮ ಹಿರಿಯರಿಗೆ ಗೌರವ ಬೆಲೆ ನೀಡಿ ಸಹಬಾಳ್ವೆ ನಡೆಸಿದಾಗ, ಅದನ್ನು ನೋಡುತ್ತಾ ಬೆಳೆದ ಮಕ್ಕಳು ಇವೆಲ್ಲವನ್ನೂ Repeat ಮಾಡುತ್ತಾರೆ.

'ನಮ್ಮ ಮಕ್ಕಳು ವೃದ್ಧಾಪ್ಯದಲ್ಲಿ ನಮಗೆ ನೋಡಬೇಕು, ಮಾಡಬೇಕು ಎಂಬ ಸ್ವಾರ್ಥವನ್ನು ಹಿರಿಯರು ದಾಟಿದರೆ ಅವರಷ್ಟು ಸುಖಿ ಯಾರೂ ಇಲ್ಲ. ವಿದ್ಯೆಯೆಂಬ ರೆಕ್ಕೆಗಳನ್ನು ನಮ್ಮ ಮಕ್ಕಳಿಗೆ ಕಟ್ಟಿದ್ದೇವೆ. ಹಾರುವ ಹಕ್ಕಿಗೆ ಎಲ್ಲೆ ಇಲ್ಲ. ಅವರು ಎಲ್ಲೇ ಬದುಕಲಿ ಯಾರೋ ಒಬ್ಬರಿಗೆ ಅನಿವಾರ್ಯವಾದಾಗ ತಮ್ಮ ಕೈಲಾದಷ್ಟು ಸಹಾಯವನ್ನು ನಿಸ್ವಾರ್ಥದಿಂದ ಮಾಡಿದರೆ ಹೆತ್ತ ತಂದೆ ತಾಯಿಗಳ ಬದುಕು ಸಾರ್ಥಕ ಅಲ್ಲವೇ.

ನಾವು ನಮ್ಮ ಮಕ್ಕಳೊಂದಿಗೆ ನಮ್ಮ ಅಕ್ಕ ಪಕ್ಕದ ಕೆಲವು ಮಕ್ಕಳನ್ನಾದರೂ ಸಾಕಿದರೆ - ಪ್ರೀತಿಸಲು ಕಲಿತರೆ ಖಂಡಿತ ಬೇರೆಯವರ ಮಕ್ಕಳು ನಮ್ಮ ಮಕ್ಕಳಾಗುತ್ತಾರೆ. ನಮ್ಮ ಮಕ್ಕಳು ಬೇರೆಯವರಿಗೆ ಮಕ್ಕಳಾಗುತ್ತಾರೆ. ನಾವೀಗ ಈ ರೀತಿಯ ಸಂಬಂಧಗಳನ್ನು ಹೆಣಿಗೆ ಹಾಕಿಕೊಳ್ಳಬೇಕಾದ ಅನಿವಾರ್ಯ ಹಿಂದಿಗಿಂತ ಈಗಿದೆ. ಅನಿವಾರ್ಯವಿದ್ದವರಿಗೆ ನೀಡಿದಾಗ ಸಿಗುವ ಖುಷಿ, ನಿಸ್ವಾರ್ಥದಿಂದ ಸೇವೆ ಮಾಡಿದಾಗಿನ ಸಂತೃಪ್ತಿ ಆನಂದದ ಅನುಭವವನ್ನು ನಮ್ಮ ಬದುಕಿನ ರೀತಿ ನೀತಿಗಳಿಂದ ಮಕ್ಕಳಿಗೆ ಕಲಿಸಬೇಕಾಗಿದೆ. ಇದು ನಮ್ಮ ಮತ್ತು ಮುಂದೆ ಅವರ ಸುಖ ಸಮಾಧಾನಗಳಿಗೂ ಕಾರಣವಾಗುತ್ತದೆ.

೧೦ ವರುಷದ ಒಳಗೆ ನಾವು ಕಲಿಸುವ ಯಾವುದೇ ನೈತಿಕ ಪಾಠಗಳು ಮಕ್ಕಳ ಮನಸ್ಸಿನಲ್ಲಿ ಉಳಿಯುತ್ತವೆ. ಮನೆಯಲ್ಲಿ ಮಕ್ಕಳ ಹುಟ್ಟಿದ ದಿನವನ್ನು ಅದ್ದೂರಿಯಾಗಿ ಆಚರಿಸುವ ನಾವು ಒಮ್ಮೆ ಅನಾಥ ಮಕ್ಕಳ ಜೊತೆ ಆಚರಿಸಿದ್ದಿದ್ದರೆ... ಖಂಡಿತ ನಮ್ಮ ಮಕ್ಕಳು ಇಂದು ಅಪ್ಪ-ಅಮ್ಮಗಳ ಬೆಲೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಿದ್ದರು. ತಪ್ಪು ಮಕ್ಕಳದಷ್ಟೇ ಅಲ್ಲ ಅಪ್ಪ-ಅಮ್ಮಂದಿರದ್ದೂ ಹೌದು. ನಮ್ಮ ಮಕ್ಕಳು ಕುರುಡರ ಆಶ್ರಮಕ್ಕೆ ಹೋಗಿ ಅಲ್ಲಿನ ಮಕ್ಕಳನ್ನು ನೋಡಿ ಬೆಳೆದಿದ್ದರೆ, ಅವರಿಗೆ ದೇವರು ಕೊಟ್ಟ ದೈಹಿಕ ಸಂಪತ್ತಿನ ಅರಿವು ಆಗದೇ ಇರುತ್ತದೆಯೇ? ಕಣ್ಣು ಕೈ-ಕಾಲುಗಳು ಮೆದುಳಿನಷ್ಟೇ ಮುಖ್ಯ ಅಲ್ಲವೇ!

ಈಗಲೂ ಸಮಯ ಮಿಂಚಿಲ್ಲ, ನಮ್ಮ ಮಕ್ಕಳೊಂದಿಗೆ ಕನಿಷ್ಠ ಬಾಲ್ಯದ ೧೦ ವರ್ಷಗಳನ್ನಾದರೂ ಕಳೆಯೋಣ. ಈಗವರು ಅದನ್ನು ದಾಟಿದ್ದರೆ, ಆ ಮಕ್ಕಳ ಹದಿ ಹರೆಯವನ್ನು ಅರ್ಥಮಾಡಿಕೊಳ್ಳೋಣ. ಅವರೊಂದಿಗೆ ಗದ್ದಲ ಮಾಡಿಕೊಂಡು ಅವರನ್ನು ಅನಾಥರಾಗಿಸುವುದು ಬೇಡ ಇದರಿಂದ ನಾವೂ ಅನಾಥರಾಗುವುದು ಬೇಡ. ಅವರುಗಳ ಗದ್ದಲಗಳು-ಜಗಳಗಳು ಅವರುಗಳ ಮಾನಸಿಕ ಒತ್ತಡದ ಪರಿಣಾಮವಾಗಿರುತ್ತವೆ. ಈ ೪೦ರ ವಯಸ್ಸೂ ತಾಳ್ಮೆ ಕಳೆದು ಹೋಗುವ ಮುದಿ ವಯಸ್ಸು ನಿಜ. ಆದರೆ ಹರೆಯದವರು ಒಳಗಿನ ಒತ್ತಡಗಳನ್ನು ಹೇಳಲು ಸಾಧ್ಯವಾಗದ ಭಾವಗಳನ್ನು ಸಿಟ್ಟುಗಳನ್ನು -ಅದರ ಹಿಂದಿನ ಬೇರುಗಳನ್ನು ಅಮ್ಮ-ಅಪ್ಪಂದಿರಲ್ಲದೆ ಇನ್ಯಾರು ಅರ್ಥಮಾಡಿಕೊಳ್ಳಲು ಸಾಧ್ಯ. ಈ ಅಪ್ಪ ಅಮ್ಮಂದಿರೂ ಒಂದು ಕಾಲದಲ್ಲಿ ಹರೆಯವನ್ನು ಮುಟ್ಟಿ ತಟ್ಟಿ ಬಂದವರೇ ಅಲ್ಲವೇ.

ಹಬ್ಬ ಹುಣ್ಣಿಮೆಗಳು ನಮ್ಮ ಸಂಸ್ಕೃತಿಯಲ್ಲಿ ನಿಸರ್ಗದೊಂದಿಗಿನ ನಿರಂತರ ಸಂಬಂಧಕ್ಕೆ ಸಾಕ್ಷಿಗಳಾಗಿವೆ. ಮಾವಿನ ತೋರಣ, ಹಸಿರು ಚಪ್ಪರಗಳಿಂದ ಪ್ರಾರಂಭವಾಗುವ ಶುಭ ಕಾರ್ಯಗಳು ಭೂಮಿ ಪೂಜೆಯೊಂದಿಗೆ ಪ್ರಾರಂಭವಾಗುವ ಕೃಷಿ ಕಾರ್ಯಗಳು ಜನಪದ ಬದುಕಿನ ಅವಿಭಾಜ್ಯ ಅಂಗ. ಬಂಧು ಬಾಂಧವರೊಂದಿಗೆ ಸ್ನೇಹಿತರೊಂದಿಗೆ ಕೂಡಿ ಆಚರಿಸುವ ಈ ಹಬ್ಬಗಳು ತಮ್ಮದೇ ಆದ ಪ್ರಭಾವವನ್ನು ಯುವ ಮನಸ್ಸುಗಳ ಮೇಲೆ ಬೀಳಿಸುತ್ತವೆ. ಹಟ್ಟಿ ಹಬ್ಬ(ದೀಪಾವಳಿ), ಯುಗಾದಿ-ಪಾಡ್ಯ, ಮಾರನವಮಿ, ಬಲಿ ಪೂಜೆ, ಸಂಕ್ರಮಣ ಭೂಮಿ ಹುಣ್ಣಿಮೆ ಇಲ್ಲೆಲ್ಲಾ ಸಂಪ್ರದಾಯಗಳ-ಅರ್ಥಪೂರ್ಣ ಆಚರಣೆ ನಿಸರ್ಗ ಮತ್ತು ಮನುಷ್ಯನ ಸಂಬಂಧಗಳನ್ನು ಗಟ್ಟಿ ಮಾಡಿಸುತ್ತಾ ಹೋಗುತ್ತವೆ. ಇಂತಹ ಹಬ್ಬಗಳು ಈಗಿನ ಯುವಕರಿಗೆ ಬೇಡವಾಗಿವೆ.

ಇಲ್ಲಿ ಕೂಡಿ ದುಡಿದು, ಕೂಡಿ ಆಚರಿಸಲು ಸಮಯವಿಲ್ಲದ ಆಧುನಿಕ ಜೀವನ ಶೈಲಿಯಲ್ಲಿ ಹಬ್ಬಗಳು ಕಳೆದು ಹೋಗುತ್ತಿವೆ. ಇಂತಹ ಸಂದರ್ಭಗಳಲ್ಲಿ ಅಪ್ಪ-ಅಮ್ಮಂದಿರಿಬ್ಬರೂ ಮನಸ್ಸು ಮಾಡಿದರೆ ಹಬ್ಬ-ಹರಿದಿನ ಗಳು ಹೊರೆಯಾಗದೆ ಸಹನೀಯವಾಗುತ್ತವೆ. ಆಗ ಮಕ್ಕಳು ಅಥವಾ ಬೆಳೆದ ಹರೆಯದ ಹುಡುಗ/ಹುಡುಗಿಯರು ಅನಿವಾರ್ಯವಾಗಿ ಅಮ್ಮ-ಅಪ್ಪಂದಿರಿಗೆ ಜೊತೆಯಾಗುತ್ತಾರೆ. ಗೃಹಕೃತ್ಯ ಹಂಚಿಕೊಳ್ಳುವಲ್ಲಿ ಅಡ್ಡ ಬರುವ 'ಅಹಂ'ನ್ನು ಗೆಲ್ಲದ ಕುಟುಂಬಗಳಲ್ಲಿ ಹಬ್ಬಗಳು ಸಂತೋಷ-ಸಂಭ್ರಮಗಳ ಸಾಂಸ್ಕೃತಿಕ ನೆಲೆಗಳಾಗುವುದಿಲ್ಲ.

ಇವತ್ತಿನ ಸಂದರ್ಭಗಳಲ್ಲಿ Nuclear familyಗಳು ಅನಿವಾರ್ಯ ಬೆಳವಣಿಗೆಗಳಾಗಿವೆ. ಇಲ್ಲಿ ಹಬ್ಬ-ಹುಣ್ಣಿಮೆಗಳನ್ನು ಆಚರಿಸುವ ನಾವು ನಮ್ಮ ಮಕ್ಕಳೊಂದಿಗೆ ಒಂದು ಅನಾಥ ಮಗುವನ್ನು ಕರೆತಂದು ಜೊತೆಯಾಗಿಸಿಕೊಳ್ಳೋಣ ಆಗ ಅದರ ಪರಿಣಾಮವಾಗಿ ಅನಾಥ ಮಗುವಿಗೆ ಸಿಗುವ ನೆಮ್ಮದಿ-ಸಮಾಧಾನಗಳಲ್ಲಿ ನಾವು ಮಕ್ಕಳಿಗೆ Social committment ನ ಅರ್ಥ ಅನುಭವಕ್ಕೆ ಬರುತ್ತದೆ. ಸ್ವಾರ್ಥ ನಿಧಾನವಾಗಿ ಕರಗಿ ಹೋಗಬಹುದಲ್ಲವೇ?

ನಮ್ಮ ಮಕ್ಕಳೇ ನಮ್ಮ ಕಷ್ಟದಲ್ಲಿ, ವೃದ್ಧಾಪ್ಯದಲ್ಲಿ ಸಾಕಬೇಕು ಎಂಬ ನಿರೀಕ್ಷೆಯನ್ನು ಮರೆತುಬಿಡೋಣ. ನಮ್ಮ ಅಕ್ಕ-ಪಕ್ಕದ ಮಕ್ಕಳನ್ನೂ ನಮ್ಮ ಮಕ್ಕಳಾಗಿಸಿಕೊಳ್ಳೋಣ. ನಾವು ಏನೊಂದೂ ನಿರೀಕ್ಷೆಯಿಲ್ಲದೆ ನಿಸ್ವಾರ್ಥದಿಂದ ಬೆಳೆಸಿದ, ಸಾಕಿದ, ಬೇರ್‍ಯಾರದೋ ಮಕ್ಕಳು ನಮ್ಮ ಮಕ್ಕಳಾಗುತ್ತಾರೆ. ಇಂಥ ಮನುಷ್ಯ ಪ್ರೀತಿಯ ಸರಪಳಿಯನ್ನು ನಮ್ಮ ಮನೆಯಿಂದಲೇ ಕಟ್ಟುವ ಅನಿವಾರ್ಯತೆ ಇದೆ. ನಮ್ಮ ಮನೆಯಿಂದ ಬೆಳೆದ ಈ ಬಳ್ಳಿ ಅಂಗಳಕ್ಕೆ, ಅಕ್ಕಪಕ್ಕಕ್ಕೆ ನಮ್ಮ ಓಣಿಯ ತುದಿಗೆ, ಮುಂದಿರುವ ಕೂಟದಲ್ಲಿ ಹಬ್ಬಬೇಕಾಗಿದೆ. ಇದು ನಮ್ಮ ಸಂಸ್ಕೃತಿಯಾಗಿದೆ. ನೀವೇನಂತೀರಿ? □

ಸಂವಾದ





ಚಂದಾದಾರರಲ್ಲಿ ಮನವಿ

'ಸಂವಾದ' ಇನ್ನು ಮುಂದೆ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು



ಮುನ್ನೋಟ

ಹೊಸ ಸಾಮ್ರಾಜ್ಯಶಾಹಿ ನಮ್ಮ ಕಣ್ಣ ಮುಂದಿದೆ, ನಮಗೆ ಗೊತ್ತಿರುವ ಹಳೆ ಮಾದರಿಯನ್ನೇ ಹೊಸ ವೇಷ ಭೂಷಣಗಳೊಂದಿಗೆ ನಮ್ಮೆದುರು ಬಿಟ್ಟಿದ್ದಾರೆ. ಚರಿತ್ರೆಯಲ್ಲೇ ಮೊದಲ ಬಾರಿಗೆ ಅಗಾಧ ಶಸ್ತ್ರಸಜ್ಜಿತ ಏಕಚಕ್ರಾಧಿಪತ್ಯವೊಂದು ಸಮಸ್ತ ಜಗತ್ತನ್ನು ದಿನ ಒಪ್ಪತ್ತಿನಲ್ಲಿ ಸುಟ್ಟು ಅಳಿಸಿಹಾಕುವಂತೆ ಜಗಜಗಿಸುತ್ತಿದೆ; ಏಕದೃವೀ ಆರ್ಥಿಕ ಮತ್ತು ಮಿಲಿಟರಿ ಒತ್ತುವರಿಗಾಗಿ ತಹತಹಿಸುತ್ತಿದೆ. ವಿವಿಧ ಮಾರುಕಟ್ಟೆಗಳ ದಿಡ್ಡಿ ಬಾಗಿಲುಗಳನ್ನ ಮುರಿಯಲು ಅದು ವಿಧ ವಿಧ ಅಸ್ತ್ರಗಳನ್ನು ಬಳಸುತ್ತಿದೆ.

○ ಅರುಂಧತಿ ರಾಯ್
ಅನು : ಎಲ್ಡಿ. ನಾಗರಾಜ್

ಮೂರನೇ ಜಗತ್ತಿನ ಹಲ್ಲು ಹಿಡಿದು ನೋಡುತ್ತಿರುವ ಹೊಸ ಬಗೆಯ ಜನಾಂಗದ್ವೇಷ

ಕಳೆದ ಜನವರಿ ತಿಂಗಳಲ್ಲಿ (೨೦೦೩) ಜಗತ್ತಿನ ವಿವಿಧ ಭಾಗಗಳಿಂದ ಬಂದು ಬ್ರೆಜಿಲ್‌ನ ಪೋರ್ಟೋ ಅಲೆಗರ್‌ನಲ್ಲಿ ಸೇರಿದ್ದ ನಾವು ಸಾವಿರಾರು ಮಂದಿ ಮತ್ತೊಂದು ಬಗೆಯ ಜಗತ್ತು ಸಾಧ್ಯ ಘೋಷಣೆಯನ್ನು ಪುನರುಚ್ಚರಿಸಿದೆವು. ಇಲ್ಲಿಂದ ಉತ್ತರಕ್ಕೆ ಕೆಲವು ಸಾವಿರ ಮೈಲು ದೂರದಲ್ಲಿರುವ ವಾಷಿಂಗ್ಟನ್‌ನಲ್ಲಿ ಜಾರ್ಜ್ ಬುಷ್ ಮತ್ತು ಆತನ ಸಹಚರರು ಕೂಡ ಇದನ್ನೇ ಯೋಚಿಸುತ್ತಿದ್ದಾರೆ.

ನಮ್ಮ ಮುಂದಿರುವುದು ವಿಶ್ವ ಸಾಮಾಜಿಕ ವೇದಿಕೆ, ಅವರದು ಅಮೆರಿಕದ ಹೊಸ ಶತಮಾನ ಎಂದು ಕರೆಯಲಾಗಿರುವ ಯೋಜನೆ.

ಕೆಲವು ವರ್ಷಗಳ ಹಿಂದೆ ಯೂರೋಪ್ ಮತ್ತು ಅಮೆರಿಕದ ಮಹಾನಗರಗಳಲ್ಲಿ ಈ ವಿಷಯಗಳು ಕೇವಲ ಪಿಸುಮಾತುಗಳು, ಆದರೆ ಈಗ ಜನ ಸಾಮ್ರಾಜ್ಯಶಾಹಿಯ ಒಳಿತಿನ ಮುಖಗಳ ಕುರಿತು, ಅಯೋಮಯವಾಗುತ್ತಿರುವ ಲೋಕವನ್ನ ನಿಗ್ರಹಿಸುವ ಬಲಿಷ್ಠ ಸಾಮ್ರಾಜ್ಯವೊಂದರ ಬಗ್ಗೆ ಬಹಿರಂಗವಾಗಿ ಮಾತನಾಡತೊಡಗಿದ್ದಾರೆ. ಈ ಹೊಸ ಮಿಷನರಿಗಳಿಗೆ ಬೇಕಿರುವುದು ಕಾನೂನು ಸುವ್ಯವಸ್ಥೆ, ಇದಕ್ಕಾಗಿ ನ್ಯಾಯ, ಮಾನವೀಯ ಘನತೆ ಗೌರವಗಳು ಮುಕ್ಕಾದರೂ ಪರವಾ ಇಲ್ಲ; ಇವರಿಗೆ ಶಿಸ್ತು ತುಂಬಾ ಮುಖ್ಯ; ಯಾವುದೇ ಬೆಲೆ ತೆತ್ತಾದರೂ ಸರಿ ಅಮೆರಿಕದ ಜೀವನಗತಿ ಏರುಮುಖವಾಗಿರಬೇಕು. ಕಾರ್ಪೋರೇಟ್ ಮಾಧ್ಯಮಗಳು ಒದಗಿಸುವ ತಟಸ್ಥ ವೇದಿಕೆಗಳಲ್ಲಿ ಆಗಾಗ ಈ ಕುರಿತು ಮಾತನಾಡುವಂತೆ ನಮ್ಮಂತಹವರನ್ನು ಕರೆಯುತ್ತಿರುತ್ತಾರೆ. ಸಾಮ್ರಾಜ್ಯಶಾಹಿಯ ಒಳಿತು ಕೆಡುಕುಗಳ ಕುರಿತು ಮಾತನಾಡುವುದೆಂದರೆ ಅತ್ಯಾಚಾರದ ಒಳಿತು ಕೆಡುಕುಗಳ ಕುರಿತು ಮಾತನಾಡಿದಂತೆ. ಏನು ಹೇಳಬಹುದು? ನಾವು ಅದನ್ನ ಕಳಕೊಂಡಿದೀವಿ ಅಂತಾನಾ?

ಹೊಸ ಸಾಮ್ರಾಜ್ಯಶಾಹಿ ನಮ್ಮ ಕಣ್ಣ ಮುಂದಿದೆ, ನಮಗೆ ಗೊತ್ತಿರುವ ಹಳೆ ಮಾದರಿಯನ್ನೇ ಹೊಸ ವೇಷ ಭೂಷಣಗಳೊಂದಿಗೆ ನಮ್ಮೆದುರು ಬಿಟ್ಟಿದ್ದಾರೆ. ಚರಿತ್ರೆಯಲ್ಲೇ ಮೊದಲ ಬಾರಿಗೆ ಅಗಾಧ ಶಸ್ತ್ರಸಜ್ಜಿತ ಏಕಚಕ್ರಾಧಿಪತ್ಯವೊಂದು ಸಮಸ್ತ ಜಗತ್ತನ್ನು ದಿನ ಒಪ್ಪತ್ತಿನಲ್ಲಿ ಸುಟ್ಟು ಅಳಿಸಿಹಾಕುವಂತೆ ಜಗಜಗಿಸುತ್ತಿದೆ; ಏಕದೃವೀ ಆರ್ಥಿಕ ಮತ್ತು ಮಿಲಿಟರಿ ಒತ್ತುವರಿಗಾಗಿ ತಹತಹಿಸುತ್ತಿದೆ. ವಿವಿಧ ಮಾರುಕಟ್ಟೆಗಳ ದಿಡ್ಡಿ ಬಾಗಿಲುಗಳನ್ನ ಮುರಿಯಲು ಅದು ವಿಧ ವಿಧ ಅಸ್ತ್ರಗಳನ್ನು ಬಳಸುತ್ತಿದೆ. ಅಮೆರಿಕದ ಕ್ಷಿಪಣಿಗಳು ಮತ್ತು ಅಂತರರಾಷ್ಟ್ರೀಯ ಹಣಕಾಸುನಿಧಿ (IMF) ಯ ಚೆಕ್‌ಬುಕ್ಕಿನ ಗೋಜಲು ದಾಳಗಳಲ್ಲಿ ಸಿಕ್ಕಿಕೊಳ್ಳದೆ ಉಳಿದಂತೆ ಒಂದೇ ಒಂದು ದೇಶ ದೇವರ ಈ ಭೂಮಿ ಮೇಲಿಲ್ಲ. ನಿಯೊಲಿಬರಲ್ ಬಂಡವಾಳಶಾಹಿಯ ಪೋಸ್ಟರ್ ಬಾಯ್ ಆಗಬೇಕೆಂದರೆ ಅರ್ಜೆಂಟೈನಾದ ಮಾದರಿ ಇದೆ, ಕಪ್ಪು ಕುರಿಯಾದರೆ ಇರಾಕ್ ಇದೆ.

ಈ ಸಾಮ್ರಾಜ್ಯದ ಭೂಮಂಡಲ ರಾಜಕೀಯ ತಂತ್ರಗಾರಿಕೆಗೆ ಯಾವುದಾದರೂ ಬಡದೇಶ ಮುಖ್ಯವೆನಿಸಿದರೆ, ಅಲ್ಲಿ ಯಾವುದೇ ಪ್ರಮಾಣದ ಮಾರುಕಟ್ಟೆ, ಖಾಸಗೀಕರಣಗೊಳಿಸಬಹುದಾದ ಮೂಲ ಸೌಕರ್ಯಗಳಿದ್ದರೆ, ತೈಲ, ಚಿನ್ನ ವಜ್ರ, ಕಲ್ಲಿದ್ದಲು ,ಕೋಬಾಲ್ಟ್ ಮುಂತಾದ ದೇವರು ಮರೆತ ನೈಸರ್ಗಿಕ ಸಂಪನ್ಮೂಲಗಳಿದ್ದರೆ ಆ ಪ್ರದೇಶಗಳು ಚಕ್ರಾಧಿಪತಿ ಹೇಳಿದಂತೆ ಕೇಳಬೇಕು, ಇಲ್ಲವೇ ಅದರ ಮಿಲಿಟರಿ ಗುರಿಗೆ ಬಲಿಯಾಗಬೇಕು. ಈಗ ಅಪಾಯದಲ್ಲಿರುವ ದೇಶಗಳೆಂದರೆ ತಮ್ಮ ಪಾಲಿನ ಭೂಮಿಯಲ್ಲಿ ಅಗಾಧ ಸಂಪನ್ಮೂಲಗಳಿರುವ ಪ್ರದೇಶಗಳು. ತಮ್ಮ ಭೂ ಪ್ರದೇಶದಲ್ಲಿನ ಸಂಪನ್ಮೂಲಗಳನ್ನು ಅವರು ಸ್ವಂತ ಇಚ್ಛೆಯಿಂದ ಕಾರ್ಪೋರೇಟ್ ಚಕ್ರಾಧಿಪತ್ಯಕ್ಕೆ ಒಪ್ಪಿಸದಿದ್ದರೆ ಅಲ್ಲಿ ಇದ್ದಕ್ಕಿದ್ದಂತೆ ನಾಗರಿಕ ಕಲಹವೊಂದು ಹುಟ್ಟಿಕೊಳ್ಳುತ್ತದೆ; ಅಂತಹವರ ಮೇಲೆ ಆಗ ಮಿಲಿಟರಿ ದಾಳಿ ನಡೆಸಲಾಗುತ್ತದೆ. ಚಕ್ರಾಧಿಪತ್ಯದ ಈ ಹೊಸ ಯುಗದಲ್ಲಿ ಎಲ್ಲವೂ ತಾನು ಕಾಣುವಂತೆ ಇರದಿರುವಾಗ ಸಂಬಂಧಪಟ್ಟ ಕಂಪನಿ ಅಧಿಕಾರಿಗಳಿಗೆ ವಿದೇಶಾಂಗ ನೀತಿಯ ಮೇಲೆ ಪ್ರಭಾವ ಬೀರುವ ಅವಕಾಶವಿದೆ. ವಾಷಿಂಗ್ಟನ್ನಿನ ಸೆಂಟರ್ ಫಾರ್ ಪಬ್ಲಿಕ್ ಇಂಟೆಗ್ರಿಟಿ ಹೇಳಿರುವಂತೆ, ಅಮೆರಿಕ ಸರ್ಕಾರದ ಡಿಫೆನ್ಸ್ ಪಾಲಿಸಿ ಬೋರ್ಡ್‌ನ ಸದಸ್ಯರ ಪೈಕಿ ೩೦ ಮಂದಿ ೨೦೦೧ ಮತ್ತು ೨೦೦೨ನೇ ವರ್ಷದಲ್ಲಿ ಸುಮಾರು ೭೦ ಬಿಲಿಯನ್ ಡಾಲರ್ ಮೌಲ್ಯದ ಡಿಫೆನ್ಸ್ ಕಾಂಟ್ರ್ಯಾಕ್ಟ್‌ಗಳನ್ನು ಪಡೆದುಕೊಂಡ ಕಂಪನಿಗಳಿಗೆ ಸಂಬಂಧಪಟ್ಟವರು. ಅಮೆರಿಕ ಸರ್ಕಾರದ ಮಾಜಿ ಕಾರ್ಯದರ್ಶಿ ಜಾರ್ಜ್ ಷುಲ್ಟ್ಸ್ ಇರಾಕ್ ಲಿಬರೇಷನ್ ಕಮಿಟಿಯ ಅಧ್ಯಕ್ಷನಾಗಿದ್ದ.

ಈತ ಬೆಕ್ಟಲ್ ಗ್ರೂಪ್ ಆಫ್ ಕಂಪನಿಗಳ ನಿರ್ದೇಶಕ ಸಮಿತಿಯಲ್ಲೂ ಇದ್ದಾನೆ. ಇರಾಕ್‌ನಲ್ಲಿ ಯುದ್ಧ ನಡೆದರೆ ನಿಮ್ಮ ಹಿತಾಸಕ್ತಿಗಳ ನಡುವೆ ಘರ್ಷಣೆ ಇರೋದಿಲ್ವಾ ಅಂತಾ ಕೇಳಿದರೆ ಆತ ಹೇಳುತ್ತಾನೆ 'ಅದೆಲ್ಲಾ ನಂಗೊತ್ತಿಲ್ಲ. ಇದ್ರಿಂದ ಬೆಕ್ಟಲ್ ಕಂಪನಿಗೆ ಲಾಭ ಬರುತ್ತೆ ಅದು ಮಾತ್ರ ಗೊತ್ತು, ಅಲ್ಲಿ ಏನಾದ್ರೂ ರಿಪೇರಿ ಕಾಮಗಾರಿಗಳಿದ್ರೆ ಅದನ್ನು ಬೆಕ್ಟಲ್ ತರದ ಕಂಪನಿ ಮಾಡುತ್ತೆ. ಆದ್ರೆ ಅದ್ರಿಂದ ಲಾಭ ಬರುತ್ತೆ ಅಂತಾ ಹೇಳಬೇಕಾಗಿಲ್ಲ'. ಯುದ್ಧದ ನಂತರ ಬೆಕ್ಟಲ್ ಕಂಪನಿ ಇರಾಕಿನ ನವ ನಿರ್ಮಾಣದ ೬೮೦ ಬಿಲಿಯನ್ ಡಾಲರ್ ವಹಿವಾಟಿಗೆ ಸಹಿ ಹಾಕಿತು.

ಇಂತಹ ಅಮಾನುಷ ಬ್ಲೂ ಪ್ರಿಂಟನ್ನ ಅಮೆರಿಕ ಆಗಿಂದಾಗ್ಗೆ ಲಾಟಿನ್ ಅಮೆರಿಕ, ಆಫ್ರಿಕ, ಮಧ್ಯ ಏಷ್ಯಾ ಮತ್ತು ನೈಋತ್ಯ ಏಷ್ಯಾ ದೇಶಗಳಲ್ಲಿ ಪ್ರಯೋಗಿಸುತ್ತಾ ಬಂದಿದೆ. ಇದರಿಂದಾಗಿ ಮಿಲಿಯಗಟ್ಟಲೆ ಜನ ಬದುಕು ಕಳೆದುಕೊಂಡಿದ್ದಾರೆ, ಯಾರೂ ಹೇಳದಿದ್ದರೂ ಚಕ್ರಾಧಿಪತ್ಯದ ಈ ಆಕ್ರಮಣಗಳೆಲ್ಲ ನ್ಯಾಯಯುತ ಯುದ್ಧಗಳೆಂಬ ಮಾನ್ಯತೆ ಪಡೆದುಕೊಂಡುಬಿಡುತ್ತವೆ. ಈ ನ್ಯೂನತೆ ಒದಗಿಬರುವುದು ಬಹುಪಾಲು ಕಾರ್ಪೋರೇಟ್ ಮಾಧ್ಯಮಗಳಿಂದ. ಈ ಕಾರ್ಪೋರೇಟ್ ಮಾಧ್ಯಮಗಳು ನಿಯೊ ಲಿಬರಲ್ ಯೋಜನೆಗಳನ್ನ ಬೆಂಬಲಿಸುವುದಷ್ಟೇ ಅಲ್ಲ ತಮಗೆ ತಾವೆ ನಿಯೊ-ಲಬರಲ್ ಯೋಜನೆಗಳಾಗಿರುತ್ತವೆ. ಇದು ತಾನು ಆಯ್ಕೆ ಮಾಡಿಕೊಂಡ ನೈತಿಕ ನಿಲುವಲ್ಲ. ಆದರೆ ರಾಚನಿಕವಾದದ್ದು - ಬೃಹತ್ ಮಾಧ್ಯಮಗಳ ಕಾರ್ಯ ನಿರ್ವಹಣೆ ಕುರಿತ ಅಂತರ್ಗತ ಅಂಶ.

ಎಲ್ಲ ದೇಶಗಳಿಗೂ ಬಚ್ಚಿಟ್ಟುಕೊಳ್ಳಬೇಕಾದಂಥ ಸಾಕಷ್ಟು ಕೌಟುಂಬಿಕ ಗುಟ್ಟುಗಳಿರುತ್ತವೆ. ಹೀಗಾಗಿ ಅನೇಕ ಸಲ ಮಾಧ್ಯಮಗಳಿಗೆ ಸುಳ್ಳು ಹೇಳುವ ಅವಶ್ಯಕತೆ ಕಂಡುಬರೋದಿಲ್ಲ. ಅದನ್ನೇ ಒತ್ತಿ ಹೇಳುತ್ತಿರುತ್ತವೆ. ಇಲ್ಲವೇ ಉದಾಸೀನ ಮಾಡುತ್ತವೆ. ಉದಾಹರಣೆಗೆ ಸಕ್ರಮ ಯುದ್ಧವೊಂದಕ್ಕೆ ಭಾರತವನ್ನ ಗುರಿಯಾಗಿಟ್ಟುಕೊಂಡರು ಅಂತಿಟ್ಟುಕೊಳ್ಳೋಣ. ೧೯೮೯ರಿಂದ ಕಾಶ್ಮೀರ ಕಣಿವೆಯಲ್ಲಿ ೮೦ ಸಾವಿರ

ಜನರನ್ನು ಕೊಲ್ಲಲಾಗಿದೆ. ಈ ಎಲ್ಲ ಕೊಲೆಗಳನ್ನ ಮಾಡಿದ್ದು ಭಾರತದ ಭದ್ರತಾ ಪಡೆಗಳು (ಪ್ರತಿ ವರ್ಷ ಸರಾಸರಿ ೬೦೦ ಕೊಲೆಗಳು), ಕೆಲವು ತಿಂಗಳುಗಳ ಹಿಂದೆ ಗುಜರಾತಿನ ಬೀದಿಗಳಲ್ಲಿ ೨ ಸಾವಿರಕ್ಕಿಂತ ಹೆಚ್ಚು ಮುಸ್ಲಿಮರನ್ನು ಕೊಲ್ಲಲಾಯಿತು. ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಮಕ್ಕಳನ್ನ ಜೀವಂತವಾಗಿ ಸುಟ್ಟರು. ೧ ಲಕ್ಷ ೫೦ ಸಾವಿರ ಜನರನ್ನ ಮನೆಗಳಿಂದ ಹೊರದೂಡುವಾಗ ಪೊಲೀಸರು ಮತ್ತು ಆಡಳಿತ ವ್ಯವಸ್ಥೆಗಳು ಇದನ್ನೆಲ್ಲ ಸುಮ್ಮನೆ ನೋಡುತ್ತ ಕುಂತಿದ್ದವು; ಕೆಲವು ಪ್ರಕರಣಗಳಲ್ಲಿ ತಾವೂ ಭಾಗವಹಿಸಿದರು. ಈ ಅಪರಾಧಗಳಿಗಾಗಿ ಯಾರನ್ನೂ ದಂಡಿಸಲಿಲ್ಲ. ಈ ಸಾಮೂಹಿಕ ಅಪರಾಧಗಳ ಮೇಲುಸ್ತುವಾರಿ ಮಾಡುತ್ತಿದ್ದ ಸರ್ಕಾರ ಮತ್ತೆ ಚುನಾವಣೆಯಲ್ಲಿ ಮರುಆಯ್ಕೆ ಯಾಯಿತು. ಈ ಎಲ್ಲ ಪ್ರಕರಣಗಳು ಯುದ್ಧಕ್ಕೆ ಎಡೆಮಾಡಿಕೊಡುವಂತೆ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪರಿಪೂರ್ಣ ತಲೆಬರಹಗಳಾಗುತ್ತವೆ. ಮುಂದೇನಾಗುತ್ತ ಅಂತಾ ನಮಗೆ ಗೊತ್ತು ಕ್ಷಿಪಣಿಗಳು ನಿಮ್ಮ ನಗರಗಳನ್ನು ನೆಲಸಮ ಮಾಡುತ್ತವೆ, ನಮ್ಮ ಹಳ್ಳಿಗಳಿಗೆ ಮುಳ್ಳುತಂತಿ ಬೇಲಿ ಹಾಕುತ್ತಾರೆ; ಅಮೆರಿಕದ ಉಡಾಳ ಸೈನಿಕರು ಗಸ್ತು ತಿರುಗತೊಡಗುತ್ತಾರೆ. ನರೇಂದ್ರ ಮೋದಿ, ಪ್ರವೀಣ್ ತೊಗಾಡಿಯಾ ಮುಂತಾದ ಕುಪ್ರಸಿದ್ಧ ಕರ್ಮಠರು ಸದ್ದಾಂ ಹುಸೇನ್‌ರಂತೆ ಅಮೆರಿಕದ ಸುಪರ್ದಿನಲ್ಲಿ ಬಂಧಿಗಳಾಗುತ್ತಾರೆ; ಮಾಧ್ಯಮಗಳ ಪ್ರೈಮ್‌ಟೈಮ್ ಸುದ್ದಿ ವಿಭಾಗದಲ್ಲಿ ಅವರ ತಲೆಗಳಲ್ಲಿರಬಹುದಾದ ಹೇನು ಹಿಡಿಯುವುದನ್ನು, ಹಲ್ಲು ಹಿಡಿದು ನೋಡುವುದನ್ನು ತೋರಿಸುತ್ತಾರೆ.

ಆದರೆ ನಮ್ಮ ಮಾರುಕಟ್ಟೆಗಳು ಮುಕ್ತವಾಗಿರುವ ತನಕ, ಎನ್ರಾನ್, ಬೆಕ್ಟಲ್, ಹ್ಯಾಲಿಬರ್ಟನ್, ಆಥಗರ್, ಆಂಡರ್ಸನ್ ಮುಂತಾದ ಕಾರ್ಪೊರೇಟ್ ಕಂಪನಿಗಳಿಗೆ ಮುಕ್ತ ಅವಕಾಶಗಳಿರುವ ತನಕ, ಪ್ರಜಾಸತಾತ್ತಕವಾಗಿ ಆಯ್ಕೆಯಾದ ನಮ್ಮ ನಾಯಕರು ಪ್ರಜಾಸತ್ತೆ, ಬಹುಸಂಖ್ಯಾತತ್ವ ಮತ್ತು ಧ್ಯಾಸಿಸಂಗಳ ನಡುವಿನ ಗೆರೆಗಳನ್ನ ಯಾವುದೇ ದಿಗಿಲಿಲ್ಲದೇ ಮಂಕು ಮಾಡುತ್ತಿರುತ್ತಾರೆ.

ಆಲಿಪ್ತ ನೀತಿ ಭಾರತದ ವಿದೇಶಾಂಗ ನೀತಿಯ ಹೆಮ್ಮೆಯ ಪರಂಪರೆ, ಆದರೆ ಇದನ್ನು ದಿಕ್ಕುಗೆಡಿಸಲು, ಹಾಳು ಮಾಡಲು ಭಾರತ ಸರ್ಕಾರದ ಇಚ್ಚೆ ಕಾತರಿಸುತ್ತಿತ್ತು. ಒಂದು ವಿದ್ಯಮಾನದ ಬಗ್ಗೆ ಸಂಪೂರ್ಣ ಪರ-ವಿರೋಧ ನಿಲುವುಗಳನ್ನು ತೆಗೆದುಕೊಳ್ಳುವ ದೇಶಗಳ ನಾಯಕತ್ವ ವಹಿಸಿದ್ದ ದೇಶದ ದಂಡನಾಯಕರ ಸನಿಹಕ್ಕಾಗಿ ಭಾರತ ಸರ್ಕಾರ, ಸೊಂಟ ನುಲಿಯುತ್ತ ದೈನೇಸಿಯಾಗಿ ನಿಂತಿತ್ತು. ಸ್ವಾಭಾವಿಕ ಸಹಚರರು (natural allies) ಎಂಬ ಪದಪುಂಜ ಹೊಳೆಯುತ್ತಿತ್ತು - ಭಾರತ, ಇಸ್ರೇಲ್ ಮತ್ತು ಅಮೆರಿಕ ಒಂದು ಬಗೆಯ ಸ್ವಾಭಾವಿಕ ಸಹಚರ ದೇಶಗಳು; ತಮಗಿರುವ ಮಾನ್ಯತೆ ಜೊತೆ ಒಂಚೂರು ಹೊಂದಾಣಿಕೆ ಮಾಡಿಕೊಳ್ಳದೆ ದಮನಕಾರಿ ವ್ಯವಸ್ಥೆಯೊಂದನ್ನು ನಿರ್ಮಿಸಿವೆ.

ಸರ್ಕಾರವೊಂದರ ಬಲಿಪಶುಗಳು ಅಂದರೆ ಕೊಲೆಯಾದವರು, ಕೈದಿಗಳಾಗಿರುವವರು ಮತ್ತು ಕಣ್ಮರೆಯಾದವರು ಮಾತ್ರ ಅಲ್ಲ, ಸ್ಥಳಾಂತರಗೊಂಡವರು, ಒಕ್ಕಲೆದ್ದವರು, ಹಸಿವು ಸಂಕಷ್ಟಗಳನ್ನೇ ಜೀವಾವಧಿ ಶಿಕ್ಷೆ ಎಂಬಂತೆ ಅನುಭವಿಸುತ್ತಿರುವ ಜನರನ್ನು ಕೂಡ ಸರ್ಕಾರದ ಬಲಿಪಶುಗಳೆಂದು ಪರಿಗಣಿಸಬೇಕು. ಅಭಿವೃದ್ಧಿ ಯೋಜನೆಗಳಿಂದ ಮಿಲಿಯಗಟ್ಟಲೆ ಜನರನ್ನ ಒಕ್ಕಲೆಬ್ಬಿಸಿ ಸ್ಥಳಾಂತರಿಸಲಾಗಿದೆ. ಕಳೆದ ೫೫

ಆಲಿಪ್ತ ನೀತಿ ಭಾರತದ ವಿದೇಶಾಂಗ ನೀತಿಯ ಹೆಮ್ಮೆಯ ಪರಂಪರೆ, ಆದರೆ ಇದನ್ನು ದಿಕ್ಕುಗೆಡಿಸಲು, ಹಾಳು ಮಾಡಲು ಭಾರತ ಸರ್ಕಾರದ ಇಚ್ಚೆ ಕಾತರಿಸುತ್ತಿತ್ತು. ಒಂದು ವಿದ್ಯಮಾನದ ಬಗ್ಗೆ ಸಂಪೂರ್ಣ ಪರ-ವಿರೋಧ ನಿಲುವುಗಳನ್ನು ತೆಗೆದುಕೊಳ್ಳುವ ದೇಶಗಳ ನಾಯಕತ್ವ ವಹಿಸಿದ್ದ ದೇಶದ ದಂಡನಾಯಕರ ಸನಿಹಕ್ಕಾಗಿ ಭಾರತ ಸರ್ಕಾರ, ಸೊಂಟ ನುಲಿಯುತ್ತ ದೈನೇಸಿಯಾಗಿ ನಿಂತಿತ್ತು. ಸ್ವಾಭಾವಿಕ ಸಹಚರರು ಎಂಬ ಪದಪುಂಜ ಹೊಳೆಯುತ್ತಿತ್ತು - ಭಾರತ, ಇಸ್ರೇಲ್ ಮತ್ತು ಅಮೆರಿಕ ಒಂದು ಬಗೆಯ ಸ್ವಾಭಾವಿಕ ಸಹಚರ ದೇಶಗಳು; ತಮಗಿರುವ ಮಾನ್ಯತೆ ಜೊತೆ ಒಂಚೂರು ಹೊಂದಾಣಿಕೆ ಮಾಡಿಕೊಳ್ಳದೆ ದಮನಕಾರಿ ವ್ಯವಸ್ಥೆಯೊಂದನ್ನು ನಿರ್ಮಿಸಿವೆ.

ವರ್ಷಗಳಲ್ಲಿ ದೊಡ್ಡ ಅಣೆಕಟ್ಟುಗಳ ನಿರ್ಮಾಣ ಕಾರ್ಯಕ್ಕೆಂದೇ ೩೩ ರಿಂದ ೫೫ ಮಿಲಿಯನ್ ಜನರನ್ನು ಸ್ಥಳಾಂತರಿಸಲಾಗಿದೆ; ಅವರ ನ್ಯಾಯ ಮತ್ತು ಜೀವದ ಘನತೆಯ ದಿಕ್ಕುಗಳೇ ಮುಚ್ಚಿ ಹೋಗಿವೆ.

ಕಳೆದ ೨ ವರ್ಷಗಳ ಅವಧಿಯಲ್ಲಿ ಶಾಂತಿಯುತ ಚಳವಳಿಗಾರರ ಮೇಲೆ ಪೊಲೀಸರು ಗುಂಡು ಹಾರಿಸಿರುವ ಸರಣಿ ಘಟನೆಗಳಿವೆ; ಇವುಗಳ ಪೈಕಿ ಬಹುಪಾಲು ಆದಿವಾಸಿ ಮತ್ತು ದಲಿತ ಸಂಘಟನೆಗಳು, ಬಡವರು. ಅದರಲ್ಲೂ ದಲಿತರು ಮತ್ತು ಆದಿವಾಸಿಗಳ ಪೈಕಿ ಕೊಲೆಯಾದವರು ಬೇಸಾಯಕ್ಕಾಗಿ ಅರಣ್ಯ ಭೂಮಿ ಒತ್ತುವರಿ ಮಾಡಿಕೊಂಡವರು ಅಥವಾ ದೊಡ್ಡ ಅಣೆಕಟ್ಟು, ಗಣಿಗಾರಿಕೆ ಮತ್ತು ಇತರ ಅಭಿವೃದ್ಧಿ ಯೋಜನೆಗಳಿಗಾಗಿ ಒತ್ತುವರಿಯಾಗುತ್ತಿದ್ದ ಅರಣ್ಯ ಭೂಮಿಯನ್ನ ರಕ್ಷಿಸಿಕೊಳ್ಳುವ ಹೋರಾಟಗಳಲ್ಲಿ ಭಾಗಿಯಾಗಿದ್ದಾಗ ಕೊಲೆಯಾದವರು. ಪೊಲೀಸರು ಗುಂಡು ಹಾರಿಸಿರುವ ಪ್ರತಿ ಘಟನೆಯಲ್ಲೂ ಸರ್ಕಾರ ಬಳಸಿರುವ ಏಕಮಾತ್ರ ತಂತ್ರವೆಂದರೆ 'ಗುಂಡು ಹಾರಿಸಲು ಪ್ರಚೋದನೆ ಕಾರಣ' ಎಂಬ ಸಬೂಬು ಹೇಳುತ್ತಿರುವುದು. ಗುಂಡು ಹಾರಿಸಿ ಕೊಂದ ನಂತರ ಅವರು ಉಗ್ರಗಾಮಿಗಳೆಂಬ ಸಿದ್ದ ತೀರ್ಮಾನಕ್ಕೆ ಬಂದಿರುವುದು.

ದೇಶದಾದ್ಯಂತ ಅಪ್ರಾಪ್ತ ವಯಸ್ಕರೂ ಸೇರಿದಂತೆ ಸಾವಿರಾರು ಅಮಾಯಕ ಜನರನ್ನ ಪೋಟಾ (Pota - Prevention of terrorism act) ಕಾಯಿದೆ ಪ್ರಕಾರ ಸೆರೆಹಿಡಿದು ಯಾವುದೇ ವಿಚಾರಣೆ ಇಲ್ಲದೆ ಅನಿರ್ದಿಷ್ಟ ಕಾಲದ ತನಕ ಕೂಡಿ ಹಾಕಲಾಗಿದೆ. ಭಯೋತ್ಪಾದನೆ ವಿರೋಧಿ ಯುದ್ಧ ಕಾಲದ ಈ ಯುಗದಲ್ಲಿ ಬಡತನವನ್ನು ಭಯೋತ್ಪಾದನೆ ಜೊತೆ ತಳುಕು ಹಾಕಲಾಗುತ್ತಿದೆ - ಕಾರ್ಪೊರೇಟ್ ಜಾಗತೀಕರಣದ ಈ ನವಯುಗದಲ್ಲಿ ಬಡತನ ಒಂದು ಅಪರಾಧ; ಮುಂದುವರಿದ ದರಿದ್ರ ಕಾರ್ಯಕ್ರಮಗಳ ವಿರುದ್ಧ ಪ್ರತಿಭಟನೆ 'ಭಯೋತ್ಪಾದನೆ'; ಮತ್ತೀಗ ಸುಪ್ರೀಂಕೋರ್ಟ್ ಹೇಳುತ್ತಿದೆ : ಚಳವಳಿ ಕೂಡ ಅಪರಾಧ. ನ್ಯಾಯಾಲಯಗಳನ್ನು ವಿಮರ್ಶಿಸುವುದು ಒಂದು ಅಪರಾಧ ಎಂಬುದು ಹಾಗೂ ಇದ್ದೇ ಇದೆ; ಅವರು ಹೊರದಾರಿಗಳನ್ನು ಮುಚ್ಚುತ್ತಿದ್ದಾರೆ.

ಹಳೆ ಸಾಮ್ರಾಜ್ಯಶಾಹಿಯಂತೆ ಹೊಸ ಸಾಮ್ರಾಜ್ಯಶಾಹಿ ಕೂಡ ತನ್ನ ಯಶಸ್ಸಿಗಾಗಿ ದಲ್ಲಾಳಿಗಳು, ಭ್ರಷ್ಟರು, ಸ್ಥಳೀಕ ಪ್ರತಿಷ್ಠಿತರನ್ನ ತನ್ನ ಸೇವೆಗೆ ಎರವಲು ತೆಗೆದುಕೊಂಡಿರುತ್ತದೆ. ನಮ್ಮಗೆಲ್ಲಾ ಭಾರತದಲ್ಲಿ ಎನ್ರಾನ್ ಕಂಪನಿ ಕುರಿತ ಹಾಸ್ಯಾಸ್ಪದ ಕತೆ ಗೊತ್ತು. ಆಗಿನ ಮಹಾರಾಷ್ಟ್ರ ಸರ್ಕಾರ ವಿದ್ಯುತ್ ಶಕ್ತಿ ಖರೀದಿ ಒಪ್ಪಂದಕ್ಕೆ ಒತ್ತಿದ ಸಹಿಯಿಂದಾಗಿ ಎನ್ರಾನ್ ಕಂಪನಿಗೆ ಸಿಕ್ಕ ಲಾಭ, ಸಮಸ್ತ ಭಾರತದ ಗ್ರಾಮೀಣಾಭಿವೃದ್ಧಿ ಬಜೆಟ್ಟಿನ ಶೇ. ೬೦ರಷ್ಟು; ೫೦೦ ಮಿಲಿಯನ್ ಜನರ ಮೂಲ ಸೌಕರ್ಯಗಳಿಗೆ ಬೇಕಾಗುವ ಹಣಕಾಸಿಗೆ ಸರಿಸಮನಾದ ಲಾಭವನ್ನ ಅಮೆರಿಕದ ಒಂದೇ ಒಂದು ಕಂಪನಿಗೆ ಖಚಿತಪಡಿಸಲಾಯಿತು.

ಈ ಹೊಸ ಸಾಮ್ರಾಜ್ಯಶಾಹಿ ತನ್ನ ಪೂರ್ವಿಕ ದಿನಗಳಂತೆ ಕಾಡು ಮೇಡಿನಲ್ಲಿ ಜವುಗು ಪ್ರದೇಶಗಳಲ್ಲಿ ಅಲೆಯಬೇಕಿಲ್ಲ, ಮಲೇರಿಯಾ ಅಥವಾ ಡಯಾರಿಯಾ, ದುರ್ಮರಣದ ಭಯವಿಲ್ಲ. ಸಾಮ್ರಾಜ್ಯಶಾಹಿಯನ್ನ ಈಗ ಇ-ಮೇಲ್ ಮೂಲಕ ನಿರ್ವಹಿಸಬಹುದು. ಹಳೆ ಸಾಮ್ರಾಜ್ಯಶಾಹಿಯ ಕೈ ಕೈ ಮಿಲಾಯಿಸುವ ಅಸಭ್ಯತೆಯ ಗ್ಯಾರಂಟಿ ಡೇಟ್ ಮುಗಿದು ಹೋಗಿದೆ; ಹೊಸ ಸಾಮ್ರಾಜ್ಯಶಾಹಿಯ ಮೂತಿಗಲ್ಲು ಹೊಸ ರೀತಿಯ ಜನಾಂಗದ್ವೇಷ.

ಅಮೆರಿಕದಲ್ಲಿ ಈಗ ಟರ್ಕಿ ಕ್ಷಮಾದಾನ ಪರಂಪರೆ ಈ ನವಜನಾಂಗದ್ವೇಷಕ್ಕೆ ಅದ್ಭುತ ರೂಪಕ. ೧೯೪೭ರಿಂದ ಪ್ರತಿವರ್ಷ ನ್ಯಾಷನಲ್ ಟರ್ಕಿ ಫೆಡರೇಷನ್, ಅಮೆರಿಕದ ಅಧ್ಯಕ್ಷನಿಗೆ ಕೃತಜ್ಞತೆಯ ಸಂಕೇತವಾಗಿ ಒಂದು ಟರ್ಕಿ ಕೋಳಿಯನ್ನ ಕಾಣಿಕೆಯಾಗಿ ಅರ್ಪಿಸುತ್ತದೆ. ಪ್ರತಿವರ್ಷ ನಡೆಯುವ ಈ ಆಚರಣ ಪೂರ್ವಕ ಉದಾತ್ತತೆಯಲ್ಲಿ ಅಮೆರಿಕ ಅಧ್ಯಕ್ಷ ಆ ಪಕ್ಷಿಯ ಪ್ರಾಣವನ್ನು ಉಳಿಸುತ್ತಾನೆ (ಆದರೆ ಇನ್ನೊಂದು ಪಕ್ಷಿಯನ್ನ ತಿಂದುಹಾಕಿರುತ್ತಾನೆ). ಹೀಗೆ ಅಧ್ಯಕ್ಷೀಯ ಕ್ಷಮಾದಾನಕ್ಕೆ ತುತ್ತಾದ, ಆಯ್ಕೆಯಾದ ಆ ಕೋಳಿಯನ್ನ ನೈಸರ್ಗಿಕವಾದ ಸ್ವಚ್ಛಂದ ಜೀವನಕ್ಕಾಗಿ ವರ್ಜೀನಿಯಾದ ಫ್ರೈಯಿಂಗ್ ಪ್ಯಾನ್ ಪಾರ್ಕಿಗೆ ರವಾನಿಸ

ಲಾಗುತ್ತದೆ. ಈ ಕೃತಜ್ಞತಾ ವಿಧಿಗೆಂದು ಬೆಳೆಸಲಾದ ಇತರ ೫೦ ಮಿಲಿಯನ್ ಟರ್ಕಿ ಕೋಳಿಗಳನ್ನ ಕೃತಜ್ಞತಾ ದಿನಾಚರಣೆಗಾಗಿ ಬಲಿಕೊಟ್ಟು ತಿಂದುಹಾಕುತ್ತಾರೆ. ಅಧ್ಯಕ್ಷೀಯ ಟರ್ಕಿ ಕಂಟ್ರಾಕ್ಟನ್ನ ಗೆದ್ದುಕೊಂಡಿರುವ ಕಾಂಗ್ರಾ ಫುಡ್ ಕಂಪನಿ, ಅದೃಷ್ಟದ ಪಕ್ಷಿ, ಗಣ್ಯ ವ್ಯಕ್ತಿಗಳು, ಶಾಲಾಮಕ್ಕಳು ಮತ್ತು ಮಾಧ್ಯಮಗಳೊಂದಿಗೆ ಮಾತನಾಡುವಂತೆ ತರಬೇತುಗೊಳಿಸುವುದಾಗಿ ಹೇಳುತ್ತದೆ. (ಸದ್ಯದಲ್ಲೇ ಆ ಕೋಳಿ ಇಂಗ್ಲಿಷ್‌ನಲ್ಲೂ ಮಾತನಾಡಬಹುದು.)

ಕಾರ್ಪೊರೇಟ್ ಯುಗದಲ್ಲಿ ಜನಾಂಗದ್ವೇಷ ಕಾರ್ಯ ನಿರ್ವಹಿಸುವುದು ಹೀಗೆ. ಎಚ್ಚರದಿಂದ ಸಾಕಿದ ಕೆಲವು ಟರ್ಕಿಗಳು, ಅನೇಕ ದೇಶಗಳ ಸ್ಥಳೀಕ ಪ್ರತಿಷ್ಠಿತರು, ಶ್ರೀಮಂತ ಅನಿವಾಸಿ ಸಮುದಾಯ, ವಿನಿಯೋಗಿ ಬ್ಯಾಂಕರ್‌ಗಳು, ಆಗಾಗ ಕಾಲಿನ್ ಪೊವೆಲ್ ಅಥವಾ ಕಂಡೋಲೆಜ್ಹಾ ರೈಸ್ ತರದವರು, ಹಾಡುಗಾರರು, ಕೆಲವು ಲೇಖಕರುಗಳಿಗೆ ಸಂಪೂರ್ಣ ಮನ್ನಣೆ ಮತ್ತು ಫ್ರೈಯಿಂಗ್ ಪ್ಯಾನ್ ಪಾರ್ಕಿಗೆ ಒಂದು ರಹದಾರಿ.

ಉಳಿದ ಮಿಲಿಯಗಟ್ಟಳೆ ಜನ ಕೆಲಸ ಕಳೆದುಕೊಳ್ಳುತ್ತಾರೆ, ವಸತಿಗಳಿಂದ ಒಕ್ಕಲೇಳುತ್ತಾರೆ, ಅವರ ನೀರು ಮತ್ತು ವಿದ್ಯುತ್ ಸರಬರಾಜು ಬಂದಾಗುತ್ತದೆ; ಕೊನೆಗೊಂದು ದಿನ ಏಯ್ಡ್ಸ್‌ನಿಂದ ಸಾಯುತ್ತಾರೆ. ಮೂಲಭೂತವಾಗಿ ಅವರು ಮೂಲೆಗುಂಪಾಗುತ್ತಾರೆ, ಆದರೆ ಫ್ರೈಯಿಂಗ್ ಪ್ಯಾನ್ ಪಾರ್ಕಿಗೆ ಹೋಗುವ ಅದೃಷ್ಟಶಾಲಿ ಮೂರ್ಖರು ಚೆನ್ನಾಗೇ ಇರುತ್ತಾರೆ. ಅವರಲ್ಲಿ ಕೆಲವರು ಐಎಮ್‌ಎಫ್ ಮತ್ತು ಡಬ್ಲ್ಯೂಟಿಓ ನಲ್ಲಿ ಕೆಲಸ ಕೂಡಾ ಮಾಡಬಹುದು - ಹೀಗಾಗಿ ಈ ಸಂಘಟನೆಗಳನ್ನ ಟರ್ಕಿ ವಿರೋಧಿ ಅಂತಾ ದೂಷಿಸಲು ಯಾರಿಂದ ತಾನೇ ಸಾಧ್ಯ? ಕೆಲವರು ಟರ್ಕಿ ಆಯ್ಕೆ ಸಮಿತಿಯ ನಿರ್ದೇಶಕ ಮಂಡಲಿಗೂ ಆಯ್ಕೆಯಾಗಬಹುದು- ಹೀಗಾಗಿ ಟರ್ಕಿಗಳು ಕೃತಜ್ಞತಾ ಆಚರಣೆಗೆ ವಿರೋಧಿಗಳು ಅಂತಾ ಯಾರು ತಾನೇ ಹೇಳಲು ಸಾಧ್ಯ? ಫ್ರೈಯಿಂಗ್ ಪ್ಯಾನ್ ಪಾರ್ಕಿಗೆ ಪ್ರವೇಶಿಸಲು ನೂಕುನುಗ್ಗಲು - ಕಾಲ್ತುಳಿತ ಉಂಟಾಗಬಹುದು; ಅದರಲ್ಲಿ ಬಹುಪಾಲು ಜನ ಸತ್ತರೆ ಆಗಬೇಕಾದ್ದು ಏನಿದೆ?

ಈ ನವ ಜನಾಂಗದ್ವೇಷಿ (neoracism) ಯೋಜನೆಯಲ್ಲಿ ನವ ನರಮೇಧಿ ಸ್ವಭಾವವಿದೆ. ಆರ್ಥಿಕ ಪರಸ್ಪರಾವಲಂಬನೆಯ ಈ ನವಯುಗದಲ್ಲಿ ಆರ್ಥಿಕ ದಿಗ್ಬಂಧನದ ಮೂಲಕ ಹೊಸಬಗೆಯ ನರಮೇಧಕ್ಕೆ ಚಾಲನೆ ಕೊಡಬಹುದು. ಅಂದರೆ ಮದ್ದು ಗುಂಡುಗಳನ್ನು ಬಳಸದೇ ಜನರ ಸಾಮೂಹಿಕ ಸಾವುಗಳಿಗೆ ಎಡೆಮಾಡಿಕೊಡುವಂಥ ಪರಿಸ್ಥಿತಿ ಸೃಷ್ಟಿಸುವುದು. ೧೯೯೭ ಮತ್ತು ೯೮ರ ಅವಧಿಯಲ್ಲಿ ಇರಾಕಿನಲ್ಲಿ ವಿಶ್ವಸಂಸ್ಥೆಯ ಮಾನವೀಯ ನೆರವು ಸಂಯೋಜಕರಾಗಿದ್ದ ಡೆನಿಸ್ ಹ್ಯಾಲಿದಯ್ (ನಂತರ ಅಮೆರಿಕದ ಬಗ್ಗೆ ಜಿಗುಪ್ಸೆ ತಾಳಿ ರಾಜೀನಾಮೆ ಕೊಟ್ಟರು) ಅವರು ಇರಾಕ್‌ನ ಮೇಲಿನ ಆರ್ಥಿಕ ದಿಗ್ಬಂಧನವನ್ನು ವರ್ಣಿಸಲು 'ನರಮೇಧ' ಶಬ್ದ ಬಳಸಿದ್ದರು. ಇರಾಕಿನಲ್ಲಿ ಸದ್ದಾಂ ಹುಸೇನ್‌ರ ಒಳ್ಳೆಯ ಪ್ರಯತ್ನಗಳನ್ನು ದಾರಿತಪ್ಪಿಸಲು ಅರ್ಧ ಮಿಲಿಯನ್ ಮಕ್ಕಳ ಜೀವಗಳನ್ನ ಬಲಿಕೊಡಲಾಯಿತು.

ಈ ನವಯುಗದಲ್ಲಿ ವರ್ಣದ್ವೇಷ ಓಬೀರಾಯನ ಕಾಲದ ಅನವಶ್ಯಕ ನೀತಿ. ವ್ಯಾಪಾರ ಮತ್ತು ಹಣಕಾಸು ವಹಿವಾಟಿನ ಅಂತರರಾಷ್ಟ್ರೀಯ ಸಾಧನಗಳು ಬಡವರನ್ನ ಹೇಗಾದರೂ ಮಾಡಿ ಅವರ ಹಟ್ಟಿಗಳಲ್ಲೇ ಉಳಿಸಿಬಿಡುವಂತಹ, ಸಂಕೀರ್ಣ, ಬಹುಪಕ್ಷೀಯ ವ್ಯಾಪಾರ ಕಟ್ಟಳೆಗಳ ಉಸ್ತುವಾರಿ ನೋಡಿಕೊಳ್ಳುತ್ತಿವೆ. ಅದರ ಸಮಸ್ತ ಉದ್ದೇಶ ಅಸಮತೆಯ ಸಾಂಸ್ಥೀಕರಣ. ಬಾಂಗ್ಲಾದೇಶೀಯನೊಬ್ಬ ತಯಾರಿಸಿದ ಸಿದ್ಧ



ಉಡುಪುಗಳ ಮೇಲೆ ಅಮೆರಿಕ, ಇಂಗ್ಲೆಂಡಿನ ಸಿದ್ಧ ಉಡುಪುಗಳ ಮೇಲೆ ಹಾಕುವುದಕ್ಕಿಂತ ೨೦ ಪಟ್ಟು ಹೆಚ್ಚು ತೆರಿಗೆ ಹಾಕುತ್ತಿರುವುದು ಯಾಕೆ ಅಂತಾ ಹ್ಯಾಗೆ ಅರ್ಥಮಾಡಿಕೊಳ್ಳೋದು? ಜಗತ್ತಿನ ಶೇ. ೯೦ರಷ್ಟು ಕೋಕ್ ಬೆಳೆಯುತ್ತಿರುವ ದೇಶಗಳು ಇನ್ನೂ ಜಗತ್ತಿನ ಶೇ. ೫ರಷ್ಟು ಚಾಕಲೇಟ್ ಉತ್ಪಾದನೆ ಮಾಡುತ್ತಾ ಕುಂತಿರುವುದು ಯಾಕೆ? ಐವರಿಕೋಸ್ಟ್ ಮತ್ತು ಘಾನಾ ದೇಶಗಳಂತೆ ಕೋಕ್ ಬೆಳೆಯುವ ದೇಶಗಳು ಅದನ್ನ ಚಾಕಲೇಟ್ ಆಗಿ ಪರಿವರ್ತಿಸಲು ಪ್ರಯತ್ನಿಸಿದರೆ ಅದರ ಮೇಲೆ ವಿಪರೀತ ತೆರಿಗೆ ಹಾಕಿ ಮಾರುಕಟ್ಟೆಯಲ್ಲಿ ತಲೆ ಎತ್ತದಂತೆ ನೋಡಿಕೊಳ್ಳಲಾಗುತ್ತಿದೆ. ತಮ್ಮ ರೈತರಿಗೆ ಪ್ರತಿದಿನ ಬಿಲಿಯನ್ ಡಾಲರುಗಳಷ್ಟು ಸಬ್ಸಿಡಿ - ಸಹಾಯಧನ ಕೊಡುತ್ತಿರುವ ಶ್ರೀಮಂತ ರಾಷ್ಟ್ರಗಳು ಭಾರತದಂತಹ ಬಡದೇಶ ವಿದ್ಯುತ್ ಸೇರಿದಂತೆ ಎಲ್ಲದರ ಮೇಲಿನ ಸಬ್ಸಿಡಿ-ಸಹಾಯ ಧನಗಳನ್ನ ಹಿಂತೆಗೆದುಕೊಳ್ಳುವಂತೆ ಒತ್ತಾಯ ಹೇರುತ್ತಿರುವುದು ಯಾತಕ್ಕಾಗಿ? ಸುಮಾರು ಅರ್ಧ ಶತಮಾನದ ತನಕ ಒಂದರ ನಂತರ ಒಂದು ವಸಾಹತುಶಾಹಿ ಆಡಳಿತಗಳು ಕೊಳ್ಳೆ ಹೊಡೆದ ನಂತರ ಹಳೆಯ ವಸಾಹತುಗಳು ಸಾಲದ ವಿಷವರ್ತುಲದಲ್ಲಿ ಸಿಲುಕಿಕೊಂಡು ವರ್ಷದಲ್ಲಿ ೩೮೨ ಬಿಲಿಯನ್ ಡಾಲರ್ ಮರುಪಾವತಿ ಮಾಡುವುದಾದರೂ ಹ್ಯಾಗೆ?

ಹಳೆ ಸಾಮ್ರಾಜ್ಯಶಾಹಿಯಂತೆ ಹೊಸ ಸಾಮ್ರಾಜ್ಯಶಾಹಿ ಕೂಡ ತನ್ನ ಯಶಸ್ಸಿಗಾಗಿ ದಲ್ಲಾಳಿಗಳು, ಭ್ರಷ್ಟರು, ಸ್ಥಳೀಕ ಪ್ರತಿಷ್ಠಿತರನ್ನ ತನ್ನ ಸೇವೆಗೆ ಎರವಲು ತೆಗೆದುಕೊಂಡಿರುತ್ತದೆ. ನಮ್ಮಗೆಲ್ಲಾ ಭಾರತದಲ್ಲಿ ಎನ್ರಾನ್ ಕಂಪನಿ ಕುರಿತ ಹಾಸ್ಯಾಸ್ಪದ ಕತೆ ಗೊತ್ತು. ಆಗಿನ ಮಹಾರಾಷ್ಟ್ರ ಸರ್ಕಾರ ವಿದ್ಯುತ್ ಶಕ್ತಿ ಖರೀದಿ ಒಪ್ಪಂದಕ್ಕೆ ಒತ್ತಿದ ಸಹಿಯಿಂದಾಗಿ ಎನ್ರಾನ್ ಕಂಪನಿಗೆ ಸಿಕ್ಕ ಲಾಭ, ಸಮಸ್ತ ಭಾರತದ ಗ್ರಾಮೀಣಾಭಿವೃದ್ಧಿ ಬಜೆಟ್ಟಿನ ಶೇ. ೬೦ರಷ್ಟು; ೫೦೦ ಮಿಲಿಯನ್ ಜನರ ಮೂಲ ಸೌಕರ್ಯಗಳಿಗೆ ಬೇಕಾಗುವ ಹಣಕಾಸಿಗೆ ಸರಿಸಮನಾದ ಲಾಭವನ್ನ ಅಮೆರಿಕದ ಒಂದೇ ಒಂದು ಕಂಪನಿಗೆ ಖಚಿತಪಡಿಸಲಾಯಿತು.

ಈ ಎಲ್ಲ ಕಾರಣಗಳಿಂದ ಕ್ಯಾಂಕಮ್‌ನ ವ್ಯಾಪಾರ ಒಪ್ಪಂದಗಳ ಹಳಿ ಕೆಡವಿದ್ದು ನಮ್ಮ ಪಾಲಿಗೆ ನಿರ್ಣಾಯಕ. ಇದಕ್ಕಾಗಿ ನಮ್ಮ ಸರ್ಕಾರ ಆ ಕೀರ್ತಿ ತನ್ನ ಪಾಲಿನದೆಂದು ಹೇಳಿಕೊಳ್ಳಬಹುದು. ಆದರೆ ನಮಗೆ ಗೊತ್ತು ಇದು ಅನೇಕ ದೇಶಗಳ ಮಿಲಿಯಗಟ್ಟಳೆ ಜನರ ಹೋರಾಟ ಮತ್ತು ಪ್ರತಿರೋಧಕ್ಕೆ ಸಿಕ್ಕ ಫಲ. ದಮನಕಾರಿ ವ್ಯವಸ್ಥೆಯನ್ನ ಭಗ್ನಗೊಳಿಸಲು, ತೀವ್ರ ಬದಲಾವಣೆಗಳನ್ನು ತರಲು ಸ್ಥಳೀಯ ಪ್ರತಿರೋಧಿ ಚಳವಳಿಗಳ, ಅಂತರರಾಷ್ಟ್ರೀಯ ಒಕ್ಕೂಟಗಳನ್ನ ಕಟ್ಟಿಕೊಳ್ಳಬೇಕು- ಇದು ನಾವು ಕ್ಯಾಂಕಮ್ ಶೃಂಗಸಭೆಯಿಂದ ಕಲಿತ ಪಾಠ; ಪ್ರತಿರೋಧವನ್ನ ಜಾಗತಿಕಗೊಳಿಸುವುದರ ಪ್ರಾಮುಖ್ಯತೆಯನ್ನ ಕ್ಯಾಂಕಮ್ ಶೃಂಗಸಭೆ ನಮಗೆ ತೋರಿಸಿಕೊಟ್ಟಿದೆ.

ತನಗೆ ತಾನೇ ಕಾರ್ಪೊರೇಟ್ ಜಾಗತೀಕರಣದ ವಿರುದ್ಧ ಸೆಟೆದು ನಿಲ್ಲಲು ಯಾವುದೇ ಒಂದು ಸ್ವತಂತ್ರ ದೇಶದಿಂದ ಸಾಧ್ಯವಿಲ್ಲ. ಈ ನಿಯೋ ಲಿಬರಲ್ ಯೋಜನೆಯ ವಿಷಯ ಬಂದಾಗ ನಮ್ಮ ಕಾಲದ ನಾಯಕರು ಕಣ್ಮರೆಯಾಗುವುದನ್ನ ಆಗಿಂದಾಗ್ಗೆ ಕಾಣುತ್ತಲೇ ಬಂದಿದ್ದೇವೆ. ಅಸಾಮಾನ್ಯ ಚರಿಷ್ಮಾ ಇರುವ ಮನುಷ್ಯರು ಪ್ರತಿರೋಧದ ಧೀರೋದ್ದಾತ ನಾಯಕರು ಅಧಿಕಾರ ಗಳಿಸಿ ಸರ್ಕಾರದ ಮುಖ್ಯಸ್ಥರಾಗುತ್ತಿದ್ದಂತೆ ಜಾಗತಿಕ ರಂಗದಲ್ಲಿ ದುರ್ಬಲರಾಗಿ ಕಾಣಿಸತೊಡಗುತ್ತಾರೆ. ನಾನು ಬ್ರೆಜಿಲ್ ದೇಶದ ಅಧ್ಯಕ್ಷ ಲೂಲಾ ಅವರ ಬಗ್ಗೆ ಯೋಚಿಸ್ತಿದೀನಿ. ಕಳೆದ ವರ್ಷದ ವಿಶ್ವ ಸಾಮಾಜಿಕ ವೇದಿಕೆಯಲ್ಲಿ ಅಧ್ಯಕ್ಷ ಲೂಲಾ ಧೀರೋದ್ದಾತ ನಾಯಕರಂತೆ ಕಂಗೊಳಿಸುತ್ತಿದ್ದರು. ಆದರೆ ಈ ವರ್ಷ ಅವರು ಐಎಮ್‌ಎಫ್ ನಿರ್ದೇಶನಗಳನ್ನ ಜಾರಿಗೊಳಿಸುವಲ್ಲಿ, ಪಿಂಚಣಿ ಕಡಿಮೆ ಮಾಡುವುದರಲ್ಲಿ ಮತ್ತು ಕಾರ್ಮಿಕ ಪಕ್ಷದ ತೀವ್ರಗಾಮಿಗಳನ್ನು ಹತ್ತಿಕ್ಕುವುದರಲ್ಲಿ ತುಂಬಾ ಬಿಜಿಯಾಗಿದ್ದಾರೆ. ದಕ್ಷಿಣ ಆಫ್ರಿಕಾದ ಹಿಂದಿನ ಅಧ್ಯಕ್ಷರಾಗಿದ್ದ ನೆಲ್ಸನ್ ಮಂಡೇಲಾ ಅವರ ಬಗ್ಗೆ ಕೂಡಾ ಯೋಚಿಸ್ತಿದೀನಿ. ೧೯೯೪ರಲ್ಲಿ ಅಧ್ಯಕ್ಷರಾಗಿ ಅವರು ಅಧಿಕಾರ ವಹಿಸಿಕೊಂಡ ಎರಡೇ ವರ್ಷಗಳಲ್ಲಿ ಮಾರುಕಟ್ಟೆ ದೇವಿಯ ಪದತಲದಲ್ಲಿ ಕೇವಿಯಟ್ ಅರ್ಜಿ ಹಾಕಿಕೊಂಡರು. ಅವರು ಕೈಗೊಂಡ ಅಗಾಧ ಖಾಸಗೀಕರಣ ಯೋಜನೆ ಮತ್ತು ರಾಚನಿಕ ಹೊಂದಾಣಿಕೆ ಕಾರ್ಯಕ್ರಮಗಳು ಮಿಲಿಯಗಟ್ಟಳೆ ಜನರ ಕೆಲಸ ಕಿತ್ತುಕೊಂಡು ಬೀದಿಗೆ ತಳ್ಳಿದವು; ಜನ ನೀರು ಮತ್ತು ವಿದ್ಯುತ್ ಸೌಕರ್ಯಗಳಿಲ್ಲದೆ ಪರಿತಪಿಸಬೇಕಾಯಿತು.

ಯಾಕೆ ಹೀಗಾಗುತ್ತದೆ? ವಂಚನೆಯ ಭಾವನೆಯಿಂದ ಎದೆಬಡಕೊಳ್ಳೋದರಲ್ಲಿ ಅಂತದೇನೂ ಇಲ್ಲ. ಯಾವುದೇ ರೀತಿ ನೋಡಿದರೂ ಅಧ್ಯಕ್ಷ ಲೂಲಾ ಮತ್ತು ಮಂಡೇಲಾ ಅದ್ಭುತ ಮನುಷ್ಯರು. ಆದರೆ ಅವರು ವಿರೋಧದ ಹೊಸಿಲು ದಾಟಿ ಆಳುವ ಸರ್ಕಾರದ ಭಾಗವಾಗುತ್ತಿದ್ದಂತೆ ಬೆದರಿಕೆಗಳ ಒತ್ತೆಯಾಳುಗಳಾಗಿಬಿಡುತ್ತಾರೆ; ಇದರ ಪೈಕಿ ತುಂಬಾ ಗಂಭೀರವಾದ್ದೆಂದರೆ capital flight ನ ಬೆದರಿಕೆ; ಯಾವುದೇ ಸರ್ಕಾರವನ್ನ ಇದು ರಾತ್ರಾನುರಾತ್ರಿ ಹಾಳು ಮಾಡುವಂತದು. ನಾಯಕನೊಬ್ಬನ ವೈಯಕ್ತಿಕ ತೇಜಸ್ಸು ಮತ್ತು ಹೋರಾಟದ ಚರಿತ್ರೆ ಕಾರ್ಪೊರೇಟ್ ಕಾರ್ಟೆಲನ್ನು ಮುಕ್ಕು ಮಾಡುತ್ತದೆ ಅಂತಾ ಕಲ್ಪಿಸಿಕೊಳ್ಳೋದ್ರಿಂದ ಬಂಡವಾಳಶಾಹಿ ಹ್ಯಾಗೆ ಕಾರ್ಯನಿರ್ವಹಿಸುತ್ತದೆ ಅನ್ನೋದನ್ನ ಅರ್ಥಮಾಡಿಕೊಂಡಂತಾಗುವುದಿಲ್ಲ. ತೀವ್ರ ಪರಿವರ್ತನೆ

ಅಂದರೆ ಅದು ಸರ್ಕಾರಗಳು ಒಪ್ಪಂದ ಅಥವಾ ಚೌಕಾಸಿ ಮೂಲಕ ಜಾರಿಗೆ ತರುವಂಥದಲ್ಲ. ಅದು ಜನರೇ ಕಟ್ಟಿಕೊಳ್ಳುವಂಥದ್ದು.

ಈ ವಾರ ವಿಶ್ವ ಸಾಮಾಜಿಕ ವೇದಿಕೆಯಲ್ಲಿ ಜಗತ್ತಿನ ವಿವಿಧ ಭಾಗಗಳಿಂದ ಬಂದಿರುವ ಚಿಂತಕರು ನಮ್ಮ ಸುತ್ತ ಏನಾಗುತ್ತಿದೆ ಎಂಬುದರ ಬಗ್ಗೆ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳುತ್ತಾರೆ. ಈ ಮಾತುಕತೆಗಳು, ನಾವು ಯಾವ ಬಗೆಯ ಜಗತ್ತಿಗಾಗಿ ಹೋರಾಡುತ್ತಿದ್ದೇವೋ ಆ ಜಗತ್ತಿನ ಬಗೆಗಿನ ನಮ್ಮ ಕಾಣ್ಕೆಗಳನ್ನು ಸೂಕ್ಷ್ಮಗೊಳಿಸುತ್ತವೆ. ಇದು ನಾವು ಮರೆತುಬಿಡುವಂಥ ಸಂಗತಿಯಲ್ಲ, ತುಂಬಾ ನಿರ್ಣಾಯಕವಾದದ್ದು. ನಿಜವಾದ ರಾಜಕೀಯ ಕ್ರಿಯಾಶೀಲತೆಗಾಗಿ ನಾವು ಇದನ್ನು ರೂಪಿಸಲು ದುಡಿದಿರುವಾಗ, ಜಾಗತಿಕ ನ್ಯಾಯಕ್ಕಾಗಿ WSF ವಹಿಸಿದ ನಿರ್ಣಾಯಾತ್ಮಕ ಪಾತ್ರ ನಮ್ಮ ಎದುರಾಳಿಗಳ ಅಸ್ತ್ರವಾಗಿಬಿಡುವ ಅಪಾಯವಿದೆ. ನಾವೀಗ ತುರ್ತಾಗಿ ಮಾತನಾಡಿಕೊಳ್ಳಬೇಕಾದ್ದು ಪ್ರತಿರೋಧದ ತಂತ್ರಗಾರಿಕೆ. ನಮ್ಮ ಗುರಿ ನಿಖರವಾಗಿರಬೇಕು, ನಿಜವಾದ ಸಮರಗಳನ್ನ ರೂಪಿಸಬೇಕು, ಹಾಲಿ ಇರುವ ಸಿದ್ಧ ಮಾದರಿಗಳನ್ನ ಪರಿಣಾಮಕಾರಿಯಾಗಿ ಭಂಗಗೊಳಿಸಬೇಕು.

ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಕೇವಲ ರಾಜಕೀಯ ರಂಗಭೂಮಿಕೆಯಲ್ಲ; ಧಿಕ್ಕರಿಸುವ ಸಣ್ಣ ಕ್ರಿಯೆಯಾಗಿ ಸಾವಿರಾರು ಭಾರತೀಯರು ಸಮುದ್ರ ತೀರಕ್ಕೆ ನಡೆದು ತಮ್ಮ ಉಪ್ಪನ್ನ ತಾವೇ ತಯಾರಿಸಿಕೊಂಡರು. ಉಪ್ಪಿನ ಮೇಲೆ ವಿಧಿಸಿದ ತೆರಿಗೆ ಕಾನೂನುಗಳನ್ನು ಉಲ್ಲಂಘಿಸಿದರು. ಇದು ಬ್ರಿಟಿಷ್ ಚಕ್ರಾಧಿಪತ್ಯದ ಆರ್ಥಿಕ ಗುಂಡಿಗೆಗಳ ಮೇಲೆ ನಡೆದ ನೇರದಾಳಿ; ಸಹಜವಾಗಿತ್ತು. ನಮ್ಮ ಆಂದೋಲನಗಳು ಕೆಲವು ಪ್ರಮುಖ ಗೆಲುವುಗಳನ್ನ ಕಂಡಿದ್ದರೂ ಅಹಿಂಸಾತ್ಮಕ ಪ್ರತಿರೋಧ ಪರಿಣಾಮಕಾರಿಯಲ್ಲದ ಒಳಿತಿನ ಭಾವನೆಗಳ ರಾಜಕೀಯ ರಂಗವಾಗದಂತೆ ನೋಡಿಕೊಳ್ಳಬೇಕು. ಇದು ಆಗಾಗ ಹರಿತ ಮಾಡಿಕೊಳ್ಳಬೇಕಾದ, ಹೊಸ ಹೊಸ ಕಾಲ್ಪನಿಕತೆಗಳನ್ನ ಕಟ್ಟಿಕೊಳ್ಳುತ್ತಿರುವಂಥ ಅಮೂಲ್ಯ ಅಸ್ತ್ರವಾಗಬೇಕು. ಇದು ಮಾಧ್ಯಮಗಳಿಗೆ ಒದಗಿಬರುವ ಕೇವಲದ ಭಾವಚಿತ್ರವಾಗಿ ಭ್ರಷ್ಟಗೊಳ್ಳಬಾರದು.



> **ದಕ್ಷಿಣ ಆಫ್ರಿಕಾದ ಹಿಂದಿನ ಅಧ್ಯಕ್ಷರಾಗಿದ್ದ ನೆಲ್ಸನ್ ಮಂಡೇಲಾ ೧೯೯೪ರಲ್ಲಿ ಅಧಿಕಾರ ವಹಿಸಿಕೊಂಡ ಎರಡೇ ವರ್ಷಗಳಲ್ಲಿ ಮಾರುಕಟ್ಟೆ ದೇವಿಯ ಪದತಲದಲ್ಲಿ ಕೇವಿಯಟ್ ಅರ್ಜಿ ಹಾಕಿಕೊಂಡರು. ಅವರು ಕೈಗೊಂಡ ಅಗಾಧ ಖಾಸಗೀಕರಣ ಯೋಜನೆ ಮತ್ತು ರಾಚನಿಕ ಹೊಂದಾಣಿಕೆ ಕಾರ್ಯಕ್ರಮಗಳು ಮಿಲಿಯಗಟ್ಟಳೆ ಜನರ ಕೆಲಸ ಕಿತ್ತುಕೊಂಡು ಬೀದಿಗೆ ತಳ್ಳಿದವು; ಜನ ನೀರು ಮತ್ತು ವಿದ್ಯುತ್ ಸೌಕರ್ಯಗಳಿಲ್ಲದೆ ಪರಿತಪಿಸಬೇಕಾಯಿತು.**

ಕಳೆದ ವರ್ಷ ಫೆಬ್ರವರಿ ೧೫ ರಂದು ನಾಗರಿಕ ಸಮಾಜದ ನೈತಿಕತೆಯ ಎಚ್ಚರದಂತೆ ೫ ಉಪಕಸುಬುಗಳಿಗೆ ಸೇರಿದ ೧೦ ಮಿಲಿಯನ್ ಜನ ಇರಾಕ್ ಮೇಲಿನ ದಾಳಿ ವಿರುದ್ಧ ಪ್ರತಿಭಟನೆ ನಡೆಸಿದರು. ಇದು ಅದ್ಭುತ. ಆದರೆ ಇದಿಷ್ಟೇ ಸಾಲದು. ಫೆಬ್ರವರಿ ೧೫ ವಾರದ ಕೊನೆಯ ದಿನ ಕೆಲಸಕ್ಕೆ ಒಂದು ದಿನ ರಜೆ ಹಾಕುವ ಪ್ರಮೇಯ ಯಾರಿಗೂ ಇರಲಿಲ್ಲ. ರಜಾದಿನದ ಪ್ರದರ್ಶನಗಳಿಂದ ಯುದ್ಧ ನಿಲ್ಲಿಸಲು ಸಾಧ್ಯವಿಲ್ಲ. ಇದು ಆ ಜಾರ್ಜ್ ಬುಷ್‌ಗೆ ಗೊತ್ತು. ಇಷ್ಟು ಶಕ್ತಿಶಾಲಿ ನಾಗರಿಕ ಪ್ರತಿಭಟನೆ ಅಭಿಪ್ರಾಯವನ್ನ ಧಿಕ್ಕರಿಸಿದ ಆತನ ಆತ್ಮವಿಶ್ವಾಸ ನಮ್ಮ ಮುಂದಿನ ಪ್ರತಿಭಟನೆಗಳಿಗೆ ಪಾಠವಾಗಬೇಕು. ಇರಾಕಿನ ಮೇಲೆ ಆಕ್ರಮಣ ಮಾಡಿ ಅದನ್ನ ವಸಾಹತೀಕರಿಸಿಕೊಳ್ಳಬಹುದೆಂದು ಬುಷ್ ಖಚಿತವಾಗಿ ನಂಬಿದ್ದ. ಆಫ್‌ಘಾನಿಸ್ತಾನ, ಚೆಚೆನ್ಯಾದಲ್ಲಿ ಆಗಿರುವಂತೆ, ಹಿಂದೆ ಪೂರ್ವ ಥೈಮರ್ ದ್ವೀಪದಲ್ಲಿ ಆದಂತೆ, ಪ್ಯಾಲೆಸ್ಟೀನ್‌ನಲ್ಲಿ ಈಗಲೂ ಆಗುತ್ತಿರುವಂತೆ ಆತ ಮಾಡಬೇಕಾದ್ದು ಇಷ್ಟೇ. ಬಿಕ್ಕಟ್ಟಿನಲ್ಲಿರುವ ಮಾಧ್ಯಮಗಳು ಈ ಬಿಕ್ಕಟ್ಟಿನ ಮೂಳೆ ಕೊರೆಯುತ್ತಾ ನಂತರ ಅಷ್ಟಕ್ಕೇ ಕೈ ಬಿಟ್ಟು ಮತ್ತೊಂದಕ್ಕೆ ಕೈ ಹಾಕುವ ತನಕ ಕಾಯುವುದು. ಆದಷ್ಟು ಬೇಗ ಆ ಕಳೇಬರ best seller ಪಟ್ಟಿಯಿಂದ ಜಾರಿಕೊಳ್ಳುತ್ತದೆ; ಹತಾಷರಾದ ನಾವು ಆಸಕ್ತಿ ಕಳೆದುಕೊಂಡಿರುತ್ತೇವೆ ಅಂತಾ ಆತನ ನಂಬಿಕೆ.

ಈ ನಮ್ಮ ಆಂದೋಲನಕ್ಕೆ ದೊಡ್ಡ ಜಾಗತಿಕ ವಿಜಯ ಬೇಕು. ಕೆಲವು ಸಲ ನಮ್ಮ ಇಚ್ಛಾಶಕ್ತಿಯನ್ನ ಒರೆಗಲ್ಲಿಗೆ ಹಚ್ಚಿ ನೋಡಲಿಕ್ಕಾದರೂ ಏನಾದರೊಂದು ಗೆಲುವು ಸಾಧಿಸುವುದು ಅವಶ್ಯಕ. ಹೀಗೆ ಯಾವುದಾದರೊಂದು ಗೆಲುವಿಗಾಗಿ ಇಲ್ಲಿ ಸೇರಿರುವ ನಾವು, ಕೊಂಚ ದೂರದಲ್ಲಿ 'ಮುಂಬೈ ಪ್ರತಿರೋಧ ವೇದಿಕೆ' ಯಲ್ಲಿರುವವರು ಸೇರಿ ಯಾವುದಾದರೊಂದು ಸಮಾನ ಒಪ್ಪಂದಕ್ಕೆ ಬರಬೇಕು. ಯಾವುದೇ ವಿಷಯ, ತಾತ್ವಿಕತೆಗಳು ಪೂರ್ವನಿಶ್ಚಿತ ತಾತ್ವಿಕತೆಗಳಾಗಬಾರದು; ಅದಕ್ಕೆ ನಾವು ಸದಾ ಆತುಕೊಂಡಿರಬಾರದು. ಖುಷಿಯಾದ ಬಣಗಳನ್ನ ರೂಪಿಸಿಕೊಳ್ಳಬೇಕು, ಸದಾ ವಾದ ವಿವಾದಿಯಾಗಿರಬೇಕು ಎಂಬ ಹಂಗುಗಳಿರಬಾರದು. ಅಥವಾ ಯಾವುದಾದರೊಂದು ಪ್ರತಿರೋಧಕ್ಕೆ ಪ್ರಶ್ನಾತೀತವಾಗಿ ಆತುಕೊಂಡಿರಬೇಕು ಅಂತಲೂ ಇಲ್ಲ. ಇದರಿಂದ ಉಳಿದೆಲ್ಲವನ್ನೂ ಹೊರತುಪಡಿಸುವ ಅವಶ್ಯಕತೆ ಕೂಡಾ ಇಲ್ಲ. ಇದು ಸಮಾನ ಕನಿಷ್ಠ ಕಾರ್ಯಕ್ರಮವಾಗಿ ರೂಪುಗೊಳ್ಳ ಬೇಕು.

ನಾವೆಲ್ಲರೂ , ಸಾಮ್ರಾಜ್ಯಶಾಹಿಗೆ ವಿರೋಧಿಗಳಾಗಿರುವುದಾದರೆ ಪಶ್ಚಿಮದ ನಿಯೊಲಿಬರಲಿಸಂ ನ ವಿರೋಧಿಗಳಾಗಿರುವುದಾದರೆ ನಾವೀಗ ಇರಾಕನ್ನ ನೋಡಬೇಕು. ಇರಾಕ್ ಈ ಎರಡರ ಸಮ್ಮಿಶ್ರ ಫಲ. ಸದ್ದಾಂ ಹುಸೇನರ ಸೆರೆಯ ನಂತರ ಅಸಂಖ್ಯಾತ ಯುದ್ಧ ವಿರೋಧಿ ಚಳವಳಿಗಾರರು ಗೊಂದಲ ಮಾಡಿಕೊಂಡು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ.

ಅಮೆರಿಕ ಸೈನಿಕ ಪಡೆ ಸದ್ದಾಂ ಹುಸೇನರನ್ನ ಸೆರೆ ಹಿಡಿದಿದ್ದನ್ನ ಶ್ಲಾಘಿಸುವುದೆಂದರೆ ಅದರ ಆಕ್ರಮಣವನ್ನ ಮಾನ್ಯ ಮಾಡಿದಂತೆ. ಸಾಮ್ರಾಜ್ಯಶಾಹಿಗೆ ವಿರೋಧಿಯಾಗಿರುವುದಾದರೆ ನಾವು ಅಮೆರಿಕದ ಆಕ್ರಮಣದ ವಿರೋಧಿಗಳು, ಅಮೆರಿಕ ಇರಾಕ್‌ನಿಂದ ತನ್ನ ಸೈನಿಕ ಪಡೆಗಳನ್ನ ಹಿಂದಕ್ಕೆ ಕರೆಸಿಕೊಂಡು ಯುದ್ಧದಿಂದಾದ ಜೀವ ಹಾನಿ, ಆಸ್ತಿ-ಪಾಸ್ತಿ ನಾಶಕ್ಕೆ ನ್ಯಾಯಯುತ ಪರಿಹಾರ ಕೊಡಬೇಕು ಅಂತಾ ನಂಬಿದ್ದೇನೆ.

ಹಾಗಾದರೆ ಯಾವ ಬಗೆಯ ಪ್ರತಿರೋಧ ಒಡ್ಡಬಹುದು? ಅದನ್ನ ಸಣ್ಣದೊಂದು ಸಂಗತಿ ಮೂಲಕ ಪ್ರಾರಂಭಿಸಬಹುದು. ಇದು ಇರಾಕಿನ ಪ್ರತಿರೋಧ ಚಳವಳಿಗಳಿಗೆ ಬೆಂಬಲ ಸೂಚಿಸುವುದಲ್ಲ, ಈ ಪ್ರತಿರೋಧವನ್ನ ಯಾರು ರೂಪಿಸುತ್ತಿದ್ದಾರೆ ಅಂತಾ ಚರ್ಚಿಸುವುದೂ ಅಲ್ಲ; ಅವರು ಹಳೆಯ ಕೊಲೆಗಾರ ಬಾತಿಸ್ಟರೊ? ಇಸ್ಲಾಮಿಕ್ ಮೂಲಭೂತವಾದಿಗಳೋ? ಪ್ರಶ್ನೆ ಅದಲ್ಲ. ನಾವು ಆಕ್ರಮಣದ ವಿರುದ್ಧ ಜಾಗತಿಕ ಪ್ರತಿರೋಧವಾಗಬೇಕು. ನಮ್ಮ ಪ್ರತಿರೋಧ ಪ್ರಾರಂಭವಾಗಬೇಕಾದ್ದು ಇರಾಕನ್ನು ಆಕ್ರಮಿಸಿಕೊಂಡಿರುವ ಅಮೆರಿಕದ ಮಾನ್ಯತೆಯನ್ನು ತಿರಸ್ಕರಿಸುವುದರ ಮೂಲಕ. ಅಂದರೆ ಚಕ್ರಾಧಿಪತ್ಯ ತನ್ನ ಉದ್ದೇಶಗಳನ್ನ ಸಾಧಿಸಿಕೊಳ್ಳದಂತೆ ನಾವು ಕ್ರಿಯಾಶೀಲರಾಗಬೇಕು; ಅಂದರೆ ಸೈನಿಕರು ಕಾದಾಡಲು ತಿರಸ್ಕರಿಸಬೇಕು, ಕೆಲಸಗಾರರು ಹಡಗು, ವಿಮಾನಗಳಿಗೆ ಶಸ್ತ್ರಾಸ್ತ್ರ ಲೋಡು ಮಾಡುವುದನ್ನು ತಿರಸ್ಕರಿಸಬೇಕು. ಇರಾಕನ್ನು ದುರಸ್ತಿ ಮಾಡಲು ಅಲ್ಲಿಗೆ ಭಾರತ ಮತ್ತು ಪಾಕಿಸ್ತಾನಗಳ ಸೈನಿಕರನ್ನ ಕಳಿಸುವ ಅಮೆರಿಕದ ಯೋಜನೆಗಳನ್ನು ತಡೆಯಬೇಕು.

ವಿಶ್ವ ಸಾಮಾಜಿಕ ವೇದಿಕೆ ಮತ್ತು ಮುಂಬೈ ಪ್ರತಿರೋಧಿ ವೇದಿಕೆಗಳ ಜಂಟಿ ಮುಕ್ತಾಯ ಸಮಾರಂಭದಲ್ಲಿ ಇರಾಕಿನ ನಾಶದಿಂದ ಲಾಭ ಗಳಿಸುತ್ತಿರುವ ಎರಡು ದೊಡ್ಡ ಕಂಪನಿಗಳನ್ನ ಗುರುತಿಸುವಂತಾಗಬೇಕು, ನಂತರ ಅವರು ಭಾಗೀದಾರರಾಗಿರುವ ಪ್ರತಿಯೋಜನೆಗಳನ್ನ ಗುರುತಿಸಬೇಕು. ಜಗತ್ತಿನಾದ್ಯಂತ ಎಲ್ಲ ದೇಶ ನಗರಗಳಲ್ಲಿರುವ ಅವರ ಕಚೇರಿಗಳನ್ನ ಗುರುತಿಸಬೇಕು. ಅವುಗಳ ಹಿಂದೆ ಬಿದ್ದು ಅವುಗಳ ಬಾಗಿಲು ಮುಚ್ಚಿಸಬೇಕು. ನಮ್ಮ ಹಿಂದಿನ ಹೋರಾಟಗಳ ಸಾಮುದಾಯಿಕ ಜಾಣ್ಮೆ ಮತ್ತು ಅನುಭವಗಳನ್ನ ಒಟ್ಟಿಗೆ ಕಲೆ ಹಾಕುವ ಪ್ರಯತ್ನ ನಡೆಯಬೇಕು. ಒಂದೇ ಒಂದು ಗುರಿ ಮುಟ್ಟಲು; ಇದು ಗೆಲುವಿನ ಬಯಕೆಯ ಪ್ರಶ್ನೆ. ಹೊಸ ಅಮೆರಿಕದ ಶತಮಾನ ಸ್ಥಾಪನೆ ಎಂದರೆ ಅಸಮತೆಯನ್ನ ತೀವ್ರಗೊಳಿಸಿ ಎಷ್ಟು ಬೆಲೆ ತೆತ್ತಾದರೂ ಸರಿ ಅಮೆರಿಕದ ಒತ್ತುವರಿ ನೀತಿಯ ಪ್ರತಿಷ್ಠಾಪನೆ ಎಂದರ್ಥ; ಅದು ಪ್ರಳಯಾಂತಿಕವಾಗಿದ್ದರೂ ಸರಿ. ವಿಶ್ವಸಾಮಾಜಿಕ ವೇದಿಕೆ ನ್ಯಾಯ ಮತ್ತು ಉಳಿವಿನ ಅವಕಾಶಗಳಿಗಾಗಿ ಒತ್ತಾಯಿಸುತ್ತದೆ.

(ಮುಂಬೈನಲ್ಲಿ ನಡೆದ ವಿಶ್ವ ಸಾಮಾಜಿಕ ವೇದಿಕೆಯಲ್ಲಿ ಮಾಡಿದ ಉಪನ್ಯಾಸ) □

(.... ೧೪ನೇ ಪುಟದಿಂದ)

ಸಾಮಾಜಿಕ ಪ್ರತಿಫಲಗಳನ್ನು ದೊರಕಿಸಿದಾಗ ಮಾತ್ರ. ಉದಾಹರಣೆಗಾಗಿ : ಜನರು ಕಸುಬು, ಉದ್ಯೋಗ ಅಥವಾ ವೃತ್ತಿ ವ್ಯಾಪಾರೋದ್ಯಮ ಬೇಸಾಯಗಳಲ್ಲಿ ಭಾಗವಹಿಸಿದಾಗ ಅವರಿಗೆ ಆದಾಯ ಬರುವುದುಂಟು.

ಆರ್ಥಿಕ ಪ್ರತಿಫಲವಿಲ್ಲದ ಚಟುವಟಿಕೆಗಳೆಂದರೆ ಗೃಹಕೃತ್ಯ, ಮನೆಗೆಲಸ, ಅಡುಗೆ ಮಾಡುವುದು, ಸ್ವಚ್ಛತಾ ಕಾರ್ಯ, ಮಗುವಿನ ಆರೈಕೆ - ಪಾಲನೆ, ಪೋಷಣೆ, ಸಮಾಜ ಸೇವೆ (ಸ್ವಯಂ) ಬರೆಯುವುದು, ಚಿತ್ರಕತೆ, ಸಂಗೀತ. ಈ ಚಟುವಟಿಕೆಗಳು ಯಾವ ಆರ್ಥಿಕ ವರಮಾನ ನೀಡುವುದಿಲ್ಲವಾದರೂ ಅವುಗಳನ್ನು ಕಾಯಕವೆಂದು ಪರಿಗಣಿಸಲು ಅವು ಫಲದಾಯಕ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ವಂತಿಕೆಯನ್ನು, ಕೊಡುಗೆ ಯನ್ನು ಸಲ್ಲಿಸುತ್ತವೆ.

ಕಸುಬುಗಳಾದ ಪ್ರಾಣಿಗಳ ಕ್ರೂರವಧೆ, ಮದ್ಯ, ಭಿಕ್ಷೆ ಬೇಡುವುದು, ವ್ಯಭಿಚಾರಗಳು ಉತ್ಪಾದನಾ ಕಾರ್ಯಗಳೆಂದು ಅರಿತರೂ ಅವು ಕಾಯಕವೆಂದು ತಿಳಿಯಲಾಗುವುದಿಲ್ಲ, ಯಾಕೆಂದರೆ ಈ ಕಾರ್ಯಗಳು ಹಿಂಸೆ ಚಟುವಟಿಕೆಯಾಗಿ ವ್ಯಕ್ತಿ ಮತ್ತು ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತವೆ. ವ್ಯಕ್ತಿ ಮತ್ತು ಸಮಾಜಕ್ಕೆ ಹಿತಕಾರಿಯಾದ ಚಟುವಟಿಕೆಗಳನ್ನು ಮಾತ್ರ ಕಾಯಕವೆಂದು ಕರೆಯಬಹುದು.

೩. ದುಡಿಮೆಯ ಗೌರವ

ಕಾಯಕ ಸಿದ್ಧಾಂತವು, ಕಸುಬು ಉದ್ಯೋಗ ಮತ್ತು ದುಡಿಮೆಗೆ ಗೌರವಿಸುತ್ತದೆ. ಎಲ್ಲ ಕಾರ್ಯ ಚಟುವಟಿಕೆಗೆ ಮೇಲ್ದರ್ಜೆ ಅಥವಾ ಕೆಳದರ್ಜೆಯಾಗಿದ್ದರೂ ಅವೆಲ್ಲವುಗಳು ಸರಿಸಮಾನವಾಗಿವೆ. ಅವು ಸಾರ್ವಜನಿಕವಾಗಿ ಯಾವುದೇ ಮೇಲಿನ ಅಥವಾ ಕೆಳಗಿನ ಅಂತಸ್ತುಗಳಾಗಿದ್ದರೂ ಅವುಗಳಿಗೆ ಸಮಾಜದಲ್ಲಿ ತಮ್ಮದೇ ಆದ ಸ್ಥಾನಗಳಿವೆ.

ಉಚ್ಛ ಅಥವಾ ಕೆಳಗಿನ ಮಟ್ಟಗಳೆಂಬ ಪರಿಕಲ್ಪನೆಗಳು ಪೂರಕವಾಗಿವೆ. ಕಸ ಗುಡಿಸುವವನು ಮತ್ತು ಮೊಚ್ಚೆಗಾರನು, ಧರ್ಮೋಪದೇಶಕನಷ್ಟು ಮಹತ್ವದ ವ್ಯಕ್ತಿಗಳು ಕೆಳಮಟ್ಟದ ಕಾರ್ಯಗಳನ್ನು ಒಳ್ಳೇ ರೀತಿಯಿಂದ ಕೈಗೊಂಡಾಗ ಮಾತ್ರ ಅವುಗಳಿಗೆ ಗೌರವ ಮತ್ತು ಮನ್ನಣೆ ಬರುವುದು. ಕಾರ್ಯರಂಗದ ಚಟುವಟಿಕೆಗಳಲ್ಲಿ ವಿವಿಧ ಬಗೆಯ ಕ್ರಮಾಗತ ವ್ಯವಸ್ಥೆಯಿಲ್ಲವೆಂದು ಹೇಳಲಾಗದು. ಮಾನವನ ಸಂಪನ್ಮೂಲಗಳು ಮತ್ತು ದತ್ತಿ ಕಾರ್ಯಗಳಲ್ಲಿಯೂ ಕ್ರಮಾಗತ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಮನುಷ್ಯನ ಚಟುವಟಿಕೆಗಳನ್ನು ಮತ್ತು ಉದ್ಯೋಗಗಳನ್ನು ಉಚ್ಚ ಮತ್ತು ಕೆಳಮಟ್ಟದ ಪಾತ್ರ ಮತ್ತು ಅಂತಸ್ಥಗಳೆಂದು ತಿಳಿಯಬಹುದು.

ಒಬ್ಬ ಅಧಿಕಾರಿಯು ಸೇವಕ ಅಥವಾ ಕಸ ಗುಡಿಸುವ ಆದಾಯ ಸಂಪಾದನೆ ಮತ್ತು ದತ್ತವಾದ ಅಧಿಕಾರದಿಂದ ಅದಕ್ಕಿಂತ ಮೇಲ್ಪಟ್ಟವನೆಂದು ತಿಳಿಯುತ್ತಾರೆ. ಸಾಮಾಜಿಕ ಪದ್ಧತಿಯಲ್ಲಿ ಈ ತೆರನಾದ ಕ್ರಮಾಗತವಾದ ವ್ಯವಸ್ಥೆ ಅನಿವಾರ್ಯವಾಗಿ ಅವಶ್ಯಕತೆ ಎನಿಸುವುದು. ಅಧಿಕಾರಿ ಮತ್ತು ಸೇವಕನು ಆ ಅಧಿಕಾರ ಪರಿವ್ಯಾಪ್ತಿಯಲ್ಲಿ ಪೂರಕ ಭಾಗಗಳಾಗಿವೆ. ಸೇವಕನ ಅಥವಾ ಕಸಗುಡಿಸುವವನಿಗೆ ತಮ್ಮದೇ ವಿಶಿಷ್ಟ ಕಾರ್ಯಚಟುವಟಿಕೆಯ ಸ್ಥಾನವಿದ್ದರೆ, ಅವರಿಗೂ ಅಂತಸ್ತು, ಗೌರವ ಮತ್ತು ಅಧಿಕಾರ ಎಂಬ ಕೆಳಮಟ್ಟ ಪಾತ್ರಗಳಿಗೆ ಯೋಗ್ಯವಾದ ಅಂತಸ್ತನ್ನು ದಯಪಾಲಿಸಿದಾಗ ಎಲ್ಲ ಆಡಳಿತ ಪದ್ಧತಿ ಸುಗಮವಾಗಿ ಮುಂದುವರೆಯುವುದು.

ಕಾರ್ಮಿಕರಿಗೆ ಅಗೌರವ ಮಾಡಿದಾಗ ಕೆಲಸಕ್ಕೆ ತೊಂದರೆ ಬಂದು ಅನೈಕ್ಯತೆ ಮತ್ತು ಸಮಾಜ ದ್ರೋಹದ ಕಾರ್ಯಗಳಿಗೆ ಚಾಲನೆ ನೀಡಿದಂತಾಗುವುದು. ವ್ಯತಿರಿಕ್ತವಾಗಿ ದುಡಿಮೆಗೆ ಅಗೌರವ ತೋರಿಸಿದಾಗ ಕೆಲಸಗೇಡಿತನ ಮತ್ತು ಬಡತನಗಳು ಆಧುನಿಕ ಭಾರತದ ಯುವಕರಲ್ಲಿ ವೃದ್ಧಿಸುವುದಾಗಿದೆ. ಯಾವುದೇ ದುಡಿಮೆ ಉಚ್ಛ ಅಥವಾ ಕೆಳಮಟ್ಟದ್ದಾಗಿದ್ದರೂ ಅದರಲ್ಲಿ ಈ ವ್ಯಕ್ತಿಯ ಚೈತನ್ಯ ಶಕ್ತಿಯು ವಿನಿಯೋಗವಿರುವುದರಿಂದ ಅದನ್ನು ಕಾಯಕವೆಂದು ಪರಿಗಣಿಸಬೇಕಾಗುತ್ತದೆ. ಎಲ್ಲ ತರದ ದುಡಿಮೆಗಳು ಪವಿತ್ರವಾದ ಕರ್ತವ್ಯಗಳಾಗಿದ್ದು ಅವು ಸಾಮಾಜಿಕ ಮತ್ತು ನೈತಿಕ ಋಣಗಳೆಂದು ಮತ್ತು ಪರಮಾತ್ಮನ ಸೇವೆಯೆಂದು ತಿಳಿಯಬೇಕಾಗುವುದು.

ಸಂಘಟನೆಗಳ ಕಾರ್ಯಚಟುವಟಿಕೆಗಳ ಬಗ್ಗೆ ಚಿಂತನ ಕಾರ್ಯ ಕೈಗೊಂಡಾಗ ನಮಗೆ ಕಂಡುಬರುವುದೆಂದರೆ ಕೆಳದರ್ಜೆಯ ಕಾರ್ಮಿಕರ ನಕಾರಾತ್ಮಕ ಧೋರಣೆಯಿಂದ ನೋಡಿದಾಗ ಮತ್ತು ಅವರಿಗೆ ಯೋಗ್ಯವಾದ ಮಾನ ಮರ್ಯಾದೆ ಕೊಡದಿದ್ದಾಗ ಆರ್ಥಿಕ ವ್ಯವಸ್ಥೆಗೆ ಬಿಕ್ಕಟ್ಟು ಉಂಟಾಗುವುದು. ಕಾರ್ಮಿಕರಿಗೆ ಯೋಗ್ಯ ಗೌರವವನ್ನು ನೀಡಿದಾಗ ಸಾಮರಸ್ಯವನ್ನು ಸಾಧಿಸಿದಂತಾಗುವುದು. ಇದರಿಂದ ದುಡಿಮೆಯ ವಾತಾವರಣವನ್ನು ನಿರ್ಮಿಸಿ ಸಾಮಾಜಿಕ ಚಲನವಲನ ಮತ್ತು ಪರಿವರ್ತನೆಯನ್ನು ತರಬಹುದು.

ಕಾರ್ಮಿಕರಿಗೆ ಅಗೌರವ ಮಾಡಿದಾಗ ಕೆಲಸಕ್ಕೆ ತೊಂದರೆ ಬಂದು ಅನೈಕ್ಯತೆ ಮತ್ತು ಸಮಾಜ ದ್ರೋಹದ ಕಾರ್ಯಗಳಿಗೆ ಚಾಲನೆ ನೀಡಿದಂತಾಗುವುದು. ವ್ಯತಿರಿಕ್ತವಾಗಿ ದುಡಿಮೆಗೆ ಅಗೌರವ ತೋರಿಸಿದಾಗ ಕೆಲಸಗೇಡಿತನ ಮತ್ತು ಬಡತನಗಳು ಆಧುನಿಕ ಭಾರತದ ಯುವಕರಲ್ಲಿ ವೃದ್ಧಿಸುವುದಾಗಿದೆ. ಯಾವುದೇ ದುಡಿಮೆ ಉಚ್ಛ ಅಥವಾ ಕೆಳಮಟ್ಟದ್ದಾಗಿದ್ದರೂ ಅದರಲ್ಲಿ ಈ ವ್ಯಕ್ತಿಯ ಚೈತನ್ಯ ಶಕ್ತಿಯು ವಿನಿಯೋಗವಿರುವುದರಿಂದ ಅದನ್ನು ಕಾಯಕವೆಂದು ಪರಿಗಣಿಸಬೇಕಾಗುತ್ತದೆ.

೪. ದುಡಿಮೆ ಎಂದರೆ ದಾಸೋಹ

ಯಾವುದೇ ದುಡಿಮೆಯಲ್ಲಿ ಶಕ್ತಿವಿನಿಯೋಗವಾಗಿ ಸಮಾಜದ ಹಿತಕ್ಕಾಗಿ ಸೃಜನಾತ್ಮಕ ಮತ್ತು ಫಲದಾಯಕವನ್ನು ಸಾಧಿಸಿದರೂ ಅದು ತನ್ನಷ್ಟಕ್ಕೆ ತಾನೇ ಕಾಯಕವೆನಿಸುವುದಿಲ್ಲ. ದಾಸೋಹ ಭಾವನೆಯಿಂದ ತನಗಾಗಿ ಮತ್ತು ಪರರ ಹಿತಕ್ಕಾಗಿ ದುಡಿಮೆ ಮಾಡುವುದು ಕಾಯಕವೆಂದು ಹೇಳಬಹುದು. ವ್ಯಕ್ತಿಯು ತನ್ನನ್ನು ಸಮಾಜದ ಚೌಕಟ್ಟಿನಿಂದ ಭಿನ್ನವೆಂದು ಭಾವಿಸದೇ ಈ ವಿಶಾಲವಾದ ಸಮಾಜದ ಒಂದು ಅಂಗವೆಂದು ತಿಳಿಯಬೇಕಾಗುವುದು. ಕಾಯಕದ ತತ್ವವೆಂದರೆ ಮಾನವನ ಜೀವನವೆಂಬುದು ಪರಮಾತ್ಮನಿಂದ ದಯಪಾಲಿಸಲ್ಪಟ್ಟ ಒಂದು ಕಾಣಿಕೆ ಅಥವಾ ಕೊಡುಗೆಯಾಗಿದೆ.

ಎಲ್ಲ ತರದ ದುಡಿಮೆಗಳು ಪವಿತ್ರವಾದ ಕರ್ತವ್ಯಗಳಾಗಿದ್ದು ಅವು ಸಾಮಾಜಿಕ ಮತ್ತು ನೈತಿಕ ಋಣಗಳೆಂದು ಮತ್ತು ಪರಮಾತ್ಮನ ಸೇವೆಯೆಂದು ತಿಳಿಯಬೇಕಾಗುವುದು. ಒಟ್ಟಾರೆ ಹೇಳಬೇಕಾದರೆ ನಾವು ಮಾಡುವ ಎಲ್ಲ ಕಾರ್ಯಗಳಲ್ಲಿ ಶಕ್ತಿ ವ್ಯಯವಾಗಿ ಲೌಕಿಕ ಸಂಪತ್ತನ್ನು ಪಡೆದು ಪರಮಾತ್ಮನಿಗೆ ಸಲ್ಲಿಸಿದ ಸೇವೆಯೆಂದು ಗ್ರಹಿಸಿದಾಗ ಅದಕ್ಕೆ ನಿಜವಾದ ಅರ್ಥ ಬರುವುದು.

ಒಂದು ವಿಷಯವನ್ನು ನಾವು ಅವಲೋಕಿಸಬಹುದು. ಕಾಯಕ ತತ್ವ ಸಿದ್ಧಾಂತವು ಲಿಂಗಾಯತ ಧರ್ಮದಲ್ಲಿ ಕ್ರಮಬದ್ಧವಾಗಿ ಸಾಂಸ್ಕೃತಿಕ ಸಿದ್ಧಾಂತವಾಗಿ ಮೂಡಿಬರಲಾದ ಕಾರಣ ಬ್ರಾಹ್ಮಣಿಕೆಯ ಕರ್ಮಸಿದ್ಧಾಂತ ಮತ್ತು ಧಾರ್ಮಿಕ ಕ್ರಿಯೆಗಳ ಪ್ರಭಾವದಿಂದ ಧಾರ್ಮಿಕ ಸಂಸ್ಥೆಗಳೂ ಮತ್ತು ಮಠಗಳು ಇಂದು ಸ್ವಹಿತಾಸಕ್ತಿಯ ಕೇಂದ್ರಗಳಾಗಿ ಪರಿವರ್ತನೆಗೊಂಡಿವೆ. ಸ್ವಾಮಿಗಳು ಮತ್ತು ಜಂಗಮ ಮಠಾಧೀಶರು ತಮ್ಮ ಅಧಿಕಾರ, ಗೌರವ ಮತ್ತು ಅಂತಸ್ತುಗಳನ್ನು ರಕ್ಷಿಸುವುದರಲ್ಲಿ ನಿರತರಾಗಿದ್ದಾರೆ. ಮತ್ತು ಅಮುಕ್ತ ಆಧ್ಯಾತ್ಮಿಕ ಬೋಧನೆಯಲ್ಲಿ ತೊಡಗಿದ್ದಾರೆ. ಮಠಾಧೀಶರು ಮತ್ತು ಪೀಠಾಧಿಕಾರಿಗಳು, ಬಸವಣ್ಣನವರು ಬೋಧಿಸಿದ ಕಾಯಕ ತತ್ವ ಸಿದ್ಧಾಂತ'ವನ್ನು ಶುಚಿತ್ವವಾಗಿ ಗ್ರಹಿಸಿದ್ದಾರೆಂದು ಗೋಚರಿಸುವುದಿಲ್ಲ.

Bibilography

1. Bali A.P. : "Organisation of Veerashaiva Movement : An Analysis of the sect church Framework" in Ed. M.S.a. Rao Social Movements in India, Manohar, New Delhi, 1978.
2. Blake M.R.: "Work as worship in Veerashaiva Tradition" Basava Journal, V.8, No4, 1984.
3. Chandrashekhar T.R. : "The Veerashaiva Saints concept of Kayaka and Dasoha" Basava Journal Sept. 1990.
4. Green A.W.: Sociology : An Analysis of Life in Modern Society. McGrew Hill, New York, 1956.
5. Ishwaran K. : Religion and society Among the Lingayats of south India, Vikas : New Delhi, 1983.
6. Jangam R.T. : "Basavaeshwara's Concept of Kayaka : A Critical view", Basava Journal, 1984, Vol. 9 No.2.
7. Parvathamma C : Sociological Essays on Veerashivism, Popular, Bombay 1972.
8. Report on work in America, W.E. Institute for employment Research Cambridge Mass : MIT press, 1973.
9. Salz A. : "Occupations : Theory and History Encyclopedia of the social sciences, New york Macmillan company, 1944 XI, P. 424.
10. Schouten J.P. : Revolution of the Mystics ; on the social Aspects of Veerashaivism. M. Banarasidas. Delhi, 1995.
11. Sakhare M.R. : History and Philosophy of Lingayat Religion. K.U. Dharwar, 1978.
12. Uploankar A.t. : "Veerashaivism : A social Movement" Basava journal, June 1996.

ನಿಜ ಬದುಕಿನ ಕಲಾವಿದ



ಕೆ.ಟಿ. ಶಿವಪ್ರಸಾದ್ - ಸಮಕಾಲೀನ ಭಾರತೀಯ ಕಲೆಗೆ ಕರ್ನಾಟಕ ಗ್ರಾಮೀಣ ಬದುಕು ನೀಡಿದ ಮೌಲಿಕ ಕಾಣಿಕೆ

ಕಲಾವಿದ ಕೆ.ಟಿ. ಶಿವಪ್ರಸಾದ್ - ಸಮಕಾಲೀನ ಭಾರತೀಯ ಕಲೆಗೆ ಕರ್ನಾಟಕದ ಗ್ರಾಮೀಣ ಬದುಕು ನೀಡಿದ ಮೌಲಿಕ ಕಾಣಿಕೆಗಳಲ್ಲಿ ಮುಖ್ಯ ಹೆಸರು.

ಹಾಸನ ಜಿಲ್ಲೆಯ ಮಾಲೆಯಲ್ಲಿರುವ ಹಳ್ಳಿ-ಕಾರ್ಲೆ-ಯಲ್ಲಿ ಜನಿಸಿದ (೧೯೪೭) ಶಿವಪ್ರಸಾದ್‌ಗೆ ಕಲಾಸೃಷ್ಟಿ ಎನ್ನುವುದು ಸ್ವಂತದ ಬೇರುಗಳನ್ನು ಹುಡುಕುವ ಮತ್ತು ಆ ಮೂಲಕವೇ ಸಂಸ್ಕೃತಿಯ ಜೀವಸೆಲೆಗಳಿಗೆ ಬೊಗಸೆಯೊಡ್ಡುವ ಅರ್ಥಪೂರ್ಣ ಕಾಯಕವಾಗಿ ಬೆಳೆದಿದ್ದಕ್ಕೆ ಒಂದು ಹಿನ್ನೆಲೆಯಿದೆ.

ಆಧುನಿಕ ಒತ್ತಡಗಳ ಅಡಿಯಲ್ಲಿ ಕುಗ್ಗಿ ಹೋಗುತ್ತಿರುವ ಗ್ರಾಮೀಣ ಪರಿಸರದಲ್ಲಿ ತಮ್ಮ ಬಾಲ್ಯವನ್ನು ಕಳೆದ ಶಿವಪ್ರಸಾದ್‌ರವರ ಸಂವೇದನೆಗಳು ಖಚಿತಗೊಂಡಿದ್ದು ಆ ಮೂಲ ನೆನಪುಗಳಿಂದಲೇ. ಆದರೆ ಈ ನೆನಪುಗಳು ಅವರ ಪ್ರಜ್ಞಾಪೂರ್ವಕ ಆಯ್ಕೆಗಳನ್ನು ರೂಪಿಸುವಂತಾಗಿದ್ದು ಇನ್ನೂ ಮುಂದಕ್ಕೆ.

ಹಾಸನದಲ್ಲಿ ಆರಂಭಿಕ ವಿದ್ಯಾಭ್ಯಾಸ ಮುಗಿಸಿದ ಶಿವಪ್ರಸಾದ್ ತಾಂತ್ರಿಕ ಎಂಜಿನೀಯರಿಂಗ್ ಶಿಕ್ಷಣವನ್ನು ಆಯ್ದುಕೊಂಡರೂ ಕಲೆಯ ಗೀಳು ಬಿಡಲಿಲ್ಲ. ಹಾಗಾಗಿ ಅರ್ಧಕ್ಕೆ ಓದುಬಿಟ್ಟು ಮುಂಬಯಿಯ ಪ್ರತಿಷ್ಠಿತ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್ ಸೇರಿ ಡಿಪ್ಲೊಮಾ ಶಿಕ್ಷಣ ಪಡೆದರು. ಅಲ್ಲಿ ಪಡೆದ ಐದು ವರ್ಷಗಳ ಶಿಕ್ಷಣದ ಅವಧಿಯಲ್ಲಿ ಪ್ರಸಿದ್ಧ ಗುರುಗಳಾದ ಗಾಯ್‌ತೊಂಡೆ, ಪದಂಸೀ ಮತ್ತು ಕದಂರವರ ಮಾರ್ಗದರ್ಶನದಲ್ಲಿ ಸ್ಫುಟಗೊಂಡರು.

ಈ ಅವಧಿಯಲ್ಲಿ ಶಿವಪ್ರಸಾದ ಕಂಡುಂಡ ಮುಂಬಯಿ ಅಂತಿಂಥ ನಗರವಲ್ಲ. ವಿಲಾಸದ ಆಮಿಷವೊಡ್ಡಿ ತನ್ನ ಭ್ರಾಮಕ ಧಾವಂತದಲ್ಲಿ ಸೆಳೆದುಕೊಂಡುಬಿಡುವಂಥ ಮಹಾನಗರ. ಮುಂಬಯಿ ಬದುಕಿನ ಎಲ್ಲಾ ಅನುಭವಗಳಿಗೆ ತೆರೆದ ಬಾಗಿಲಾದ ಶಿವಪ್ರಸಾದ್ ಅವುಗಳನ್ನು ಮೊಗೆ ಮೊಗೆದು ಕುಡಿದರು. ಆದರೆ ಅಲ್ಲಿ ಡಿಪ್ಲೊಮಾ ಶಿಕ್ಷಣ ಮುಗಿಸಿದ ಕೂಡಲೇ ಆ ಯಂತ್ರ ಜಗತ್ತಿಗೆ ಬೆನ್ನು ಹಾಕಿ ಮತ್ತೆ ಹಳ್ಳಿ ಸೇರಿದರು. ಒಂದೆಡೆ ಆರ್ಥಿಕ ಸಂಪತ್ತಿನಲ್ಲಿ ಮಾನವೀಯ ಮೌಲ್ಯಗಳನ್ನು ನೊಣೆದು ನೀರು ಕುಡಿದ ಬೃಹತ್ ನಗರದ ಸಂಸ್ಕೃತಿ. ಮತ್ತೊಂದೆಡೆ ಆರ್ಥಿಕ ಕಸುವಿಲ್ಲದೆ ಕುಸಿಯುತ್ತಿರುವ ಬದುಕಿನಲ್ಲಿ ಮಾನವೀಯ ಸಂಬಂಧಗಳಿಗಾಗಿ ಹಾತೊರೆಯುವ ಗ್ರಾಮೀಣ ಸಂಸ್ಕೃತಿ. ಅವರ ಬದುಕಿನ ಮುಖ್ಯ ಆಯ್ಕೆ ಒಡಮೂಡಿದ್ದು ಈ ಬಸವಳಿದ ಹಳ್ಳಿ-ಬೃಹತ್ ನಗರಗಳ ಮಹಾ ದ್ವಂದ್ವದ ಸಮ್ಮುಖದಲ್ಲಿ.

ಕಣ್ಣೆದುರೇ ಹಳ್ಳಿಗಳ ಜೀವಸತ್ವ ಬಸಿದು ಹೋಗುವುದನ್ನು ಕಂಡ ಶಿವಪ್ರಸಾದ್ ಗಾಂಧೀವಾದ ಹಾಗೂ ಸಮಾಜವಾದಿ ಚಿಂತನೆಯತ್ತ ವಾಲುತ್ತಾ ೭೦ರ ದಶಕದಲ್ಲಿ ಬದುಕಿಗೊಂದು ಅರ್ಥಪೂರ್ಣ ಮಾರ್ಪಾಡು ತಂದುಕೊಂಡರು. ತನ್ನ ಹಳ್ಳಿಯಿಂದ ಹಾಸನಕ್ಕೆ ಬರಲು ಬಸ್ಸು ಕಾಯುತ್ತಿದ್ದ ಶಿವಪ್ರಸಾದ್‌ರವರನ್ನು ತಮ್ಮ ಜೀಪಿನಲ್ಲಿ ಕೂಡಿಸಿಕೊಂಡ ಪ್ರೊ|| ಎಂ.ಡಿ. ನಂಜುಂಡಸ್ವಾಮಿಯವರು ನೇರ ತಂದು ಬಿಟ್ಟದ್ದು ಆಗ ಸಾಮಾಜಿಕ-ರಾಜಕೀಯ ಬದುಕಿನಲ್ಲಿ ತಳಮಳ ವೆಬ್ಬಿಸಿದ್ದ ರೈತ ಚಳವಳಿಗೆ. ಆ ಕಾಲದ ಸಂಘಟನೆ, ಹೋರಾಟ, ಜೈಲುವಾಸಗಳ ಅವರ ಅನುಭವ ಒಂದು ಸ್ತರದಲ್ಲಿ ನ್ಯಾಯವಂತಿಕೆಯನ್ನು ಅರಸುವ ಸಾಮಾಜಿಕ ಚಟುವಟಿಕೆಯಾಗಿ ದ್ದಂತೆಯೇ ಇನ್ನೊಂದೆಡೆ ಅಂತರ್ಯಕ್ಕೆ ಹೊಸ ಸಮತೋಲನ ತಂದುಕೊಳ್ಳುವ ಚಡಪಡಿಕೆಯೂ ಆಗಿತ್ತು. ಮುಂದುವರೆದ ಈ ಹುಡುಕಾಟವೇ ಅವರನ್ನು ಜಾತೀಯ, ಅನ್ಯಾಯದ ವಿರುದ್ಧ ದಲಿತ ಚಳವಳಿಯತ್ತ ತಂದು ನಿಲ್ಲಿಸಿತು. ಶಿವಪ್ರಸಾದ್‌ರವರ ಈ ನಿರಂತರ ಚಟುವಟಿಕೆಯ ಆಳದಲ್ಲಿ ಅವರ ಕಲೆಗೂ ಹೊಸ ಸವಾಲುಗಳನ್ನೊಡ್ಡುವ ಪಿಸುದನಿಗಳಿದ್ದವು. ಅದಕ್ಕೇ ಅವರ ಈ ಸಾಮಾಜಿಕ ಮುಖವನ್ನು ಮರೆತು ಕೇವಲ ಕಲೆಯ ಮೀಮಾಂಸೆಗೆ ತೊಡಗಿದರೆ, ಹೂವನ್ನು ಮರೆತು ಪರಿಮಳದ ವಿಮರ್ಶೆಗೆ ತೊಡಗಿದಂತಾಗಬಹುದು. ಏಕೆಂದರೆ ಶಿವಪ್ರಸಾದ್ ಮುಂಬಯಿಯ ಕಲಾಶಾಲೆಯಲ್ಲಿ ಕಲಿತದ್ದು ಕಲೆಯ ತಂತ್ರ, ಮೀಮಾಂಸೆ ಮಾತ್ರ. ಆ ಕಲೆಗೆ ಒಂದು ಸಿದ್ಧಿ, ತಾತ್ವಿಕತೆಯನ್ನು ತಂದುಕೊಟ್ಟಿದ್ದು ಅವರು ಬದುಕಿನಲ್ಲಿ ಕಂಡುಂಡ ಅನುಭವಗಳು.

ಶಿವಪ್ರಸಾದ್‌ರವರ ಈ ನಿರಂತರ ಚಟುವಟಿಕೆಯ ಆಳದಲ್ಲಿ ಅವರ ಕಲೆಗೂ ಹೊಸ ಸವಾಲುಗಳನ್ನೊಡ್ಡುವ ಪಿಸುದನಿಗಳಿದ್ದವು. ಅದಕ್ಕೇ ಅವರ ಈ ಸಾಮಾಜಿಕ ಮುಖವನ್ನು ಮರೆತು ಕೇವಲ ಕಲೆಯ ಮೀಮಾಂಸೆಗೆ ತೊಡಗಿದರೆ, ಹೂವನ್ನು ಮರೆತು ಪರಿಮಳದ ವಿಮರ್ಶೆಗೆ ತೊಡಗಿದಂತಾಗಬಹುದು. ಏಕೆಂದರೆ ಶಿವಪ್ರಸಾದ್ ಮುಂಬಯಿಯ ಕಲಾಶಾಲೆಯಲ್ಲಿ ಕಲಿತದ್ದು ಕಲೆಯ ತಂತ್ರ, ಮೀಮಾಂಸೆ ಮಾತ್ರ. ಆ ಕಲೆಗೆ ಒಂದು ಸಿದ್ಧಿ, ತಾತ್ವಿಕತೆಯನ್ನು ತಂದುಕೊಟ್ಟಿದ್ದು ಅವರು ಬದುಕಿನಲ್ಲಿ ಕಂಡುಂಡ ಅನುಭವಗಳು.

ತಮ್ಮ ಕಲೆಯಲ್ಲಿ ನಿರಂತರವಾಗಿ ಸಾಧಿಸಿದ ಅನ್ವೇಷಣೆಯ ತಹತಹವನ್ನೇ ಶಿವಪ್ರಸಾದ್ ಬದುಕಿನಲ್ಲೂ ಜಾರಿಗೆ ತಂದರು. ರೈತರು ಉಣ್ಣುವ ತಟ್ಟೆಯನ್ನು ಬೇಯಿಸುವ ಪಾತ್ರೆಯನ್ನು ಬಿಡದೆ ಜಪ್ತಿ ಮಾಡುತ್ತಿದ್ದ ಅಧಿಕಾರದ ವಿರುದ್ಧ ಮರುಜಪ್ತಿ ಕಾರ್ಯಕ್ರಮ ರೂಪಿಸಿದವರು ಅವರು. ಮರು ಜಪ್ತಿಯಂಥ ಕಾರ್ಯಕ್ರಮ ವ್ಯವಸ್ಥೆಯ ಕಣ್ಣಲ್ಲಿ ವಿಪ್ಲವವಾಗಿ ಕಂಡು ಗಡೀಪಾರು ಶಿಕ್ಷೆಗೂ ಒಳಗಾದರು. ಪ್ರಾಮಾಣಿಕತೆಯನ್ನು ಒರೆಗೆ ಹಚ್ಚಿ ಬದುಕಬೇಕೆಂದು ಬಯಸಿದ್ದಕ್ಕೆ ರೈತಸಂಘದಿಂದಲೂ ಗಡಿಪಾರಾದರು. ಅಥವಾ ಅವರೇ ಆ ಪರಿಧಿಯಿಂದ ನೆಗೆದು ದಲಿತ ಚಳವಳಿಗೆ ಬಂದರು.

ಶ್ರೀಮಂತ ಮನೆತನದಿಂದ ಬಂದ ಶಿವಪ್ರಸಾದ್ ಕಣ್ಣೆದುರು ಸುರಕ್ಷಿತ ಹಾದಿಯಿತ್ತು. ಪಾಶ್ಚಾತ್ಯ ನೆರಳಿನಲ್ಲಿ ಅರಳಿದ ಸರ್ರಿಯಲಿಸಂ, ಅಬ್‌ಸ್ಟ್ರ್ಯಾಕ್ಟ್ ಎಕ್ಸ್‌ಪ್ರೆಷನಿಸಂ, ಪಾಪ್ ಆರ್ಟ್ ಮುಂತಾದ ಶೈಲಿಗಳಿಗೆ ಇಲ್ಲಿ ಗೌರವಾನ್ವಿತ ಸ್ಥಾನವೂ ಇತ್ತು. ಈ ಶೈಲಿಗಳಲ್ಲಿ ಕಲಾಸೃಷ್ಟಿ ಆರಂಭಿಸಿದ ಶಿವಪ್ರಸಾದ್ ಹಾಗೆಯೇ ಮುಂದುವರಿಯಬಹುದಿತ್ತು.

ಆದರೆ ಹಳ್ಳಿಗಾಡಿನ ಜನಸಮೂಹದ ಬೆವರು, ಉಸಿರುಗಳ ಅನುಭವದಲ್ಲಿ ಅದ್ದಿಹೋದ ಶಿವಪ್ರಸಾದ್, ತಮ್ಮ ಕ್ಯಾನವಾಸಿಗೇಕೆ ಈ ಅನುಭವ ಬರುತ್ತಿಲ್ಲ ಎಂದು ಕೇಳಿಕೊಂಡರು. ಈ ಘಟ್ಟ ಅವರ ಜೀವನದ ಇನ್ನೊಂದು ಮಹತ್ತರ ಆಯ್ಕೆ. ಹಾಗೆಂದು ತಮ್ಮ ಕಾಳಜಿಗಾಗಿ ಕುಂಚ ಹಿಡಿದರೂ, ಕಲೆ ಕೇವಲ ಹೇಳಿಕೆ, ಘೋಷಣೆ ಮಟ್ಟಕ್ಕಿಳಿಯಬಾರದೆಂಬ ಎಚ್ಚರವೂ ಇತ್ತು.

ಶಿವಪ್ರಸಾದ್‌ರವರ ಕಲೆ ಅರಳಿದ್ದು ಇಂಥ ನಿಷ್ಠುರ ಸ್ಫೂರ್ತಿ ಮತ್ತು ಎಚ್ಚರಗಳಲ್ಲಿ ಅವರ ಭಿತ್ತಿಯ ಮೇಲೆ ಆಕಾರ ತಳೆವ 'ಜನ' ಸಾವಿರಾರು ಮುಖರಹಿತ ಜನರ ಪ್ರಾತಿನಿಧಿಕಗಳಲ್ಲ. ಅವರಿಗೆ ಸ್ವಂತದ ಹೆಸರುಗಳಿವೆ. ಅವರದೇ ಅನುಭವ, ಅವಮಾನ, ನೆನಪುಗಳಿವೆ. ಸುದ್ದಿಯಾಗದ, ಮುಖ್ಯರೆನಿಸದ ಈ ಸಾಮಾನ್ಯ ಜನ ತಮ್ಮ ದುಡಿಮೆ, ಜಂಜಾಟ, ಗುಟ್ಟುಗಳ ಸಮೇತ ಶಿವಪ್ರಸಾದ್‌ರವರ ಕುಂಚದ ಮಾಧ್ಯಮದಲ್ಲಿ ಅಡಿಯಿಡುತ್ತಾರೆ. ನೇರವಾಗಿ ತಮ್ಮ ಅಂತರಂಗ ತೆರೆದಿಡುತ್ತಾ ಸಂಕೋಚವಿಲ್ಲದೆ, ಬಡಿವಾರವಿಲ್ಲದೆ ನೋಡುಗರ ಚಿತ್ತದಲ್ಲಿ ಸುಳಿಯತೊಡಗುತ್ತಾರೆ...

ಪೋಸ್ಟ್ ಮಾಡರ್ನಿಸಂ ಹತ್ತಿರವೆನಿಸಿದರೂ ಶಿವಪ್ರಸಾದ್ ಕಲೆಯ ಅನನ್ಯ ವೈಶಿಷ್ಟ್ಯ ಕಾಣುವುದು ತಮ್ಮ ಲಯ, ಸಂಯೋಜನೆ, ಬಣ್ಣ ಮತ್ತು ವಿವರಗಳ ಜೀವಸ್ಪಂದನದಲ್ಲಿ. ಕೊನೆಗೂ ಶಿವಪ್ರಸಾದ್‌ರವರ ಕಲೆ, ಹೊಲದಲ್ಲಿ ದುಡಿಯುವ ಹೆಣ್ಣುಮಗಳ ಹಾಗೆ - ಫಲವತ್ತಾದ ಕಸುವಿನ ಕಾಣ್ಕೆ.

❍ ಕೆ. ಪುಟ್ಟಸ್ವಾಮಿ

ಭಾರತದ ಪುನರ್ನಿರ್ಮಾಣ

ಪ್ರಸ್ತುತ

ದೇಶದಲ್ಲಿ ಹಿಂದೆಂದೂ ಕಾಣದಂತಹ ಸಾಮಾಜಿಕ ಮತ್ತು ಆರ್ಥಿಕ ಅಂತರ ಇಂದು ಭಾರತೀಯರಲ್ಲಾಗಿದೆ. ಬಡವರು ಮತ್ತು ದಾರಿದ್ರ್ಯರು ಅಭಿವೃದ್ಧಿಯ ಫಲಾನುಭವಿಗಳಾಗುವ ಬದಲು ನತದೃಷ್ಟರಾಗಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಬಡಜನರ ಆಹಾಕಾರ ಎದ್ದುಕಾಣುತ್ತದೆ. ದೇಶದ ಶೇ.೪೦ ರಷ್ಟಿರುವ ಬಡವರು ಮತ್ತು ಶೇ. ೩೦ರಷ್ಟಿರುವ ಅನಾನುಕೂಲಸ್ಥರು ತಮ್ಮನ್ನು ಸರ್ಕಾರಗಳು ಸತತವಾಗಿ ಕಡೆಗಣಿಸುವುದನ್ನು ಸಹಿಸಲಾರರೆಂಬ ಸತ್ಯವನ್ನು ೨೦೦೪ರ ಚುನಾವಣಾ ಫಲಿತಾಂಶ ಸಾಬೀತುಪಡಿಸಿದೆ. ಆದರೆ ನಮ್ಮ ಗಣರಾಜ್ಯ ವ್ಯವಸ್ಥೆಯಲ್ಲಿ ಅಭಿವೃದ್ಧಿಯಾಗುವುದಾದರೂ ಹೇಗೆ ಎಂಬ ಪ್ರಶ್ನೆ ಮೂಡುತ್ತದೆ.

○ ರಾಜೀವ್ ಧವನ್
ಅನು : ಜೆ.ಪಿ. ನಾಯಕ್

ಕಳೆದ ಆರು ವರ್ಷಗಳ (೧೯೯೮-೨೦೦೪) ಭಾರತೀಯ ಜನತಾ ಪಾರ್ಟಿಯ ಆಳ್ವಿಕೆ ಸ್ವಾತಂತ್ರ್ಯಾನಂತರ ಇತಿಹಾಸದ ಒಡೆದು ಆಳುವ ರಾಜನೀತಿಯಲ್ಲಿ ಪ್ರಮುಖವಾದುದು. ಬಿಜೆಪಿ ಮತ್ತು ಸಂಘ ಪರಿವಾರ ಮತೀಯ ವಿಚಾರಗಳನ್ನೆತ್ತಿ ಹಿಡಿದು ವಿಜೃಂಭಿಸಿವೆ. ಈ ನೀತಿಯಿಂದಾಗಿ ಸಾಮಾಜಿಕ ಕಲಹಗಳು, ಅತ್ಯಾಚಾರಗಳು ಮತ್ತು ನಿರಾಶೆ ಮೂಡಿ ಭಾರತವನ್ನು ಛಿದ್ರ ಮಾಡಿವೆ. ೧೯೯೨ರಲ್ಲಿ ಉತ್ತರಪ್ರದೇಶದ ಅಯೋಧ್ಯೆಯಲ್ಲಿ ಬಾಬ್ರಿಮಸೀದಿಯನ್ನು ಧ್ವಂಸ ಮಾಡಿದ್ದು ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ. ಆದರೆ ಇಂತಹ ನಾಚಿಕೆಗೇಡಿನ ಕೃತ್ಯ ಸರಿ ಎಂದು ಬಿಜೆಪಿ ತನ್ನ ೧೯೯೩ರ ಶ್ವೇತಪತ್ರದಲ್ಲಿ ವಾದಿಸಿದೆ.

ಮತೀಯ ರಾಜಕಾರಣಕ್ಕೆ ಗುಜರಾತ್ ಸೂಕ್ತ ಅಂಕಣವಾಯಿತು. ೧೯೯೮ರಲ್ಲಿ ಕ್ರೈಸ್ತಧರ್ಮ ಗ್ರಂಥದ ಪ್ರತಿಗಳನ್ನು ರಾಜಾರೋಷವಾಗಿ ಹರಿದುಹಾಕಲಾಯಿತು. ಅಖಿಲ ಭಾರತ ಕ್ಯಾಥೋಲಿಕ್ ಸಂಘವು ತಮ್ಮವರ ಮೇಲಾದ ೩೩ ಪ್ರಮುಖ ಹಿಂಸಾತ್ಮಕ ಘಟನೆಗಳನ್ನು ದಾಖಲು ಮಾಡಿತು. ೧೯೯೯ರಲ್ಲಿ ಗ್ರಾಹಂ ಸ್ಟಯಿನ್ಸ್ ಮತ್ತು ಅವರಿಬ್ಬರ ಪುತ್ರರನ್ನು ಒರಿಸ್ಸಾದಲ್ಲಿ ಸಜೀವ ದಹನ ಮಾಡಲಾಯಿತು. ೨೦೦೩ರಲ್ಲಿ ಸ್ಟೈನ್ ಹತ್ಯೆ ಮಾಡಿದ ಅಪರಾಧಿಗಳು ಮಹಾನ್ ವ್ಯಕ್ತಿಗಳೆಂದು ಕೆಲ ಜನರಿಂದ ಕೊಂಡಾಡಲ್ಪಟ್ಟರು. ಆದರೆ ೨೦೦೧ ರಿಂದೀಚೆಗೆ ಬಾಬ್ರಿ ಮಸೀದಿಯ ಧ್ವಂಸ ಕೃತ್ಯವನ್ನು ವೈಭವೀಕರಿಸಿ ರಾಜಕೀಯ ಲಾಭ ಪಡೆಯುವುದನ್ನು ಸರ್ವೋಚ್ಚ ನ್ಯಾಯಾಲಯ ತಡೆಹಿಡಿಯಿತು. ಆದರೆ ಮತೀಯ ಶಾಖವನ್ನು ಬಚ್ಚಿಟ್ಟಿದ್ದ ಬಿಜೆಪಿ ಮುಖಾಂತರ ಪರಿಣಾಮ ೨೦೦೨ರ ಗುಜರಾತ್ ಗಲಭೆಗೆ ದಾರಿಮಾಡಿತು. ಮತೀಯ ಅನ್ಯಾಯವೆಸಗಿದ ನರೇಂದ್ರ ಮೋದಿ ಅಧಿಕಾರಕ್ಕೆ ಬಂದದ್ದು ಸರ್ವೋಚ್ಚ ನ್ಯಾಯಾಲಯವನ್ನು ಕೂಡ ಕೆರಳಿಸಿತು.

ದೇಶದ ಪ್ರತಿಯೊಬ್ಬ ನಾಗರಿಕರನ್ನು ಸಮಾನವಾಗಿ ಕಾಣುವುದು ಉತ್ತಮ ನಡವಳಿಕೆಯಾಗಿದ್ದು ಪರಿಣಾಮವಾಗಿ ಗುಮಾನ ಫಿಜಿ, ಅಮೆರಿಕಾ, ಇಂಗ್ಲೆಂಡ್ ಇತ್ಯಾದಿ ವಿದೇಶಗಳಲ್ಲಿ ಭಾರತೀಯ ಮೂಲದವರು ಅತ್ಯುನ್ನತ ಸ್ಥಾನಗಳನ್ನಲಂಕರಿಸಲು ಅವಕಾಶವಾಗಿರುವುದು ಗಮನಾರ್ಹ ವಿಚಾರ. ಆದರೆ ಬಿಜೆಪಿ ಮತ್ತು ಸಂಘ ಪರಿವಾರದವರು ಈ ಬಗ್ಗೆ ನಡೆದುಕೊಳ್ಳುತ್ತಿರುವುದು ಮತೀಯ, ವಂಶೀಯ ಮತ್ತು ಧರ್ಮಾಂಧಕಾರಿ.

ಈ ಹಿನ್ನೆಲೆಯಲ್ಲಿ ಸೋನಿಯಾಗಾಂಧಿಯವರ ತಿರಸ್ಕಾರವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಸೋನಿಯಾರವರು ಪ್ರಧಾನಿಯಾದರೆ ಸಾರ್ವತ್ರಿಕ ಸಂಘರ್ಷ ನಡೆಸಿ ದೇಶವನ್ನು ಛಿದ್ರಗೊಳಿಸುವ ಬೆದರಿಕೆ ಹಾಕಿದ್ದರು ಬಿಜೆಪಿಯವರು. ಸುಷ್ಮಾ ಸ್ವರಾಜ್ ತಲೆಬೋಳಿಸಿಕೊಂಡು ರಾಜ್ಯಸಭೆ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಘೋಷಿಸಿದರು. ಆದರೀಗ ಪ್ರಧಾನಿ ಹುದ್ದೆಯನ್ನು ತಿರಸ್ಕರಿಸುವ ಸೋನಿಯಾಗಾಂಧಿಯವರ ನಿರ್ಧಾರದಿಂದ ಬಿಜೆಪಿ ಮತ್ತು ಸಂಘ ಪರಿವಾರದ ಸಾರ್ವತ್ರಿಕ ಗಲಭೆ ಯೋಜನೆಗೆ ತೆರೆ ಬಿದ್ದಿದೆ. ಇಮ್ಮಡಿ ರಿಚಾರ್ಡ್‌ರ ಶೇಕ್ಸ್‌ಪಿಯರ್ ಪ್ರಶ್ನೆಗಳನ್ನು ನೆನಪಿಸಿಕೊಳ್ಳಿ. 'ರಾಜನು ಏನು ಮಾಡುವುದೀಗ? ಶರಣಾಗಬೇಕೆ? ಅಥವಾ ಅವನನ್ನು ಅಧಿಕಾರದಿಂದ ಇಳಿಸಬೇಕೆ? ಇರುವುದರಲ್ಲೇ ರಾಜ ತೃಪ್ತಿ ಪಡಬೇಕೆ ಅಥವಾ ರಾಜನೆಂಬ ಬಿರುದನ್ನು ತೆಗೆದುಹಾಕಬೇಕೇ? ಓ ದೇವರೇ' : ಹೋಗಲಿ ಬಿಡಿ ಇದೆಲ್ಲಾ ಈಗಾಗಲೇ ಆಗಿ ಹೋಗಿದೆ.

ಬಿಜೆಪಿ ತನ್ನ ಸೋಲನ್ನು ಒಪ್ಪಿಕೊಳ್ಳಲು ಸಿದ್ಧವಿರುವಂತಿಲ್ಲ. ಸೋನಿಯಾರವರು ಪ್ರಧಾನಿ ಹುದ್ದೆಯನ್ನು ತಿರಸ್ಕರಿಸಿದ್ದಾರೆ. ಮುಂದ್ಯಾವ ಮಾರ್ಗವಿನ್ನು? ಕಳೆದಾರು ವರ್ಷಗಳ ಮತೀಯ ಆಡಳಿತದಲ್ಲಿ ನಲುಗಿದ ಭಾರತ ದೇಶ ಹಲವಾರು ರೀತಿಯಲ್ಲಿ ಗುಣಮುಕ್ತವಾಗಬೇಕಾಗಿದೆ.

ಇಷ್ಟೆಲ್ಲ ಏಕೆ ಬೇಕು? ಸೋನಿಯಾ ಗಾಂಧಿಯವರ ವಿದೇಶಿ ಮೂಲದ ಬಗ್ಗೆ ಮಾಡಲಾಗುತ್ತಿರುವ ಅಪಪ್ರಚಾರವೇ ಸಾಕು ಒಡೆದು ಆಳುವ ನೀತಿಯನ್ನರ್ಥೈಸಲು. ಚುನಾವಣೆಯಲ್ಲಿ ಪರಾಭವಗೊಂಡ ಬಿಜೆಪಿ ವೃದ್ಧಿಯಾಗುವ ಬಗ್ಗೆ ಯೋಚಿಸಬೇಕಿತ್ತು. ಆದರೆ ಒಡೆದು ಆಳುವ ನೀತಿಗೆ ಕೈಹಾಕತೊಡಗಿದೆ. ಒಡೆದು ಆಳುವುದರಲ್ಲಿ ಮಹಾನ್ ಪರಿಣಿತರಿದ್ದರೂ ಸಹ ಬಿಜೆಪಿ ಮತ್ತು ಸಂಘ ಪರಿವಾರ ಮುಂದಿನ ಕೆಲ ತಿಂಗಳುಗಳವರೆವಿಗೆ ಅಂತಹ ಕಲಹಗಳನ್ನು ಜೀವಂತವಾಗಿ ಇಡಲಿವೆ. ಕಲಹದ ಜೀವಾಳ ಸೋನಿಯಾರವರ ವಿದೇಶಿ ಮೂಲ. ನೈತಿಕವಾಗಿ, ಕಾನೂನುಬದ್ಧವಾಗಿ ಅಥವಾ ರಾಜಕೀಯವಾಗಿ ಈ ವಿವಾದದಲ್ಲಿ ಸತ್ವವಿಲ್ಲವಾದರೂ ಇದು ಜೀವಂತವಾಗಿ ಮಾತ್ರ ಇರುತ್ತದೆ.

ಭಾರತದ ಕಾನೂನು ವ್ಯವಸ್ಥೆ ದೇಶದ ನಾಗರಿಕರನ್ನು ಸ್ವದೇಶಿ ಅಥವಾ ವಿದೇಶಿಯೆಂಬ ಭೇದ ಭಾವಕ್ಕೆ ಎಡೆಮಾಡಿಕೊಡುವುದಿಲ್ಲವಾದ್ದರಿಂದ ಎಲ್ಲಾ ನಾಗರಿಕರು ಎಲ್ಲಾ ಉದ್ದೇಶಗಳಿಗು ಸಮಾನ ಹಕ್ಕುಳ್ಳವರಾಗಿರುತ್ತಾರೆ. ನಾಗರಿಕರಣ ಕಾಯಿದೆಯ ೫ನೇ ಭಾಗದಲ್ಲಿರುವ ಅಂಶಗಳನ್ನು ತದ್ವಿರುದ್ಧವಾಗಿ ಅರ್ಥೈಸಲಾಗುತ್ತಿದ್ದರೂ ಸಹ ಜಾರಿಗೆ ಬಂದ ೧೯೫೫ನೇ ವರ್ಷದಿಂದ ಇದನ್ನ್ಯಾರು ಜಾರಿಗೆ ತರುವ ಧೈರ್ಯ ಮಾಡಲಿಲ್ಲ. ೨೦೦೧ರ ಚುನಾವಣಾ ದಾವೆಯೊಂದರಲ್ಲಿ ಸೋನಿಯಾಗಾಂಧಿಯವರು ಲೋಕಸಭಾ ಸದಸ್ಯರಾಗಲರ್ಹವುಳ್ಳ ನಾಗರಿಕರೆಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದೆ. ಈಗಾಗಲೇ ಅವರು ವಿರೋಧ ಪಕ್ಷದ ನಾಯಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಅವರು ಪ್ರಧಾನಮಂತ್ರಿಯಾಗಲೂ ಯಾವುದೇ ಅಡೆ ತಡೆಗಳಿಲ್ಲ.

ಮೊದಲನೆಯದಾಗಿ, ಮತೀಯತೆ ಸಾರ್ವಜನಿಕ ನೀತಿ ಮತ್ತು ಜೀವನಕ್ಕೆ ಪ್ರವೇಶ ಮಾಡಿದ್ದು ಇಂತಹ ಮೂಲಭೂತವಾದ ಸಮಸ್ಯೆ ಭಾರತೀಯತೆಯನ್ನು ಬಳಲಿಸಿ ಅಲ್ಪಸಂಖ್ಯಾತರನ್ನು ಬೆದರಿಸುತ್ತಿದೆ. ಪಠ್ಯ ಪುಸ್ತಕಗಳನ್ನು ಬದಲಿಸಲಾಗಿದೆ. ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ರಾಜ್ಯಪಾಲರ ಹುದ್ದೆಗೆ ನೇಮಕ ಮಾಡಲಾಗಿದೆ. ಮತೀಯ ಗಲಭೆಗಳಿಗೆ ಪರಿಹಾರವಿಲ್ಲದಂತಾಗಿದೆ. ರಾಜ್ಯ ಸರ್ಕಾರಗಳು ಮತ್ತು ರಾಜ್ಯಪಾಲರುಗಳು ಮತೀಯ ಘಟನೆಗಳನ್ನು ಗೌಪ್ಯವಾಗಿ ಹಾಗೂ ಮುಕ್ತವಾಗಿ ಬೆಂಬಲಿಸಿದ್ದಾರೆ. ಆದ್ದರಿಂದ ದೇಶದಲ್ಲಿ ಜಾತ್ಯಾತೀತ ಪ್ರಜ್ಞೆ ಮತ್ತು ಆಡಳಿತವನ್ನು ತರುವುದು ಪ್ರಮುಖ ಅಂಶವಾಗಿದೆ.

ಗುಣಮುಖವಾಗಬೇಕಾದ ಎರಡನೆಯ ಅಂಶವೆಂದರೆ ದೇಶದಲ್ಲಿ ಹಿಂದೆಂದೂ ಕಾಣದಂತಹ ಸಾಮಾಜಿಕ ಮತ್ತು ಆರ್ಥಿಕ ಅಂತರ ಇಂದು ಭಾರತೀಯರಲ್ಲಾಗಿದೆ. ಬಡವರು ಮತ್ತು ದಾರಿದ್ರ್ಯರು ಅಭಿವೃದ್ಧಿಯ ಫಲಾನುಭವಿಗಳಾಗುವ ಬದಲು ನತದೃಷ್ಟರಾಗಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಬಡಜನರ ಆಹಾಕಾರ ಎದ್ದುಕಾಣುತ್ತದೆ. ದೇಶದ ಶೇ. ೪೦ ರಷ್ಟಿರುವ ಬಡವರು ಮತ್ತು ಶೇ. ೩೦ರಷ್ಟಿರುವ ಅನಾನುಕೂಲಸ್ಥರು ತಮ್ಮನ್ನು ಸರ್ಕಾರಗಳು ಸತತವಾಗಿ ಕಡೆಗಣಿಸುವುದನ್ನು ಸಹಿಸಲಾರರೆಂಬ ಸತ್ಯವನ್ನು ೨೦೦೪ರ ಚುನಾವಣಾ ಫಲಿತಾಂಶ ಸಾಬೀತುಪಡಿಸಿದೆ. ಆದರೆ ನಮ್ಮ ಗಣರಾಜ್ಯ ವ್ಯವಸ್ಥೆಯಲ್ಲಿ ಅಭಿವೃದ್ಧಿಯಾಗುವುದಾದರೂ ಹೇಗೆ ಎಂಬ ಪ್ರಶ್ನೆ ಮೂಡುತ್ತದೆ.

ಬಹಳಷ್ಟು ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಯೋಜನೆಗಳು ಕೇಂದ್ರ ಸರ್ಕಾರದ ಬದಲು ರಾಜ್ಯ ಸರ್ಕಾರದೊಡನಿದೆ. (ಸಮಪಾಲು

ನ್ಯಾಯ ಯೋಜನೆ) ಸಾಮಾಜಿಕ ನ್ಯಾಯ ಯೋಜನೆಗಳು ಸೂಕ್ತ ಜವಾಬ್ದಾರಿ ಮತ್ತು ಮೇಲ್ವಿಚಾರಣೆಗಳಿಲ್ಲದೆ ವಿಫಲಗೊಳ್ಳುತ್ತವೆ. ಆದರೆ ಬಲಿಷ್ಠ ಕೇಂದ್ರ ಸರ್ಕಾರ ರಾಜ್ಯಗಳ ಸ್ವಾಯತ್ತತೆಯನ್ನು ಪ್ರೋತ್ಸಾಹಿಸುವುದಿಲ್ಲ. ಅಂತರರಾಜ್ಯ ಪರಿಷತ್ತು ಅಷ್ಟೊಂದು ದಕ್ಷವಾಗಿಲ್ಲ. ಈ ಪರಿಸ್ಥಿತಿಯಲ್ಲಿ ಮುನ್ನಡೆಯಲೊಂದು ದಾರಿ ಎಂದರೆ ಪ್ರಮುಖ ಸಾಮಾಜಿಕ ಮತ್ತು ಆರ್ಥಿಕ ಕಾರ್ಯದಳ (Task Force) ಗಳನ್ನು ರಚಿಸಿ ಅವುಗಳ ಮುಖಾಂತರ ಬಡವರ ಧ್ಯೇಯೋದ್ದೇಶಗಳನ್ನು ಈಡೇರಿಸುವುದು. ಪ್ರತಿಕಾರಕ ಯೋಜನೆಯಲ್ಲಿ ಗ್ರಾಮಾಂತರ ಜನರಿಗೆ ಅಧಿಕಾರ ನೀಡಿ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವಂತಿರಬೇಕು.

ಸಮ್ಮಿಶ್ರ ರೂಪದ ಸರ್ಕಾರಗಳು ವಿವಿಧ ರೀತಿಯ ಅಭಿವೃದ್ಧಿ ರೂಪುರೇಷೆಗಳನ್ನು ತಯಾರಿಸುತ್ತವೆ. ಭಾರತವೊಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಾದ್ದರಿಂದ ಪ್ರಗತಿ ಮತ್ತು ವಿಕಾಸವಾಗಬೇಕಾದರೆ ಬಂಡವಾಳ ತೀರಾ ಅವಶ್ಯಕ. ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿಲ್ಲ. ಷೇರು ಮಾರುಕಟ್ಟೆ ದೇಶದ ಅಭಿವೃದ್ಧಿಯನ್ನು ಮಾಪನ ಮಾಡುವ ಅಳತೆ ಗೋಲಲ್ಲ. ಕೆಲವ್ಯಕ್ತಿಗಳು ಷೇರು ಮಾರುಕಟ್ಟೆಯನ್ನು ಹೇಗೆ ಬೇಕಾದರೂ ಎಳೆಯಬಲ್ಲರೆಂಬ ಸತ್ಯ ಸೂಕ್ತ ತನಿಖೆ ನಡೆಸಿದರೆ ತಿಳಿಯುತ್ತದೆ.

ಆರು ವರ್ಷಗಳ ಒಡೆದಾಳುವ ನೀತಿಯಿಂದ ಬಳಲಿರುವ ಭಾರತ ಈಗ ಗುಣಮುಖವಾಗಬೇಕಿದೆ.

ಭಾರತ ದೇಶದ ಸಾಮಾಜಿಕ ಆತ್ಮವೊಂದು ಮೂಲ ವಿಷಯ. ಸಮಾಜವಾದದ ಹಲವಾರು ಅಂಶಗಳಾದ ಕೈಗಾರಿಕೆಗಳಲ್ಲಿ ಸರ್ಕಾರಿ ಮಾಲಿಕತ್ವ ಮತ್ತು ಸರ್ಕಾರಿ ನಿಯಂತ್ರಣಗಳನ್ನು ತೆಗೆದುಹಾಕಲಾಗಿದೆ. ಸ್ವಜನಿತ ಬಂಡವಾಳ ಹೂಡಿಕೆಯ ಕೊರತೆ ಕಾಣುತ್ತಿದೆ. ಆದರೆ ಸಮಾಜವಾದದ ಮಾನವೀಯ ಮುಖ ಈಗಲೂ ಉಳಿದಿದೆ. ಈ ಮಾನವೀಯ ಮುಖ (ಸಂಪನ್ಮೂಲ ಮತ್ತು ಅವಕಾಶ) ಹಂಚಿಕೆಯ ನ್ಯಾಯವನ್ನು ಬಯಸುತ್ತದೆ. ಆದರೆ ಈ ವಿಷಯದಲ್ಲಿ ಮಹತ್ತರವಾದ ಅಂತರ ಉಂಟಾಗಿದೆ. ಬಿಜೆಪಿಯ ನೀತಿಗಳು ಶ್ರೀಮಂತರಿಗೆ ಸಹಾಯ ಮಾಡಿವೆ ಆದರೆ ಹಂಚಿಕೆಯ ನ್ಯಾಯ ಸಮಾನ ಅವಕಾಶಗಳನ್ನು ಆಧರಿಸುತ್ತದೆ. ಇದರ ಅರ್ಥ ವಿ.ಪಿ.ಸಿಂಗ್‌ರ ಮಂಡಲದ ವಿವಾದವನ್ನು ಎತ್ತಿಹಿಡಿಯುವುದಲ್ಲ, ಬದಲಿಗೆ ಮುಂದಿನ ಯಾವುದೇ ಅಭಿವೃದ್ಧಿ ಕಾರ್ಯಗಳಲ್ಲಿ ಬಡವರನ್ನು ಗುರಿಯಾಗಿಟ್ಟುಕೊಂಡು ರೂಪಿಸುವುದು. ಭಾರತದ ರಾಜಕೀಯದಲ್ಲಿ ಕಾಣುವ ವಿಚಿತ್ರ ಇದು. ಆದ್ದರಿಂದ ಕೇವಲ ಶೇರು ಮಾರುಕಟ್ಟೆಯ ಏರಿಳಿತಕ್ಕಷ್ಟೆ ಪ್ರತಿಕ್ರಿಯಿಸುವ ಬದಲು ಯಾರಿಗಾಗಿ ಭಾರತ ಸಂವಿಧಾನ ರಚಿತವಾಗಿದೆಯೋ ಅವರೆಲ್ಲರ ಪ್ರಗತಿಗಾಗಿ ಸ್ಪಂದಿಸಬೇಕಾಗಿದೆ.

ಹೇಳಿಕೊಂಡಿದ್ದೇನೇ ಆದರೂ 'ಭಾರತ ಮಿನುಗುತ್ತಿದೆ' ಎಂಬ ಬಿಜೆಪಿ ಹೇಳಿಕೆ ಸತ್ಯವಲ್ಲ. ಆರ್ಥಿಕ ಮಟ್ಟದಲ್ಲಿ ಬಿಜೆಪಿ ಸರ್ಕಾರ ಮಹತ್ತರ ಬದಲಾವಣೆಗಳನ್ನು ಮಾಡದೇ ಹಿಂದಿನ ಕಾಂಗ್ರೆಸ್ ನೀತಿಗಳನ್ನೇ ಕಣ್ಣುಮುಚ್ಚಿ ಅನುಸರಿಸಿತು. ಯಶವಂತ ಸಿನ್ಹಾರವರನ್ನು ಹಣಕಾಸು ಖಾತೆಯಿಂದ ತೆಗೆದಿದ್ದು ಸರಿಯಾದರೂ ಸಹ ಅವರ ಸ್ಥಾನದಲ್ಲಿ ಬಂದ ಜಸ್ವಂತ್ ಸಿಂಗ್ ಮಹತ್ತರವಾದುದೇನನ್ನು ಮಾಡಲಿಲ್ಲ. ಕಾಂಕುನ್ ಸಮ್ಮೇಳನದಲ್ಲಿ ಅರುಣ್ ಜೆಟ್ಲಿಯವರು ಸ್ವಲ್ಪ ಗಲಾಟೆ ಮಾಡಿದರಾದರೂ ಸಹ ಒಟ್ಟಾರೆ ನೋಡಿದಾಗ ವಿಶ್ವ ವ್ಯಾಪಾರ ಮತ್ತು ವಿಶ್ವ ವ್ಯಾಪಾರ ಸಂಸ್ಥೆಗಳೊಡನೆ ವ್ಯವಹರಿಸುವಲ್ಲಿ ಸಾಕಷ್ಟು ಕೌಶಲ್ಯದ ಕೊರತೆ ಕಾಣುತ್ತದೆ. ಸಾಮಾಜಿಕ ಮತ್ತು ಮಾನವ ಹಕ್ಕುಗಳ ವಿಚಾರದಲ್ಲಿ ಬಿಜೆಪಿ ಸರ್ಕಾರದ ನಡವಳಿಕೆ ಶೋಚನೀಯ. ಪೋಟಾ ಕಾಯಿದೆಯ ಕರಡನ್ನು ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಪಾಸು ಮಾಡಲಾಯಿತು. ಆದರೆ ಇದರ ದುರುಪಯೋಗ ಸ್ಪಷ್ಟವಾಗಿ ಕಂಡಾಗ ಪರಿಶೀಲನಾ ಸಮಿತಿಗೆ ಶಿಫಾರಸ್ಸು ಮಾಡುವ ಅಧಿಕಾರ ನೀಡಿ ಕಾಯಿದೆಯ ಸ್ವರೂಪವೇ ಬೇರೆಯದಂತಾಗಿ ಮಾಡಲಾಯಿತು.

ನಾಗರಿಕ ಹಕ್ಕುಗಳನ್ನು ಮತ್ತು ಪ್ರಜಾತಂತ್ರ ಹಕ್ಕುಗಳನ್ನು ಮೊಟಕುಗೊಳಿಸುವ ಈ ಪೋಟಾ ಕಾಯಿದೆ ಇಲ್ಲದೆಯೇ ಭಾರತ ದೇಶ ಉಗ್ರವಾದವನ್ನು ತಡೆಯಬಲ್ಲದು. ನ್ಯಾಯಾಂಗ ಸುಧಾರಣಾ ಕ್ರಮಗಳಾದ ದಂಡ ಸಂಹಿತೆ ರೀತಿಯ ಪರಿಷ್ಕರಣ ಅಥವಾ ವೇಗ ಮಾರ್ಗ ನ್ಯಾಯಾಲಯ ವ್ಯವಸ್ಥೆಗಳು ನ್ಯಾಯ ದೊರಕಿಸುವಲ್ಲಿ ವಿಫಲವಾಗಿದೆ. ವೇಗ ಮಾರ್ಗ ನ್ಯಾಯಾಲಯಗಳು ಅನ್ಯಾಯಕ್ಕೆ ಹೇಗೆ ಎಡೆಮಾಡಿ ಕೊಡುತ್ತದೆಂಬುದಕ್ಕೆ ಗುಜರಾತಿನ ಬೆಸ್ಟ್ ಬೇಕರಿ ಪ್ರಕರಣವೊಂದು ನಿದರ್ಶನ. ನ್ಯಾಯಾಂಗ ವ್ಯವಸ್ಥೆ ತಕ್ಷಣ ಪರಿಹಾರ ಕಾಣಲೆತ್ನಿಸುವ ಅಡ್ಡದಾರಿಗಳನ್ನು ಬದಿಗೊತ್ತಿ ಸಮಗ್ರವಾಗಿ ಕಾರ್ಯ ನಿರ್ವಹಿಸಬೇಕಾಗಿದೆ.

ಬಿಜೆಪಿಗೆ ಬಹುಬೇಗ ತಾನು ಒಳ್ಳೆಯ ಕೆಲಸ ಮಾಡುತ್ತಿದ್ದೇವೆಂದು ತೋರಿಸುವ ಬಯಕೆ. ಆರ್ಥಿಕ ವಿಷಯದಲ್ಲೂ ಕೂಡ ಬಿಜೆಪಿ ರೀತಿ ನೀತಿಗಳಿಗೆ ಬಹಳ ಒತ್ತು ಕೊಡುತ್ತಿತ್ತು. ದಶಕಗಳಿಂದ ನೆನೆಗುದಿಗೆ ಬಿದ್ದಿದ್ದ ಕಾರಣದಿಂದ ಮೂಲ ಸೌಕರ್ಯಗಳು, ತಂತ್ರಜ್ಞಾನ ಮತ್ತು ಜನರ ಕೌಶಲ್ಯತೆಗಳು ದೇಶದ ಅಲ್ಪ ಸ್ವಲ್ಪ ವೃದ್ಧಿಗೆ ಕಾರಣವಾದದ್ದು ನಿಜ. ಈ ಆರ್ಥಿಕ ಅಲೆಯ ಮೇಲೆ ಕುಳಿತು ಸವಾರಿ ಮಾಡ ಬಯಸಿದ ಬಿಜೆಪಿ ಜನಸಾಮಾನ್ಯರನ್ನು ಮುರ್ಖರಾಗಿಸುವಲ್ಲಿ ವಿಫಲವಾಯಿತು. ಭಾರತ ವಿಶ್ವದ ಪ್ರಮುಖ ರಾಷ್ಟ್ರಗಳಲ್ಲೊಂದಾಗ ಬಯಸುತ್ತದೆ. ಆದರೆ ಫಲಿತಾಂಶ ತಿಳಿಯದ ದ್ವಿಪಕ್ಷೀಯ ಕಾರ್ಯಕ್ರಮಗಳಿಂದ ಇದು ಸಾಧ್ಯವಿಲ್ಲ. ಭಾರತ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಸದಸ್ಯತ್ವ ಪಡೆಯಬಯಸುತ್ತದೆ. ಪ್ರಮುಖವಾಗಿ ಅಮೆರಿಕ ಸಾಮ್ರಾಜ್ಯದಿಂದ ವಿಶ್ವವೇ ಭಯಬೀತವಾಗಿರುವಾಗ ಭಾರತ ತನ್ನ ಧ್ವನಿಯನ್ನು ಉಳಿಸಿಕೊಳ್ಳಬಯಸುತ್ತದೆ.

ಆರು ವರ್ಷಗಳ ಒಡೆದಾಳುವ ನೀತಿಯಿಂದ ಬಳಲಿರುವ ಭಾರತ ಈಗ ಗುಣಮುಖವಾಗಬೇಕಿದೆ. ಆಡಳಿತ ಜಾತ್ಯಾತೀತತೆಗೆ ಮರಳಿ ಸಂವಿಧಾನದ ಧ್ಯೇಯೋದ್ದೇಶಗಳನ್ನು ಸಕಲರಿಗೂ ನ್ಯಾಯ ದೊರಕಿಸುವ ಮೂಲಕ ಪೂರೈಸಬೇಕಾಗಿದೆ. ಜನಸಾಮಾನ್ಯರನ್ನು ಕಡೆಗಣಿಸಿ ತನಗೆ ತಾನೆ ನಡೆದುಕೊಳ್ಳುವ ಸರ್ಕಾರ ಮುಂದಿನ ಚುನಾವಣೆಯಲ್ಲಿ ನಶಿಸಿಹೋಗುತ್ತದೆ. ಉತ್ತಮ ನೀತಿ ನಿರೂಪಣೆಗಳೊಡನೆ ಜನರ ಆಶೋತ್ತರಗಳನ್ನು ಗಮನದಲ್ಲಿಡುವ ಸಮ್ಮಿಶ್ರ ಸರ್ಕಾರಗಳು ವಿಫಲವಾದವು. ಆದ್ದರಿಂದ ಸಂವಿಧಾನಿಕವಾಗಿ ಆಡಳಿತ ನಡೆಸುವುದು ಇನ್ನು ಮುಂದೆ ಸರ್ಕಾರದ ಗುರಿಯಾಗಿರಬೇಕು.

(ಸೌಜನ್ಯ 'ದಿ ಹಿಂದೂ') □

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗ ಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ದಲಿತ್ ಡೈರಿ

ಜಾಗತೀಕರಣದ ಈ ಯುಗದಲ್ಲಿ ಬಂಡವಾಳ ಮಾರುಕಟ್ಟೆಯ ಬಾಗಿಲನ್ನು ದಲಿತರಿಗೆ ತೆರೆಯುವ ಮೂಲಕ ಕಾಂಗ್ರೆಸ್ ಒಂದು ಹೊಸ ಪ್ರಯತ್ನವನ್ನು ನಡೆಸಿದೆ. ದಲಿತ ಹಕ್ಕುಗಳ ವಿಚಾರಧಾರೆಯಲ್ಲಿ ಇದೊಂದು ಹೊಸ ಅಧ್ಯಾಯವೇ ಸರಿ. ಬಂಡವಾಳ ಮಾರುಕಟ್ಟೆಯ ಖಾಸಗೀ ವಲಯದಲ್ಲಿ ದಲಿತ ಹಕ್ಕುಗಳ ಬಗ್ಗೆ ಈ ಹಿಂದೆ ಎಂದೂ ಕಾಂಗ್ರೆಸ್‌ನಂಥ ರಾಷ್ಟ್ರೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಚರ್ಚಿಸಿರಲಿಲ್ಲ. ಖಾಸಗೀಕರಣದ ಈ ಯುಗದಲ್ಲಿ ದಲಿತರ ಮಹತ್ವದ ಹಕ್ಕಾದ ಸರ್ಕಾರೀ ಉದ್ಯೋಗಗಳಲ್ಲಿ 'ಸಕಾರಾತ್ಮಕ ಕ್ರಮ' (ಮೀಸಲಾತಿ) ವನ್ನು ನಿಜವಾಗಿಯೂ ಕಳೆದುಕೊಳ್ಳಬೇಕಾಗುತ್ತದೆ ಮತ್ತು ಕೈಗಾರಿಕೆಯಲ್ಲಿ ದಲಿತರ ಹಕ್ಕುಗಳ ಬಗ್ಗೆ ಚಿಂತಿಸಿದ್ದಿಲ್ಲ.

❍ ಅನು : ಡೊಮಿನಿಕ್.ಡಿ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಬಂಡವಾಳ ಮಾರುಕಟ್ಟೆಯ ಬಾಗಿಲು ದಲಿತರಿಗೆ ತೆರೆಯುವುದೇ ?

ಕೊನೆಗೂ ಸಿಹಿಸುದ್ದಿ! ದೆಹಲಿಯಲ್ಲಿನ ಕಾಂಗ್ರೆಸ್ ಪ್ರಧಾನ ಕಛೇರಿಗೆ ಕೆಲವು ರಂಜನೀಯ ಮತ್ತು ಭಯಾನಕ ಮುಖಗಳು ಎದುರಾದ ಹೊರತಾಗಿಯೂ ಸೋನಿಯಾಗಾಂಧಿ ಬಿಡುಗಡೆಮಾಡಿದ ಪಕ್ಷದ ಪ್ರಣಾಳಿಕೆಯು ಇವತ್ತಿನ ದಲಿತ ವಿಚಾರಧಾರೆಯಲ್ಲಿನ ಮಹತ್ವದ ಪ್ರಶ್ನೆಯನ್ನು ಚರ್ಚಿಸಿದೆ.

'ದಲಿತರು ಮತ್ತು ಆದಿವಾಸಿಗಳು' ಎಂಬ ಕಾಂಗ್ರೆಸ್ ಪ್ರಣಾಳಿಕೆಯ ಉಪಭಾಗ (ಪು.೨೧) ದಲ್ಲಿರುವ ಭರವಸೆಯ ಮಾತುಗಳು ಹೀಗಿವೆ, 'ದಲಿತರು ಮತ್ತು ಆದಿವಾಸಿಗಳು ಖಾಸಗೀ ವಲಯದಲ್ಲಿ ನ್ಯಾಯಯುತ ಉದ್ಯೋಗವನ್ನುಪಡೆಯುವುದರತ್ತ ರಾಷ್ಟ್ರೀಯ ಒಮ್ಮತ ಮೂಡಿಸುತ್ತದೆ. ಭಾರತೀಯ ಕೈಗಾರಿಕೋದ್ಯಮವು ಯುವಜನಾಂಗದ ಅದರಲ್ಲೂ ವಿಶೇಷವಾಗಿ ಸಮಾಜದ ದುರ್ಬಲವರ್ಗದ ಆಶೋತ್ತರಗಳಿಗೆ ಎಷ್ಟು ಉತ್ತಮವಾಗಿ ಸ್ಪಂದಿಸುತ್ತದೆ ಎಂಬುದರ ಕುರಿತು ಖಾಸಗೀ ಕೈಗಾರಿಕೋದ್ಯಮದೊಡನೆ ಮಾತುಕತೆಯನ್ನು ಆರಂಭಿಸುತ್ತದೆ. ದಲಿತರಿಗೆ ಮತ್ತು ಆದಿವಾಸಿಗಳ ವಾಣಿಜ್ಯ ಉದ್ದೇಶಕ್ಕೆ ಪೂರಕವಾಗಿರುವಂತೆ ಸರ್ಕಾರದ ಸಕಾರಾತ್ಮಕ ಬೆಂಬಲ ಮತ್ತು ಸುಲಭ ಕಂತುಗಳಲ್ಲಿ ಬ್ಯಾಂಕ್ ಸಾಲ ಒದಗಿಸುವ ಮೂಲಕ ನಿರ್ಧಾರಾತ್ಮಕ ಪ್ರಯತ್ನಗಳನ್ನು ಮಾಡಿ, ಉದ್ಯಮಶೀಲ ಪ್ರವೃತ್ತಿಯನ್ನು ಬೆಳೆಸಲಾಗುವುದು.'

ಅಂದರೆ ಜಾಗತೀಕರಣದ ಈ ಯುಗದಲ್ಲಿ ಬಂಡವಾಳ ಮಾರುಕಟ್ಟೆಯ ಬಾಗಿಲನ್ನು ದಲಿತರಿಗೆ ತೆರೆಯುವ ಮೂಲಕ ಕಾಂಗ್ರೆಸ್ ಒಂದು ಹೊಸ ಪ್ರಯತ್ನವನ್ನು ನಡೆಸಿದೆ. ದಲಿತ ಹಕ್ಕುಗಳ ವಿಚಾರಧಾರೆಯಲ್ಲಿ ಇದೊಂದು ಹೊಸ ಅಧ್ಯಾಯವೇ ಸರಿ. ಬಂಡವಾಳ ಮಾರುಕಟ್ಟೆಯ ಖಾಸಗೀ ವಲಯದಲ್ಲಿ ದಲಿತ ಹಕ್ಕುಗಳ ಬಗ್ಗೆ ಈ ಹಿಂದೆ ಎಂದೂ ಕಾಂಗ್ರೆಸ್‌ನಂಥ ರಾಷ್ಟ್ರೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಚರ್ಚಿಸಿರಲಿಲ್ಲ.

ಖಾಸಗೀಕರಣದ ಈ ಯುಗದಲ್ಲಿ ದಲಿತರ ಮಹತ್ವದ ಹಕ್ಕಾದ ಸರ್ಕಾರೀ ಉದ್ಯೋಗಗಳಲ್ಲಿ 'ಸಕಾರಾತ್ಮಕ ಕ್ರಮ' (ಮೀಸಲಾತಿ) ವನ್ನು ನಿಜವಾಗಿಯೂ ಕಳೆದುಕೊಳ್ಳಬೇಕಾಗುತ್ತದೆ ಮತ್ತು ಕೈಗಾರಿಕೆಯಲ್ಲಿ ದಲಿತರ ಹಕ್ಕುಗಳ ಬಗ್ಗೆ ಯಾವುದೇ ರಾಜಕೀಯ ಪಕ್ಷವೂ ಇಲ್ಲಿವರೆಗೆ ಗಂಭೀರವಾಗಿ ಚಿಂತಿಸಿದ್ದಿಲ್ಲ. ನಿಜ ಹೇಳಬೇಕೆಂದರೆ ಈ ಆಶೋತ್ತರವು ಬಿ.ಎಸ್.ಪಿ. ಅಥವಾ ಎಡಪಂಥೀಯ/ಜಾತ್ಯಾತೀತ ವೇದಿಕೆಗಳಿಂದ ಬರಬೇಕಿತ್ತು. ಬಿ.ಎಸ್.ಪಿಯಲ್ಲಿ ಪಕ್ಷದ ನೀತಿ ನಿರೂಪಕರ್‍ಯಾರೂ ಕೈಗಾರಿಕೆ ಮತ್ತು ವಾಣಿಜ್ಯದೊಡನೆ ಅಷ್ಟೊಂದು ಸಂಪರ್ಕವನ್ನಿಟ್ಟುಕೊಳ್ಳದ್ದರಿಂದ ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ವಲಯಗಳಲ್ಲಿ ಸಕಾರಾತ್ಮಕ ಕ್ರಿಯೆಗೆ ಆದ್ಯತೆ ಇರುವಂಥ ಅಮೆರಿಕಾಗೆ ಅವರೆಂದೂ ಭೇಟಿ ನೀಡಿಲ್ಲವಾದ್ದರಿಂದ ಅವರನ್ನು ಮನ್ನಿಸಬಹುದಾಗಿದೆ. ಬಿ.ಎಸ್.ಪಿ ಯ ನಾಯಕತ್ವದಲ್ಲಿ ಇಂಥ ಅರ್ಥಶಾಸ್ತ್ರ ನೀತಿಗಳ ಬಗ್ಗೆ ಗಹನವಾದ ಬೌದ್ಧಿಕ ಚಿಂತನೆಯೇನೂ ನಡೆದಿಲ್ಲ.

ಪಾಲುದಾರಿಕೆಯನ್ನು ಕುರಿತ ಕಾಂಗ್ರೆಸ್ ಪ್ರಣಾಳಿಕೆ

ಆದರೆ ಇಂಥ ಮಹತ್ವದ ಸಂಗತಿಯ ಬಗ್ಗೆ ಪರಿಗಣಿತ ರೂಪುರೇಷೆಗಳ ಮೂಲಕ ಮೌನವಾಗಿರುವ ಎಡಪಂಥೀಯ/ಜಾತ್ಯಾತೀತ/ಲಿಬರಲ್ ವಿಭಾಗದ ನಾಯಕರು ತಮ್ಮ ಮಕ್ಕಳನ್ನು ಯುರೋಪ್ ಅಥವಾ ಅಮೆರಿಕಾಗಳಲ್ಲಿ ಓದಿಸುತ್ತಾ ಜಗತ್ತಿನ ಆಗುಹೋಗುಗಳ ಬಗ್ಗೆ ಪರಿಚಯ ಉಳ್ಳವರಾಗಿದ್ದಾರೆ ಹಾಗೂ ಆರ್ಥಿಕ ನಿಯಮದ ಬಗ್ಗೆ ಸಾಕಷ್ಟು ತಿಳಿದವರೂ ಆಗಿದ್ದಾರೆ. ಭಾರತದಾದ್ಯಂತ ಅವರ ಅನೇಕ ಸಾಮಾಜಿಕ ವಿಭಾಗಗಳು ದಲಿತರನ್ನು ಎದುರು ಹಾಕಿಕೊಂಡಿವೆ. ಇದರ ಹೊರತಾಗಿಯೂ ಅವರು ಪ್ರಗತಿಪರ/ಲಿಬರಲ್ ಅವಕಾಶ ಮತ್ತು ಅದನ್ನು ಅವರು ಹೊಂದಿದವರಾಗಿ, ಕಾಂಗ್ರೆಸ್‌ಗಿಂತ ಮೊದಲೇ ಮೇಲಿನ ಭರವಸೆಯನ್ನು ನೀಡಬೇಕಿತ್ತು. ಈ ದೇಶದ ಆರ್ಥಿಕ ಬದುಕಿನಲ್ಲಿ ದಲಿತರನ್ನು ಹೊರತುಪಡಿಸಿರುವ ವ್ಯವಸ್ಥೆಯನ್ನು ಕೊನೆಗಾಣಿಸದೆ ಭಾರತದಲ್ಲಿ ನೈಜ ಪ್ರಗತಿ ಅಥವಾ ಜಾತ್ಯಾತೀತ ಸಮಾಜವನ್ನು ಕಟ್ಟಲಾದೀತೆ?

ಕಮ್ಮಿ ಅಂದರೂ ದಲಿತ ಹಕ್ಕುಗಳ ಬಗ್ಗೆ ಒಂದು ಹೊಸ ಚರ್ಚೆಯನ್ನು ಆರಂಭಿಸಲು ಅನುವು ಮಾಡಿಕೊಟ್ಟ ಕಾಂಗ್ರೆಸ್ ಪಕ್ಷ ಹಾಗೂ ಅದರ ನಾಯಕಿ ಸೋನಿಯಾಗಾಂಧಿಯನ್ನು ನಾವು ಅಭಿನಂದಿಸಲೇಬೇಕು. ದಲಿತ ಜನಪ್ರಿಯತೆಯಲ್ಲಿ ಉದಾರೀಕರಣದ ಹೊಸ ಆರ್ಥಿಕ ನೀತಿಯನ್ನು ಜಾರಿಯಾಗಿಸಿದ್ದು ಅಂದಿನ ಕಾಂಗ್ರೆಸ್ ಸರ್ಕಾರದ ನರಸಿಂಹ ರಾವ್ ಎಂದು ತಿಳಿದಿದೆ.

ಕಾಂಗ್ರೆಸ್ ಆರಂಭಿಸಿದ ಆರ್ಥಿಕ ನೀತಿ ಹಾಗೂ ಅನಂತರದಲ್ಲಿ ಎನ್‌ಡಿಎ ಸರ್ಕಾರ ಉತ್ಸಾಹದಿಂದ ಅನುಸರಿಸಿದ ನೀತಿಯ ನಡುವೆ ವ್ಯತ್ಯಾಸವನ್ನು ದಲಿತರು ಗುರುತಿಸಲಾಗುತ್ತಿಲ್ಲ. ಇಂದು 'ಉದಾರೀಕರಣ ನೀತಿಯಿಂದ ಆಗಿರುವಂಥ ಅನಾಹುತಗಳನ್ನು ತಾನು ನಿಭಾಯಿಸಲು ತಯಾರಿದ್ದೇನೆಂದು ಕಾಂಗ್ರೆಸ್ ಹೇಳಿಕೊಳ್ಳುತ್ತಿರುವುದರಿಂದ ಕಾಂಗ್ರೆಸ್ ಮತ್ತು ಎನ್.ಡಿ.ಎ.ಗಳ ಮಧ್ಯೆ ಇರುವಂಥ ವ್ಯತ್ಯಾಸಗಳನ್ನು ದಲಿತರು ಅರಿಯತೊಡಗಿದ್ದಾರೆ.

ಆದರೆ ಈ ಭರವಸೆಗಳು ಸಮರ್ಥನೀಯವಾಗಬೇಕಾದರೆ, 'ಕ್ರಿಯಾರೂಪಕ್ಕಿಳಿಯಬೇಕೆಂಬುದನ್ನು ಕಾಂಗ್ರೆಸ್ ಅರ್ಥೈಸಬೇಕಿದೆ. 'ಸರ್ಕಾರದ ಟೆಂಡರ್‌ಗಳಲ್ಲಿ ಆದ್ಯತೆಯ ಪರಿಗಣನೆ' ಎಂಬುದನ್ನು ಕಾಂಗ್ರೆಸ್ ಪ್ರಣಾಳಿಕೆಯು ದಲಿತರಿಗೆ ಭರವಸೆ ನೀಡಿದೆ. ಇದನ್ನು ಅಮೆರಿಕಾದಲ್ಲಿ 'ಸರಬರಾಜು ವೈವಿಧ್ಯತೆ' ಎಂದು ಕರೆಯಲಾಗುತ್ತದೆ. ಈ ನೀತಿಯೊಂದೇ ಆಫ್ರಿಕಾ ಮೂಲದ ಅಮೆರಿಕನ್ನರ ವಾಣಿಜ್ಯ ವಹಿವಾಟನ್ನು ಪ್ರೋತ್ಸಾಹಿಸಿದೆ. ಇದರಿಂದಾಗಿ ಅವರು ಅಮೆರಿಕಾದ ಆರ್ಥಿಕತೆಯಲ್ಲಿ ಪಾಲ್ಗೊಳ್ಳುವಂತಾಯ್ತು. ಆದರೆ ಅದಕ್ಕಿಂತಲೂ ಹೆಚ್ಚಾಗಿ ಈ ಆಫ್ರಿಕಾ ಅಮೆರಿಕನ್ನರ ಔದ್ಯಮಿಕ ಶಕ್ತಿ ಬೆಳೆಯಲು ಅಲ್ಲಿನ ಸರ್ಕಾರಿ ಗುತ್ತಿಗೆಗಳು ನಿರ್ಧಾರಾತ್ಮಕ ಪಾತ್ರ ವಹಿಸಿವೆ. ಈ ನಿಟ್ಟಿನಲ್ಲಿ ಕಾಂಗ್ರೆಸ್ ಪ್ರಣಾಳಿಕೆ ಅಚ್ಚರಿಯೆಂಬಂತೆ ಮೌನವಹಿಸಿದೆ. 'ಸರ್ಕಾರಿ ಗುತ್ತಿಗೆಗಳಲ್ಲಿನ ವೈವಿಧ್ಯತೆಯನ್ನು ಸುಲಭವಾಗಿ ಜಾರಿಗೊಳ್ಳಲು ಸಾಧ್ಯವಿದೆ. ಅಂದರೆ ಈ ಸರಬರಾಜು ಮತ್ತು ಗುತ್ತಿಗೆ ವೈವಿಧ್ಯತೆ ಗಳೆರಡೂ ಸೇರಿ ಸ್ವಲ್ಪ ಸಮಯದಲ್ಲೇ ಮಿಲಿಯಗಟ್ಟಳೆ ಇರುವ ಶಿಕ್ಷಿತ ದಲಿತರನ್ನು ಉದ್ಯಮಶೀಲರನ್ನಾಗಿ ಮಾಡಬಹುದಾಗಿದೆ. ಉದಾಹರಣೆಗೆ ದೇಶದಾದ್ಯಂತ ಇರುವ ವೈನ್ ಅಂಗಡಿಗಳನ್ನು ತೆಗೆದುಕೊಳ್ಳಿ. ಅವುಗಳಲ್ಲಿ ೧/೪ ರಷ್ಟನ್ನು ಎಸ್‌ಸಿ/ಎಸ್‌ಟಿ ಯುವಜನರಿಗೆ ನೀಡಿದಲ್ಲಿ ಒಂದು ಪವಾಡವೇ ಜರುಗಿಬಿಡುತ್ತದೆ.

ಪ್ರಣಾಳಿಕೆಗಳೆಲ್ಲಾ ಬರೀ ಭರವಸೆಗಳೇ. ಈ ಭರವಸೆಗಳೆಲ್ಲಾ ಭರವಸೆಗಳಷ್ಟೆ. ಆದ್ದರಿಂದಲೇ ಅವು ಭರವಸೆಗಳು. ಆದರೆ ಸೋನಿಯಾ ಗಾಂಧಿಯು ಭಾರತದ ಈ ಸಾಮಾಜಿಕ ವ್ಯವಸ್ಥೆಗೆ ಸೇರದವಳಾದ್ದರಿಂದ ಆಕೆಯನ್ನು ನಂಬಬಹುದಾಗಿದೆ. ಆಕೆಯ ಬಿಳಿಬಣ್ಣ ದಲಿತರಿಗೆ ವರದಾನವೇ ಸರಿ. ಅಂದರೆ ಕಾಂಗ್ರೆಸ್ ಪ್ರಣಾಳಿಕೆಯನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾದರೆ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲೆಲ್ಲಾ ಅದನ್ನು ಜಾರಿಯಾಗಿಸಬೇಕು. ಇದಕ್ಕಾಗಿ ರಾಜ್ಯ ಅಥವಾ ಕೇಂದ್ರದಲ್ಲಿ ಶಾಸನ ಹೊರಡಿಸಬೇಕಿಲ್ಲ. ಕಾಂಗ್ರೆಸ್ಸಿನ ಸುದೀರ್ಘ ಆಡಳಿತದಿಂದಾಗಿ ಅಲ್ಪ ಮಂದಿ ದಲಿತರಿಗೆ ಸರ್ಕಾರಿ ಉದ್ಯೋಗ ದೊರೆತಿದೆ. ಆದ್ದರಿಂದಲೇ ದಲಿತರ ಎಲ್ಲಾ ಸಮಸ್ಯೆಗಳಿಗೆ ಕಾಂಗ್ರೆಸ್ಸನ್ನೇ ದೂರುವುದು. ಆದ್ದರಿಂದ ಚಾರಿತ್ರಿಕವಾಗಿ ಈ ಪಕ್ಷದ ನಿಷ್ಠಾವಂತ ಬೆಂಬಲಿಗರಾಗಿರುವುದರಿಂದ ೧/೪ ಭಾರತೀಯ ಮತದಾರರು ದಲಿತರೇ ಆಗಿರುವುದರಿಂದ ಕಾಂಗ್ರೆಸ್ ತನ್ನ ಹಿಂದಿನದ್ದನ್ನು ಗಮನಿಸಲೇಬೇಕಾಗುತ್ತದೆ. ಅಂದರೆ ಕಾಂಗ್ರೆಸ್‌ನ ಭವಿಷ್ಯವೂ ಸಹ ದಲಿತರ ಒಳಿತಿನಲ್ಲೇ ಇದೆ.

ಭಾಜಪದ ದರ್ಶನದಲ್ಲಿ ವೈವಿಧ್ಯತೆ

ಭಾರತೀಯ ಗಣರಾಜ್ಯದ ಸ್ವಾಯತ್ತತೆಯನ್ನು ಗೌರವಿಸದೆ ೨೧ನೇ ಶತಮಾನದ ಮೊದಲ ಲೋಕಸಭೆ ಈ ಮೇನಲ್ಲಿ ಅಸ್ತಿತ್ವಕ್ಕೆ ಬರಬಹುದೇ? 'ಸ್ವತಂತ್ರ ಭಾರತ'ವೆನ್ನುವ ಸಾಮೂಹಿಕ ವಿವೇಕವು ಭಾರತೀಯ ಸಂವಿಧಾನದಲ್ಲಿ ಬಿಂಬಿತವಾಗಿದೆಯಷ್ಟೆ. ಅಂದರೆ ಈ ಗಣರಾಜ್ಯ 'ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ'ವನ್ನು ಗಳಿಸಿಕೊಳ್ಳುತ್ತದೆಯೆಂದು ಘೋಷಿಸಿದೆಯಲ್ಲವೇ. ಇಂಥ ಗಣರಾಜ್ಯದಲ್ಲಿ ವಿಶೇಷ ಪರಿಗಣನೆಗಾಗಿ ಪರಿಶಿಷ್ಟ ಜಾತಿ/ಪಂಗಡಗಳನ್ನು ಶಾಸನ ಪತ್ರದಲ್ಲಿ ವಿಶೇಷವಾಗಿ ಗುರುತಿಸಿದೆ. ಅವರ ಶಿಕ್ಷಣ ಮತ್ತು ಆರ್ಥಿಕ ಬದುಕಿಗೆ ವಿಶೇಷ ಆದ್ಯತೆಯನ್ನು ನೀಡಲಾಯಿತು. 'ಸಾಮಾಜಿಕ ನ್ಯಾಯ'ದ ಯಾವುದೇ ಚರ್ಚೆಗಳಲ್ಲಿ ಅದನ್ನು 'ಆರ್ಥಿಕ ನ್ಯಾಯ'ವನ್ನಾಗಿ ನೋಡದೆ ಮಂಡಲ್ ಪರಿವಾರ ಆ ಪರಿಕಲ್ಪನೆಯನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡುಬರುತ್ತದೆ.

ಆದರೆ 'ಭಾರತ ಪ್ರಕಾಶಿಸುತ್ತಿದೆ' ಎನ್ನುವ ಬಿಜೆಪಿಯ ಘೋಷಣೆಯಲ್ಲಿ ಅಲ್ಪಮಟ್ಟಿಗೆ 'ಖುಷಿ' ಸಂಗತಿ ಅಡಗಿದೆಯಾದರೂ, ಅದು ದಲಿತರಿಗೆ ನಿರಾಸೆಯ, ನಾಶದ ಸುದ್ದಿಯಾಗಿದೆ. ಆದರೂ ಬಿಜೆಪಿಯ ಘೋಷಣೆ 'ಆದರ್ಶ ನಿಜವಾಗಲು ಕಾಲ ಕೂಡಿ ಬಂದಿದೆ : ಭಾರತವು ಅಭಿವೃದ್ಧಿಗೊಂಡ ರಾಷ್ಟ್ರ ಮತ್ತು ಅದೊಂದು ದೈತ್ಯ ಶಕ್ತಿ' ಎನ್ನುತ್ತದೆ. ಅದರ 'ಸಾಮಾಜಿಕ ಮತ್ತು ಆರ್ಥಿಕ ನ್ಯಾಯ' (ಪುಟ ೩೪-೩೫) ಎನ್ನುವ ತಲೆ ಬರಹದಡಿ (ಎ) 'ಆರ್ಥಿಕ ಮತ್ತು ರಾಜಕೀಯ ಸಬಲೀಕರಣವಿಲ್ಲದೆ ಸಾಮಾಜಿಕ ನ್ಯಾಯ ಸಂಪೂರ್ಣವಾಗದು', ಮತ್ತು (ಬಿ) ಸಾಮಾಜಿಕ ಸೌಹಾರ್ದತೆಯನ್ನು ಹರಡುವುದರ ಮೂಲಕ ಸಾಮಾಜಿಕ ನ್ಯಾಯವನ್ನು ಸಾಧಿಸಬೇಕಾಗಿದೆ. ಈ ಆದರ್ಶಗಳನ್ನು ಕ್ರಿಯೆಯಾಗಿಸಲು ಬಿಜೆಪಿಯ ಪ್ರಕಾರ,'ಖಾಸಗೀ ಕ್ಷೇತ್ರಗಳು ಎಸ್‌ಸಿ/ಎಸ್‌ಟಿಗಳಿಗಾಗಿ ಶೈಕ್ಷಣಿಕ, ಔದ್ಯೋಗಿಕ ತರಬೇತಿಗಳನ್ನು ನೀಡುತ್ತಾ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಂತೆ ಪ್ರೋತ್ಸಾಹಿಸಲಾಗುತ್ತದೆ' ಎಂದು ಎಲ್ಲ ರಾಜಕೀಯ ಪಕ್ಷಗಳಂತೆ ತಮ್ಮ ಪ್ರಣಾಳಿಕೆಯಲ್ಲಿ ಎಂನಂತೆ ಘೋಷಿಸಲಾಗುತ್ತದೆ.

ಹೀಗೆ ಬಿಜೆಪಿಯು 'ಆರ್ಥಿಕ ನ್ಯಾಯ'ದ ಬಗ್ಗೆ ಮಾತನಾಡುವುದು ಅಚ್ಚರಿಯ ಸಂಗತಿ. ಅದರ ಅನುಷ್ಠಾನ ಬದಿಗಿರಲಿ, 'ಆರ್ಥಿಕ ನ್ಯಾಯವಿಲ್ಲದೆ ಸಾಮಾಜಿಕ ನ್ಯಾಯ ಅಪೂರ್ಣ'. ಭಾರತೀಯ ಆರ್ಥಿಕತೆಯಲ್ಲಿ ದಲಿತರ ಹಕ್ಕಿಗಾಗಿ ಕಳೆದ ನಾಲ್ಕು ವರ್ಷಗಳಿಂದಲೂ ದಲಿತ್ ಡೈರಿ ಸೆಣಸುತ್ತಲೇ ಬಂದಿದೆ. ಅಲ್ಲದೆ, ಕೋಮುಸೌಹಾರ್ದವೆಂದು ಜನರೇಕೆ ಮಾತನಾಡುತ್ತಾರೆ ಎಂಬ ಬಗ್ಗೆ ಕೌತುಕ ವ್ಯಕ್ತಪಡಿಸುತ್ತದೆ. 'ಸಾಮಾಜಿಕ ಸೌಹಾರ್ದತೆ'ಯ ಬಗ್ಗೆ ಮಾತನಾಡುವುದು ಮುಜುಗರದ ಸಂಗತಿಯೆಂದು ದಲಿತ್ ಡೈರಿ ಭಾವಿಸುತ್ತದೆ. ಈ ನಿಟ್ಟಿನಲ್ಲಿ ಬಿಜೆಪಿಯ ಪ್ರಣಾಳಿಕೆಯು ಸಾಮಾಜಿಕ ಪ್ರಶ್ನೆಗಳ ಬಗ್ಗೆ ಹೊಸ ಅಧ್ಯಾಯವನ್ನು ತೆರೆದಿದೆ.



ಮಂಡಲ್ ಘೋಷಣೆಯನ್ನು ಮೂಲೆಗೊತ್ತುವ ಸಲುವಾಗಿ ಬಿಜೆಪಿಯು ಒಂದು ತಂತ್ರವನ್ನಾಗಿ ಉಪಯೋಗಿಸಿದ್ದು ಹಾಗೆಯೇ ಜಾತ್ಯಾತೀತ ನಿಲುವನ್ನು ಕೋಮು ಸೌಹಾರ್ದ ಮಾತುಗಳಲ್ಲಿ ಒಡೆಯುತ್ತದೆ ಎಂದು ಒಬ್ಬರು ಭಾವಿಸಬೇಕಾಗಿದೆ. ಏನೇ ಇರಲಿ, ಸತ್ಯ ಜೀವಿಸಲಿ.'ಆರ್ಥಿಕ ನ್ಯಾಯವಿಲ್ಲದೆ ಸಾಮಾಜಿಕ ನ್ಯಾಯವು ಅಪೂರ್ಣ ಮತ್ತು 'ಕೋಮು ಸೌಹಾರ್ದದಂತೆ ಸಾಮಾಜಿಕ ಸೌಹಾರ್ದವು ಕೂಡಾ ಅಗತ್ಯವಾದುದು'. ಈ ಮೂಲಕವೇ ಪ್ರಗತಿಪರ, ಶಕ್ತಿಯುತ ರಾಜಕೀಯವಾಗಿ ನಿಶ್ಚಲ ಭಾರತವನ್ನು ಕಟ್ಟಬಹುದು. ಯಾವಾಗಲೂ ನಾವು ಚರ್ಚಿಸಿದಂತೆ ಒಬ್ಬ ವ್ಯಕ್ತಿ ಎಷ್ಟೇ ತಾರ್ಕಿಕ ಮತ್ತು ಪ್ರಾಮಾಣಿಕನಾಗಿದ್ದರೂ ಸಹ ಜಾತಿಗುಣಗಳು ಆತನ/ಆಕೆಯ ಸಾಮಾಜಿಕ ನಡಾವಳಿಯನ್ನು ವ್ಯಾಖ್ಯಾನಿಸುತ್ತಿರುತ್ತದೆ. ಇದು ರಾಜಕೀಯ ಪಕ್ಷಗಳಿಗೂ ಸರಿಯಾಗಿ ಅನ್ವಯಿಸುತ್ತದೆ. ಭಾರತದಲ್ಲಿ ಯಾವುದೇ ರಾಜಕೀಯ ಪಕ್ಷವೂ ಒಂದು ವಿಶಿಷ್ಟ ಸಾಮಾಜಿಕ ಮೂಲಾಧಾರವನ್ನು ಹೊಂದಿದ್ದು, ಅದರ ಜಾತಿ ವಿಭಾಗದ ಆಶೋತ್ತರಗಳನ್ನು ಅತ್ಯುತ್ತಮವಾಗಿ ಕಂಡುಕೊಂಡಿರುತ್ತದೆ. ವ್ಯಾಪಾರ ಸಮುದಾಯದೊಡನೆ ವಿಶಿಷ್ಟವಾಗಿ ಗುರುತಿಸಿಕೊಂಡಿರುವುದೆಂದರೆ ಜನಸಂಘ/ಬಿಜೆಪಿ.

ಪಾಲುದಾರಿಕೆಯನ್ನು ಕುರಿತ ಬಿಜೆಪಿ ಪ್ರಣಾಳಿಕೆ

ಆದ್ದರಿಂದ ಅದು ಭಾರತೀಯ ಕೈಗಾರಿಕೋದ್ಯಮಿಗಳು/ವ್ಯಾಪಾರಸ್ಥ ವರ್ಗವನ್ನು ಅತ್ಯುತ್ತಮವಾಗಿ ಪ್ರತಿನಿಧಿಸುತ್ತವೆ. ಆದ್ದರಿಂದ 'ಪ್ರೋತ್ಸಾಹಿಸುವಿಕೆ' ಎನ್ನುವ ಪರಿಕಲ್ಪನೆಯು 'ಖಾಸಗಿ ವಲಯದ ಉದ್ಯಮಗಳನ್ನು ಪ್ರೋತ್ಸಾಹಿಸುವುದರ ಮೂಲಕ ಎಸ್‌ಸಿಗಳು ಮತ್ತು ಎಸ್‌ಟಿಗಳಿಗೆ ಶೈಕ್ಷಣಿಕ ಮತ್ತು ಉದ್ಯೋಗ ತರಬೇತಿ ಮತ್ತು ಔದ್ಯಮಿಕ ಅವಕಾಶಗಳನ್ನು ಸೃಷ್ಟಿಸುತ್ತದೆ' ಎನ್ನುವುದು ಐನ್‌ಸ್ಟೀನ್‌ನ ಸಾಮಾನ್ಯ ಸಾಪೇಕ್ಷ ಸಿದ್ಧಾಂತವನ್ನು ಬೆಚ್ಚಿಬೀಳಿಸುತ್ತದೆ. ವ್ಯಾಪಾರಸ್ಥ/ಕೈಗಾರಿಕಾ ಉದ್ಯಮಿ ವರ್ಗದಲ್ಲಿ ಬೆಳೆದ ಬಿಜೆಪಿಯು ಅವರ ಮನಸ್ಸನ್ನು ಅದ್ಭುತವಾಗಿ ತಿಳಿದುಕೊಂಡಿದೆ: 'ಕೇವಲ ದುರಾಸೆಯಷ್ಟೇ ಅವರ ವ್ಯಕ್ತಿತ್ವವಾಗಿದೆ. ಆದ್ದರಿಂದ, ಭಾರತೀಯ ಕೈಗಾರಿಕೆ, ವಾಣಿಜ್ಯ ಮನೆಗಳ ಉದ್ಯಮಿಗಳಿಗೆ 'ದುರಾಸೆ'ಯು ದೈವ ಮತ್ತು ಧರ್ಮವಾಗಿದೆ. ಉಳಿದೆಲ್ಲ-ಮಾತೃಭೂಮಿ, ರಾಷ್ಟ್ರ ಸಮಾಜ, ನಾಗರಿಕತೆ, ಒಳಿತು ಅಥವಾ ಕೆಡುಕುಗಳೆಲ್ಲವು ಎರಡನೆಯ ದರ್ಜೆಯದ್ದು. ಸೋನಿಯಾ ಗಾಂಧಿಯವರನ್ನು ಒಬ್ಬ ವ್ಯಕ್ತಿಯೆಂದು ನಾನು ಮೆಚ್ಚಿಕೊಳ್ಳುತ್ತೇನೆ. ಅವರು ಜಾತಿಯ ಈ ಭೂಮಿಗೆ ಸಂಬಂಧಿಸಿದವರಲ್ಲ. ಆದರೆ ಖಾಸಗಿ ರಂಗದೊಡನೆ ಸಂವಾದ ಮತ್ತು ರಾಷ್ಟ್ರೀಯ ಒಮ್ಮತವನ್ನು ಮೂಡಿಸುವುದರ ಬಗೆಗಿನ ಅವರ ಪ್ರಸ್ತಾವನೆಯನ್ನು ನಾನು ಖಂಡಿತವಾಗಿಯೂ ಒಪ್ಪಿಕೊಳ್ಳುವುದಿಲ್ಲ. ಸಾಮಾಜಿಕವಾಗಿ ಮೂಕರಾಗಿರುವ ಕೈಗಾರಿಕೋದ್ಯಮಿಗಳೊಡನೆ ಮಾತುಕತೆ ನಡೆಸುವುದು ಮತ್ತು ಆತ್ಮಸಾಕ್ಷಿ ಇಲ್ಲದವರೊಡನೆ ರಾಷ್ಟ್ರೀಯ ಒಮ್ಮತವನ್ನು ಮೂಡಿಸುವುದಾದರೂ ಹೇಗೆ? 'ಮಾತುಕತೆ ಮತ್ತು ಒಮ್ಮತಗಳೆರಡನ್ನು ಭಾರತೀಯ ಉದ್ಯಮ/ವಾಣಿಜ್ಯ ಕುಟುಂಬಗಳಿಂದ ಖರೀದಿಸಬಹುದಾಗಿದೆ. ಮನಸ್ಸುಗಳು, ಆತ್ಮ ಸಾಕ್ಷಿಗಳು, ಅಭಿಪ್ರಾಯಗಳು ಯಾರತ್ತಿರ ಇಲ್ಲವೋ ಅವರತ್ತಿರ ಕೊಳ್ಳಲು ಸುಲಭ. ಈ ಅರ್ಥದಲ್ಲಿ ಬಿಜೆಪಿಯ ದಾರ್ಶನಿಕ ಪ್ರಣಾಳಿಕೆಯು ಒಂದು ಅತ್ಯಗತ್ಯ ಪ್ರಶ್ನೆಯಾಗುತ್ತದೆ.

ಆದರೆ, ಈ ಧ್ಯೇಯೋದ್ದೇಶಗಳಿಗೆ ಬಿಜೆಪಿಯು, ಪ್ರಾಮಾಣಿಕವಾಗಿದೆಯೇ ಅಥವಾ ಖಾಸಗಿ ವಲಯದಲ್ಲಿ ದಲಿತರ ಪಾಲನ್ನು ನೀಡುತ್ತೇವೆನ್ನುವ ಕಾಂಗ್ರೆಸ್ ಎಷ್ಟು ಪ್ರಾಮಾಣಿಕ? ಖಾಸಗಿ ವಲಯದಲ್ಲಿ ದಲಿತರ ಪಾಲಿನ ಬಗ್ಗೆ ಮಾತನಾಡುವ ಸೋನಿಯಾ ಮತ್ತು ವಾಜಪೇಯಿಯವರ ಬಗ್ಗೆ ಖುಷಿ ಪಡಬಹುದಾದರೂ ದಲಿತ ಸಮುದಾಯ ಮತ್ತು ಬುದ್ಧಿಜೀವಿಗಳ ಬೆಂಬಲ ಇಲ್ಲದಿರುವುದರಿಂದ ಅದರ ಬಗ್ಗೆ ಎಚ್ಚರ ಅಗತ್ಯ. ಕಾಂಗ್ರೆಸ್ ಮತ್ತು ಬಿಜೆಪಿಗಳೆರಡೂ ಒಂದು ಸಾಮಾಜಿಕ ಅನಿಶ್ಚಿತತೆಯ ಲಕ್ಷಣದಲ್ಲಿ ಸಿಲುಕಿಕೊಂಡಂತೆ ಕಾಣಿಸುತ್ತದೆ. ಅಂದರೆ 'ತಾವು ದಲಿತರಿಗೆ ಭರವಸೆ ನೀಡಿದಂತೆ ನಡೆದುಕೊಳ್ಳುತ್ತಿಲ್ಲ'. ಅವರಿಗೆ ಹೊಸ ದಲಿತ ಜನಾಂಗವು ಅವರನ್ನು ನೋಡುತ್ತಿದೆ ಎಂಬುದರ ಬಗ್ಗೆ ಎಚ್ಚರವಿದ್ದಂತಿಲ್ಲ. ಮೊದಲನೆಯ ಮಹತ್ತ್ವದ ಪ್ರಶ್ನೆಯೆಂದರೆ ಭಾರತೀಯ ಆರ್ಥಿಕತೆಯಲ್ಲಿ ದಲಿತರು ಭಾಗೀದಾರರಾಗಬೇಕು. ಎರಡು ಪಕ್ಷಗಳು ಸಹ ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದೆ. ಸರಬರಾಜು/ಒಪ್ಪಂದ/ಗುತ್ತಿಗೆ ವೈವಿಧ್ಯತೆಯನ್ನು ನೀಡದಿರುವಂತೆ ಅವರನ್ನು ತಡೆಯುತ್ತಿರುವವರು ಯಾರು? ಖಾಸಗಿ ವಲಯದಿಂದ ಅಥವಾ ಶಾಸನಾಂಗದಿಂದ ಅವರಿಗೆ ಅನುಮೋದನೆ ಬೇಕಿದೆಯೇ? ದಲಿತ ಚರಿತ್ರೆಯು ಈ ಎಲ್ಲ ಚಲನೆಯನ್ನು ಗಮನಿಸುತ್ತದೆ.

ಡಾ|| ಅಂಬೇಡ್ಕರ್ ಮತ್ತು ಅವರ ಅನುಯಾಯಿಗಳು

ಜನವರಿ ೨೭, ೧೯೧೯ ಅಂದರೆ ಒಂದು ಶತಮಾನದ ಹಿಂದೆಯೇ ೨೮ನೇ ವಯಸ್ಸಿನಲ್ಲಿ ಡಾ|| ಅಂಬೇಡ್ಕರ್‌ರವರು ಅಂದಿನ ಚುನಾವಣಾ ಆಯೋಗದ ಅಧ್ಯಕ್ಷರಾದ ಲಾರ್ಡ್ ಸೌತ್ ಬರೋ ಅವರಿಗೆ ಲಿಖಿತ ಸಾಕ್ಷಿಯನ್ನು ಸಲ್ಲಿಸಿದ್ದರು. ಅವರ ವಾದದ ಪ್ರಕಾರ ಹಿಂದೂಗಳು, ಮುಸ್ಲಿಮರು, ಪಾರ್ಸಿ ಇತ್ಯಾದಿ ಜನರೊಡನೆ, ವ್ಯತ್ಯಾಸಗಳನ್ನು ಗುರುತಿಸುವುದಕ್ಕಿಂತಲೂ 'ಅಸ್ಪೃಶ್ಯರು ಮತ್ತು ಸ್ಪೃಶ್ಯರು' ನಡುವಿನ ವ್ಯತ್ಯಾಸಗಳು ಎದ್ದು ಕಾಣುವಂಥದು. 'ಭಾರತೀಯ ಸಾಮಾಜಿಕ ಬದುಕಿನಲ್ಲಿ ಅಸ್ಪೃಶ್ಯರೆನ್ನುವುದು ಒಂದು ಪತ್ಯೇಕ ಅಂಶ. ಆದ್ದರಿಂದ ಹಾಗೆಯೇ ಜನರನ್ನು ಪರಿಗಣಿಸಿ ಧಾರ್ಮಿಕ ಅಲ್ಪಸಂಖ್ಯಾತರಿಗೆ ನೀಡಿರುವ ಎಲ್ಲ ಹಕ್ಕುಗಳು ಮತ್ತು ಅನುಕೂಲಗಳನ್ನು ಅಲ್ಪಸಂಖ್ಯಾತರಾದ ಅಸ್ಪೃಶ್ಯರಿಗೂ ನೀಡಬೇಕು.

ಕಾಲವೂ ತನ್ನ ವಿಶಿಷ್ಟ ವೇಗಗತಿಗಳಿಂದ ಅತ್ಯಾಧುನಿಕ ಯುಗವನ್ನು ಪ್ರವೇಶಿಸುತ್ತದೆ. ೧೯೯೯ರಲ್ಲಿ ೨೮ರ ಹರೆಯದ ವ್ಯಕ್ತಿ ಇವತ್ತಿನ ಗ್ರಹಿಕೆಯಲ್ಲಿ ೨೦ ವರ್ಷದ ವ್ಯಕ್ತಿಯಂತೆ ಸಾಮಾಜಿಕ ವಾಸ್ತವಗಳನ್ನು ಚಿಂತಿಸಬಹುದು. ಆ ವಯಸ್ಸಿನಲ್ಲಿ ಅಂದು ಡಾ|| ಅಂಬೇಡ್ಕರ್‌ರವರು ಭಾರತದಲ್ಲಿನ ಬ್ರಿಟಿಷ್ ಸಂಬಂಧವನ್ನು ಪ್ರಶ್ನಿಸುತ್ತಾ ಭಾರತದಲ್ಲಿನ ಹಿಂದೂ ಮುಸ್ಲಿಂ ವ್ಯವಸ್ಥೆಯನ್ನು ಸವಾಲಿಗೊಡ್ಡಿದ್ದರು.

ಇಂದು, ಒಬ್ಬ ಸಾಮಾನ್ಯ ದಲಿತ ತನ್ನ ಮೋಟಾರ್ ಬೈಕಿನಲ್ಲಿ ಬ್ರಾಹ್ಮಣ/ ಕಮ್ಮ/ ಒಕ್ಕಲಿಗ/ ತೇವಾಣ/ ಮರಾಠ/ ಪಟೇಲ/ ಇಳವಾಗಳು ವಾಸಿಸುವ ಜಾಗಗಳಲ್ಲಿ ಬುರ್ರೆಂದು ಸಾಗುವುದು ತಮಾಷೆಯಷ್ಟೇ. ಅದೇ ೮೫ ವರ್ಷಗಳ ಹಿಂದೆ ಆತ ಭೂಮಿ ತಾಯಿಯನ್ನು ದೃಷ್ಟಿಸುತ್ತಾ ನಡೆಯಬೇಕಾಗಿತ್ತು. ಹೀಗಿರುವಲ್ಲಿ ಮೂರು ಸಾವಿರ ವರ್ಷಗಳ ಬಿಗಿ ಚರಿತ್ರೆಯನ್ನು ಎದುರಿಸಲು ಡಾ|| ಅಂಬೇಡ್ಕರ್‌ರವರಿಗೆ ಬೌದ್ಧಿಕ ಧೈರ್ಯವಿತ್ತು. ಅವರ ಹಿಂದಿರುವ ಪ್ರೇರಣಾ ಶಕ್ತಿಯಾದರೂ ಏನು?

೧೯೧೭ ರಲ್ಲಿ ಕೇವಲ ೬.೬೩ ಲಕ್ಷ ದಲಿತರಷ್ಟೇ ಶಾಲೆಗಳಲ್ಲಿ ದಾಖಲಾತಿ ಪಡೆದಿದ್ದರು. ಅವರಲ್ಲಿ ಎಷ್ಟು ಮಂದಿ ದಿನಪತ್ರಿಕೆಗಳನ್ನು ಓದುತ್ತಿದ್ದರೆಂದು ಹೇಳಲಾಗದು. ಹಾಗೆಯೇ ಭಾರತ ಸಂವಿಧಾನದ ಕರಡು ಪ್ರತಿಯನ್ನು ಸಲ್ಲಿಸುವಾಗ ಅದರಲ್ಲಿ ಅಸ್ಪೃಶ್ಯತೆಯ ಎಲ್ಲ ಆಚರಣೆಗಳನ್ನು ಕಾನೂನು ಬಾಹಿರವೆಂದು ಅಧಿಕಾರಯುತವಾಗಿ ಘೋಷಿಸಿದರು. ಅಂದರೆ ಸುಮಾರು ೨೧.೫೮ ಲಕ್ಷ ದಲಿತರು ಪ್ರಾಥಮಿಕ ಶಿಕ್ಷಣದಿಂದ ಯೂನಿವರ್ಸಿಟಿಯವರೆಗೆ ದಾಖಲಾಗಿದ್ದರು. ಅಂಬೇಡ್ಕರ್‌ರವರು ಆ ಹೋರಾಟವನ್ನು ಗೆದ್ದರಲ್ಲದೆ ಮಾರ್ಗವನ್ನು ತೋರಿಸಿದ್ದರು. ಇವತ್ತು (೧೯೯೬-೯೭) ಕೇವಲ ಪದವಿ ಶಿಕ್ಷಣದಲ್ಲೇ ೬.೧೪ ಲಕ್ಷ ದಲಿತರು ಪ್ರವೇಶ ಪಡೆದಿದ್ದಾರೆ. ಅಂದರೆ ಅಂಬೇಡ್ಕರ್‌ರವರು ಸೌತ್ ಬರೋ ಸಮಿತಿ ಎದುರು ನಿಂತಾಗ ದಾಖಲಾದ ಒಟ್ಟು ಸಂಖ್ಯೆಗಿಂತ ೪೬,೦೦೦ ಕಮ್ಮಿಯಷ್ಟೇ. ಇವತ್ತು(೧೯೯೬-೯೭) ಎಲ್ಲ ವರ್ಗದ ದಲಿತರನ್ನು ಸೇರಿಸಿ ಶಿಕ್ಷಣದಲ್ಲಿ ದಾಖಲಾದ ಸಂಖ್ಯೆಯನ್ನು ಗುರುತಿಸುವುದಾದರೆ ೪.೦೮ ಕೋಟಿಗಳಷ್ಟಿದೆ. ೧೯೫೦ರಲ್ಲಿ ಪಾವಿತ್ರ್ಯದ ದಾರವುಟ್ಟ ಸಂವಿಧಾನ ಸಭೆಯಲ್ಲಿ ಡಾ|| ಅಂಬೇಡ್ಕರ್‌ರವರು ಚರ್ಚೆ ಮಾಡುತ್ತಿರಬೇಕಾದರೆ, ಆಗ ದಲಿತ ಮಧ್ಯಮ ವರ್ಗ ಇತ್ತೆಂಬುದರ ಬಗ್ಗೆ ನಮಗೆ ಸ್ಪಷ್ಟ ಚಿತ್ರ ಸಿಗುವುದಿಲ್ಲ.

ಆದರೆ ೧೯೬೦ರ ಆರಂಭಕ್ಕೆ ಅಲ್ಪಮಟ್ಟಿನ ಚಿತ್ರಣ ದೊರೆಯುತ್ತದೆ. ೧೯೬೨ರಲ್ಲಿ ಎಸ್‌ಸಿ/ಎಸ್‌ಟಿ ಕಮಿಷನರ್ ವರದಿಯು ಸೂಚಿಸುವಂತೆ ವರ್ಗ III ಕೇಂದ್ರ ಸರ್ಕಾರದಲ್ಲಿ ಉದ್ಯೋಗಸ್ಥರಾದ ದಲಿತರ ಸಂಖ್ಯೆ ೭೯.೦೫ ಸಾವಿರವಾಗಿತ್ತು. ವರ್ಗ I ರಲ್ಲಿನ ದಲಿತ ಅಧಿಕಾರಿಗಳ ಸಂಖ್ಯೆ ಕೇವಲ ೨೧೧. ವರ್ತಮಾನದಲ್ಲಿ(೧೯೯೫) ವರ್ಗ I ದಲಿತ ಅಧಿಕಾರಿಗಳ ಸಂಖ್ಯೆ ೬೭೦೦೭ ಸಾವಿರಗಳಾಗಿವೆ.

ಇಂಥ ಪವಾಡ ಸದೃಶ ಸಾಧನೆಯನ್ನು ಮಾಡಿದ ಅಂಬೇಡ್ಕರರ ಸಂದರ್ಭವನ್ನು ಊಹಿಸುವುದು ಅಸಾಧ್ಯ. ಆಗ ಕೇವಲ ೬೧.೪೯ ಲಕ್ಷ ದಲಿತರು ಪದವಿ ಶಿಕ್ಷಣದಲ್ಲಿ ಪ್ರವೇಶ ಪಡೆದರೆ, ಇಂದು ಅಷ್ಟೇ ಸಂಖ್ಯೆಯು ವರ್ಗ I ರ ಸೇವೆಗಳಲ್ಲಿದ್ದಾರೆ. ನಾವಿಂದು ಚರ್ಚಿಸುತ್ತಿರುವ ಅನೇಕ ಸಂಗತಿಗಳು ಅಂದೇ ಪರಿಹಾರ ಕಂಡುಕೊಂಡಿದ್ದವು. ಅವರ ಕಾಲದಲ್ಲಿ ದಲಿತ ಮಧ್ಯಮವರ್ಗವಾಲೀ ಅಥವಾ ಬುದ್ಧಿಜೀವಿಗಳ ಬೆಂಬಲವಾಗಲೀ, ಅವರ ಪ್ರಚಾರಕರಾಗಿ ಅಥವಾ ಮಧ್ಯಮ ವರ್ಗ ಅಭಿಪ್ರಾಯವನ್ನಾಗಲೀ ರೂಪಿಸಲು ಇರಲಿಲ್ಲ.

ಆದರೂ ಅವರು ಸೆಣಸಿದ ಯುದ್ಧಗಳಲ್ಲಿ ಗೆದ್ದು ಮಿಲಿಯ ಗಟ್ಟಲೆ ದಲಿತರಿಗೆ ಉಣಬಡಿಸಿದ್ದಾರೆ.

ದಾಖಲೆಗಾಗಿ ಕಳೆದ ಒಂದು ಸಾವಿರ ವರ್ಷಗಳಲ್ಲಿ ಯಾವ ನಾಯಕನೂ ಹೊಂದಿರದ ಅನುಯಾಯಿಗಳನ್ನು ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಹೊಂದಿದ್ದಾರೆ. ಬುದ್ಧ ಅಥವಾ ಕ್ರಿಸ್ತನ ಅನಂತರದಲ್ಲಿ ಅಂಬೇಡ್ಕರ್‌ರವರಿಗೆ ಸರಿಸಾಟಿ ಯಾರೂ ಇಲ್ಲ. ಇದು ಯಾವುದೇ ರಾಜ್ಯಾಂಗದ (ಪ್ರಭುತ್ವ)ದ ಬೆಂಬಲವಿಲ್ಲದೆ. ಈ ತಿಂಗಳು ಜಗತ್ತಿನ ಯಾವುದೇ ಭಾಗದಲ್ಲಿರುವ ದಲಿತನೂ ಸಹ ಅಂಬೇಡ್ಕರ್‌ರವರ ಆಚರಣೆಯಲ್ಲಿ ತೊಡಗುತ್ತಾನೆ. ಕೃತಘ್ನ ಸಮಾಜವಾದ ಭಾರತ ಅಂಬೇಡ್ಕರ್‌ರವರನ್ನು ನಿರ್ಲಕ್ಷಿಸಬಹುದು. ಆದರೆ ಶೋಷಿತರಿಗೆ ಆತ ಕ್ರಿಸ್ತನಿಗಿಂತಲೂ ಹೆಚ್ಚು.

ಆದರೆ ಡಾ|| ಅಂಬೇಡ್ಕರ್‌ರವರ ಹಿಂಬಾಲಕರಾದ ಸಮಕಾಲೀನ ದಲಿತರು, ತಮ್ಮ ಚರಿತ್ರೆಯಲ್ಲಿ ಮುಜುಗರವನ್ನುಂಟು ಮಾಡುವ ಪ್ರಶ್ನೆ ಕೇಳಬಹುದು. 'ಅಂಬೇಡ್ಕರೋತ್ತರ ಭಾರತದಲ್ಲೇಕೆ ದಲಿತರ್‍ಯಾರು ಅಂಬೇಡ್ಕರ್‌ರವರ ಜಯಮಾಲೆಗೆ ಒಂದು ಅಧ್ಯಾಯವನ್ನಾದರೂ ಸೇರಿಸಿಲ್ಲ?



೧೯೧೭ ರಲ್ಲಿ ಕೇವಲ ೬.೬೩ ಲಕ್ಷ ದಲಿತರಷ್ಟೇ ಶಾಲೆಗಳಲ್ಲಿ ದಾಖಲಾತಿ ಪಡೆದಿದ್ದರು. ಅವರಲ್ಲಿ ಎಷ್ಟು ಮಂದಿ ದಿನಪತ್ರಿಕೆಗಳನ್ನು ಓದುತ್ತಿದ್ದರೆಂದು ಹೇಳಲಾಗದು. ಹಾಗೆಯೇ ಭಾರತ ಸಂವಿಧಾನದ ಕರಡು ಪ್ರತಿಯನ್ನು ಸಲ್ಲಿಸುವಾಗ ಅದರಲ್ಲಿ ಅಸ್ಪೃಶ್ಯತೆಯ ಎಲ್ಲ ಆಚರಣೆಗಳನ್ನು ಕಾನೂನು ಬಾಹಿರವೆಂದು ಅಧಿಕಾರಯುತವಾಗಿ ಘೋಷಿಸಿದರು. ಅಂದರೆ ಸುಮಾರು ೨೧.೫೮ ಲಕ್ಷ ದಲಿತರು ಪ್ರಾಥಮಿಕ ಶಿಕ್ಷಣದಿಂದ ಯೂನಿವರ್ಸಿಟಿಯವರೆಗೆ ದಾಖಲಾಗಿದ್ದರು. ಅಂಬೇಡ್ಕರ್‌ರವರು ಆ ಹೋರಾಟವನ್ನು ಗೆದ್ದರಲ್ಲದೆ ಮಾರ್ಗವನ್ನು ತೋರಿಸಿದ್ದರು.

'ಅರ್ಧದಷ್ಟು ದಲಿತರು ಅನಕ್ಷರಸ್ಥರಾಗಿರುವಾಗ ಏಪ್ರಿಲ್‌ನಲ್ಲಿ ಅದೇಕೆ ಶಿಕ್ಷಣ ಮಹತ್ವದ ಸಂಗತಿಯಾಗುತ್ತಿಲ್ಲ. ಅರ್ಧದಷ್ಟು ಭೂಹೀನ ದಲಿತ ಕೃಷಿ ಕಾರ್ಮಿಕರಿರುವಾಗ ಭೂ ಸುಧಾರಣೆಗಳೇಕೆ ಏಪ್ರಿಲ್‌ನಲ್ಲಿ ಪ್ರಮುಖ ಸಂಗತಿಯಾಗುತ್ತಿಲ್ಲ. ಭಾರತದ ಬಂಡವಾಳ ಮಾರುಕಟ್ಟೆಯಲ್ಲಿ ದಲಿತರ ಪಾಲು 'ಸೊನ್ನೆ' ಯಾಗಿದ್ದರೂ 'ಬಂಡವಾಳ' ಪ್ರಜಾಸತ್ತಾತ್ಮಕವಾಗಿಸುವ ಸಂಗತಿ ಏಕೆ ಮುಖ್ಯವಾಗುತ್ತಿಲ್ಲ? ಸಮೂಹ ಮಾಧ್ಯಮಗಳಲ್ಲಿ ದಲಿತರ ಪಾಲು ಸೊನ್ನೆಯಾಗಿದ್ದರೂ (ಏಪ್ರಿಲ್‌ನಲ್ಲಿ) ಅಭಿಪ್ರಾಯ ರೂಪಿಸುವ ಮಾರುಕಟ್ಟೆಯಲ್ಲಿ ಪ್ರಶ್ನೆಯಾಗುತ್ತಿಲ್ಲ ಏಕೆ?

ಈ ಏಪ್ರಿಲ್ ಬಾಬಾ ಸಾಹೇಬ್‌ರವರ ೧೧೩ನೇ ವಾರ್ಷಿಕೋತ್ಸವ. ಅದೊಂದು ಆಚರಣಾ ವಿಧಿಯಾಗಿದೆ. ನನಗೆ ನೆನಪಿರುವ ಹಾಗೆ ಜನವರಿ ೧೯೭೩ ನಾನು ಪ್ರೌಢಶಾಲೆಯಲ್ಲಿದ್ದೆ. ನನ್ನ ಕುಟುಂಬದವರು ಮತ್ತು ಅವರ ಸಹೋದ್ಯೋಗಿಗಳು 'ಡಾ|| ಅಂಬೇಡ್ಕರ್ ಕೀರ್ತಿ ಕ್ಲಬ್' ಎಂಬ ವೇದಿಕೆಯನ್ನು ಆರಂಭಿಸಲು ಯೋಚಿಸಿದರು. ಬಾಂಬೆ ರೈಲ್ವೆ ಪೊಲೀಸ್ ಇಲಾಖೆಯಿಂದ ಹೊರದಬ್ಬಲಾದ ಕಾನ್‌ಸ್ಟೇಬಲ್ ಭೂಮಿಹಾರಾ ಜಾತಿಯ ದಿವಂಗತ ಮುನ್ನುರಾಯಾ ಅದಕ್ಕೆ ಒಂದು ರೂಪ ಕೊಟ್ಟರು. ಈ ಕ್ಲಬ್ ಕ್ರೀಡೆಗಳನ್ನಾಡಿಸುವುದಕ್ಕೆ ಜನಪ್ರಿಯವಾಗಿತ್ತು. ಅದರಲ್ಲೂ 'ಕಬಡ್ಡಿ'ಯನ್ನು ಈ ಕ್ಲಬ್ಬಿನಡಿ ಅನೇಕ ದಲಿತೇತರ ತಂಡಗಳು ಆಡುತ್ತಿದ್ದವು.

ನಾನು ಪಿ.ಯು.ಸಿ.ಯಲ್ಲಿ ಓದುವಾಗ ಅದು ಮತ್ತಷ್ಟು ವ್ಯಾಪಕವಾಗಿ ಅಂಬೇಡ್ಕರ್‌ರವರ ವಾರ್ಷಿಕ ಕಾರ್ಯಕ್ರಮಗಳನ್ನು ಪ್ರತಿವರ್ಷ ಸಂಘಟಿಸಲಾಗುತ್ತಿತ್ತು. ಅಂದಿನಿಂದಲೂ ಏಪ್ರಿಲ್ ೧೪ ರ ಬಗ್ಗೆ ನನ್ನದೊಂದು ಐಡಿಯ ಇದೆ. ನನ್ನ ದೃಷ್ಟಿಯಲ್ಲಿ ಆಧುನಿಕ ಕಾಲದ ಅಂಬೇಡ್ಕರ್ ಎಂದರೆ ಕಾನ್ಶಿರಾಮ್‌ಜಿ. ಅವರನ್ನೊರತುಪಡಿಸಿದಲ್ಲಿ ಮತ್ತೇನು ಬದಲಾವಣೆ ಕಾಣುತ್ತಿಲ್ಲ. ಉತ್ತರ ಭಾರತದ ಬಗ್ಗೆ ನನಗೆ ಅರಿವಿದೆ. ಅಲ್ಲದೆ ದಲಿತ್ ಡೈರಿ ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಪ್ರಕಟವಾಗುತ್ತಿರುವುದರಿಂದ ದಕ್ಷಿಣ ಭಾರತದ ಬಗ್ಗೆಯೂ ನನಗೆ ಅಲ್ಪಮಟ್ಟಿಗೆ ಅರಿವಾಗಿದೆ. ಇಂಟರ್‌ನೆಟ್, ವಿದೇಶ, ಅಟ್ಲಾಂಟಿಕ್/ ಫೆಸಿಫಿಕ್‌ಗಳ ನಡುವಿನ ಪ್ರಯಾಣ ಮುಂತಾದವುಗಳಿಂದ ನನ್ನ ಸಂಪರ್ಕಕ್ಕೆ ಬಂದಿದ್ದೆಂದರೆ ಏಪ್ರಿಲ್‌ನಲ್ಲಿ ಎಲ್ಲಾ ದಲಿತ ಧ್ವನಿಗಳೂ ಒಂದೇ ತೆರನಾಗಿವೆ. 'ಬಾಬಾ ಸಾಹೇಬ್ ಎಷ್ಟೊಂದು ಶ್ರೇಷ್ಠರು', 'ನಮ್ಮ ವಿಮೋಚನೆಗಾಗಿ ಎಂತಹ ಸಂಕಷ್ಟಗಳನ್ನವರು ಅನುಭವಿಸುವರು... ಇತ್ಯಾದಿ. ಇದೆಲ್ಲಾ ಸರಿ. ಆದರೆ ನಾವೇನು ಮಾಡಬೇಕೆಂಬುದರ ಬಗ್ಗೆ ಅಲ್ಪ ಚರ್ಚೆ ಅಷ್ಟೆ ಅಂಬೇಡ್ಕರೊತ್ತರ ದಲಿತರು ಅಂಬೇಡ್ಕರ್‌ರವರ ತ್ಯಾಗದ ನೇರ ಫಲಾನುಭವಿಗಳು. ಇವರೆಲ್ಲಾ ವಿಮೋಚನೋತ್ತರ ಭಾವನೆಯಲ್ಲಿದ್ದಾರೆ.

ಶ್ರೇಷ್ಠ ವ್ಯಕ್ತಿಗಳು ಎರಡು ಕಾರಣಗಳಿಗೆ ಅಭಿನಂದನಾರ್ಹರು. ೧. ಅವರ ಶ್ರೇಷ್ಠ ಹೋರಾಟಗಳಿಗಾಗಿ ನಮನ ಅರ್ಪಿಸಿ, ಬದುಕನ್ನು ಆನಂದಿಸುವುದು. ಎರಡನೆಯದಾಗಿ ಅವರಿಗೆ ನಮನ ಸಲ್ಲಿಸುತ್ತಲೇ ಅವರು ಅಪೂರ್ಣಗೊಳಿಸಿದ ಕಾರ್ಯವನ್ನು ಪೂರ್ಣಗೊಳಿಸಲು ವಾಗ್ದಾನ ಮಾಡುವುದು. ಬಹುಸಂಖ್ಯಾತ ದಲಿತರು ಹಸಿವು, ಅನಕ್ಷರತೆ ಮತ್ತು ಅವಮಾನದಿಂದ ಬಿಡುಗಡೆಗೊಳ್ಳಬೇಕಿದೆ. ಈ ದಲಿತಸಮುದಾಯಗಳು ವಿಮೋಚನೆಗೊಳ್ಳದೆ, ಸಮಾಜ ಪರಿವರ್ತನೆಯಾಗದೆ ಅಂಬೇಡ್ಕರ್‌ರವರ ಕನಸು ಪೂರ್ಣವಾಗದು. ೧೧೩ನೇ ಏಪ್ರಿಲ್‌ನ ಆ ಶ್ರೇಷ್ಠ ತತ್ವಜ್ಞಾನಿಯ ಅನುಯಾಯಿಗಳು ಇದನ್ನು ಅರಿಯಬೇಕಿದೆ. ಇವರು ಈ ಬದಲಾಗುತ್ತಿರುವ ಕಾಲದಲ್ಲಿ ತಮ್ಮ ಪಾತ್ರವನ್ನು ನಿರ್ಧರಿಸಬೇಕಿದೆ. □

ಥಂಡಿ ಪದರಗಳು ಉದ್ದಂಡ ಕವಿದಾಗ

○ ನಾಗರಾಜ ವಸ್ತಾರೆ



ಥಂಡಿ ಪದರಗಳು ಉದ್ದಂಡ ಕವಿದದ್ದು
ಖಂಡ ಮೀನಗಳ ಅಡ್ಡಡ್ಡ ಕೊರೆದದ್ದು
ಅರಿವು ನಾಟಿ ಎದೆ ಬೊಡ್ಡೆಯಲಿ ನಿಲುವಾಗ್ಗೆ
ಮುಚ್ಚು ಹಿಡಿಯಲ್ಲಿ ಗಟ್ಟಿ ನೆನಪು ನಿನ್ನದು;
ಶೀತಲದ ತೀಡು ಕಡಕಡನೆ ನಡುಕ...

ಬೆಳಕು ಕೊನರುವ ಮುನ್ನ ಹೊರಟ ಸವ್ವಾರಿಯಲಿ
ಮುಸುಕು ಮಬ್ಬಿನ ಮೊದಲ ಕತ್ತಲೂ ಮಬ್ಬು
ಸಾಲುದೀಪದ ಆಲಿಗಳ ಸುತ್ತ ಕಾಮಾಲೆ ಗೋಲ
ಕಲಿಲ ಹರಿದ್ರಗಳು ಹಿಂಜಿ ಹಿಂಜಡರಿ,
ಮಲನೀರು ಉಟ್ಟಂತೆ ಇಬ್ಬನಿಯ ಬಿಂದು-
ತೊಯ್ದು ತೊಟ್ಟಿಕ್ಕಿ ಹಳದಿ ಭಾಷ್ಪ!



ಊರ ದಟ್ಟಣೆಯಲ್ಲಿ ಮಂದಿ ಕೊರತೆಯ ಹಾದಿ
ಅರಿಶಿನದ ಕೊನೆ ಜಗಿದ ಹವೆಯ ತಂಪು
ತಣಿದು ಹೆಪ್ಪಿದ ಮೌನ ನೀಳಯಿಸಿದ ಇರುಳು
ಹಬೆಯಾದ ಆಕಳಿಕೆ, ಉಸಿರು, ಉಲುಹು
ಶಿಶಿರ ಕಟ್ಟಿದ ವಿಷಮ ಗರ್ಭದಲಿ ಅಲೆಯಲೆಯ ಚಳಿಯ ಪ್ರಸವ

ಥರ್ರನೆ ಚಳಿಯಲ್ಲೂ ಎದ್ದವರು ಉಂಟು
ಹೂಡಿ ಹೊರಟವರು ತಳ್ಳುಗಾಡಿ
ಪುರವಣಿಗಳ ಮಡಿಕೆ ಮುಖ ಪತ್ರಿಕೆಯೊಳ ಕವಿಚಿ
ವಿಲೇವಾರಿಗೆ ಸನ್ನದ್ಧ-ಕ್ಷೀರ ದುಗ್ಧಕೋಶ

ಥರ್ರನೆ ಚಳಿಯಲ್ಲೂ ಎದ್ದವರು ಉಂಟು
ನರೆತು ನಿಲುಕದೆ ನಸುಕ ನಿದ್ದೆ
ಸರಪಳಿಯು ಕೈಯಲ್ಲಿ ಜೂಲು ಬಾಲದ ಹಿಂದೆ
ಅದು ನಡೆದದ್ದೆ ಹಾದಿ-ಹಿಂದೆ ಇವರ ಹೆಜ್ಜೆ



ಥರ್ರನೆ ಚಳಿಯಲ್ಲೂ ಎದ್ದವರು ಉಂಟು
ಕಟೆಯುವವರು ಒಡಲ ಮಾಟ
ದುಡಿದು ದುಡಿಸಿ ಬಿಮ್ಮನೆ ಬೆಮರಿ ಹನಿದು;
ಇನ್ನು ಹೊದ್ದು ಹುದುಗಿದ ಜನವು ಹಲವು

ಥರ್ರನೆ ಚಳಿಯಲ್ಲಿ ನಾನೆಲ್ಲೊ ನೀನೆಲ್ಲೊ
ಇದ್ದಲ್ಲೆ ಕನವರ ಒಬ್ಬರೊಬ್ಬರಿಗಾಗಿ
ಬಿಸುಪಿತ್ತು ಊರಿ ಕಾವಿತ್ತು ಕಾಯೋಣ
ಗೀಳಿನಲಿ ಮೊಳೆವಂತೆ ಕನಸ ತತ್ತಿ

★

★

ಥಂಡಿ ಪದರಗಳು ಉದ್ದಂಡ ಕವಿದಾಗ
ಶೀತಲದ ತೀಡು, ಕಡಕಡನೆ ನಡುಕ
ಮೀನಖಂಡಗಳ ಅಡ್ಡಡ್ಡ ಕೊರೆದು...

ಬಿತ್ತ ಬೆಳಕಾಗಿ ಸಿಡಿವ ದೆಸೆಯಲ್ಲಿ ಸೆಟೆದು ಜಡಿದಂತೆ ಮಾಗಿ ರಾವು
ಗರದ ಗರಗರಕ್ಕೆ ಗಿರಗಿರ್ರೆಂದು ಗಿರಕಿ; ಠುಸ್ಸೆಂದಿತಲ್ಲೆ ಬಿಸಿಲ ಮದ್ದು

ಗಕ್ಕನೆ ತಿರುವಲ್ಲಿ ಬ್ರೇಕೊತ್ತಿದಾಗ
ಭಟ್ಟರಂಗಡಿಯ ಬಿಸಿ ಕಾಫಿ ಘಮಘಮಿಸಿ
ಅಕ್ಕಿ ಕಡುಬಿನ ಹಬೆಗೆ ಹಚ್ಚ ಕೊತ್ತಂಬರಿಯುದುರು
ನುಣ್ಣಗೆ ನುರಿತ ಕೆಂಪೊಗರಿನ ಓಗರ
ನೆಂಚಿ ಚಪ್ಪರಿಸಿ, ಅರುಣರಾಗದ ನಡುವೆ
ಜುಮ್ಮೆಂದ ಬೆಳಗು- ಹುರುಪುಗಳ ಸ್ವಗತ, ಹಿತದ ಆಹ್ಲಾದ

ದಟ್ಟ ಪರೆಯನು ಹೊಕ್ಕ ಸಾವಕಾಶದ ಊರು
ಮೈ ಮುರಿದು ಲವಲವಿಸಿತೆಲ್ಲೊ ಒಮ್ಮೆ
ಹೊತ್ತೇರಿದ ಹೊತ್ತು ತೆವಳಿ ಕೊಸರಿತ್ತು
ಮಂಕು ತಿದ್ದಿದ ಜಡದ ಗವಿಯೊಳಗೆ ಹಾಗೆ
ಬೋರಲಿನ ನೆತ್ತಿ ಗಡಿ ಮೀರುತ್ತಲೆ ಹಗಲು
ಮೇರು ಪುಷ್ಯದ ಮಜಲು ಮತ್ತೊಂದು ಹೊರಳು

ಕಿಕ್ಕಿರಿದ ಗಾಲಿ ಉರುಳುಗಳ ದಾರಿ
ಮಗ್ಗುಲಿನ ಜನದ ನಡೆಹಾದಿಯಲ್ಲಿ
ಸುಟ್ಟುಳಿದ ಕರಕಲಿನ ನಿಶಾನೆ ಸಂಜೆ ಮುಂದೆ
ಹಗಲ ಹಿತ್ತಲಿನಲ್ಲಿ ಕೊಳ್ಳಿ ಕಾವಿಗೆ ಒಡ್ಡಿ
ಅದಿರೊತ್ತಿ ಹಾಯೆಂದ ನಸುಕ ನೆಮ್ಮದಿ ಕುರುಹು
ಇರುಳ ಹುಟ್ಟಿಗೆ ಮುನ್ನ ಬೆಚ್ಚನೆ ನೆನಹುಗಳು
ಏನು ಹೇಳಲಿ ನೀನಾಗ ಮನಸು ಹೊಕ್ಕಂತ ಭಾವ?



ಹೊಸ ಪುಸ್ತಕ

ಬುದ್ಧ ಕಾವ್ಯ ದರ್ಶನ

ಲೇ. ಡಾ|| ಬುದ್ಧಣ್ಣ ಹಿಂಗಮಿರೆ

ಬೆಲೆ : ರೂ. ೩೦೦/-

ಬುದ್ಧನ ಜೀವನ ಚರಿತ್ರೆಯನ್ನು ಕಾವ್ಯದ ಮೂಲಕ ದರ್ಶನ ಮಾಡಿಸುವ ಕೃತಿ ಇದು. ಶ್ರೀ ಸಾಮಾನ್ಯನಿಗೂ ಅರ್ಥವಾಗುವಂತಹ ಸರಳ ನುಡಿಗಳಲ್ಲಿ ಈ ಬುದ್ಧ ಕಾವ್ಯ ದರ್ಶನವನ್ನು ರಚಿಸಲಾಗಿದೆ. ಜನತೆಯ ಜನ್ಮ-ಜರಾ-ಮರಣಗಳ ಕುರಿತು ಓದುಗನನ್ನು ಗಂಭೀರ ಚಿಂತನೆಗೆ ಒಳಪಡಿಸಿ ಯುದ್ಧ, ಬಾಂಬುಗಳ ಭೀತಿಯನ್ನು ತಪ್ಪಿಸುವ ಕಾವ್ಯ ಸೂತ್ರವಾಗುವಲ್ಲಿ ಈ ಕೃತಿ ಯಶಸ್ಸು ಸಾಧಿಸಬಲ್ಲದು. ಸ್ವತಂತ್ರ ಭಾವಗೀತೆಯಾಗಿ ಗಮನ ಸೆಳೆಯುವ ಇದನ್ನು ಓದುಗರು ಹಾಡಿ ಆನಂದಿಸಬಹುದಾಗಿದೆ.

ಪ್ರಕಾಶಕರು : ಯುಗದಧ್ವನಿ ಪ್ರಕಾಶನ, ಧಾರವಾಡ

ಪುರಾಣ ಮತ್ತು ವಾಸ್ತವ

ಲೇ. ಡಿ.ಡಿ. ಕೊಸಾಂಬಿ

ಅನು : ಟಿ.ಎಸ್. ವೇಣುಗೋಪಾಲ್, ಶೈಲಜಾ

ಬೆಲೆ : ರೂ. ೧೨೫/-

ರಾಷ್ಟ್ರದ ಅಗ್ರಗಣ್ಯ ವಿದ್ವಾಂಸರಾದ ಕೊಸಾಂಬಿ ಅವರ ಈ ಕೃತಿ ನಮ್ಮ ಸಂಸ್ಕೃತಿಯ ತಲಸ್ಪರ್ಶಿ ಸಂಶೋಧನಾ ವಿಧಾನಕ್ಕೆ ಹಿಡಿದ ಕನ್ನಡಿಯಾಗಿದೆ. ಇದರಲ್ಲಿ ಭಗವದ್ಗೀತೆ, ಊರ್ವಶಿ-ಪುರೂರವ ಪ್ರಸಂಗ ಹಾಗೂ ಕೂಡುದಾರಿಯಲ್ಲಿ ಮಾತೃ ದೇವತೆಗಳ ನೆಲೆ ಎಂಬ ಅಮೂಲ್ಯ ಬರಹಗಳಿವೆ. ಈ ಬರಹಗಳು ನಮ್ಮ ಸಂಸ್ಕೃತಿಯ ಸಂಕೀರ್ಣತೆ ಕುರಿತ ವಿಸ್ಮಯಕಾರಿ ಹೊಸ ನಿರ್ಣಯಗಳಿಗೆ ದಾರಿಮಾಡಿಕೊಡುತ್ತವೆ.

ಪ್ರಕಾಶಕರು : ಚಿಂತನ ಉತ್ತರ ಕನ್ನಡ, ಹಳೇ ಬಸ್‌ಸ್ಟ್ಯಾಂಡ್ ಹತ್ತಿರ, ಶಿರಸಿ, ಉತ್ತರ ಕನ್ನಡ



ಸಾಮಾನ್ಯರ ಸ್ವಾಮೀಜಿ

ಸಂ : ಚಂದ್ರಶೇಖರ ವಸ್ತ್ರದ

ಬೆಲೆ : ರೂ. ೫೦/-

ಪ್ರಗತಿಪರ ಧೋರಣೆಯಿಂದಾಗಿ ಎಲ್ಲರ ಗಮನ ಸೆಳೆದಿರುವ ಡಾ|| ತೋಂಟದ ಸಿದ್ಧಲಿಂಗ ಮಹಾಸ್ವಾಮಿಯವ ರನ್ನು ಕುರಿತು ಹಲವು ಲೇಖಕರ ಅನುಭವಗಳನ್ನು ಈ ಕೃತಿಯಲ್ಲಿ ಕಾಣಬಹುದು.

ವಿವಿಧ ಅಭಿಪ್ರಾಯಗಳನ್ನು ಒಂದೆಡೆ ಸಂಗ್ರಹಿಸಿ ಚಂದ್ರಶೇಖರ ವಸ್ತ್ರದ ಈ ಕೃತಿಯನ್ನು ಪ್ರಕಟಿಸಿದ್ದಾರೆ. ಸ್ವಾಮಿಗಳ ವ್ಯಕ್ತಿತ್ವದ ಬಗ್ಗೆ ಈ ಕೃತಿಯು ಸಮಗ್ರ ಚಿತ್ರಣವನ್ನು ಒದಗಿಸುತ್ತದೆ.

ಪ್ರಕಾಶಕರು : ಸವಿಚೇತನ ಪ್ರಕಾಶನ, ಆದರ್ಶ ನಗರ, ಗದಗ

ಪ್ರತಿರೋಧ

ಸಂ : ದೇವಿಪ್ರಸಾದ್ ಚಟ್ಟೋಪಾಧ್ಯಾಯ

ಅನು : ಜಿ. ಕುಮಾರಪ್ಪ

ಬೆಲೆ : ರೂ. ೫೫/-

ಅಂಧಕಾರದ ಆತಂಕದಲ್ಲಿ ಮುದುಡಿ ಕುಳಿತ ಜನಾಂಗವನ್ನು ಬಡಿದೆಬ್ಬಿಸುವ ನುಡಿಗಳು ಈ ಕೃತಿಯಲ್ಲಿ ಹೇರಳವಾಗಿವೆ. ಬಂಗಾಳದ ಸುಪ್ರಸಿದ್ಧ ಸಮಾಜ ಸುಧಾರಕರು, ಚಿಂತಕರು ಹಾಗೂ ವಿಜ್ಞಾನಿಗಳು ಬರೆದ ಲೇಖನಗಳನ್ನು ದೇವಿಪ್ರಸಾದ್ ಒಂದೆಡೆ ಸಂಗ್ರಹಿಸಿ ಬಂಗಾಳಿ ಭಾಷೆಯಲ್ಲಿ ಅದನ್ನು ಹೊರತಂದಿದ್ದರೆ ಅದನ್ನು ಅಷ್ಟೇ ಯುಕ್ತವಾಗಿ ಕುಮಾರಪ್ಪ ಕನ್ನಡಕ್ಕೆ ಕರೆದು ತಂದಿದ್ದಾರೆ. ಪ್ರತಿರೋಧದ ಪ್ರತಿಜ್ಞೆಗೆ ಸಿದ್ಧರಾಗುವಂತೆ ಈ ಕೃತಿ ಓದುಗನನ್ನು ಪ್ರೇರೇಪಿಸುವಲ್ಲಿ ಸಂಶಯವೇ ಇಲ್ಲ.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಮಾತೃಪ್ರಧಾನ ಪರಿಕಲ್ಪನೆ

ಲೇ. ಡಾ|| ಶೈಲಜ ಹಿರೇಮಠ

ಬೆಲೆ : ರೂ. ೧೦/-

ಸಮಾಜದಲ್ಲಿ ಹೆಣ್ಣಿಗೆ ಹೆಚ್ಚಿನ ಪ್ರಾಧಾನ್ಯತೆಯೋ ಅಥವಾ ಗಂಡಿಗೆ ಹೆಚ್ಚಿನ ಪ್ರಾಧಾನ್ಯತೆಯೋ ಎಂಬ ಬಗ್ಗೆ ಈ ಕಿರುಹೊತ್ತಿಗೆಯಲ್ಲಿ ಲೇಖಕರು ಚರ್ಚಿಸಿದ್ದಾರೆ. ಭಾರತ ಹಾಗೂ ಪಾಶ್ಚಿಮಾತ್ಯ ಚಿಂತಕರುಗಳು ಮಾತೃ ಪ್ರಧಾನ ಪರಿಕಲ್ಪನೆಯನ್ನು ಯಾವ ರೀತಿ ವಿಶ್ಲೇಷಿಸಿದ್ದಾರೆ ಎನ್ನುವುದನ್ನು ಸಂಕ್ಷಿಪ್ತವಾಗಿ ಇದರಲ್ಲಿ ದಾಖಲಿಸಲಾಗಿದೆ. ಸ್ತ್ರೀವಾದದ ಆಶಯ ಸಮಾನತೆಯೋ? ಪ್ರಧಾನತೆಯೋ? ಎಂಬ ಬಗ್ಗೆ ಓದುಗರಲ್ಲಿ ಪ್ರಶ್ನೆಯನ್ನು ಹುಟ್ಟಿ ಹಾಕುತ್ತದೆ.

ಪ್ರಕಾಶಕರು : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹೆಣ್ಣು - ಹಕ್ಕು - ಹೋರಾಟ

ಲೇ. ವೆಂ. ವನಜ

ಬೆಲೆ : ರೂ. ೮೦/-

ಹೆಣ್ಣಿನ ಬಗ್ಗೆ ಸಮಾಜ ಮತ್ತು ತನ್ನ ಬಗ್ಗೆ ತಾನು ಹೆಣ್ಣು ಕಂಡುಕೊಳ್ಳಬೇಕಿರುವ ಹೊಸ ದಾರಿಯ ಹೊಳಹುಗಳನ್ನು ಒಳಗೊಂಡ ವಿಭಿನ್ನ ವಿಶ್ಲೇಷಣೆ ಈ ಕೃತಿಯ ವೈಶಿಷ್ಟ್ಯ.

ಹೆಣ್ಣಿನ ಅಸಾಹಯಕತೆ, ನಿರಂತರ ಶೋಷಣೆ ಮುಂತಾದ ಸಮಸ್ಯಾ ನೆಲೆಗಳನ್ನು ಇಲ್ಲಿ ಲೇಖಕಿ ವನಜ ಅನಾವರಣಗೊಳಿಸಿದ್ದಾರೆ.

ಸ್ತ್ರೀ ಸಮುದಾಯದ ಸಾಮಾಜಿಕ ಸಮಸ್ಯೆಗಳ ಕುರಿತು ಆಳವಾದ ಚಿಂತನೆ ನಡೆಸಿ ಸಮಕಾಲೀನ ಸ್ತ್ರೀವಾದಕ್ಕೆ ಹೊಸ ಹೆಜ್ಜೆಯನ್ನಿರಿಸಿ ಹೋರಾಟಕ್ಕೆ ನಾಂದಿ ಹಾಡಿದ್ದಾರೆ.

ಪ್ರಕಾಶಕರು : ಸಮತಾ ಅಧ್ಯಯನ ಕೇಂದ್ರ, ಮೈಸೂರು.



ವಿವೇಕಾನಂದರ ವಿಚಾರಗಳು

ಭರತಖಂಡದಲ್ಲಿ ನಮ್ಮಲ್ಲಿರುವ ಒಂದು ನ್ಯೂನತೆ ಎಂದರೆ ಒಟ್ಟುಗೂಡಿ ವ್ಯವಸ್ಥಿತರಾಗಿ ಕೆಲಸಮಾಡುವ ಅಭಾವ. ಅಸೂಯೆ ಎಲ್ಲ ಗುಲಾಮರಲ್ಲಿರುವ ನಾಶಕಾರಕ ವಸ್ತು ಇದು ನಮ್ಮ ಜನಾಂಗವನ್ನೇ ನಾಶ ಮಾಡುತ್ತಿರುವುದು. ಯಾವಾಗಲೂ ಅದರಿಂದ ದೂರವಾಗಿರಿ. ಯಾವ ಮನುಷ್ಯನೂ ಯಾವ ಜನಾಂಗವೂ ಇನ್ನೊಬ್ಬರನ್ನು ದ್ವೇಷಿಸಿ ತಾನು ಮಾತ್ರ ಬದುಕಿರುವುದಕ್ಕೆ ಸಾಧ್ಯವಿಲ್ಲ. ಎಂದು ನಮ್ಮವರು ಮ್ಲೇಚ್ಛರು ಎಂಬ ಪದವನ್ನು ನಿರ್ಮಿಸಿ ಅನ್ಯ ದೇಶದೊಡನೆ ಸಂಪರ್ಕವನ್ನು ತೊರೆದರೋ ಅಂದೇ ಭಾರತವರ್ಷದ ಪ್ರಗತಿ ಕೊನೆಗೊಂಡಿತು.

ಸಂಗ್ರಹ:
ಜ.ಹೂ. ನಾರಾಯಣಸ್ವಾಮಿ

ಗುಲಾಮಗಿರಿ ಮಹಾ ಪಾತಕ

ನಿರಂತರವಾಗಿ ಭಿಕ್ಷುಕರಂತೆ ಕೈಚಾಚಿ ದಾನವನ್ನು ತೆಗೆದುಕೊಳ್ಳುವುದು ಪ್ರಕೃತಿಯ ನಿಯಮವಲ್ಲ. ಯಾವ ವ್ಯಕ್ತಿಯೇ ಆಗಲಿ ಪಂಗಡ ಅಥವಾ ಜನಾಂಗವೇ ಆಗಲಿ ಈ ನಿಯಮವನ್ನು ಪಾಲಿಸುವುದಿಲ್ಲವೋ ಅದು ಜೀವನದಲ್ಲಿ ಎಂದಿಗೂ ಏಳ್ಗೆ ಹೊಂದುವುದಿಲ್ಲ. ನಮ್ಮ ಜನರಿಗೆ ಉದಾತ್ತ ಆದರ್ಶಗಳಿಲ್ಲ. ಇರುವವರನ್ನು ಕಂಡರೆ ನೋಡಿ ಸಹಿಸುವುದಿಲ್ಲ. ಸಾವಿರಾರು ವರುಷಗಳ ಗುಲಾಮಗಿರಿಯ ಪರಿಣಾಮವಾಗಿ ಅವರಲ್ಲಿ ಹೀನ ಅಸೂಯೆ, ಅನುಮಾನ ಯಾವ ಒಂದು ಹೊಸ ಅಭಿಪ್ರಾಯಕ್ಕೂ ವಿಘ್ನವಾಗಿ ನಿಲ್ಲುವುದು.

ಹಲವು ಶತಮಾನಗಳಿಂದ ನಾವು ಭಯಾನಕ ಅಸೂಯೆಯಲ್ಲಿ ಸಿಕ್ಕಿ ನರಳುತ್ತಿರುವೆವು. ಇತರರನ್ನು ಕಂಡರೆ ನಮಗೆ ಯಾವಾಗಲೂ ಅಸೂಯೆ, ಇವನಿಗೇಕೆ ಅಗ್ರಸ್ಥಾನವಿದೆ? ನನಗೇಕೆ ಇಲ್ಲ? ದೇವರ ಪೂಜೆಯಲ್ಲೂ ನಮಗೆ ಅಗ್ರಸ್ಥಾನಬೇಕು. ಇಂತಹ ಗುಲಾಮಗಿರಿಗೆ ನಾವು ಬಂದಿರುವೆವು. ನಾವು ಇದರಿಂದ ಪಾರಾಗಬೇಕಾಗಿದೆ. ಭರತಖಂಡದಲ್ಲಿ ಇಂದು ಯಾವುದಾದರೂ ಮಹಾಪಾತಕವಿದ್ದರೆ ಅದೇ ಈ ಗುಲಾಮಗಿರಿ. ಪ್ರತಿಯೊಬ್ಬರೂ ಆಜ್ಞಾಪಿಸುವವರೇ. ಅಜ್ಞಾರಾಧಕರಾಗಲು ಯಾರೂ ಇಚ್ಛಿಸುವುದಿಲ್ಲ.

ಶ್ಲಾಘನೀಯರಾದ ವಿದ್ವಾಂಸರುಗಳು ಮತ್ತು ಇತರ ಸೌಭಾಗ್ಯಗಳನ್ನು ಪಡೆದ ಹಿಂದೂದೇಶ ಏತಕ್ಕೆ ಹೀಗೆ ಒಡೆದು ಚೂರಾಗಬೇಕಾಗಿತ್ತು? ಇದಕ್ಕೆ ಉತ್ತರವೇ ಅಸೂಯೆ ಎಂದು ಹೇಳುತ್ತೇನೆ. ಇನ್ನೊಬ್ಬರು ಕೀರ್ತಿ ಗೌರವ ಗಳಿಸಿದರೆ ಅದನ್ನು ನೋಡಿ ಸಹಿಸಲಾರದೆ ಕರುಬುವ ಹೀನ ಹಿಂದೂ ಜನಾಂಗದಂತೆ ಮತ್ತೊಂದು ಇಲ್ಲ.

ನೀವು ಪಾಶ್ಚಾತ್ಯ ದೇಶಗಳಿಗೆ ಬಂದರೆ ಮೊದಲು ಇಲ್ಲಿ ನಿಮಗೆ ತೋರುವುದು, ಈ ಅಸೂಯೆಗಳ ಅಭಾವ. ಐದು ನಿಮಿಷಗಳಾದರೂ ಮೂರು ಜನರು ಕಲೆತು ಸೌಹಾರ್ದದಿಂದ ಒಂದು ಕೆಲಸವನ್ನೂ ಮಾಡಲಾರರು. ಪ್ರತಿಯೊಬ್ಬನೂ ಅಧಿಕಾರಕ್ಕೇ ಹೋರಾಡುವನು.

ಇಂಡಿಯಾ ಒಂದು ಅನಿಷ್ಟ ಹೆಣದಂತೆ ಒಳಗೆ ಹೊರಗೆ ಏನೂ ಇಲ್ಲ. ಜಗತ್ತಿನ ಉಳಿದೆಲ್ಲ ಜನಾಂಗಗಳಿಂದಲೂ ನಾವು ಪ್ರತ್ಯೇಕವಾಗಿ ರೋದೆ ನಮ್ಮ ಅಧೋಗತಿಗೆ ಕಾರಣ. ಜಗತ್ತಿನ ಇತರ ಭಾಗಗಳ ಪ್ರವಾಸದೊಂದಿಗೆ ಹಿಂದಿರುಗಿ ಸೇರುವುದೇ ಈಗ ಅದಕ್ಕೆ ಏಕಮಾತ್ರ ಚಿಕಿತ್ಸೆ.

ಋಷಿಮುನಿ ಅಥವಾ ದೇವರು ಯಾರಾದರಾಗಲೀ, ಸಮಾಜದ ಮೇಲೆ ಕಟ್ಟುಗಳನ್ನು ವಿಧಿಸಲು ಸಾಧ್ಯವಿಲ್ಲ.

ಮೋಸ, ಮೂರ್ಖತನ ಇವುಗಳ ವಿಚಾರವಾಗಿ ಮಾತನಾಡುತ್ತಾ ಕಾಲ ಕಳೆಯುವುದು ವ್ಯರ್ಥ. ಪ್ರತಿಯೊಂದು ಜನಾಂಗವೂ ತನ್ನನ್ನು ತಾನು ಉದ್ಧಾರ ಮಾಡಿಕೊಳ್ಳಬೇಕೆಂಬುದನ್ನು ಮರೆಯಕೂಡದು. ಅದರಂತೆ ಪ್ರತಿಯೊಂದು ವ್ಯಕ್ತಿಯೂ ಕೂಡ. ಮತ್ತೊಬ್ಬರ ಸಹಾಯಕ್ಕೆ ಕಾದು ಕುಳಿತುಕೊಳ್ಳುವುದು ಬೇಡ. ಈಗ ಮಾತು ಸಾಕು. ಕೆಲಸ! ಕೆಲಸ! ಕೆಲಸ! ಇಂಡಿಯಾ ದೇಶದಲ್ಲಿ ಮಾಡಿದ ಶಾಶ್ವತ ಕೆಲಸ ಯಾವುದೂ ಕಾಣುವುದಿಲ್ಲ... ನಿಮ್ಮೊಂದಿಗೆ ಬೇರೆಯವರು ಯಾರೂ ಬೆರೆಯುವುದು ಕಾಣುವುದಿಲ್ಲ. ಬೇಕಾದಷ್ಟು ಕಾಡುಹರಟೆ ಇದೆ. ಬರೀ ಹರಟೆ. ಮತ್ತೇನೂ ಇಲ್ಲ! ನಾವು ಬಹಳ ಉತ್ತಮರು! ಅರ್ಥವಿಲ್ಲ! ನಾವು ಅತಿಮೂರ್ಖರು! ಬೇರೇನೂ ಅಲ್ಲ! ನಿಮ್ಮ ದೇಶದಲ್ಲಿ ಜಾತಿಯನ್ನು ದೊಡ್ಡದು ಮಾಡಿಕೊಂಡು ನಿಮಗೆ ಅನ್ನವೂ ಹುಟ್ಟದಂತಾಗಿದೆ. ಒಂದು ಸೂಜಿ ತಯಾರು ಮಾಡುವುದಕ್ಕೆ ಯೋಗ್ಯತೆ ಇಲ್ಲ; ನೀವು ಇಂಗ್ಲೀಷರನ್ನು ಟೀಕಿಸುತ್ತೀರಿ. ಬುದ್ಧಿ ಇಲ್ಲದವರು.

ಭರತಖಂಡದಲ್ಲಿ ಎರಡು ದೊಡ್ಡ ಕೇಡುಗಳಿವೆ. ಹೆಂಗಸರನ್ನು ಪೀಡಿಸುವುದು; ಬಡವರನ್ನು ಜಾತಿ ಬಂಧನಗಳಿಂದ ಹಿಂಸಿಸುವುದು. ಈಗಿನ ಕಾಲದಲ್ಲಿ ಪ್ರತಿಯೊಂದು ದೇಶದಲ್ಲೂ ಧಾರ್ಮಿಕ ಪವಾಡಗಳನ್ನು ವೈಜ್ಞಾನಿಕವಾಗಿ ಸಮರ್ಥಿಸುವುದೊಂದು ಚಾಳಿಯಾಗಿ ಹೋಗಿದೆ. ನಿಜವಾದ ವಿದ್ಯಾಭ್ಯಾಸವನ್ನು ಪ್ರಕೃತಿಯೊಡನೆ ಬೆರೆತು ಜೀವಿಸುವುದರಿಂದ ಪಡೆಯಬಹುದು. ಈ ರೀತಿಯಾಗಿ ಜ್ಞಾನವನ್ನು ಪಡೆಯಬೇಕು, ಇಲ್ಲದಿದ್ದರೆ ಒಬ್ಬ ಪಂಡಿತನ ಶಾಲೆಯಲ್ಲಿ ಶಿಕ್ಷಣ ಪಡೆಯುವುದರಿಂದ ಕೊನೆಗೆ ಇಡೀ ಸಂಸ್ಥೆಯೇ ಹಾಳಾಗುವುದು. ಅಸೂಯೆ, ನಾಲ್ವರೂ ಸೇರಿ ಒಂದು ಕೆಲಸವನ್ನು ಮಾಡುವ ಎಂಬ ಒಗ್ಗಟ್ಟಿನ ಅಭಾವ. ಇವು ಗುಲಾಮ ಜಾತಿಯವರ ಸ್ವಭಾವ. ಆದರೆ ನಾವು ಇವುಗಳಿಂದ ಪಾರಾಗುವುದಕ್ಕೆ ಪ್ರಯತ್ನಿಸಬೇಕು. ಭಯಾನಕವಾದ ಈರ್ಷ್ಯೆ ನಮ್ಮ ವಿಶೇಷ ಲಕ್ಷಣ. ಪರದೇಶಗಳಿಗೆ ಹೋಗಿ ಅವುಗಳೊಂದಿಗೆ ಹೋಲಿಸಿ ನೋಡಿದಾಗ ಗೊತ್ತಾಗುವುದು. ಈ ವಿಷಯದಲ್ಲಿ ನಮ್ಮನ್ನು ಹೋಲುವವರು ಯಾರೆಂದರೆ, ಅಮೆರಿಕಾದ ಸ್ವತಂತ್ರ ನೀಗ್ರೋ ಜನರು. ಅವರಲ್ಲಿ ಯಾವನಾದರೊಬ್ಬ ಕೊಂಚ ತಲೆ ಎತ್ತಿದರೆ ಸಾಕು. ಎಲ್ಲರೂ ಒಡನೆಯೇ ಕಲೆತು, ಅವನಿಗೆ ವಿರುದ್ಧವಾಗಿ ಬಿಳಿಯವರೊಡನೆ ಸೇರಿಕೊಂಡು ಅವನನ್ನು ನೆಲಕ್ಕೆ ತುಳಿಯುವುದಕ್ಕೆ ಪ್ರಯತ್ನ ಪಡುವರು.

ಭರತಖಂಡದಲ್ಲಿ ನಮ್ಮಲ್ಲಿರುವ ಒಂದು ನ್ಯೂನತೆ ಎಂದರೆ ಒಟ್ಟುಗೂಡಿ ವ್ಯವಸ್ಥಿತರಾಗಿ ಕೆಲಸಮಾಡುವ ಅಭಾವ...ಅಸೂಯೆ ಎಲ್ಲ ಗುಲಾಮರಲ್ಲಿರುವ ನಾಶಕಾರಕ ವಸ್ತು ಇದು ನಮ್ಮ ಜನಾಂಗವನ್ನೇ ನಾಶ ಮಾಡುತ್ತಿರುವುದು. ಯಾವಾಗಲೂ ಅದರಿಂದ ದೂರವಾಗಿರಿ. ಯಾವ ಮನುಷ್ಯನೂ ಯಾವ ಜನಾಂಗವೂ ಇನ್ನೊಬ್ಬರನ್ನು ದ್ವೇಷಿಸಿ ತಾನು ಮಾತ್ರ ಬದುಕಿರುವುದಕ್ಕೆ ಸಾಧ್ಯವಿಲ್ಲ. ಎಂದು ನಮ್ಮವರು ಮ್ಲೇಚ್ಛರು ಎಂಬ ಪದವನ್ನು ನಿರ್ಮಿಸಿ ಅನ್ಯ ದೇಶದೊಡನೆ ಸಂಪರ್ಕವನ್ನು ತೊರೆದರೋ ಅಂದೇ ಭಾರತವರ್ಷದ ಪ್ರಗತಿ ಕೊನೆಗೊಂಡಿತು.

ನೀನು ನಿನ್ನ ಇಡೀ ಜೀವನವನ್ನು ಕಳೆದರೂ ಒಬ್ಬ ಮಾನವ ಕಪಿಯಂತಾಗುವೆ...ನಮ್ಮ ದೇಶದಲ್ಲಿ ಜ್ಞಾನ ವಿನಿಯೋಗ ಯಾವಾಗಲೂ ತ್ಯಾಗ ಜೀವಿಗಳ ಮೂಲಕ ಆಗಿದೆ. ಆಮೇಲೆ ಬಂದ ಪಂಡಿತರು ಜ್ಞಾನವನ್ನೆಲ್ಲಾ ತಾವೇ ಸ್ವಾಧೀನ ಪಡಿಸಿಕೊಂಡು ಅವು ಕೇವಲ ಶಾಲೆಯಲ್ಲಿ ಮಾತ್ರ ಕೊನೆಗಾಣುವಂತೆ ಮಾಡಿ ದೇಶವನ್ನು ನಾಶದ ಸ್ಥಿತಿಗೆ ತಂದಿರುವರು... ಮಕ್ಕಳಿಗೆ ಜ್ಞಾನ ಪ್ರಸಾರ ಮಾಡುವ ಕಾರ್ಯ ತ್ಯಾಗಿಗಳ ಹೆಗಲ ಮೇಲೆ ಬೀಳುವವರೆಗೂ ಭರತಖಂಡ ಇತರರ ಪಾದುಕೆಗಳನ್ನು ತನ್ನ ತಲೆಯ ಮೇಲೆ ಎಂದೆಂದೂ ಹೊರಬೇಕಾಗುವುದು.

ಯಾವುದನ್ನು ಜಾತಿಧರ್ಮ, ಸ್ವಧರ್ಮ ಎಂದು ಈಗ ತಿಳಿದುಕೊಂಡಿರುವರೋ ಅದು ಈಗ ಬರೀ ತಲೆ ಕೆಳಗು, ಇದೊಂದು ಮಹೋತ್ಪಾತ, ದೇಶವನ್ನೇ ಇದರಿಂದ ರಕ್ಷಿಸಬೇಕು. ಮೇಲಿನ ಜಾತಿಯವರು ನಾವು ಧರ್ಮವನ್ನೆಲ್ಲಾ ತಿಳಿದುಕೊಂಡಿರುವೆವು, ಎಂದು ಭಾವಿಸುವರು. ಆದರೆ ಇದು ಭ್ರಾಂತಿ. ಅವರು ತಮ್ಮ ಗ್ರಾಮದ ಆಚಾರವನ್ನು ಸನಾತನ ಧರ್ಮ ಎಂದು ಭಾವಿಸುವರು.

ಭಕ್ತರು ಬೆಳೆದಿರುವಂತೆ ದೇವರೂ ಬೆಳೆದಿರುವನು ಎಂಬುದನ್ನು ಒಪ್ಪಿಕೊಳ್ಳುವುದಿಲ್ಲ, ಇದೇ ದೊಡ್ಡ ತಪ್ಪು.

ಪಾಶ್ಚಾತ್ಯರು ವರ್ತಕರ ದಬ್ಬಾಳಿಕೆಯಲ್ಲಿ ನರಳುತ್ತಿರುವರು. ಪ್ರಾಚ್ಯರು ಪುರೋಹಿತರ ದಬ್ಬಾಳಿಕೆಯಲ್ಲಿ ನರಳುತ್ತಿರುವರು. ☐

'SAMVADA' Kannada Monthly. JULY 2004 RNI-KAR KAN/2002/9246 CPMG/KA/BGW-706/2003-0

ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಸಮರ್ಥ ವಿಶ್ಲೇಷಣೆಗಾಗಿ

ವಿಚಾರಶೂನ್ಯವಾಗುತ್ತಿರುವ ಸಮಾಜದ ಜಾಗೃತಿಗಾಗಿ

ಎಲ್ಲ ಜನವರ್ಗಗಳ ಅಭಿವ್ಯಕ್ತಿ ವೇದಿಕೆಯಾಗಿ

ಇಂದೇ ಚಂದಾದಾರರಾಗಿ

ಸಂವಾದ

ಶೋಷಣೆ ಮುಕ್ತ ಸಮಾಜಕ್ಕಾಗಿ